ಮಂಗಳೂರು
ಗುರುವಾರ, 23 ಏಪ್ರಿಲ್ 2026
ಸಂಪುಟ 48, ಸಂಚಿಕೆ 35 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ನೇಪಾಳ ಪ್ರತಿಭಟನೆ: ಗೃಹ ಸಚಿವ ರಾಜೀನಾಮೆ | ೦೨
ಸೇನಾ ಶಕ್ತಿ ಪ್ರದರ್ಶನ | ೦೨
ಭಕ್ತರ ದರ್ಶನಕ್ಕೆ ಕೇದಾರನಾಥ ಮುಕ್ತ | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುನರ್ವಸು

ದಿನದ ಮಾತು

ನಿದ್ರೆಯು ಆರೋಗ್ಯದ ಆರಂಭ.
▲ಸುಭಾಷಿತ

ಹಳಿಗಳ ಆಧುನೀಕರಣ; ಪ್ರಯಾಣ ಮತ್ತಷ್ಟು ಸುಗಮ

ಲೇಖನ
• ಅಶ್ವಿನಿ ವೈಷ್ಣವ್
• ಪುಟ ೬

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಫಲಿತಾಂಶ ಇಂದು

• **ಬೆಂಗಳೂರು:** ತೃತೀಯ ಭಾಷೆಗೆ ಗ್ರೇಡ್ ಹಾಗೂ ಅಂಕಗಳ ಗೊಂದಲದ ನಡುವೆಯೇ ಎಸ್ಎಸ್ಎಲ್‌ಸಿ ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದೆ. ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದ್ದು, ವಿದ್ಯಾರ್ಥಿಗಳು https://karresults.nic.in/ ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕವೂ ಪಡೆಯಬಹುದಾಗಿದೆ. ಅಲ್ಲದೇ ವಿದ್ಯಾರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ರವಾನಿಸಲಾಗುವುದು ಎಂದು ತಿಳಿಸಿದೆ.

ಕೊಡಗು: ಅಮೆರಿಕ ಮಹಿಳೆ ಮೇಲೆ ಅತ್ಯಾಚಾರ

• **ಮಡಿಕೇರಿ:** ಕೊಡಗು ಜಿಲ್ಲೆಯ ಗ್ರಾಮವೊಂದರ ಹೋಂಸ್ಟೇಯಲ್ಲಿ ವಿದೇಶಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿರುವ ಹೀನಾಯ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದ ದೇವಿ ವಿಲ್ಲಾ ಎಂಬ ಹೋಂಸ್ಟೇಯಲ್ಲಿ ಅಮೆರಿಕದ ವಾಷಿಂಗ್ಟನ್ ಮೂಲದ ಮಹಿಳೆಯ ಮೇಲೆ ಹೋಂಸ್ಟೇಯ ಕೇರ್ ಟೇಕರ್, ಜಾರ್ಖಂಡ್ ಮೂಲದ ವೃಜೇಶ್ ಎಂಬಾತ ಅತ್ಯಾಚಾರ ನಡೆಸಿರುವುದಾಗಿ ಹೇಳಲಾಗಿದೆ. ➡ಪುಟ ೧೨

ತ.ನಾ.ನ ಎಲ್ಲ, ಪ.ಬಂ.ದ ಪ್ರಥಮ ಹಂತಕ್ಕೆ ಇಂದು ನಡೆಯಲಿದೆ ಮತದಾನ

• **ಹೊಸದಿಲ್ಲಿ :** ತಮಿಳ್ನಾಡಿನ ಎಲ್ಲ 234ವಿಧಾನಸಭಾ ಕ್ಷೇತ್ರಗಳಿಗೆ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರಥಮ ಹಂತದ 152 ವಿಧಾನಸಭಾ ಕ್ಷೇತ್ರಗಳಿಗೆ ಇಂದು ಮತದಾನ ನಡೆಯಲಿದ್ದು, ಮತದಾನಕ್ಕೆ ಸರ್ವ ಸಿದ್ಧತೆ ನಡೆದಿದೆ. ಈ ಚುನಾವಣೆ ಮಹತ್ವ ಪಡೆದಿದ್ದು, ತಮಿಳ್ನಾಡಿನಲ್ಲಿ ಮುಖ್ಯಮಂತ್ರಿ ಹಾಗೂ ಡಿಎಂಕೆ ವರಿಷ್ಠ ಎಂ.ಕೆ.ಸ್ಟಾಲಿನ್ ಮತ್ತು ಪ.ಬಂ.ದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅಧಿಕಾರ ಉಳಿಸಿಕೊಳ್ಳುವರೇ ಎಂಬುದು ಪ್ರಶ್ನೆಯಾಗಿ ಉಳಿದಿದೆ . ಇದೇ ವೇಳೆ , ನಗದು, ಮದ್ಯ, ಮಾದಕ ವಸ್ತು, ಇತರ ವಸ್ತುಗಳು ಸೇರಿದಂತೆ ಈವರೆಗೆ 1000ಕೋ.ರೂ.ಗಳ ವಸ್ತುಗಳನ್ನು ಎರಡೂ ರಾಜ್ಯಗಳಲ್ಲಿ ವಶಪಡಿಸಿಕೊಳ್ಳಲಾಗಿದೆ.

ಐಟಿ ಕಂಪನಿಗಳಿಗೂ ನುಗ್ಗಿದ ಲವ್ ಜಿಹಾದ್: ಪರಾಂಡೆ
• ಪುಟ ೫

ಮೋದಿ ನೀಡಿದ 10 ರೂ. ನೋಟಿಗೆ ಭಾರೀ ಬೇಡಿಕೆ
• ಪುಟ ೨

ಮಹಾರತ್ನ ಸಾಲಿಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ | ಧ್ರುವ ಎಂಜಿನ್ ಇನ್ನೆರಡು ತಿಂಗಳಲ್ಲಿ ಪೂರ್ಣ

ನಿವೃತ್ತಿ ಹೊಸ್ತಿಲಲ್ಲಿ ಸಾಧನೆ ರೂವಾರಿ ಡಾ.ಡಿ.ಕೆ.ಸುನೀಲ್

▸ ನೆಲ್ಲಿಜೆ ನವ್ಯಜ್ಯೋತಿ

• **ಬೆಂಗಳೂರು:** ಕರ್ನಾಟಕದ ಹೆಮ್ಮೆಯಾಗಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನವರತ್ನದಿಂದ ಮಹಾರತ್ನವಾಗಿ ಮೇಲ್ದರ್ಜೆಗೇರಿದೆ. ಈ ಸಾಧನೆಯ ರೂವಾರಿ ಹಾಗೂ ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ ಡಾ. ಡಿ.ಕೆ. ಸುನೀಲ್ ಈ ತಿಂಗಳಾಂತ್ಯಕ್ಕೆ ನಿವೃತ್ತಿಯಾಗಲಿದ್ದಾರೆ. ಅವರು ತಮ್ಮ ಅಧಿಕಾರಾವಧಿಯ ಸಾಧನೆ-ಸವಾಲುಗಳ ಕುರಿತು ಹೊಸ ದಿಗಂತಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ್ದಾರೆ.

ದಿಗಂತ ಸಂದರ್ಶನ

▸2024ರ ಸೆಪ್ಟೆಂಬರ್‌ನಿಂದ ಈವರೆಗಿನ ಅಧಿಕಾರಾವಧಿಯಲ್ಲಿ ಎಚ್‌ಎಎಲ್ ಸಾಧನೆಯ ಹಾದಿ ಹೇಗಿದೆ?

ಎಚ್‌ಎಎಲ್ ನವರತ್ನ ಕಂಪನಿಯಿಂದ ಮಹಾರತ್ನ ಕಂಪನಿಯಾಗಿ ಮೇಲ್ದರ್ಜೆಗೇರಿದೆ. ಮಹಾರತ್ನ ಕಂಪನಿ ಎಂದರೆ, ನಮಗದು ಹೆಮ್ಮೆ. ಇಡೀ ದೇಶದಲ್ಲಿರುವುದು 14 ಮಹಾರತ್ನ ಕಂಪನಿಗಳು. ಎಚ್‌ಎಎಲ್ 14ನೇ ಮಹಾರತ್ನ ಕಂಪನಿಯಾಗಿದೆ. ಮಹಾರತ್ನ ಕಂಪನಿಗಳಲ್ಲಿ ಬಹುತೇಕ ತೈಲ ಕಂಪನಿಗಳು, ಪೆಟ್ರೋಲಿಯಂ, ಒಎನ್‌ಜಿಸಿ ಮುಂತಾದ ಬೃಹತ್ ಕಂಪನಿಗಳ ಜತೆ ಎಚ್‌ಎಎಲ್ ಕೂಡ ಸೇರಿದೆ. ರಕ್ಷಣಾ ಸಚಿವಾಲಯ ದೊಂದಿಗೆ ಎರಡು ದೊಡ್ಡ ಒಪ್ಪಂದಗಳನ್ನು ಮಾಡಿದ್ದೇವೆ. ಮೊದಲನೆಯದು 156 ಪ್ರಚಂಡ್ ಹೆಲಿಕಾಪ್ಟರ್‌ಗಳ ಪೂರೈಕೆ ಮತ್ತು 97 ತೇಜಸ್ ಎಲ್‌ಸಿಎ (ಲಘು ಯುದ್ಧ ವಿಮಾನ) ಎಂಕೆ-1ಎ ಪೂರೈಕೆ. ಮೊದಲು 83 ಎಲ್‌ಸಿಎ ತೇಜಸ್ ಪೂರೈಕೆ ಮಾಡಲು ಒಪ್ಪಂದವಾಗಿತ್ತು. ಈಗ 97 ತೇಜಸ್ ವಿಮಾನಗಳ ಪೂರೈಕೆ ಒಪ್ಪಂದದಿಂದ ಅದು 180ಕ್ಕೆ ಏರಿಕೆಯಾಗಿದೆ. ಈ ಎರಡು ಆರ್ಡರ್‌ಗಳು ಸುಮಾರು ಒಂದು ಲಕ್ಷ ಕೋಟಿ ರೂ. ಮೊತ್ತದ್ದಾಗಿದೆ. ಸುಮಾರು 30 ಸಾವಿರ ಕೋಟಿ ರೂ. ಮೊತ್ತದ ಸುಖೋಯ್-30 ಯುದ್ಧ ವಿಮಾನದ ಹೆಚ್ಚುವರಿ ಆರ್ಡರ್ ಬಂದಿದೆ. ಕಳೆದ 20 ತಿಂಗಳಲ್ಲಿ ಸುಮಾರು 1.80 ಲಕ್ಷ ಕೋಟಿ ರೂ.



ಮೊತ್ತದ ಹೊಸ ಆರ್ಡರ್‌ಗಳು ಎಚ್‌ಎಎಲ್‌ಗೆ ಲಭಿಸಿವೆ. ಎಚ್‌ಟಿಟಿ-40 ತರಬೇತಿ ವಿಮಾನದ ಪ್ರಮಾಣಪತ್ರ ಕೂಡ ಇದೇ ಅವಧಿಯಲ್ಲಿ ಆಗಿದೆ. ಎಲ್‌ಸಿಎ ಎಂಕೆ1ಎ ತಾಂತ್ರಿಕ ಸಮಗ್ರತೆ (ರಡಾರ್, ಕ್ಷಿಪಣಿ ಇತ್ಯಾದಿ) ಸಾಧಿಸಿದ್ದೇವೆ. ಕೇಂದ್ರ ಸಾರ್ವಜನಿಕ ವಲಯದದಲ್ಲಿ ಬೆಸ್ಟ್ ಟಿಟ್ ಸ್ಟಾಂಡಿಂಗ್ ಪರ್ಫಾಮೆನ್ಸ್ ಸ್ಕೋಪ್ ಅವಾರ್ಡ್ ಅನ್ನು ಎಚ್‌ಎಎಲ್‌ಗೆ ರಾಷ್ಟ್ರಪತಿ ಅವರು ಪ್ರದಾನಿಸಿದ್ದರು. ಧ್ರುವ್ ಎಂಜಿನ್ ಪ್ರಮಾಣಪತ್ರ ಪ್ರಕ್ರಿಯೆ ಪ್ರಗತಿಯಲ್ಲಿದೆ, ಮುಂದಿನ 2-3 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ರಷ್ಯನ್ ನಾಗರಿಕ ವಿಮಾನ (100 ಆಸನಗಳು)ವನ್ನು ಇಲ್ಲಿ ಉತ್ಪಾದನೆ ಮಾಡುವುದಕ್ಕೆ ಒಪ್ಪಂದ ಮಾಡಿಕೊಂಡಿದ್ದೇವೆ. ಮಹಾರಾಷ್ಟ್ರದ ನಾಸಿಕ್‌ನಲ್ಲಿ ತೇಜಸ್ ಉತ್ಪಾದನೆಯ ಮೂರನೇ ಘಟಕ ಸ್ಥಾಪಿಸಿದ್ದೇವೆ. ➡ಪುಟ ೪

ತನಿಖೆಯ ನಿರ್ಣಾಯಕ ಹಂತದಲ್ಲಿ ಮುಖ್ಯಮಂತ್ರಿ ಹಸ್ತಕ್ಷೇಪ
ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ: ಸುಪ್ರೀಂಕೋರ್ಟ್ ಅಸಮಾಧಾನ

ಮಮತಾಗೆ ಛೀಮಾರಿ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಮೊದಲ ಹಂತದ ಮತದಾನಕ್ಕೆ ಕೇವಲ ಒಂದು ದಿನ ಬಾಕಿ ಇರುವಾಗ ರಾಜಕೀಯ ವಾತಾವರಣ ತೀವ್ರಗೊಂಡಿದೆ. ಇದೇ ವೇಳೆ ಸಿಎಂ ಮಮತಾ ಬ್ಯಾನರ್ಜಿ ವಿರುದ್ಧ ಸುಪ್ರೀಂ ಕೋರ್ಟ್ ತೀಕ್ಷ್ಣ ಟೀಕೆ ಹಾಗೂ ಜಾರಿ ನಿರ್ದೇಶನಾಲಯ(ಇಡಿ) ಟಿಎಂಸಿ ಅಭ್ಯರ್ಥಿಗಳಿಗೆ ಜಾರಿ ಮಾಡಿದ ಸಮನ್ಸ್ ಆಡಳಿತಾರೂಢ ಪಕ್ಷಕ್ಕೆ ಹೊಸ ತಲೆನೋವಾಗಿ ಪರಿಣಮಿಸಿದೆ.

ಐ-ಪ್ಯಾಕ್ ಪ್ರಕರಣ ಸಂಬಂಧ ಬುಧವಾರ ನಡೆದ ವಿಚಾರಣೆಯಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ತನಿಖೆಯ ಮಹತ್ವದ ಹಂತದಲ್ಲಿ ಸಿಎಂ ಹಸ್ತಕ್ಷೇಪ ಮಾಡುವುದು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಧಕ್ಕೆಯಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮುಖ್ಯಮಂತ್ರಿಯೊಬ್ಬರು ತನಿಖೆ ಮಧ್ಯೆ ಪ್ರವೇಶಿಸಿ ಸಂಪೂರ್ಣ ವ್ಯವಸ್ಥೆಯನ್ನೇ ಅಪಾಯಕ್ಕೆ ತಳ್ಳುವುದು ಕೇವಲ ಕೇಂದ್ರ-ರಾಜ್ಯ ವಿವಾದವಲ್ಲ; ಇದು ಪ್ರಜಾಪ್ರಭುತ್ವದ ಮೂಲ ಚೌಕಟ್ಟಿನ ಮೇಲಿನ ನೇರ ಪರಿಣಾಮ ಎಂದು ನ್ಯಾಯಮೂರ್ತಿಗಳು ಹೇಳಿದರು. ಇಂತಹ ಪರಿಸ್ಥಿತಿ ದೇಶದಲ್ಲಿ ಉಂಟಾಗಬಹುದು ಎಂದು ನಾವು ಊಹಿಸಿರಲಿಲ್ಲ ಎಂಬುದನ್ನು ನ್ಯಾಯಪೀಠ ಸ್ಪಷ್ಟಪಡಿಸಿದೆ. ➡ಪುಟ ೪



> ಮುಖ್ಯಮಂತ್ರಿಯೊಬ್ಬರು ತನಿಖೆ ಮಧ್ಯೆ ಪ್ರವೇಶಿಸಿ ಸಂಪೂರ್ಣ ವ್ಯವಸ್ಥೆಯನ್ನೇ ಅಪಾಯಕ್ಕೆ ತಳ್ಳುವುದು ಕೇವಲ ಕೇಂದ್ರ-ರಾಜ್ಯ ವಿವಾದವಲ್ಲ; ಇದು ಪ್ರಜಾಪ್ರಭುತ್ವದ ಮೂಲ ಚೌಕಟ್ಟಿನ ಮೇಲಿನ ನೇರ ಪರಿಣಾಮ.
> ■ ಸುಪ್ರೀಂಕೋರ್ಟ್

ಇಂದು ಪ.ಬಂಗಾಳ, ತ.ನಾಡಿನಲ್ಲಿ ಮತದಾನ

ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ವಿಧಾನಸಭೆಗಳಿಗೆ ಗುರುವಾರ ಮತದಾನ ನಡೆಯಲಿದೆ. ಪ.ಬಂಗಾಳದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಏ.23ರಂದು ನಡೆಯಲಿರುವ ಮೊದಲ ಹಂತದಲ್ಲಿ 152 ಕ್ಷೇತ್ರಗಳಲ್ಲಿ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ವಿಶೇಷವಾಗಿ ಉತ್ತರ ಬಂಗಾಳದಲ್ಲಿ ಬಿಜೆಪಿ ಮತ್ತು ಟಿಎಂಸಿ ನಡುವೆ ತೀವ್ರ ಸ್ಪರ್ಧೆ ಕಂಡುಬರುತ್ತಿದೆ. ಸುಮಾರು 3.6 ಕೋಟಿ ಮತದಾರರು ಭಾಗವಹಿಸಲಿದ್ದಾರೆ. ತಮಿಳುನಾಡಿನಲ್ಲಿ ಏ.23ರಂದು 234 ಸ್ಥಾನಗಳಿಗೆ ಮತದಾನ ನಡೆಯಲಿದ್ದು, 5.73 ಕೋಟಿ ಮತದಾರರು 4,023 ಅಭ್ಯರ್ಥಿಗಳ ಭವಿಷ್ಯ ನಿರ್ಧರಿಸಲಿದ್ದಾರೆ. ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಮತ್ತು ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ ನಡುವೆ ತೀವ್ರ ಪೈಪೋಟಿ ಇದೆ. ಮೇ 4ರಂದು ಎರಡೂ ರಾಜ್ಯಗಳ ಫಲಿತಾಂಶ ಪ್ರಕಟವಾಗಲಿದೆ.



700 ಗ್ರಾಮೀಣ ಉದ್ಯೋಗ ಸೃಷ್ಟಿಗೆ ಕ್ರಮ

ದಿಲ್ಲಿಗೆ ಎಂಟು ಸಾವಿರ ಡಚ್ ಮ್ಯಾಟ್: ಸಿಎಂ

• **ಬೆಂಗಳೂರು:** ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮದಿಂದ ತಯಾರಿಸಲಾಗುವ ಮ್ಯಾಟ್‌ಗಳಿಗೆ ಈಗ ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿಯೂ ಬೇಡಿಕೆ ಬಂದಿದೆ. ಆ ಬೇಡಿಕೆಯನುಸಾರ 8 ಸಾವಿರ ಮ್ಯಾಟ್‌ಗಳನ್ನು ಹೊಸದಿಲ್ಲಿಗೆ ಕಳುಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ನಿವಾಸದಲ್ಲಿ ಬುಧವಾರ 8 ಸಾವಿರ ತೆಂಗಿನ ನಾರಿನ ಮ್ಯಾಟ್‌ಗಳು ಹಾಗೂ ತೆಂಗಿನ ನಾರಿನ ಇತರೆ ಉತ್ಪನ್ನಗಳನ್ನು ಹೊತ್ತ ಲಾರಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಬೀಳ್ಕೊಟ್ಟರು.

ಈ ವೇಳೆ ಮಾತನಾಡಿದ ಅವರು, ತೆಂಗಿನ ನಾರು ಅಭಿವೃದ್ಧಿ ನಿಗಮದ ವತಿಯಿಂದ ಗ್ರಾಮೀಣ ಮಹಿಳೆಯರಿಂದ ತಯಾರಿಸಲ್ಪಟ್ಟ ಒಟ್ಟು 8 ಸಾವಿರ ಮ್ಯಾಟ್‌ಗಳನ್ನು ದೆಹಲಿಗೆ ಸರಬರಾಜು ಮಾಡಲಾಗಿದೆ. ಹಸ್ತಚಾಲಿತ ಮ್ಯಾಟ್ ಫ್ರೇಮ್ ಬಳಸಿ ಸುಮಾರು 700 ಗ್ರಾಮೀಣ ಉದ್ಯೋಗ ಸೃಷ್ಟಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.



ಮಾರಾಟಕ್ಕೆ ಉತ್ತೇಜನ

ಈ ವೇಳೆ ಮಾತನಾಡಿದ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ನಟರಾಜ್ ಜಾನಕಿರಾಮ್, ನಿಗಮದ ಉತ್ಪನ್ನಗಳಲ್ಲಿ ಅತ್ಯಂತ ಜನಪ್ರಿಯವಾದ ಮ್ಯಾಟ್ ಅಂದರೆ ಅದು ಡಚ್ ಮ್ಯಾಟ್. ಡಚ್ ಮ್ಯಾಟ್ ಎಂದರೆ ತೆಂಗಿನಕಾಯಿ ತೊಗಟೆಯಿಂದ ದೊರೆಯುವ ನಾರುಗಳಿಂದ ತಯಾರಿಸಲ್ಪಡುವ ವಿಶೇಷ ಮ್ಯಾಟ್. 18ನೇ ಶತಮಾನದಲ್ಲಿ ಭಾರತ ಮತ್ತು ಶ್ರೀಲಂಕಾದಲ್ಲಿ ತಯಾರಿಸಲ್ಪಟ್ಟ ಮ್ಯಾಟ್‌ಗಳನ್ನು ಡಚ್ ವ್ಯಾಪಾರಿಗಳು ಯುರೋಪಿಗೆ ಸಾಗಿಸುತ್ತಿದ್ದರು, ಆದ್ದರಿಂದ ಈ ಮ್ಯಾಟ್‌ಗಳು ಡಚ್ ಮ್ಯಾಟ್ ಎಂದೇ ಜನಪ್ರಿಯವಾಗಿವೆ ಎಂದು ತಿಳಿಸಿದರು. ➡ಪುಟ ೪

3 ಹಡಗಿನ ಮೇಲೆ ಇರಾನ್ ಗುಂಡಿನ ದಾಳಿ

ಹಾರ್ಮುಜ್ ಉದ್ವಿಗ್ನ

• **ದುಬೈ:** ಇರಾನ್‌ನ ರೆವಲ್ಯೂಷನರಿ ಗಾರ್ಡ್ ಬುಧವಾರ ಹಾರ್ಮುಜ್ ಜಲಸಂಧಿಯಲ್ಲಿ ಮೂರು ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದು, ಜಾಗತಿಕ ಇಂಧನ ಪೂರೈಕೆಗೆ ಬೆದರಿಕೆ ಒಡ್ಡಿದೆ. ಅಮೆರಿಕ-ಇರಾನ್ ಮಾತುಕತೆಯ ಪುನರಾರಂಭದ ಪ್ರಯತ್ನಗಳಿಗೆ ಇದು ಮತ್ತೊಂದು ಅಡ್ಡಿಯೆನಿಸಿದೆ.

ಬ್ರಿಟಿಷ್ ಮಿಲಿಟರಿಯ ಯುನೈಟೆಡ್ ಕಿಂಗ್‌ಡಮ್ ಮ್ಯಾರಿಟೈಮ್ ಟ್ರೇಡ್ ಆಪರೇಷನ್ಸ್ (ಯುಕೆಎಂಟಿಒ) ವರದಿಯ ಪ್ರಕಾರ, ಇರಾನ್‌ನ ಗನ್‌ಬೋಟ್‌ಗಳು ಬುಧವಾರ ಬೆಳಗ್ಗೆ ಕಂಟೈನರ್ ಹಡಗಿನ ಮೇಲೆ ಯಾವುದೇ ಮುನ್ಸೂಚನೆ ನೀಡದೆ ಗುಂಡಿನ ದಾಳಿ ನಡೆಸಿವೆ. ಇರಾನ್ ಸರ್ಕಾರಿ ದೂರದರ್ಶನ, ಎಂಎಸ್‌ಸಿ ಫ್ರಾನ್ಸೆ ಸ್ಕಾ ಮತ್ತು ಎಪಾಮಿನೋಡ್ಸ್ ಎಂಬ ಎರಡು ಹಡಗುಗಳನ್ನು ವಶಕ್ಕೆ ಪಡೆದಿರುವುದನ್ನು ದೃಢಪಡಿಸಿದೆ. ಇದಲ್ಲದೆ, ಯುಫೋರಿಯಾ ಎಂಬ ಮೂರನೇ ಹಡಗು ಇರಾನ್ ಕರಾವಳಿಯಲ್ಲಿ ಸಿಲುಕಿಕೊಂಡಿದೆ ಎಂದು ವರದಿಯಾಗಿದೆ. ➡ಪುಟ ೪



ಏಕೀಕೃತ ಶಾಂತಿ ಪ್ರಸ್ತಾವನೆಗೆ ಅವಕಾಶ
• ಪುಟ ೨

ಇರಾನ್‌ಗೆ ಭಾರತ ಪಾವತಿಸಿಲ್ಲ

• **ಹೊಸದಿಲ್ಲಿ:** ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ತನ್ನ ಹಡಗುಗಳಿಗೆ ಸುರಕ್ಷಿತ ದಾರಿ ಪಡೆಯಲು ಇರಾನ್‌ಗೆ ನಗದು ಅಥವಾ ಕ್ರಿಪ್ಟೋಕರೆನ್ಸಿ ಮೂಲಕ ಯಾವುದೇ ಪಾವತಿ ಮಾಡಿಲ್ಲ ಎಂದು ಭಾರತವು ಸ್ಪಷ್ಟಪಡಿಸಿದೆ. ಏ.18ರಂದು ಇರಾನ್ ಪಡೆಗಳು ಗುಂಡಿನ ದಾಳಿ ನಡೆಸಿದ ಹಿನ್ನೆಲೆಯಲ್ಲಿ 2 ಭಾರತೀಯ ಹಡಗುಗಳು ಹಿಂತಿರುಗಬೇಕಾಯಿತು. ➡ಪುಟ ೪

ಖರ್ಗೆಯವರಿಗೆ ಉಗ್ರ ವ್ಯತ್ಯಾಸ ಗೊತ್ತಾಗಿಲ್ಲ

• **ಬೀದರ್:** ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಭಯೋತ್ಪಾದಕರು ಹಾಗೂ ಭಯೋತ್ಪಾದಕರಿಗೇ ಭಯ ಹುಟ್ಟಿಸುವವರ ಮಧ್ಯೆ ವ್ಯತ್ಯಾಸ ಗೊತ್ತಾಗುವುದಿಲ್ಲ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ಗಡಿ ಜಿಲ್ಲೆಯ ಬೀದರ ತಾಲೂಕಿನ ಭಾಲ್ಕಿಯಲ್ಲಿ ನಡೆದ ಡಾ.ಚನ್ನಬಸವ ಪಟ್ಟದೇವರು ಅವರ 75ನೇ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ಮೋದಿಯವರ ಕುರಿತ ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆ ಪ್ರಸ್ತಾಪಿಸಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ನಮ್ಮ ವಿಚಾರಧಾರೆಗಳ ನಡುವೆ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಆದರೆ, ನಾವಿಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದೇವೆ ಎಂದರು.

ಖರ್ಗೆ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸಿರುವುದನ್ನು ಪರೋಕ್ಷವಾಗಿ ಉಪರಾಷ್ಟ್ರಪತಿ ಪ್ರಸ್ತಾಪಿಸಿದರು. ಇದು ಬಸವಣ್ಣನವರ ಪವಿತ್ರ ನೆಲ, ಅವರ ಆಶಯಗಳಂತೆ ಭಾಲ್ಕಿ ಮಠ ಕೆಲಸ ಮಾಡುತ್ತಿದೆ ಎಂದರು.



ಪ್ರಧಾನಿ ಮೋದಿ ವಿರುದ್ಧದ ಹೇಳಿಕೆಗೆ ಉಪರಾಷ್ಟ್ರಪತಿ ರಾಧಾಕೃಷ್ಣನ್ ಮಾತು

ಭಿಕ್ಷಾಟನೆಗಿಂತ ಸ್ವಾವಲಂಬಿ ಜೀವನವೇ ಲೇಸು | ಆಂಬುಲೆನ್ಸ್ ಓಡಿಸುವ ಕನಸು

ತೃತೀಯಲಿಂಗಿ ವಿಸ್ಮಯ

▸ ಅನುಷಾ ನಾಯಕ್

ದಿಗಂತ ವಿಶೇಷ

• **ಬೆಂಗಳೂರು:** ಹುಟ್ಟಿದ್ದು ಗಂಡಾಗಿ, ಬದಲಾದದ್ದು ಹೆಣ್ಣಾಗಿ. ಓದಿದ್ದು ಪಿಯುಸಿ. ಹೊಟ್ಟೆಪಾಡಿಗೆ ಆಯ್ಕೆ ಮಾಡಿಕೊಂಡಿದ್ದು ಆಟೋ ಚಾಲನೆ. ಸಿಕ್ಕಿದ್ದು ಸುಖಮಯ ಸಾಂಸಾರಿಕ ಜೀವನ, ದಕ್ಕಿದ್ದು ಸ್ವಾಭಿಮಾನದ ಬದುಕು. ಇದು ತೃತೀಯ ಲಿಂಗಿಯೊಬ್ಬರ ಜೀವನಗಾಥೆ. ಚಪ್ಪಾಳೆ ತಟ್ಟಿ ಹಣ ಕೇಳುವ, ಕರೆಯದಿದ್ದರೂ ಶುಭ ಸಮಾರಂಭಗಳಿಗೆ ನುಗ್ಗುವ, ಅಪರಾಧ ಕೃತ್ಯಗಳ ಆರೋಪ ಹೊತ್ತ ಎಷ್ಟೋ ತೃತೀಯಲಿಂಗಿಯರ ನಡುವೆ ವಿಸ್ಮಯ ಎನ್ನುವ ತೃತೀಯಲಿಂಗಿಯೊಬ್ಬರು ವಿಭಿನ್ನವಾಗಿ ನಿಲ್ಲುತ್ತಾರೆ. ಇವರ ಬದುಕಿನ ತಿರುವು ವಿಶಿಷ್ಟ ಸಾಧನೆಯೂ ಅಷ್ಟೇ ವಿಶಿಷ್ಟ.

ಸ್ವಾಭಿಮಾನಿ ನಡೆ...: ಮನೆಯವರ ವಿರೋಧದ ನಡುವೆಯೂ ತಮ್ಮಿಚ್ಛೆಯಂತೆಯೇ ತೃತೀಯಲಿಂಗಿಯಾದರು. ➡ಪುಟ ೪



> ಗಂಡೂ ಅಲ್ಲ, ಹೆಣ್ಣೂ ಅಲ್ಲ, ಮನೆಗೆ ಮಗನೂ ಅಲ್ಲ, ಸ್ಮಶಾನಕ್ಕೆ ಹೆಣವೂ ಅಲ್ಲ. ಇದು ನಮ್ಮ ಆಯ್ಕೆಯಲ್ಲ, ಬ್ರಹ್ಮ ಲಿಖಿತ. ನಮಗೂ ಮನಸ್ಸಿದೆ, ಕಷ್ಟ-ಸುಖಗಳಿವೆ, ಅರ್ಥ ಮಾಡಿಕೊಳ್ಳಿ.
> ■ ವಿಸ್ಮಯ, ಆಟೋ ಚಾಲಕಿ

ಮೋದಿ ಟೆರರಿಸ್ಟ್ ಎಂದ ಖರ್ಗೆಗೆ ಇಸಿ ನೋಟಿಸ್

• **ಹೊಸದಿಲ್ಲಿ:** ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ ಎಂದು ಉಲ್ಲೇಖಿಸಿರುವುದನ್ನು ಚುನಾವಣಾ ಆಯೋಗ (ಇಸಿ) ಬುಧವಾರ ಗಂಭೀರವಾಗಿ ಪರಿಗಣಿಸಿ, ಅವರಿಗೆ ನೋಟಿಸ್ ನೀಡಿದೆ. 24 ಗಂಟೆಗಳ ಒಳಗೆ ಪ್ರತಿಕ್ರಿಯೆ ನೀಡುವಂತೆ ಚುನಾವಣಾ ಆಯೋಗವು ಖರ್ಗೆ ಅವರಿಗೆ ಸೂಚಿಸಿದೆ.



ನಿಗದಿತ ಸಮಯದೊಳಗೆ ನಿಮ್ಮ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಲ್ಲಿ, ಈ ವಿಚಾರದಲ್ಲಿ ನಿಮಗೆ ಹೇಳಲು ಏನೂ ಇಲ್ಲ ಎಂದು ಭಾವಿಸಲಾಗುತ್ತದೆ. ಅದೇ ರೀತಿ ಈ ವಿಷಯದಲ್ಲಿ ಸೂಕ್ತ ಕ್ರಮ ಅಥವಾ ನಿರ್ಧಾರ ತೆಗೆದುಕೊಳ್ಳಲು ಆಯೋಗ ಸ್ವತಂತ್ರವಾಗಿರುತ್ತದೆ ಎಂದು ಇಸಿ ಹೇಳಿದೆ.

ತಮಿಳುನಾಡು ವಿಧಾನಸಭಾ ಚುನಾವಣೆ ಪ್ರಚಾರದ ಅಂತಿಮ ದಿನದಂದು ಚೆನ್ನೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಖರ್ಗೆ ಅವರು ಪ್ರಧಾನಿಯನ್ನು ಭಯೋತ್ಪಾದಕ ಎಂದು ಉಲ್ಲೇಖಿಸಿದ್ದರು.

ಎಐಎಡಿಎಂಕೆಯು ಪ್ರಧಾನಿ ಮೋದಿಯವರ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದನ್ನು ಟೀಕಿಸುವ ವೇಳೆ ಖರ್ಗೆ ಈ ರೀತಿ ದೂಷಿಸಿದ್ದರು. ಎಐಎಡಿಎಂಕೆ ಮೋದಿ ಜತೆ ಹೇಗೆ ತಾನೆ ಕೈಜೋಡಿಸುತ್ತದೆ. ಮೋದಿ ಒಬ್ಬ ಭಯೋತ್ಪಾದಕ. ಅವರು ಸಮಾನತೆಯಲ್ಲಿ ನಂಬಿಕೆ ಹೊಂದಿಲ್ಲ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	
ಬೆಳ್ಳಿ	2,55,700(2,56,800)
ಅಪರಂಜಿ ಚಿನ್ನ	15,252(15,400)
ಆಭರಣ ಚಿನ್ನ	14,185(14,235)

ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ	
ಬಿಎಸ್‌ಇ	78,516 (756↓)
ಎನ್‌ಎಸ್‌ಇ	24,378 (198↓)

$1 = ₹92.93

ಇರಾನ್ ಜತೆಗಿನ ಕದನ ವಿರಾಮ ಅನಿರ್ದಿಷ್ಟಾವಧಿಗೆ ವಿಸ್ತರಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಏಕೀಕೃತ ಶಾಂತಿ ಪ್ರಸ್ತಾವನೆಗೆ ಅವಕಾಶ

ವಾಷಿಂಗ್ಟನ್/ಇಸ್ಲಾಮಾಬಾದ್: ಇರಾನ್‌ನ ಭಿನ್ನಮತೀಯ ನಾಯಕತ್ವ ಯುದ್ಧವನ್ನು ಕೊನೆಗೊಳಿಸಲು ಏಕೀಕೃತ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಸಮಯ ನೀಡುವ ಉದ್ದೇಶದಿಂದ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಜತೆಗಿನ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿದ್ದಾರೆ.

ಏಪ್ರಿಲ್ 8ರಂದು ಘೋಷಿಸಲಾಗಿದ್ದ ಎರಡು ವಾರಗಳ ಕದನ ವಿರಾಮ ಮುಕ್ತಾಯಗೊಳ್ಳಲು ಕೆಲವೇ ಗಂಟೆಗಳ ಮೊದಲು ಈ ಘೋಷಣೆ ಹೊರಬಿದ್ದಿದೆ. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಕೋರಿಕೆಯ ಮೇರೆಗೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಟ್ರಂಪ್ ತಿಳಿಸಿದ್ದಾರೆ. ಇದರಿಂದಾಗಿ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ವಿಶೇಷ ಪ್ರತಿನಿಧಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಅವರ ಇಸ್ಲಾಮಾಬಾದ್ ಭೇಟಿಯನ್ನು ಮುಂದೂಡಲಾಗಿದೆ.



ಸಾಗರ ದಿಗ್ಬಂಧನ ಮುಂದುವರಿಕೆ: ಕದನ ವಿರಾಮ ವಿಸ್ತರಿಸಿದರೂ, ಇರಾನ್ ಬಂದರುಗಳ ಮೇಲಿನ ಆರ್ಥಿಕ ದಿಗ್ಬಂಧನವನ್ನು ಮುಂದುವರಿಸಲು ಅಮೆರಿಕ ಸೇನೆಗೆ ಸೂಚಿಸಲಾಗಿದೆ. ಟೆಹ್ರಾನ್ ಮೇಲೆ ಒತ್ತಡ ಹೇರಲು ಈ ಕ್ರಮ ಅಗತ್ಯ ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ಆದರೆ, ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಾಗ್ಚಿ ಈ ದಿಗ್ಬಂಧನವನ್ನು ಯುದ್ಧದ ಕ್ರಮ ಮತ್ತು "ಕದನ ವಿರಾಮದ ಉಲ್ಲಂಘನೆ" ಎಂದು ಕರೆದಿದ್ದಾರೆ.

ಜಾರಿ ಮತ್ತು ನಿರ್ಬಂಧಗಳು: ಇರಾನ್‌ನ ಕಚ್ಚಾ ತೈಲವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಎಂ/ಟಿ ಟಿಫಾನಿ ಎಂಬ ತೈಲ ಟ್ಯಾಂಕರ್ ಅನ್ನು ಅಮೆರಿಕ ಪಡೆಗಳು ಹಿಂದೂ ಮಹಾಸಾಗರದಲ್ಲಿ ಮಂಗಳವಾರ ವಶಕ್ಕೆ ಪಡೆದಿವೆ ಎಂದು ಪೆಂಟಗನ್ ತಿಳಿಸಿದೆ. ಇದರೊಂದಿಗೆ, ಇರಾನ್ ಪರವಾಗಿ ಶಸ್ತ್ರಾಸ್ತ್ರ ಸಂಗ್ರಹಣೆಯಲ್ಲಿ ತೊಡಗಿರುವ ಇರಾನ್, ಟರ್ಕಿ ಮತ್ತು ಯುಎಇ ಮೂಲದ 14 ಘಟಕಗಳು ಮತ್ತು ವ್ಯಕ್ತಿಗಳ ಮೇಲೆ ಅಮೆರಿಕದ ಹಣಕಾಸು ಇಲಾಖೆ ಹೊಸ ನಿರ್ಬಂಧಗಳನ್ನು ವಿಧಿಸಿದೆ.

ಚೀನಾ-ರಷ್ಯಾ ಎಚ್ಚರಿಕೆಯ ಪ್ರತಿಕ್ರಿಯೆ: ಈ ಕದನ ವಿರಾಮ ವಿಸ್ತರಣೆಯನ್ನು ಸ್ವಾಗತಿಸಿರುವ ಚೀನಾ ಮತ್ತು ರಷ್ಯಾ ಎಚ್ಚರಿಕೆಯ ಪ್ರತಿಕ್ರಿಯೆ ನೀಡಿವೆ. ಪ್ರಾದೇಶಿಕ ಸ್ಥಿರತೆಗಾಗಿ ಸಾಗರ ದಿಗ್ಬಂಧನವನ್ನು ತೆರವುಗೊಳಿಸುವಂತೆ ಅಮೆರಿಕವನ್ನು ಒತ್ತಾಯಿಸಿವೆ. ಪಾಕಿಸ್ತಾನದ ಮಧ್ಯಸ್ಥಿಕೆಯನ್ನು ಶ್ಲಾಘಿಸಿದ ಚೀನಾ, ಜಾಗತಿಕ ಇಂಧನ ಪೂರೈಕೆ ವ್ಯವಸ್ಥೆಯನ್ನು ರಕ್ಷಿಸಲು ಉಭಯ ದೇಶಗಳು ಪರಸ್ಪರ ರಿಯಾಯಿತಿ ನೀಡಬೇಕು ಎಂದು ಪ್ರತಿಪಾದಿಸಿದೆ.

ಆರ್ಥಿಕ ಮತ್ತು ಪ್ರಾದೇಶಿಕ ಪರಿಣಾಮ: ಫೆ.28ರಂದು ಯುದ್ಧ ಪ್ರಾರಂಭವಾದಾಗಿನಿಂದ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.30 ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 95 ಡಾಲರ್ ತಲುಪಿದೆ. ಇರಾನ್‌ನ ಖಾರ್ಗ್ ದ್ವೀಪದ ತೈಲ ಸಂಗ್ರಹಣಾ ಘಟಕಗಳು ಭರ್ತಿಯಾಗುತ್ತಿದ್ದು, ತೈಲ ಬಾವಿಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಬಹುದು ಎಂದು ಅಮೆರಿಕ ಎಚ್ಚರಿಸಿದೆ. ಜಾಗತಿಕ ಇಂಧನ ಪೂರೈಕೆಯ ಶೇ.20 ರಷ್ಟು ಹಾದುಹೋಗುವ ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್ ಹೊಂದಿರುವ ನಿಯಂತ್ರಣವನ್ನು ತಪ್ಪಿಸಲು ಅಮೆರಿಕ ಈ ದಿಗ್ಬಂಧನ ಹೇರಿದೆ.

ರಾಜತಾಂತ್ರಿಕ ಸಿದ್ಧತೆಗಳು: ಇಸ್ಲಾಮಾಬಾದ್‌ನಲ್ಲಿ ನಡೆಯಲಿರುವ ಎರಡನೇ ಸುತ್ತಿನ ಮಾತುಕತೆಗಾಗಿ ಪಾಕಿಸ್ತಾನ, 10,000 ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ಆದರೆ, ಮಾತುಕತೆಯ ನಿಖರ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಏ.11 ಮತ್ತು 12ರಂದು ನಡೆದ ಮೊದಲ ಸುತ್ತಿನ ಮಾತುಕತೆಗಳು ಯಾವುದೇ ಫಲಿತಾಂಶ ನೀಡಿರಲಿಲ್ಲ.



ಹೆಜ್ಬೊಲ್ಲಾ ನಿಶ್ಯಸ್ತ್ರಗೊಳಿಸಲು ಸಹಕರಿಸುವಂತೆ ಇಸ್ರೇಲ್ ಮನವಿ

ವಾಷಿಂಗ್ಟನ್‌ನಲ್ಲಿ ದ್ವಿಪಕ್ಷೀಯ ಮಾತುಕತೆಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಹೆಜ್ಬೊಲ್ಲಾವನ್ನು ನಿಶ್ಯಸ್ತ್ರಗೊಳಿಸಲು ಸಹಕರಿಸುವಂತೆ ಲೆಬನಾನ್‌ಗೆ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯಾನ್ ಸಾರ್ ಕರೆ ನೀಡಿದ್ದಾರೆ. ರಾಜತಾಂತ್ರಿಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಸಾರ್, ಇರಾನ್ ಬೆಂಬಲಿತ ಉಗ್ರಗಾಮಿ ಸಂಘಟನೆ ಹೆಜ್ಬೊಲ್ಲಾ, ಶಾಂತಿ ಮತ್ತು ಸಹಜ ಸ್ಥಿತಿಗೆ ಏಕೈಕ ಅಡ್ಡಿ. ಸಣ್ಣ ಗಡಿ ವಿವಾದಗಳನ್ನು ಸುಲಭವಾಗಿ ಪರಿಹರಿಸಬಹುದು. ಹೆಜ್ಬೊಲ್ಲಾವನ್ನು ಹತ್ತಿಕ್ಕುವುದರಿಂದ ಲೆಬನಾನ್ ಸಾರ್ವಭೌಮತ್ವ ಮತ್ತು ಇರಾನ್ ಪ್ರಭಾವದಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಈ ಮಾತುಕತೆಗಳು, ದಶಕಗಳ ನಂತರ ಉಭಯ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಮೊದಲ ನೇರ ರಾಜತಾಂತ್ರಿಕ ಸಂವಹನವಾಗಿದೆ.

ಪ್ರಸ್ತುತ, ಇಸ್ರೇಲ್ ಸೇನೆ, ದಕ್ಷಿಣ ಲೆಬನಾನ್‌ನಲ್ಲಿ 10 ಕಿಮೀ ಬಫರ್ ವಲಯವನ್ನು ಕಾಯ್ದುಕೊಂಡಿದೆ. ಉತ್ತರ ಇಸ್ರೇಲ್ ಅನ್ನು ಗುರಿಯಾಗಿಸಿಕೊಂಡು ಉಡಾಯಿಸುವ ಅಲ್ಪ-ದೂರದ ರಾಕೆಟ್‌ಗಳು ಮತ್ತು ಟ್ಯಾಂಕ್ ವಿರೋಧಿ ಕ್ಷಿಪಣಿಗಳನ್ನು ತಡೆಯಲು ಈ ಆಯಕಟ್ಟಿನ ವಲಯ ಸ್ಥಾಪಿಸಲಾಗಿದೆ. ಉಭಯ ದೇಶಗಳ ನಡುವಿನ ಅಧಿಕೃತ ಚರ್ಚೆಗಳು ಗುರುವಾರವೂ ಮುಂದುವರಿಯಲಿವೆ.

ಅಮೆರಿಕದ 11 ವಿಜ್ಞಾನಿಗಳ ಸಾವು

2023ರಿಂದೀಚೆಗೆ ಅಮೆರಿಕದಲ್ಲಿ 11 ವಿಜ್ಞಾನಿಗಳ ಅಸಹಜ ಸಾವು ಮತ್ತು ನಾಪತ್ತೆ ಪ್ರಕರಣಗಳನ್ನು ರಾಷ್ಟ್ರೀಯ ಭದ್ರತಾ ಬೆದರಿಕೆಯಾಗಿ ಪರಿಗಣಿಸಲಾಗುತ್ತಿದೆ. ಪರಮಾಣು ಮತ್ತು ಏರೋಸ್ಪೇಸ್ ಸಂಶೋಧನೆಗೆ ಸಂಬಂಧಿಸಿದ ಈ ಘಟನೆಗಳ ಹಿಂದೆ ಗೂಢಚಾರಿಕೆ ಅಥವಾ ಇರಾನ್‌ನಲ್ಲಿ ಅಣ್ವಸ್ತ್ರ



ಸಂಶೋಧನೆಗೆ ನಂಟಿದೆಯೇ? ಎಂಬ ಪ್ರಶ್ನೆ ಹುಟ್ಟುಹಾಕಿದೆ. ಮಾರ್ಚ್‌ನಲ್ಲಿ ಮ್ಯಾಸಚೂಸೆಟ್ಸ್ ಸರೋವರದಲ್ಲಿ ಫಾರ್ಮಾಸ್ಯೂಟಿಕಲ್ ಸಂಶೋಧಕ ಜೇಸನ್ ಥಾಮಸ್ ಮೃತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಪ್ರಕರಣಕ್ಕೆ ಹೊಸ ತಿರುವು ನೀಡಿತು. ಅವರು ಮೂರು ತಿಂಗಳಿನಿಂದ ಕಾಣೆಯಾಗಿದ್ದರು. 2022ರಿಂದ ಅನೇಕ ವಿಜ್ಞಾನಿಗಳು ಅನುಮಾನಾಸ್ಪದ ಪರಿಸ್ಥಿತಿಯಲ್ಲಿ ಮೃತಪಟ್ಟಿದ್ದಾರೆ ಅಥವಾ ಕಾಣೆಯಾಗಿದ್ದಾರೆ.ಇವರಲ್ಲಿ ಕೆಲವರು ಲಾಸ್ ಅಲಮೋಸ್ ನ್ಯಾಷನಲ್ ಲ್ಯಾಬ್, ನಾಸಾ ಜೆಟ್ ಪ್ರೊಪಲ್ಷನ್ ಲ್ಯಾಬ್ ಮತ್ತು ಎಂಐಟಿ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿದ್ದರು. ವೈಟ್ ಹೌಸ್ ಹೇಳುವಂತೆ, ಎಫ್‌ಬಿಐ ಮತ್ತು ಇತರ ಸಂಸ್ಥೆಗಳು ಈ ಪ್ರಕರಣಗಳನ್ನು ಒಟ್ಟಾಗಿ ಪರಿಶೀಲಿಸುತ್ತಿವೆ. ವಿವಿಧ ಇಲಾಖೆಗಳು ಮಾಹಿತಿ ಹಂಚಿಕೊಳ್ಳುತ್ತಿದ್ದು, ಇದಕ್ಕೆ ಯಾವುದೇ ಸಂಬಂಧವಿದೆಯೇ ಎಂಬುದನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿವೆ.



ದಿಗ್ಬಂಧನ ಮೀರಿ ಸಾಗಿದ ಇರಾನ್‌ನ 34 ಟ್ಯಾಂಕರ್

ಅಮೆರಿಕದ ನೌಕಾ ನಾಕಾಬಂದಿಗೆ ಟೆಹರಾನ್ ಸೆಡ್ಡು

ದುಬೈ: ಇರಾನ್ ನೌಕಾ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಅಮೆರಿಕದ ನೌಕಾ ದಿಗ್ಬಂಧನದ ಹೊರತಾಗಿಯೂ, ಇರಾನ್‌ಗೆ ಸೇರಿದ ಕನಿಷ್ಠ 34 ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯ ಮೂಲಕ ಯಶಸ್ವಿಯಾಗಿ ಸಂಚರಿಸಿವೆ ಎಂದು ವರದಿಯಾಗಿದೆ.

ಏ.13ರಂದು ದಿಗ್ಬಂಧನ ಪ್ರಾರಂಭವಾದಾಗಿನಿಂದ ಇರಾನ್ ಸಂಬಂಧಿತ 19 ಟ್ಯಾಂಕರ್‌ಗಳು ಪರ್ಷಿಯನ್ ಕೊಲ್ಲಿಯಿಂದ ಹೊರಹೋಗಿವೆ ಮತ್ತು 15 ಟ್ಯಾಂಕರ್‌ಗಳು ಅರೇಬಿಯನ್ ಸಮುದ್ರದಿಂದ ಒಳಬಂದಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದೆ. ಹೊರಹೋದ ಹಡಗುಗಳ ಪೈಕಿ ಆರು ಹಡಗುಗಳು ಸುಮಾರು 10.7 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಸಾಗಿಸಿವೆ ಎಂದು ದೃಢಪಟ್ಟಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆ ಬೆಲೆಗಿಂತ ಬ್ಯಾರೆಲ್‌ಗೆ 10 ಡಾಲರ್ ರಿಯಾಯಿತಿ ದರದಲ್ಲಿ ಮಾರಾಟವಾದರೂ, ಈ ಸಾಗಾಟದಿಂದ ಇರಾನ್‌ಗೆ ಸುಮಾರು 910 ಮಿಲಿಯನ್ ಡಾಲರ್ ಆದಾಯ ಲಭಿಸಿದೆ ಎಂದು ಅಂದಾಜಿಸಲಾಗಿದೆ.

ತಂತ್ರಗಳು ಮತ್ತು ತಪಾಸಣೆ: ಇರಾನ್ ಧ್ವಜ ಹೊಂದಿರುವ 'ಡೊರೆನಾ' ಎಂಬ ಸೂಪರ್ ಟ್ಯಾಂಕರ್ ತನ್ನ ಗುರುತಿನ ಸಂಕೇತಗಳನ್ನು(ಟ್ರಾನ್ಸ್ ಪಾಂಡರ್) ಆಫ್ ಮಾಡುವ ಮೂಲಕ ಅಮೆರಿಕದ ಕಣ್ಗಾವಲು ತಪ್ಪಿಸಿ ಸಾಗಿದೆ. ಅಂಕಿ-ಅಂಶಗಳ ಪ್ರಕಾರ, ವರ್ಟೆಕ್ಸ್ ಹಡಗು ಏ.17ರಂದು ಇರಾನ್ ಸಮುದ್ರ ಗಡಿಯನ್ನು ದಾಟಿದ್ದು, ಮಲೇಷ್ಯಾ ಕರಾವಳಿಯಲ್ಲಿ ತೈಲವನ್ನು ಮತ್ತೊಂದು ಹಡಗಿಗೆ ವರ್ಗಾಯಿಸುವ ಮೂಲಕ ಮೂಲವನ್ನು ಮರೆಮಾಚಿದೆ. ಕಳೆದ ವರ್ಷ ಅಮೆರಿಕದಿಂದ ನಿರ್ಬಂಧಕ್ಕೆ ಒಳಗಾಗಿದ್ದ ಮುರ್ಲಿ ಕಿಶನ್ ಮತ್ತು ಅಲಿಸಿಯಾ ಹಡಗುಗಳು ಏ.14ರಂದು ಜಲಸಂಧಿ ಪ್ರವೇಶಿಸಿವೆ.

ಮಿಲಿಟರಿ ಕಾರ್ಯಾಚರಣೆ: ದಿಗ್ಬಂಧನ ಆರಂಭವಾದಾಗಿನಿಂದ ಅಮೆರಿಕ ಪಡೆಗಳು 28 ಹಡಗುಗಳನ್ನು ಮರಳಿ ಬಂದರಿಗೆ ಕಳುಹಿಸಿವೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ಮಂಗಳವಾರ ತಿಳಿಸಿದೆ. ಈವರೆಗೆ ಒಮಾನ್ ಕೊಲ್ಲಿಯಲ್ಲಿ ಒಂದು ಕಂಟೈನರ್ ಹಡಗನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಇಂಡೋ-ಪೆಸಿಫಿಕ್ ವಲಯದಲ್ಲಿ ಒಂದು ಟ್ಯಾಂಕರ್ ಅನ್ನು ತಪಾಸಣೆ ಮಾಡಲಾಗಿದೆ. ಈ ಕಾರ್ಯತಂತ್ರ ಯಶಸ್ವಿಯಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದು, ಅಂತಿಮ ಒಪ್ಪಂದವಾಗುವವರೆಗೆ ದಿಗ್ಬಂಧನ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಇರಾನ್ ಹೊಸ ಆದೇಶ: ಏ.18ರಂದು ಹಾರ್ಮುಜ್ ಜಲಸಂಧಿಯ ನಿಯಂತ್ರಣ ತನ್ನ ಹಳೆಯ ಸ್ಥಿತಿಗೆ ಮರಳಿದೆ ಎಂದು ಇರಾನ್ ನೌಕಾಪಡೆ ಘೋಷಿಸಿದೆ. ಎಲ್ಲಾ ಹಡಗುಗಳ ಸಂಚಾರಕ್ಕೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾಪಡೆಯ ಅನುಮತಿ ಕಡ್ಡಾಯ ಎಂದು ಇರಾನ್ ಆದೇಶಿಸಿದೆ. ಹೊಸ ಆದೇಶದ ಪ್ರಕಾರ, ನಾಗರಿಕ ಹಡಗುಗಳು ಇರಾನ್ ಸೂಚಿಸಿದ ಮಾರ್ಗದಲ್ಲೇ ಚಲಿಸಬೇಕು ಮತ್ತು ಮಿಲಿಟರಿ ಹಡಗುಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.



ವಿಮೆ ಇಲ್ಲ, ಕಾಯುತ್ತಿರುವ ಹಡಗುಗಳು

ಇತ್ತೀಚಿನ ಸ್ಯಾಟಲೈಟ್ ಚಿತ್ರಗಳು ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಅಮೆರಿಕದ ನೌಕಾಪಡೆ, ತನ್ನ ಕಣ್ಗಾವಲನ್ನು ಹೆಚ್ಚಿಸಲು ಹೆಚ್ಚಿನ ಯುದ್ಧನೌಕೆಗಳನ್ನು ನಿಯೋಜಿಸಿರುವುದನ್ನು ದೃಢಪಟ್ಟಿದೆ. ಘೋಸ್ಟ್ ಫ್ಲೀಟ್ ಎಂದು ಕರೆಯಲ್ಪಡುವ ಇರಾನ್ ಟ್ಯಾಂಕರ್‌ಗಳು ಬಳಸುವ ರಹಸ್ಯ ಮಾರ್ಗಗಳನ್ನು ಬಂದ್ ಮಾಡುವುದು ಇದರ ಮುಖ್ಯ ಉದ್ದೇಶ. ಇದೇ ವೇಳೆ, ಅಮೆರಿಕ ಮತ್ತು ಇರಾನ್ ಎರಡೂ ರಾಷ್ಟ್ರಗಳ ಸ್ಪಷ್ಟ ಅನುಮತಿ ಇಲ್ಲದೆ ಸಂಚರಿಸುವ ಹಡಗುಗಳಿಗೆ ಲಂಡನ್‌ನ ವಿಮಾ ಕಂಪನಿಗಳು ವಿಮಾ ಸೌಲಭ್ಯ ಸ್ಥಗಿತಗೊಳಿಸಿವೆ. ಈ ತೀವ್ರ ಭದ್ರತಾ ಕ್ರಮಗಳಿಂದಾಗಿ 50ಕ್ಕೂ ಹೆಚ್ಚು ವಾಣಿಜ್ಯ ಹಡಗುಗಳು ಅಂತಾರಾಷ್ಟ್ರೀಯ ಸಮುದ್ರದಲ್ಲಿ ಲಂಗರು ಹಾಕಿ ಕಾಯುತ್ತಿವೆ.

ಪ್ರಾದೇಶಿಕ ಉದ್ವಿಗ್ನತೆ

ಕಳೆದ ಶನಿವಾರ ಜಲಸಂಧಿ ಸಂಚಾರಕ್ಕೆ ಮುಕ್ತವಾಗಿದೆ ಎಂದು ಇರಾನ್ ಘೋಷಿಸಿದ ನಂತರ ಕನಿಷ್ಠ 30 ಹಡಗುಗಳು ಸಂಚರಿಸಲು ಪ್ರಯತ್ನಿಸಿದ್ದವು. ಆದರೆ, ನಂತರ ಇರಾನ್ ಸೈನಿಕರು ಫ್ರೆಂಚ್ ಕಂಟೈನರ್ ಹಡಗು ಮತ್ತು ಭಾರತೀಯ ಟ್ಯಾಂಕರ್ ಮೇಲೆ ಗುಂಡಿನ ದಾಳಿ ನಡೆಸಿದ್ದರು. ಅಮೆರಿಕ ಮತ್ತು ಇರಾನ್ ಎರಡೂ ಹೇರಿರುವ ನಿರ್ಬಂಧಗಳಿಂದಾಗಿ ಹಡಗುಗಳ ಮಾಲೀಕರು ಇದನ್ನು ಡಬಲ್ ಬ್ಲಾಕೇಡ್(ದ್ವಿಮುಖ ದಿಗ್ಬಂಧನ) ಎಂದು ಕರೆದಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಯುದ್ಧಕ್ಕೆ ಪೂರಕವಾಗುವ ಯಾವುದೇ ಸರಕು ಸಾಗಣೆಯನ್ನು ತಡೆಯುವುದು ಅಮೆರಿಕದ ಮುಖ್ಯ ಉದ್ದೇಶ.

ಕಿರುಸುದ್ದಿ

ನೇಪಾಳದಲ್ಲಿ ಪ್ರತಿಭಟನೆ: ಗೃಹ ಸಚಿವ ರಾಜೀನಾಮೆ

ಕಠ್ಮಂಡು: ಜೆನ್‌ಝಿ ಪ್ರತಿಭಟನೆಯಿಂದ ತತ್ತರಿಸಿದ ನೇಪಾಳದಲ್ಲಿ ಪ್ರತಿಭಟನೆಕಾವು ಕಡಿಮೆಯಾಗಿ ನೂತನ ಸರ್ಕಾರದ ಆಡಳಿತ ಆರಂಭವಾದ ಬೆನ್ನಲ್ಲೇ ಮತ್ತೆ ಸಾರ್ವಜನಿಕ ಆಕ್ರೋಶ ಭುಗಿಲೆದ್ದಿದ್ದು, ಗೃಹ ಸಚಿವ ಸುಧನ್ ಗುರುಂಗ್ ರಾಜೀನಾಮೆ ನೀಡಿದ್ದಾರೆ. ಭಾರತ-ನೇಪಾಳ ಗಡಿಯಲ್ಲಿ ನೇಪಾಳದ ಸುಂಕ ಜಾರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಸರ್ಕಾರದ ವಿರುದ್ಧ ಧಂಗೆ ಎದ್ದಿದ್ದಾರೆ. ಇದು ಸರಕುಗಳ ಸುಲಭ ಹರಿವನ್ನು ನಿರ್ಬಂಧಿಸುತ್ತಿದೆ. ಈ ಸುಂಕ ನೀತಿಯಿಂದ ನೇಪಾಳದ ಜನರಿಗೆ ಉತ್ಪನ್ನಗಳನ್ನು ದುಬಾರಿಯಾಗುತ್ತಿದೆ ಎಂದು ಜನರು ಆಕ್ರೋಶಗೊಂಡಿದ್ದಾರೆ. ಗಡಿ ತೆರಿಗೆ ನೀತಿಯು ಸಾರ್ವಜನಿಕ ಆಕ್ರೋಶವನ್ನು ಹುಟ್ಟುಹಾಕಿದೆ. ಭಾರತದಿಂದ ಆಮದು ಮಾಡಿಕೊಳ್ಳುವ 100 ರೂ. ಗಳಿಗಿಂತ ಹೆಚ್ಚು ಮೌಲ್ಯದ ಸರಕುಗಳ ಮೇಲೆ ಕಡ್ಡಾಯ ಸುಂಕವನ್ನು ವಿಧಿಸುವ ಸರ್ಕಾರದ ನಿರ್ಧಾರವು ಅಶಾಂತಿಗೆ ಪ್ರಮುಖ ಪ್ರಚೋದನೆಯಾಗಿದೆ. ಭಾರತದ ಗಡಿ ಚೆಕ್‌ಪೋಸ್ಟ್‌ಗಳಲ್ಲಿ ನೇಪಾಳ ಪೊಲೀಸರು ಮತ್ತು ಜನರ ನಡುವಿನ ಘರ್ಷಣೆಯ ವಿಡಿಯೋಗಳು ವೈರಲ್ ಆಗುತ್ತಿವೆ.

ಮಾಲೆಗಾಂವ್ ಪ್ರಕರಣದ 4 ಆರೋಪಿಗಳ ಬಿಡುಗಡೆ

ಮುಂಬೈ: 2006ರ ಮಾಲೆಗಾಂವ್ ಸರಣಿ ಬಾಂಬ್ ಸ್ಫೋಟ ಪ್ರಕರಣದ ನಾಲ್ವರು ಆರೋಪಿಗಳನ್ನು ಬಾಂಬೆ ಹೈಕೋರ್ಟ್ ಬುಧವಾರ ಬಿಡುಗಡೆ ಮಾಡಿದೆ. 31 ಜನರ ಸಾವಿಗೆ ಕಾರಣವಾದ ಈ ಘಟನೆಯ 19 ವರ್ಷಗಳ ನಂತರ ಎಲ್ಲಾ ಭಯೋತ್ಪಾದನೆಯ ಆರೋಪಗಳನ್ನು ರದ್ದುಗೊಳಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್ ಮತ್ತು ನ್ಯಾಯಮೂರ್ತಿ ಶ್ಯಾಮ್ ಚಂದಕ್ ಅವರನ್ನೊಳಗೊಂಡ ವಿಭಾಗೀಯ ಪೀಠ, ರಾಜೇಂದ್ರ ಚೌಧರಿ, ಧನ್ ಸಿಂಗ್, ಮನೋಹರ್ ರಾಮ್ ಸಿಂಗ್ ನರ್ವಾರಿಯಾ ಮತ್ತು ಲೋಕೇಶ್ ಶರ್ಮಾ ಸಲ್ಲಿಸಿದ್ದ ಮೇಲ್ಮನವಿಗಳನ್ನು ಪುರಸ್ಕರಿಸಿದೆ. ಭಾರತೀಯ ದಂಡ ಸಂಹಿತೆ ಮತ್ತು ಯುಎಪಿಎ ಕಾಯ್ದೆಯಲ್ಲಿ ಆರೋಪ ಹೊರಿಸಿದ್ದ 2023ರ ವಿಶೇಷ ಎನ್‌ಐಎ ನ್ಯಾಯಾಲಯದ ಆದೇಶ ರದ್ದಾಗಿದೆ.

ಸೆಪ್ಟೆಂಬರ್ 8, 2006ರಂದು ಮಾಲೆಗಾಂವ್‌ನಲ್ಲಿ ನಾಲ್ಕು ಸ್ಫೋಟಗಳು ಸಂಭವಿಸಿದ್ದವು. ಹಮೀದಿಯಾ ಮಸೀದಿ ಮತ್ತು ಬಡಾ ಕಬರಿಸ್ತಾನ್ ಆವರಣದಲ್ಲಿ ಮೂರು ಬಾಂಬ್‌ಗಳು ಹಾಗೂ ಮುಶಾವರತ್ ಚೌಕ್‌ನಲ್ಲಿ ನಾಲ್ಕನೇ ಬಾಂಬ್ ಸ್ಫೋಟಗೊಂಡಿತ್ತು. ಈ ಸ್ಫೋಟಗಳಲ್ಲಿ 31 ಜನರು ಮೃತಪಟ್ಟಿದ್ದು, 312 ಜನರು ಗಾಯಗೊಂಡಿದ್ದರು. ಮಹಾರಾಷ್ಟ್ರ ಭಯೋತ್ಪಾದನಾ ವಿರೋಧಿ ದಳ(ಎಟಿಎಸ್) ಮತ್ತು ಸಿಬಿಐ ನಡೆಸಿದ ಆರಂಭಿಕ ತನಿಖೆಯಲ್ಲಿ ಒಂಬತ್ತು ಮುಸ್ಲಿಂ ವ್ಯಕ್ತಿಗಳನ್ನು ಬಂಧಿಸಲಾಗಿತ್ತು. 2016ರಲ್ಲಿ ವಿಶೇಷ ನ್ಯಾಯಾಲಯ ಅವರ ಬಿಡುಗಡೆಗೆ ಆದೇಶಿಸಿತ್ತು. 2011ರಲ್ಲಿ ತನಿಖೆ ಕೈಗೆತ್ತಿಕೊಂಡ ಎನ್‌ಐಎ, ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬಂಧಿಸಿತ್ತು.

ಪ.ಬಂಗಾಳ, ಅಸ್ಸಾಮಿನಲ್ಲಿ ಕಾಂಗ್ರೆಸ್ ಸೋಲು ಖಚಿತ

ಕೋಲ್ಕತ್ತಾ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಅವಹೇಳನ ನಡೆಸುವ ಮೂಲಕ ರಾಜಕೀಯ ಚರ್ಚೆಯನ್ನು ಅತ್ಯಂತ ಕೀಳುಮಟ್ಟಕ್ಕಿಳಿಸಿರುವುದು ಅವರು ಗಾಂಧಿ ಕುಟುಂಬದ ಜತೆಗೆ ಹೊಂದಿರುವ ನಿಕಟ ನಂಟಿನ ಪರಿಣಾಮವಾಗಿದೆ. ಕಾಂಗ್ರೆಸಿನ ಋಣಾತ್ಮಕ ನಡವಳಿಕೆಯಿಂದಾಗಿ ಪ.ಬಂ.ದಲ್ಲಿ ಕಾಂಗ್ರೆಸ್ ಈ ಬಾರಿ ಖಾತೆ ತೆರೆಯಲೂ ತಿಣುಕಾಡಬೇಕಿದೆ. ಅಸ್ಸಾಮಿನಲ್ಲಿ ಕೂಡ ಗ್ರಾಂಡ್ ಓಲ್ಡ್ ಪಾರ್ಟಿಗೆ ದೊಡ್ಡ ಸೋಲು ಕಾದಿದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಬುಧವಾರ ಭವಿಷ್ಯ ನುಡಿದಿದ್ದಾರೆ. ಪ.ಬಂ.ದಲ್ಲಿ ಕೇವಲ ಬಿಜೆಪಿ ಶಾಸಕರ ಆಯ್ಕೆ ಅಥವಾ ಬಿಜೆಪಿ ಸರಕಾರವನ್ನು ತರುವುದಕ್ಕಾಗಿ ನೀವು ಮತ ನೀಡುತ್ತಿಲ್ಲ, ಬದಲಿಗೆ ರಾಜ್ಯದ ಆಮೂಲಾಗ್ರ ಪರಿವರ್ತನೆಗಾಗಿ ಬಿಜೆಪಿ ಬೆಂಬಲಿಸಿ ಎಂದು ಅವರು ಮನವಿ ಮಾಡಿಕೊಂಡರು.

ಅವರು ನ್ಯೂ ಬರಾಕ್‌ಪುರ್ ಬಳಿಯ ದಮ್ ದಮ್ ಮತ್ತು ಉತ್ತರ 24 ಪರಗಣಾಸ್‌ನ ಹಬ್ರಾದಲ್ಲಿ ನಡೆದ ಚುನಾವಣಾ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಹಲವು ರಾಜ್ಯಗಳಲ್ಲಿ ಶೋಚನೀಯ ಸೋಲನ್ನು ಉಣ್ಣುವತ್ತ ಸಾಗುತ್ತಿದೆ. ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಕಾಂಗ್ರೆಸ್ ಎರಡಂಕೆ ದಾಡುವುದಿಲ್ಲ. ಪ.ಬಂ.ದಲ್ಲಿ ಖಾತೆ ತೆರೆಯಲೂ ಕಷ್ಟವಾಗಲಿದೆ. ಅಸ್ಸಾಮಿನಲ್ಲಿ ಈ ಹಿಂದೆಂದಿಗಿಂತ ದೊಡ್ಡ ಸೋಲನ್ನು ಅನುಭವಿಸಲಿದೆ ಎಂದರು.

ಮಮತಾ ದೀದಿಯವರೇ, ಕಾಂಗ್ರೆಸ್ ಜೊತೆಗಿನ ನಿಮ್ಮ ನಂಟು ನಿಮ್ಮ ರಾಜಕೀಯವಾಗಿ ನಿಮ್ಮನ್ನು ಇನ್ನಷ್ಟು ಹದಗೆಡಿಸಲಿದೆ ಎಂದು ಅವರು ಎಚ್ಚರಿಸಿದರು.

ಮೋದಿ ನೀಡಿದ 10 ರೂ. ನೋಟಿಗೆ ಭಾರೀ ಬೇಡಿಕೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ರ್‍ಯಾಲಿ ವೇಳೆ ಸಣ್ಣ ಅಂಗಡಿಯೊಂದರಿಂದ 10 ರೂ. ಝಲ್ಮುರಿ ಸವಿದ ವಿಡಿಯೋ ಎಲ್ಲೆಡೆ ವೈರಲ್ ಆಗಿತ್ತು. ಇದರ ಬೆನ್ನಲ್ಲೇ ಮೋದಿ ನೀಡಿದ 10 ರೂ. ನೋಟಿಗೆ ಭಾರೀ ಬೇಡಿಕೆ ಬಂದಿದೆ.



ಝಲ್ಮುರಿ ಅಂಗಡಿ ಮಾಲೀಕನಿಗೆ ಮೋದಿ ನೀಡಿದ ಹತ್ತು ರೂಪಾಯಿ ತನಗೆ ನೀಡಿದರೆ ಅದರ ಬದಲಿಗೆ 1,11,000 ರೂ. ನೀಡುವುದಾಗಿ ಹರ್ಯಾಣದ ವ್ಯಕ್ತಿಯೊಬ್ಬರು ಬೇಡಿಕೆ ಇಟ್ಟಿದ್ದಾರೆ. ಈ ವಿಚಾರ ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಸದ್ದು ಮಾಡಿದೆ. ಝಲ್ಮುರಿ ಸವಿದ ಬಳಿಕ ತುಂಬಾ ರುಚಿಯಾಗಿದೆ ಎಂದು ಮೋದಿ ಮೆಚ್ಚುಗೆ ಸೂಚಿಸಿದ್ದರು. ಝಲ್ಮುರಿ ಸವಿಯುತ್ತಲೇ ಮೋದಿ ಅವರು ಅಲ್ಲಿ ನೆರೆದಿದ್ದ ಸ್ಥಳೀಯ ಮಹಿಳೆಯರು ಮತ್ತು ಮಕ್ಕಳೊಂದಿಗೆ ಮಾತನಾಡಿದ್ದರು. ಅಲ್ಲದೇ ತಾವು ಸವಿಯುತ್ತಿದ್ದ ಝಲ್ಮುರಿಯನ್ನು ಅಲ್ಲಿನ ಮಕ್ಕಳಿಗೆ ಹಂಚಿದ್ದರು.

ತಾವು ಝಲ್ಮುರಿ ಸೇವಿಸುತ್ತಿದ್ದ ಫೋಟೋ ಮತ್ತು ವಿಡಿಯೋವನ್ನು ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದು, ಅದು ಕೆಲವೇ ಗಂಟೆಗಳಲ್ಲಿ ಸುಮಾರು 100 ಮಿಲಿಯನ್ ವೀಕ್ಷಣೆಯನ್ನು ಪಡೆದುಕೊಂಡಿದೆ ಎಂದು ವರದಿಯಾಗಿದೆ.

ಭಕ್ತರ ದರ್ಶನಕ್ಕೆ ಕೇದಾರನಾಥ ದೇಗುಲ ಮುಕ್ತ

ಕೇದಾರನಾಥ(ಉತ್ತರಾಖಂಡ): ಪವಿತ್ರ ಕೇದಾರನಾಥ ದೇಗುಲದ ದ್ವಾರವನ್ನು ಶಾಸ್ತ್ರೋಕ್ತವಾಗಿ ಬುಧವಾರ ಭಕ್ತರಿಗೆ ತೆರೆಯಲಾಯಿತು. ಈ ವೇಳೆ ಭಕ್ತರಿಂದ ಹರ ಹರ ಮಹಾದೇವ ಮತ್ತು ಜೈ ಬಾಬಾ ಕೇದಾರ ಘೋಷಣೆಗಳು ಮೊಳಗಿದವು. ಬೆಳಗ್ಗೆ 8ಕ್ಕೆ ಧಾರ್ಮಿಕ ಆಚರಣೆಗಳು, ವೈದಿಕ ಮಂತ್ರಗಳ ನಡುವೆ ದೇಗುಲದ ದ್ವಾರ ತೆರೆಯಲಾಯಿತು. ದೇಗುಲವನ್ನು 51 ಕ್ವಿಂಟಾಲ್ ಹೂವುಗಳಿಂದ ಅಲಂಕರಿಸಿದ್ದು, ಇದೊಂದು ಭವ್ಯ, ರೋಮಾಂಚಕ, ದೈವಿಕ ಕ್ಷಣವಾಗಿ ಮಾರ್ಪಟ್ಟಿತು. ಪ್ರವಿತ್ರ ಚಾರ್ ದಾಮ್ ಯಾತ್ರೆಯ ಭಾಗವಾಗಿರುವ ಕೇದಾರನಾಥ ದೇಗುಲದಲ್ಲಿ ಶಿವನ ಆಶೀರ್ವಾದ ಪಡೆಯಲು ದೇಶ ಮತ್ತು ವಿದೇಶದ ಸಾವಿರಾರು ಭಕ್ತರು ಕಠಿಣ ಯಾತ್ರೆಯನ್ನು ನಡೆಸುತ್ತಾರೆ.

ಚಳಿಗಾಲದಲ್ಲಿ ಆರು ತಿಂಗಳ ಕಾಲ ದೇಗುಲ ಮುಚ್ಚುವುದರಿಂದ, ಈ ಅವಧಿಯಲ್ಲಿ ದೇಗುಲ ಬಾಗಿಲು ತೆರೆಯಲಾಗುತ್ತದೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ವರ್ಷ | ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ ಮೋದಿ

ಯಾವುದೇ ರೀತಿಯ ಭಯೋತ್ಪಾದನೆಗೆ ಭಾರತ ಬಗ್ಗಲ್ಲ

ಹೊಸದಿಲ್ಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ವರ್ಷ ತುಂಬಿದ ಸಂದರ್ಭದಲ್ಲಿ ಅಗಲಿದ ನತದೃಷ್ಟ ಬಂಧುಗಳಿಗೆ ಬುಧವಾರ ಶ್ರದ್ಧಾಂಜಲಿ ಸಲ್ಲಿಸಿದ ಪ್ರಧಾನಿ ನರೇಂದ್ರ ಮೋದಿಯವರು, ಅಗಲಿದ ಬಂಧುಗಳ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ. 2025ರ ಏ.22ರಂದು ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಧರ್ಮ ಕೇಳಿ ಬರ್ಬರ ನರಮೇಧ ಎಸಗಿದ ಪಾಕ್ ಪ್ರಾಯೋಜಿತ ಭಯೋತ್ಪಾದಕರ ಕ್ರೌರ್ಯವನ್ನು ಭಾರತ ಎಂದೂ ಮರೆಯದು. ಈ ದಾಳಿ ಭಾರತದ ಆತ್ಮಸಾಕ್ಷಿಯನ್ನು ತೀವ್ರವಾಗಿ ಕಾಡಿದ್ದುಹ್ಹಿ, ಯಾವುದೇ ರೀತಿಯ ಭಯೋತ್ಪಾದನೆಗೆ ದೇಶ ತಲೆಬಾಗದು ಎಂದು ಘೋಷಿಸಿದ್ದಾರೆ.

ಕಳೆದ ವರ್ಷ ಇದೇ ದಿನ ಪಹಲ್ಗಾಮ್‌ನಲ್ಲಿ ಕ್ರೂರ ಹತ್ಯಾಕಾಂಡದಲ್ಲಿ ಬಲಿಯಾದ ಅಮಾಯಕರನ್ನು ಸ್ಮರಿಸಿಕೊಂಡ ಅವರು, ಈ ಬಂಧುಗಳನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಅವರ ಅಗಲುವಿಕೆಯ ನೋವಿನಲ್ಲಿ ನಲುಗಿರುವ ಕುಟುಂಬಗಳ ಜೊತೆ ನನ್ನ ಭಾವನೆಗಳೂ ಇವೆ ಎಂದು ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.



ಒಂದು ರಾಷ್ಟ್ರವಾಗಿ ನಾವು ದುಃಖ ಮತ್ತು ದೃಢ ಸಂಕಲ್ಪದಲ್ಲಿ ಯಾವತ್ತೂ ಒಂದಾಗಿ ನಿಲ್ಲುತ್ತೇವೆ.ಯಾವುದೇ ರೀತಿಯ ಭಯೋತ್ಪಾದನೆಗೆ ಭಾರತ ಬಗ್ಗುವುದಿಲ್ಲ. ಭಯೋತ್ಪಾದಕರ ಈ ಹೀನ ಸಂಚು ಎಂದೂ ಯಶಸ್ವಿಯಾಗಲು ಬಿಡುವುದಿಲ್ಲ ಎಂದು ಅವರು ಸಾರಿದರು.

ಸುಂದರ ಪ್ರವಾಸಿ ತಾಣವಾದ ಪಹಲ್ಗಾಮ್‌ಗೆ ಹೋಗಿದ್ದ ಪ್ರವಾಸಿಗರ ಮೇಲೆ ಹೇಯ ದಾಳಿ ನಡೆಸಿದ್ದ ಜಿಹಾದಿ ಭಯೋತ್ಪಾದಕರು 26ಮಂದಿಯನ್ನು ಅವರ ಧರ್ಮ ಕೇಳಿ ಇತರ ಮತೀಯರಿಂದ ಪ್ರತ್ಯೇಕಿಸಿ ಕುಟುಂಬದ ಮಹಿಳೆಯರು, ಮಕ್ಕಳೆದುರೇ ಹಿಂದು ಪುರುಷರನ್ನು ಗುಂಡಿಕ್ಕಿ ಹತ್ಯೆಗೈದು ಅಟ್ಟಹಾಸ ಮೆರೆದಿದ್ದರು.

ಪಹಲ್ಗಾಮ್‌ನ ಬೈಸರಣ್ ಕಣಿವೆಯಲ್ಲಿ ದಾಳಿ ನಡೆದ ಸ್ಥಳದಲ್ಲಿ ಕಪ್ಪು ಅಮೃತಶಿಲೆಯೊಂದರ ಸ್ಮಾರಕ ನಿರ್ಮಿಸಿ ಅದರಲ್ಲಿ ಬಲಿಯಾದ ಎಲ್ಲ 26 ಮಂದಿ ಸಂತ್ರಸ್ತರ ಹೆಸರುಗಳನ್ನು ಬರೆದು ಶ್ರದ್ಧಾಂಜಲಿ ಸಲ್ಲಿಸಲಾಗಿತ್ತು. ಈ ಸ್ಮಾರಕ ಲಿಡ್ಡರ್ ನದಿಯ ದಡದಲ್ಲಿ ತಲೆ ಎತ್ತಿ ನಿಂತಿದೆ.

ಕುಕೃತ್ಯಗಳಿಗೆ ಉತ್ತರ ಖಾತ್ರಿ: ಸೇನೆ

ಪ್ರಧಾನಿಯವರ ಪೋಸ್ಟ್‌ಗೆ ಕೆಲವೇ ನಿಮಿಷಗಳ ಮುನ್ನ ಭಾರತೀಯ ಸೇನೆಯು, "ಭಾರತ ವಿರುದ್ಧದ ಕುಕೃತ್ಯಗಳಿಗೆ ಉತ್ತರ ಖಾತ್ರಿ ಇರುತ್ತದೆ. ಮಾತ್ರವಲ್ಲದೆ ಯಾವತ್ತೂ ನ್ಯಾಯ ಒದಗಿಸಲಾಗುತ್ತದೆ "ಎಂದೂ ಎಕ್ಸ್‌ನಲ್ಲಿ ತಿಳಿಸಿತ್ತು.ಅಲ್ಲದೆ, ಮುನ್ನಾ ದಿನ ಮಾಡಿದ್ದ ಇನ್ನೊಂದು ಪೋಸ್ಟ್‌ನಲ್ಲಿ, ಭಯೋತ್ಪಾದಕ ಸಂಚುಕೋರರಿಗೆ ಖಡಕ್ ಎಚ್ಚರಿಕೆ ನೀಡಿದ್ದ ಭಾರತೀಯ ಸೇನೆಯು, ಮಾನವೀಯತೆಯ ಗಡಿಗಳನ್ನು ಮೀರಿದಾಗ ನಿರ್ಣಾಯಕ ಉತ್ತರ ಕಾದಿರುತ್ತದೆ. ನ್ಯಾಯ ಒದಗಿಸಲಾಗುತ್ತದೆ ಮತ್ತು ಭಾರತ ಒಂದಾಗಿ ಎದ್ದು ನಿಲ್ಲುತ್ತದೆ ಎಂದು ಒತ್ತಿ ಹೇಳಿತ್ತು. ಇದರ ಜತೆಗೆ ಆಪರೇಷನ್ ಸಿಂದೂರ್‌ನ್ನು ಸಂಕೇತಿಸುವ ಗ್ರಾಫಿಕ್ ಒಂದನ್ನೂ ಪೋಸ್ಟ್ ಮಾಡಲಾಗಿತ್ತು. ಆಪರೇಷನ್ ಸಿಂದೂರ್ ಮೂಲಕ ಗಡಿಯಾಚೆಯ ಲಷ್ಕರ್ ತೊಯ್ಬಾ, ಜೈಶ್ ಇ ಮೊಹಮ್ಮದ್, ಹಿಜ್ಬುಲ್ ಮುಜಾಹಿದ್ದೀನ್‌ನ 9 ಭಯೋತ್ಪಾದಕ ನೆಲೆಗಳು ನಾಶಗೊಳಿಸಲಾಗಿತ್ತಲ್ಲದೆ, 100ಕ್ಕೂ ಅಧಿಕ ಭಯೋತ್ಪಾದಕರನ್ನು ಕೊಲ್ಲಲಾಗಿತ್ತು. ಪಾಕಿಸ್ತಾನಿ ಸೇನೆ ಭಾರತದ ಮೇಲೆ ದಾಳಿಗೆ ಮುಂದಾಗಿದ್ದರಿಂದ 4 ದಿನಗಳ ಕಾಲ ತೀವ್ರ ಸಂಘರ್ಷ ಉಂಟಾಗಿ ಕೊನೆಗೆ ಪಾಕಿಸ್ತಾನದ ಕೋರಿಕೆಯ ಮೇರೆಗೆ ಮೇ 10ರಂದು ಕದನ ವಿರಾಮ ಘೋಷಿಸಲಾಗಿತ್ತು. ಅನಂತರ , ಭಾರತೀಯ ಭದ್ರತಾ ಪಡೆಗಳು ಜಮ್ಮು-ಕಾಶ್ಮೀರದಲ್ಲಿ "ಆಪರೇಷನ್ ಮಹಾದೇವ್"ಮೂಲಕ ಈ ನರಮೇಧದಲ್ಲಿ ಪಾಲ್ಗೊಂಡ ಎಲ್ಲ ಭಯೋತ್ಪಾದಕರನ್ನೂ ಹುಡುಕಿ ಹುಡುಕಿ ಕೊಂದುಹಾಕಿದ್ದವು.

ಭಾರತದ ಸೇನಾ ಶಕ್ತಿ ಪ್ರದರ್ಶನ



ಸುಲ್ತಾನ್‌ಪುರ: ಉತ್ತರ ಪ್ರದೇಶದ ಸುಲ್ತಾನ್ಪುರ ಜಿಲ್ಲೆಯ ಪೂರ್ವಾಂಚಲ್ ಎಕ್ಸ್‌ಪ್ರೆಸ್ ವೇನಲ್ಲಿ ತುರ್ತು ಏರ್‌ಸ್ಟ್ರಿಪ್‌ನಲ್ಲಿ ಫೈಟರ್-ಜೆಟ್ ಕಾರ್ಯಾಚರಣೆಗಳನ್ನು ಒಳಗೊಂಡ ಎರಡು ದಿನಗಳ ಭಾರತೀಯ ವಾಯುಪಡೆ(ಐಎಎಫ್) ತಾಲೀಮು ಬುಧವಾರ ಪ್ರಾರಂಭವಾಗಿದೆ.

ಸುಲ್ತಾನ್ಪುರದ ಪೂರ್ವಾಂಚಲ್ ಎಕ್ಸ್‌ಪ್ರೆಸ್ ವೇನಲ್ಲಿ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ ಅಭ್ಯಾಸ ವೇಳೆ ಜಾಗ್ವಾರ್ ಫೈಟರ್ ಜೆಟ್ ಅನ್ನು ಇಳಿಸುವ ಮೂಲಕ ವಾಯುಪಡೆ ಹೊಸ ಸಾಧನೆಗೈದಿದೆ. ತುರ್ತು ಸಂದರ್ಭಗಳಲ್ಲಿ ಪರ್ಯಾಯ ರನ್‌ವೇಗಳಾಗಿ ಎಕ್ಸ್‌ಪ್ರೆಸ್ ವೇಗಳ ಬಳಕೆಯನ್ನು ಪರೀಕ್ಷಿಸಲು ಫೈಟರ್ ವಿಮಾನಗಳು ಟಚ್-ಅಂಡ್-ಗೋ ಕಾರ್ಯಾಚರಣೆಗಳನ್ನು ನಡೆಸುತ್ತಿರುವ ಅರ್ವಲ್-ಕಿರಿ ಕರ್ವತ್ ಏರ್‌ಸ್ಟ್ರಿಪ್‌ನಲ್ಲಿ ಈ ತಾಲೀಮು ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಾಗ್ವಾರ್ ಜತೆಗೆ, ಐಎಎಫ್‌ನ ಸು-30 ಮತ್ತು ಮಿರಾಜ್ ಫೈಟರ್ ಜೆಟ್‌ಗಳು ಸಹ ಪ್ರದರ್ಶನದಲ್ಲಿ ಭಾಗವಹಿಸಿದ್ದವು.

ಕಿರುಸುದ್ದಿ

ಏ. 26ರಂದು 12 ಗಂಟೆಗಳ ಕಾಲ ಹನುಮಾನ್ ಚಾಲೀಸ್ ಪಠಣ

ಪುತ್ತೂರು: ಚಿಕ್ಕಮುಡ್ನೂರು ಗ್ರಾಮದ ಕೆಮ್ಮಾಯಿ ಭರತಪುರದ ಶ್ರೀ ಪಂಚಮುಖಿ ಹನುಮಾನ್ ಮಂದಿರದ ದ್ವಿತೀಯ ಪ್ರತಿಷ್ಠಾ ವರ್ಧಂತಿ ಉತ್ಸವದ ಪ್ರಯುಕ್ತ ಏ.26ರಂದು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಡೆಯಲಿರುವ 12 ಗಂಟೆಗಳ ಅಖಂಡ ಹನುಮಾನ್ ಚಾಲೀಸ್ ಪಠಣ ಯಜ್ಞ ಕಾರ್ಯಕ್ರಮದಲ್ಲಿ ಚಾಲೀಸ್ ಪಠಣ ಮಾಡಲು ಹೆಸರು ನೋಂದಾವಣೆ ಮಾಡಬಹುದು. ಭಜನಾ ಮಂಡಳಿ, ಸ್ವಸಹಾಯ ಸಂಘ, ಯುವಕ ಮಂಡಲದ ಸದಸ್ಯರು ತಂಡವಾಗಿ ಹಾಗೂ ವೈಯಕ್ತಿಕವಾಗಿ ಹನುಮಾನ್ ಚಾಲೀಸ್ ಮಾಡಲು ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾಡಿನೊಳಗೆ ಕಾರಿನಲ್ಲಿ ಬದುಕುತ್ತಿರುವ ವ್ಯಕ್ತಿಯನ್ನು ಭೇಟಿಯಾದ ಎಸ್. ಸುರೇಶ್ ಕುಮಾರ್



ಸುಳ್ಯ: ಕಳೆದ 20 ವರ್ಷಗಳಿಂದ ಅಡ್ತಲೆ ಸಮೀಪದ ಕಾಡಿನಲ್ಲಿ ಕಾರೊಳಗೆ ಬದುಕು ನಡೆಸುತ್ತಿರುವ ಚಂದ್ರಶೇಖರ ನೂಜಾಲ ಅವರನ್ನು ಮಾಜಿ ಶಿಕ್ಷಣ ಸಚಿವ, ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಬುಧವಾರ ಭೇಟಿ ಮಾಡಿ ಮಾತುಕತೆ ನಡೆಸಿದರು. ಕುಕ್ಕೆ ಸುಬ್ರಹ್ಮಣ್ಯದಿಂದ ಬೆಂಗಳೂರಿಗೆ ತೆರಳುವ ದಾರಿಯಲ್ಲಿ ತನ್ನ ಗೆಳೆಯರೊಂದಿಗೆ ಅಡ್ತಲೆ ಕಾಡಿನಲ್ಲಿರುವ ಚಂದ್ರಶೇಖರರ ಜೋಪಡಿಗೆ ಭೇಟಿ ನೀಡಿದ ಅವರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಅವರೊಂದಿಗೆ ಮಾತುಕತೆ ನಡೆಸಿದರಲ್ಲದೇ ಸಮೀಪದ ನೆಕ್ಕರೆ ಪ್ರದೇಶಕ್ಕೂ ಭೇಟಿ ನೀಡಿ ಅಲ್ಲಿನ ಕುಟುಂಬಗಳೊಂದಿಗೆ ಮಾತುಕತೆ ನಡೆಸಿದರು. ಈ ಸಂದರ್ಭ ಅರಂತೋಡು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕೇಶವ ಅಡ್ತಲೆ, ಕವಿತಾ ಅಡ್ತಲೆ, ಮೋಹನ್ ಅಡ್ತಲೆ, ಶಿಶಿರ್ ಅಡ್ಯಡ್ಕ ಮತ್ತಿತರರಿದ್ದರು.

ಮೇ 1ರಂದು ಬುದ್ಧ ಜಯಂತಿ ಆಚರಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಬೌದ್ಧ ಮಹಾಸಭಾ ಇದರ ವತಿಯಿಂದ 2570ನೇ ವೈಶಾಖ ಬುದ್ಧ ಪೂರ್ಣಿಮೆ –ಪವಿತ್ರ ಬುದ್ಧ ಜಯಂತಿ ಆಚರಣೆ ಕಾರ್ಯಕ್ರಮ ಮೇ 1ರಂದು ಪೂರ್ವಾಹ್ನ 10ರಿಂದ ಅಪರಾಹ್ನ 2 ಗಂಟೆಯವರೆಗೆ ಮಂಗಳೂರಿನ ಉರ್ವಸ್ಟೋರ್‌ನಲ್ಲಿರುವ ತುಳುಭವನದಲ್ಲಿ ನಡೆಯಲಿದೆ. ಸಭಾ ಕಾರ್ಯಕ್ರಮಕ್ಕೆ ಮುನ್ನ ಉರ್ವಸ್ಟೋರ್ ಬಸ್ ನಿಲ್ದಾಣದಿಂದ ತುಳುಭವನದವರೆಗೆ ಲೋಕ ಶಾಂತಿಗಾಗಿ ಸೌಹಾರ್ದ ನಡಿಗೆ ಮೆರವಣಿಗೆ ನಡೆಯಲಿದೆ. ಪೂಜ್ಯ ಅಯುಪಾಲ ಮಹಾಥೇರೋ ಭಂತೇಜಿ ಅವರ ಸಾನಿಧ್ಯದಲ್ಲಿ ಬುದ್ಧವಂದನೆ, ತ್ರಿಸರಣ, ಪಂಚಶೀಲ, ಸುತ್ತ ಪಠಣ, ಧ್ಯಾನ, ಮೈತ್ರಿಧ್ಯಾನ ಮತ್ತು ಧಮ್ಮೋಪದೇಶ ನಡೆಯಲಿದೆ. ಮುಖ್ಯ ಅತಿಥಿಯಾಗಿ ಅಸೈಗೋಳಿಯ ಅಭಯ ಆಶ್ರಮದ ಶ್ರೀನಾಥ್ ಹೆಗ್ಡೆ ಭಾಗವಹಿಸುವರು ಮೂಡುಬಿದಿರೆ ಸರಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ದೊರೆಸ್ವಾಮಿ ಕೆ.ಎನ್ ಉಪನ್ಯಾಸ ನೀಡಲಿದ್ದಾರೆ. ದ.ಕ. ಜಿಲ್ಲಾ ಬೌದ್ಧ ಮಹಾಸಭಾ ಮಂಗಳೂರು ಇದರ ಅಧ್ಯಕ್ಷ ಎಂ.ವಿ.ಪದ್ಮನಾಭ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬೌದ್ಧ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್. ಆರ್.ಲಕ್ಷ್ಮಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಳೆಗೆ ತ್ಯಾಜ್ಯ ಎಸೆದವರಿಗೆ ದಂಡ ವಿಧಿಸಿದ ಗ್ರಾ.ಪಂ.

ಸುಳ್ಯ: ಅರಂತೋಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಲ್ಚಾರು ಎಂಬಲ್ಲಿ ಬಲ್ನಾಡು ಹೊಳೆಗೆ ಸೇತುವೆಯಿಂದ ಕೆಳಗೆ ತ್ಯಾಜ್ಯ ಎಸೆಯುತ್ತಿದ್ದವರನ್ನು ಗಮನಿಸಿದ ಸ್ಥಳೀಯ ರಿಕ್ಷಾ ಚಾಲಕರು ತ್ಯಾಜ್ಯ ಎಸೆದವರನ್ನು ಹಿಡಿದು ದಂಢ ವಿಧಿಸಿದ ಘಟನೆ ನಡೆದಿದೆ.

ತ್ಯಾಜ್ಯ ಎಸೆಯುತ್ತಿದ್ದಾಗ ಸ್ಥಳೀಯರ ದೂರು


ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಕರೆ ಮಾಡಿದ ತಕ್ಷಣ ಸ್ಥಳಕ್ಕೆ ಹಾಜರಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ತ್ಯಾಜ್ಯ ಎಸೆದವರನ್ನು ವಿಚಾರಿಸಿದಾಗ ಕಸ ಎಸೆದ ವ್ಯಕ್ತಿ ಉಡಾಫೆಯಿಂದ ಮಾತಾಡಿದ್ದು, ತಕ್ಷಣ ತುರ್ತು ಕರೆ ಸಂಖ್ಯೆ 112ಕ್ಕೆ ಕರೆ ಮಾಡಿ ಪೊಲೀಸರನ್ನು ಸ್ಥಳಕ್ಕೆ ಕರೆಸಲಾಯಿತು ಬಳಿಕ ಸ್ಥಳಕ್ಕೆ ಬಂದ ಪೊಲೀಸ್ ಸಿಬ್ಬಂದಿಗಳ ಸಹಕಾರದೊಂದಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಪ್ರಕಾಶ್ ಅವರು ತ್ಯಾಜ್ಯ ಎಸೆದ ವಾಹನ ಸಂಖ್ಯೆ ಕೆಎ 05 ಎಂಎಸ್ 6793 ಸಂಖ್ಯೆಯ ವಾಹನ ಚಾಲಕ ದುರ್ಗಾಪ್ರಸಾದ್ ಪಿರಿಯಾಪಟ್ಟಣ ಎಂಬುವವರಿಗೆ ರೂ.5 ಸಾವಿರ ದಂಡ ವಿಧಿಸಿದ್ದಾರೆ.

ನಾಳೆ ಕುಕ್ಕೆ ದೇವಳದಲ್ಲಿ ತಾಂಬೂಲ ಪ್ರಶ್ನಾ ಚಿಂತನೆ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಏ.24ರಂದು ಶುಕ್ರವಾರ ತಾಂಬೂಲ ಪ್ರಶ್ನಾ ಚಿಂತನೆಯು ದೇವಳದ ಆಡಳಿತ ಕಚೇರಿಯ 2ನೇ ಮಹಡಿಯ ಸಭಾಂಗಣದಲ್ಲಿ ಬೆಳಗ್ಗೆ 10.30ರಿಂದ ನಡೆಯಲಿದೆ. ಶ್ರೀ ದೇವಳದಲ್ಲಿ ನಡೆಸುವ ಅಭಿವೃದ್ಧಿ ವಿಚಾರದ ಕುರಿತು, ಪರಿವಾರ ದೇವರ ಗುಡಿ ನವೀಕರಣ, ದೈವಗಳ ಗುಡಿಗಳ ನವೀಕರಣ ಮತ್ತು ಇತರ ವಿಚಾರಗಳ ಬಗ್ಗೆ ನಡೆಸುವ ಪ್ರಶ್ನಾ ಚಿಂತನೆಯಲ್ಲಿ ಸರ್ವ ಭಕ್ತರೂ ಭಾಗವಹಿಸಬೇಕಾಗಿ ದೇವಳದ ಆಡಳಿತ ಪ್ರಕಟಣೆ ಮೂಲಕ ವಿನಂತಿಸಿದೆ.

ಮೇ 1ರಂದು ಬಲಿಜ ಸಮಾಜದ ವಾರ್ಷಿಕ ಮಹಾಸಭೆ

ಮಡಿಕೇರಿ: ಶ್ರೀ ಯೋಗಿ ನಾರಾಯಣ ಕೊಡಗು ಜಿಲ್ಲಾ ಬಲಿಜ ಸಮಾಜದ ವಾರ್ಷಿಕ ಮಹಾಸಭೆ ಮೇ 1 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾಧ್ಯಕ್ಷ ಟಿ.ಜಿ. ಗಣೇಶ್ ನಾಯ್ಡು ಅವರ ಅಧ್ಯಕ್ಷತೆಯಲ್ಲಿ ಮೂರ್ನಾಡು ವಿಎಸ್‌ಎಸ್‌ಎನ್ ಸಭಾಂಗಣದಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಗುವುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಆರ್. ಸುಬ್ರಮಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಧರ್ಮಸ್ಥಳದಲ್ಲಿ ಏ. 14 ರಿಂದ ನಡೆಯುತ್ತಿರುವ ಕಾಲಾವಧಿ ಜಾತ್ರೆಯ ಅಂಗವಾಗಿ ಮಂಗಳವಾರ ರಾತ್ರಿ, ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ ಬ್ರಹ್ಮರಥೋತ್ಸವ ಸಕಲ ವೈಭವದೊಂದಿಗೆ ನಡೆಯಿತು.

ಡಾ. ಎಂ. ಮೋಹನ ಆಳ್ವರಿಗೆ ಕಲಾರ್ಘ್ಯ ಪ್ರಶಸ್ತಿ ಪ್ರದಾನ

ಏ. 25ಕ್ಕೆ ಅದ್ದೂರಿ 'ಕಲಾರ್ಘ್ಯ ಉತ್ಸವ'

ಉಡುಪಿ: ಬೆಳ್ಳಂಪಳ್ಳಿಯ ನರಸಿಂಹ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿರುವ ಈ ವರ್ಷದ 'ಕಲಾರ್ಘ್ಯ ಉತ್ಸವ' ಏಪ್ರಿಲ್ 25ರಂದು ಜರುಗಲಿದ್ದು, ಈ ಸಂದರ್ಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಅವರಿಗೆ ಪ್ರತಿಷ್ಠಿತ 'ಕಲಾರ್ಘ್ಯ ಪ್ರಶಸ್ತಿ' ನೀಡಿ ಗೌರವಿಸಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಕಾರ್ತಿಕ್ ಪ್ರಭು ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ ಉಡುಪಿಯ ಬೆಳ್ಳಂಪಳ್ಳಿಯ ಜೈ ಹಿಂದ್ ಶಾಲಾ ಮೈದಾನದಲ್ಲಿ ಸಾಂಸ್ಕೃತಿಕ ಸಂಭ್ರಮದೊಂದಿಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮಾಹಿತಿ ನೀಡಿದರು. ಏ. 25ರಂದು ಸಂಜೆ 4. 45ಕ್ಕೆ ದೀಪ ಪ್ರಜ್ವಲನೆಯೊಂದಿಗೆ ಉತ್ಸವಕ್ಕೆ ಚಾಲನೆ ಸಿಗಲಿದೆ. ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ಜರುಗಲಿದ್ದು, ಭಾರತದ ಸಾಂಸ್ಕೃತಿಕ ರಾಯಭಾರಿ ಡಾ. ಎಂ. ಮೋಹನ ಆಳ್ವ ಅವರಿಗೆ ಮೋಹನಾಭಿನಂದನ ವಿಶೇಷ ಸನ್ಮಾನ ನೆರವೇರಲಿದೆ. ಮಂಗಳೂರು ವಿಶ್ವವಿದ್ಯಾನಿಲಯದ ಎಸ್‌ವಿಪಿ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ ಅವರು ಅಭಿನಂದನಾ ನುಡಿಗಳನ್ನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕ ಸುರೇಶ್ ಶೆಟ್ಟಿ ಗುರ್ಮೆ, ಜಯಕರ ಶೆಟ್ಟಿ ಇಂದ್ರಾಳಿ, ಗೋಕುಲ್‌ದಾಸ್ ನಾಯಕ್, ಪುರಂದರ ಕೋಟ್ಯಾನ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ವೈಭವ

ಸಂಜೆ 5 ರಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಹಿರಿಯ ಭರತನಾಟ್ಯ ವಿದ್ಯಾರ್ಥಿಗಳಿಂದ ಹಾಗೂ ವಿದುಷಿ ಕಲಾಶ್ರೀ ಪುನೀತ್ ಅವರ ಶಿಷ್ಯವೃಂದದಿಂದ ಭರತನಾಟ್ಯ ಪ್ರದರ್ಶನ. ರಾತ್ರಿ 9 ರಿಂದ ಆಳ್ವಾಸ್ ಯಕ್ಷಗಾನ ಸಿರಿಯ ವಿದ್ಯಾರ್ಥಿಗಳಿಂದ ಯಕ್ಷಗಾನ ವೈವಿಧ್ಯ. ರಾತ್ರಿ 10.30 ರಿಂದ ಆದಿತ್ಯ ಅಂಬಲಪಾಡಿ ಅವರ ನಿರ್ದೇಶನದಲ್ಲಿ ಯಕ್ಷಗಾನ ಕಲಾವಿದರ ಕೂಡುವಿಕೆಯಲ್ಲಿ 'ಶ್ರೀದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನ ಜರುಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯಕ್ಷಗಾನ ಗುರು ಆದಿತ್ಯ ಅಂಬಲಪಾಡಿ ಹಾಗೂ ಕಿರಣ್ ಭಟ್ ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ | ಎರಡು ತಿಂಗಳ ಸನಿಹಕ್ಕೆ ಖಾಸಗಿ ಭೂ ಮಾಪಕರ ಮುಷ್ಕರ

ಪುತ್ತೂರಲ್ಲೇ 5,591 ಅರ್ಜಿಗಳು ಬಾಕಿ !

ಪುತ್ತೂರು: ಖಾಯಮಾತಿ ಮತ್ತು ಸಮಾನ ಕೆಲಸಕ್ಕೆ ಸಮಾನವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಅಖಿಲ ಕರ್ನಾಟಕ ಪರವಾನಗಿ ಭೂ ಮಾಪಕರ ಸಂಘದಿಂದ ಅನಿರ್ದಿಷ್ಟಾವಧಿಗೆ ನಡೆಸುತ್ತಿರುವ ಮುಷ್ಕರ 2 ತಿಂಗಳ ಸನಿಹಕ್ಕೆ ಬಂದಿದೆ. ಇದರಿಂದಾಗಿ ಭೂಮಾಪನ ಇಲಾಖೆಯ ಸೇವೆಗಳು ಸಂಪೂರ್ಣ ಸ್ಥಗಿತಗೊಂಡಿವೆ...!

ರಾಜ್ಯ ಮಟ್ಟದಲ್ಲಿ ಫೆ.25ರಿಂದ ಅನಿರ್ದಿಷ್ಟಾವಧಿ ಮುಷ್ಕರ ಪ್ರಾರಂಭಗೊಂಡಿತ್ತು. ಸದ್ಯ ಜಮೀನು ನೋಂದಣಿ, ಖರೀದಿ–ಮಾರಾಟದಂತಹ ಪ್ರಮುಖ ವ್ಯವಹಾರಗಳು ಸ್ಥಗಿತಗೊಂಡು ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪುತ್ತೂರು ತಾಲೂಕಿನಲ್ಲಿ ಮಾ.1 ರಿಂದ ಮುಷ್ಕರ ಪ್ರಾರಂಭಗೊಂಡು ಬರೋಬ್ಬರಿ 53 ದಿನಗಳನ್ನು ಪೂರೈಸಿದ್ದರೂ ತಮ್ಮ ಬೇಡಿಕೆಗಳಿಗೆ ಸರಕಾರದ ಸೂಕ್ತ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ಮುಷ್ಕರ ಮುಂದುವರಿಯುತ್ತಿದೆ.

ಪುತ್ತೂರು ತಾಲೂಕಿನ 33 ಗ್ರಾಮಗಳ 11 ಇ, ಅಲಿನೇಷನ್, ಹದ್ದುಬಸ್ತು, ತತ್ಕಾಲ್ ಪೋಡಿ, ವಿಭಾಗ ಪತ್ರ ಸೇರಿದಂತೆ ಸಾರ್ವಜನಿಕರ ಅರ್ಜಿಗಳು ಭೂ ಮಾಪನಾ ಇಲಾಖೆಯಲ್ಲಿ ಬಾಕಿ ಉಳಿದಿವೆ. ಜಮೀನು ರಿಜಿಸ್ಟ್ರೇಷನ್, ಖರೀದಿ–ಮಾರಾಟ, ದಾನಪತ್ರ ಸೇರಿದಂತೆ ಪ್ರಮುಖ ವ್ಯವಹಾರಗಳು ಸಂಪೂರ್ಣವಾಗಿ ನಿಂತಿವೆ. ಜಮೀನು ಖರೀದಿಸಲು ಮುಂಗಡ ಒಪ್ಪಂದ ಮಾಡಿಕೊಂಡಿದ್ದವರು ಹಣಕಾಸಿನ ಒತ್ತಡಕ್ಕೆ ಒಳಗಾಗಿದ್ದು, ಸಾಲ ಪಡೆದು ವ್ಯವಹಾರ ಆರಂಭಿಸಲು ಯೋಚಿಸಿದ್ದವರು ಸಮಸ್ಯೆಗೆ ಸಿಲುಕಿದ್ದಾರೆ. ಮನೆ ನಿರ್ಮಾಣ, ಕೃಷಿ ವಿಸ್ತರಣೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಭೂಮಿ ಬಳಸಲು ಮುಂದಾದವರ ಯೋಜನೆಗಳು ಅಸ್ತವ್ಯಸ್ತಗೊಂಡಿವೆ. ರೈತ ವರ್ಗಕ್ಕೂ ಈ ಮುಷ್ಕರ ದೊಡ್ಡ ಹೊಡೆತ ನೀಡಿದ್ದು, ಕೃಷಿ ಸಾಲ ಪಡೆಯಲು ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.



5,591 ಅರ್ಜಿ ಪೆಂಡಿಂಗ್...!

33 ಗ್ರಾಮಗಳ ವ್ಯಾಪ್ತಿ ಹೊಂದಿರುವ ಪುತ್ತೂರು ತಾಲೂಕಿನಲ್ಲಿ ತತ್ಕಾಲ್ ಪೋಡಿ, ಹದ್ದುಬಸ್ತು, 11ಇ, ಅಲಿನೇಷನ್ ಸೇರಿದಂತೆ 825 ಅರ್ಜಿಗಳು ಹಾಗೂ ಕೇವಲ ದರ್ಖಾಸ್ತುಗಾಗಿ ಸಲ್ಲಿಕೆಯಾದ 4,766 ಅರ್ಜಿಗಳು ಸೇರಿದಂತೆ ಒಟ್ಟು 5,591 ಅರ್ಜಿಗಳು ವಿಲೇವಾರಿಯಾಗದೇ ಭೂ ಮಾಪನ ಇಲಾಖೆಯಲ್ಲಿ ಬಾಕಿ ಉಳಿದಿರುವುದಾಗಿ ಭೂ ದಾಖಲೆಗಳ ಇಲಾಖೆಯಿಂದ ಮಾಹಿತಿ ಲಭ್ಯವಾಗಿದೆ. 33 ಗ್ರಾಮಗಳ ವ್ಯಾಪ್ತಿ ಹೊಂದಿರುವ ಪುತ್ತೂರು ತಾಲೂಕು ಒಂದರಲ್ಲಿಯೇ 5,591 ಅರ್ಜಿಗಳು ಬಾಕಿ ಉಳಿದರೆ ಇನ್ನು ರಾಜ್ಯ ಪರಿಸ್ಥಿತಿ ಹೇಗಿರಬಹುದು...

ಮಾ.1ರಿಂದ ಪ್ರಾರಂಭಗೊಂಡಿರುವ ಮುಷ್ಕರದಲ್ಲಿ ಬೆಳಗಾಂ, ಗುಲ್ಬರ್ಗಾ, ಬೆಂಗಳೂರು, ಮೈಸೂರು, ಧಾರವಾಡ ವಿಭಾಗದಲ್ಲಿ ಪ್ರತಿಭಟನೆಗಳು ನಡೆಯುತ್ತಿದೆ. ಮೈಸೂರು ವಿಭಾಗದ ಮಟ್ಟದಲ್ಲಿ ನಡೆದ ಪ್ರತಿಭಟನೆಯಲ್ಲಿ ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಪರವಾನಗಿ ಭೂ ಮಾಪಕರು ಮೈಸೂರು ಅರಮನೆ ಬಳಿಯಿಂದ ಜಿಲ್ಲಾಧಿಕಾರಿಗಳ ಕಚೇರಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳು ಹಾಗೂ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದರು.

16 ಮಂದಿ ಖಾಸಗಿ ಸರ್ವೆಯರ್

ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಪುತ್ತೂರು ಕಚೇರಿಯ ವ್ಯಾಪ್ತಿಯಲ್ಲಿ 16 ಮಂದಿ ಖಾಸಗಿ ಭೂ ಮಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿ ಒಟ್ಟು 5,082 ಮಂದಿ ಖಾಸಗಿ ಭೂ ಮಾಪಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪೇಮೆಂಟ್ ಇನ್ನೂ ಬಂದಿಲ್ಲ

ಕಳೆದ ಒಂದು ವರ್ಷದಿಂದ ದರ್ಖಾಸ್ತು ಪೇಮೆಂಟ್ ಇನ್ನೂ ಬಂದಿಲ್ಲ. ಒಂದೇ ಬಾರಿ ನೀಡಲು ಸರಕಾರದಲ್ಲಿ ಹಣವಿಲ್ಲದ ಕಾರಣ ನಮ್ಮನ್ನು ಸೈಡ್‌ಲೈನ್ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳು ಸಭೆ ಕರೆಯುವುದಾಗಿ ಹೇಳಿದ್ದರೂ ಇನ್ನೂ ಸಭೆ ಕರೆದಿಲ್ಲ. ಖಾಸಗಿ ಸರ್ವೆಯರ್‌ಗಳನ್ನು ಸರಕಾರದ ಜೊತೆಗೆ ವಿಲೀನ ಮಾಡಬೇಕು. ಇಲ್ಲವೇ ಸರಕಾರಿ ಸರ್ವೆಯರ್‌ಗಳಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಸಾರ್ವಜನಿಕರಿಂದ ಸಂದಾಯವಾಗುವ ಮೊತ್ತದಲ್ಲಿ ನಮಗೆ ತಿಂಗಳಿಗೆ ರೂ.7-8 ಸಾವಿರ ಮಾತ್ರ ಖಾತೆಗೆ ಜಮೆ ಆಗುತ್ತಿದೆ. ನಾವು ಕೆಲಸ ಮಾಡಿದ ಅರ್ಜಿಗಳು ತಾಲೂಕು ಕಚೇರಿಯಲ್ಲಿ ಅಥವಾ ಇತರೆ ಎಲ್ಲೇ ಬಾಕಿಯಾದರೂ ನಮಗೆ ಸಲ್ಲಬೇಕಾದ ಮೊತ್ತ ಬರುವುದಿಲ್ಲ. ಹೀಗಾದರೆ ನಾವು ಜೀವನ ನಡೆಸುವುದು ಹೇಗೆ? ಮನವಿ ಸಲ್ಲಿಸಿದರೂ ಸೂಕ್ತ ಸ್ಪಂದನೆ ದೊರೆತಿಲ್ಲ.

■ ಪೂರ್ಣೇಶ್ ಬಿ.ಎಂ., ಅಧ್ಯಕ್ಷರು, ಪರವಾನಗಿ ಭೂ ಮಾಪಕರ ಸಂಘ ಪುತ್ತೂರು ಘಟಕ

ಪ್ರಮುಖ ಬೇಡಿಕೆಗಳು

ಖಾಸಗಿ ಭೂ ಮಾಪಕರನ್ನು ಖಾಯಂಮಾತಿ ಮಾಡಬೇಕು ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಒಂದು ಬಾರಿ ವಿಶೇಷ ನೇಮಕಾತಿ ಅಡಿಯಲ್ಲಿ ಪರವಾನಗಿ ಭೂಮಾಪಕರನ್ನು ಸರಕಾರಿ ಸೇವೆಯಲ್ಲಿ ಸಕ್ರಮಗೊಳಿಸುವವರೆಗೂ ಯಾವುದೇ ರೀತಿಯ ಅಳತೆ ಕೆಲಸಗಳನ್ನು ಮಾಡುವುದಿಲ್ಲ, ಸಾರ್ವಜನಿಕರಿಗೆ ತೊಂದರೆಯಾಗದಂತೆ ತಮ್ಮ ಲಾಗಿನಲ್ಲಿ ಇರುವ ಮೋಜಿನಿ ತಂತ್ರಾಂಶದ ಹೊರತುಪಡಿಸಿ ಇತರೆ ಕೆಲಸಗಳನ್ನು ಪರವಾನಿಗೆ ಭೂ ಮಾಪಕರಿಗೆ ನೀಡಿರುವ ಕಡತಗಳನ್ನು ಹಿಂಪಡೆಯಬೇಕು.

ಮನವಿಗೆ ಸ್ಪಂದನೆಯಿಲ್ಲ

ಖಾಯಮಾತಿ ಮತ್ತು ಸಮಾನ ಕೆಲಸಕ್ಕೆ ಸಮಾನವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಪಡೆದ ಭೂ ಮಾಪಕರ ಸಂಘದ ಪುತ್ತೂರು ಘಟಕದಿಂದ ಫೆ.27 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕ ಶ್ರೀನಿವಾಸ ಮೂರ್ತಿಯವರಿಗೆ ಮನವಿ ಸಲ್ಲಿಸಿದರು. ಸರಕಾರ ತಮ್ಮ ಬೇಡಿಕೆಗಳನ್ನು ಈಡೇರಿಸುವ ತನಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸುವುದಾಗಿ ಮನವಿಯಲ್ಲಿ ಎಚ್ಚರಿಸಿದ್ದರು.

ಜೆ.ಇ.ಇ. ಮೈನ್ಸ್: ವಿವೇಕಾನಂದ ಕಾಲೇಜಿನ ವಿದ್ಯಾರ್ಥಿಗಳ ವಿಶೇಷ ಸಾಧನೆ

98.42 ಪರ್ಸೆಂಟೈಲ್ ಪಡೆದ ವಿಶಾಲ್ ಪ್ರಥಮ

ಪುತ್ತೂರು: ಕೇಂದ್ರ ಸರಕಾರದ ಎನ್‌ಟಿಎ ಪ್ರಾಧಿಕಾರವು ನಡೆಸುವ ರಾಷ್ಟ್ರಮಟ್ಟದ ಜೆ.ಇ.ಇ. ಮೈನ್ಸ್–2026ರ ದ್ವಿತೀಯ ಹಂತದ ಪರೀಕ್ಷೆಯಲ್ಲಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿರುತ್ತಾರೆ. ಅನೇಕ ವಿದ್ಯಾರ್ಥಿಗಳು 90ಕ್ಕೂ ಅಧಿಕ ಪರ್ಸೆಂಟೈಲ್‌ಗಿಂತ ಅಧಿಕ ಅಂಕಗಳನ್ನು ಗಳಿಸಿದ್ದಾರೆ. ಪುತ್ತೂರು ಪಡ್ನೂರಿನ ವಿಠ್ಠಲ ಪಿ. ಹಾಗೂ ರೇಷ್ಮಾ ದಂಪತಿಯ ಪುತ್ರ ವಿಶಾಲ್ ಪಿ. ಅವರು 98.42 ಪರ್ಸೆಂಟೈಲ್ ಗಳಿಸುವುದರ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನಿಯಾಗಿದ್ದಾರೆ.



ಉರಿಮಜಲಿನ ರಾಘವ ಗೌಡ ಹಾಗೂ ಭಾರತಿ ದಂಪತಿ ಪುತ್ರಿ ಧನ್ವಿ ಆರ್.ಬಿ. (95.93 ಪರ್ಸೆಂಟೈಲ್), ತುಮಕೂರು ತಿಪಟೂರಿನ ಡಿ.ಎನ್. ಬದ್ರಿನಾಥ್ ಹಾಗೂ ಡಿ.ಬಿ. ರಶ್ಮಿ ದಂಪತಿ ಪುತ್ರ ಡಿ.ಬಿ. ನಾಗ ಅಚ್ಯುತ್ (95.28), ಶಾಂತಿಗೋಡಿನ ಪಿ.ಎಸ್. ಸತೀಶ್ ಹಾಗೂ ರೂಪಲತಾ ದಂಪತಿ ಪುತ್ರ ಮೋಕ್ಷಿತ್ ಪಿ.ಎಸ್. (95.03), ಬೆಂಗಳೂರಿನ ಉಮಾ ಶಂಕರ್ ಹಾಗೂ ಸುಮಾ ಕೆ.ಡಿ. ದಂಪತಿ ಪುತ್ರಿ ಅದಿತಿ ಯು. (94.70), ಪಡ್ನೂರಿನ ವಿಶ್ವನಾಥ ಗೌಡ ಕೆ. ಹಾಗೂ ಗಿರಿಜಾ ದಂಪತಿ ಪುತ್ರ ಚೇತನ್ ಕೆ.ವಿ. (94.08), ನೆಹರೂ ನಗರದ ಬಾಲಕೃಷ್ಣ ಭಟ್ ಕೆ.–ಸುಮಿತ್ರಾ ಕೆ. ದಂಪತಿ ಪುತ್ರ ಅಮೋಘ ಕೃಷ್ಣ ಕೆ. (92.52), ಸುಳ್ಯ ಜಾಲ್ಸೂರಿನ ರವಿರಾಜ್ ಕೆ.–ವಾಣಿ ಕುಮಾರಿ ಎ. ದಂಪತಿ ಪುತ್ರಿ ಮಂಗಳಾಮೃತ ಕೆ.ಆರ್. (91.98), ನರಿಕೊಂಬಿನ ವಸಂತ್ ಕುಮಾರ್ ಎನ್. ಸುಲೋಚನಾ ಕುಮಾರಿ ಬಿ.ಕೆ. ದಂಪತಿ ಪುತ್ರ ಅಭಿರಾಮ್ ಭಟ್ (91.44), ಬನ್ನೂರಿನ ರಾಘವೇಂದ್ರ ಕೆ.ಆರ್ .–ಶಾಂತಿ ಕೆ.ಆರ್. ದಂಪತಿ ಪುತ್ರ ಪ್ರತ್ಯೂಷ್ ಆರ್.ವೈ. (90.25), ಹಾರಾಡಿಯ ಅಶ್ವಿನ್ ಬಿ.ಎಚ್.–ರಜನಿ ರೈ ಬಿ. ದಂಪತಿ ಪುತ್ರಿ ಹಿತೈಷಿ ಆಳ್ವ (90.03), ಪಾಣಾಜೆಯ ಕೃಷ್ಣಪ್ಪ ಮೂಲ್ಯ–ಯಶೋಧ ವಿ. ದಂಪತಿ ಪುತ್ರ ಹೇಮಂತ್ ಕುಮಾರ್ ಕೆ. ವೈ. (89.74), ಬಂಟ್ವಾಳದ ಮಣಿನಾಲ್ಕೂರಿನ ರಾಜೇಶ್ ಶೆಟ್ಟಿ ಹಾಗೂ ಸುಮಲತಾ ದಂಪತಿ ಪುತ್ರಿ ತೀರ್ಥಾ ಶೆಟ್ಟಿ (88.15), ಮೈಸೂರಿನ ಹೂಟಗಳ್ಳಿಯ ಪೂಣಚ್ಚ ವೈ.ಪಿ.–ಜಯಂತಿ ಕೆ.ಪಿ. ದಂಪತಿ ಪುತ್ರಿ ಸಪ್ತಮಿ ವೈ.ಪಿ. (87.61), ಉರಿಮಜಲಿನ ಕೇಶವ ಮೂರ್ತಿ ಸಿ.–ಗೀತಾಲಕ್ಷ್ಮೀ ದಂಪತಿ ಪುತ್ರ ಅಜೇಯ ರಾಮ್ (86.840), ಸುಳ್ಯದ ಶಿವಪ್ರಸಾದ ಪಿ.–ಗಾಯತ್ರಿ ಪಿ. ದಂಪತಿ ಪುತ್ರಿ ಪೂರ್ವಿಕಾ ಕೆ.ಎಸ್. (86.48), ಬಂಟ್ವಾಳದ ಸರಪಾಡಿಯ ಪ್ರವೀಣ್ ಆಳ್ವ–ಸವಿತಾ ದಂಪತಿ ಪುತ್ರಿ ಪ್ರಾಪ್ತಿ ಆಳ್ವ (86.48) ಅಂಕಗಳನ್ನು ಗಳಿಸಿದ್ದಾರೆ.

ಏ.24: ರಾಣಿ ಅಬ್ಬಕ್ಕಳ ಕುರಿತು ಉಪನ್ಯಾಸ ಕಾರ್ಯಕ್ರಮ

ಮಂಗಳೂರು: ಬೆಸೆಂಟ್ ಮಹಿಳಾ ಕಾಲೇಜಿನ ಸಹಯೋಗದೊಂದಿಗೆ ಉಳ್ಳಾಲ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ವತಿಯಿಂದ ಏ.24ರಂದು ಅಪರಾಹ್ನ 2 ಗಂಟೆಗೆ ಕೊಡಿಯಾಲ್‌ಬೈಲ್‌ನಲ್ಲಿರುವ ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ 'ಅಬ್ಬಕ್ಕಳ ಕುರಿತು ಸರಣಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ದಿನಕರ ಉಳ್ಳಾಲ್ ತಿಳಿಸಿದ್ದಾರೆ.



ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ.ಕ. ಸಂಸದ ಕ್ಯಾಪ್ಟನ್.ಬ್ರಿಜೇಶ್ ಚೌಟ ಉದ್ಘಾಟನೆ ನೆರವೇರಿಸಲಿದ್ದಾರೆ. ಶಾಸಕ ಡಿ.ವೇದವ್ಯಾಸ ಕಾಮತ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವುಮೆನ್ಸ್ ನ್ಯಾಷನಲ್ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷ ಮಣೇಲ್ ಅಣ್ಣಪ್ಪ ನಾಯಕ್, ಉಪಾಧ್ಯಕ್ಷೆ ಡಾ.ಮಂಜುಳಾ ಕೆ.ಟಿ, ಪ್ರಾಂಶುಪಾಲರಾದ ಡಾ. ಪ್ರವೀಣ್ ಕುಮಾರ್ ಕೆ.ಸಿ, ಕಾಲೇಜಿನ ನಿವೃತ್ತ ಕನ್ನಡ ವಿಭಾಗದ ಪ್ರಾಧ್ಯಾಪಕಿ ಡಾ.ಮೀನಾಕ್ಷಿ ರಾಮಚಂದ್ರ ಮುಂತಾದವರು ಭಾಗವಹಿಸಲಿದ್ದಾರೆ ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಳ್ಳಾಲ ವೀರರಾಣಿ ಅಬ್ಬಕ್ಕ ತ್ಸವ ಸಮಿತಿಯ ಸ್ವಾಗತಾಧ್ಯಕ್ಷ ಕೆ.ಜಯರಾಮ ಶೆಟ್ಟಿ, ಗೌರವ ಉಪಾಧ್ಯಕ್ಷ ಸದಾನಂದ ಬಂಗೇರ, ಕೋಶಾಧಿಕಾರಿ ಆನಂದ ಕೆ. ಅಸೈಗೋಳಿ, ಉಪಾಧ್ಯಕ್ಷ ಯು.ಪಿ.ಆಲಿಯಬ್ಬ, ಕಾರ್ಯದರ್ಶಿ ರತ್ನಾವತಿ ಜೆ.ಬೈಕಾಡಿ ಉಪಸ್ಥಿತರಿದ್ದರು.

ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿಗೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭೇಟಿ

ಮುಂದಿನ ತಿಂಗಳು ವಿದ್ಯಾರ್ಥಿಗಳ ಹಾಸ್ಟೆಲ್ ಉದ್ಘಾಟನೆಗೆ ಕ್ರಮ

ಕಾಸರಗೋಡು: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ನಿರ್ಮಾಣಗೊಂಡಿರುವ ವಿದ್ಯಾರ್ಥಿಗಳ ಹಾಸ್ಟೆಲ್ ಕಟ್ಟಡವು ಮುಂದಿನ ತಿಂಗಳು ಕಾರ್ಯಾರಂಭಗೊಳ್ಳಲಿದೆ. ಈ ನಿಟ್ಟಿನಲ್ಲಿ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನಿರ್ದೇಶಿಸಿದ್ದಾರೆ.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಉಕ್ಕಿನಡ್ಕದ ಸರಕಾರಿ ವೈದ್ಯಕೀಯ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಮಾಸಿಕ ಪರಿಶೀಲನಾ ಸಭೆಯಲ್ಲಿ ಈ ಸೂಚನೆ ನೀಡಲಾಯಿತು. ಕಳೆದ ತಿಂಗಳು (ಮಾರ್ಚ್) ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸರಕಾರಿ ವೈದ್ಯಕೀಯ ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪ್ರತಿ ತಿಂಗಳು ಪರಿಶೀಲನಾ ಸಭೆ ನಡೆಸಲು ತೀರ್ಮಾನಿಸಲಾಗಿತ್ತು.



ಕಳೆದ ತಿಂಗಳು ನಡೆದ ಸಭೆಯ ನಿರ್ಧಾರದಂತೆ ಬಂದರು ಇಂಜಿನಿಯರಿಂಗ್ ಇಲಾಖೆಯ ಆಶ್ರಯದಲ್ಲಿ ವೈದ್ಯಕೀಯ ಕಾಲೇಜು ಆವರಣದೊಳಗೆ ರಸ್ತೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಅರ್ಧಕ್ಕೆ ಸ್ಥಗಿತಗೊಂಡಿದ್ದ ಆಸ್ಪತ್ರೆ ಕಟ್ಟಡದ ನಿರ್ಮಾಣವನ್ನು ಪುನರಾರಂಭಿಸಲಾಗಿದೆ. ನಿರ್ಮಾಣ ಹಂತದಲ್ಲಿರುವ ಹಾಸ್ಟೆಲ್‌ನ ವಿದ್ಯುತ್ ವಯರಿಂಗ್ ಕೆಲಸವೂ ಪೂರ್ಣಗೊಂಡಿದೆ.

ವೈದ್ಯಕೀಯ ಕಾಲೇಜು ಸುತ್ತುಗೋಡೆಯ ನಿರ್ಮಾಣದ ಕಾರ್ಯವಿಧಾನಗಳನ್ನು ತ್ವರಿತಗೊಳಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು ಮತ್ತು ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಮುಖ್ಯ ದ್ವಾರದ ನಿರ್ಮಾಣವನ್ನು ಆದಷ್ಟು ಬೇಗ ಪ್ರಾರಂಭಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವೈದ್ಯಕೀಯ ಕಾಲೇಜಿನ ಪ್ರಯೋಗಾಲಯದ ಕಾರ್ಯಾಚರಣೆಯನ್ನು ಸಾಧ್ಯವಾದಷ್ಟು ಬೇಗ ಪ್ರಾರಂಭಿಸಲು ತಿಳಿಸಲಾಗಿದೆ. ವೈದ್ಯಕೀಯ ಕಾಲೇಜು ನೇತೃತ್ವದಲ್ಲಿ ಮುಂದಿನ ತಿಂಗಳು ಆಂಬ್ಯುಲೆನ್ಸ್ ವಾಹನ ಕೂಡಾ ಓಡಾಟ ಆರಂಭಿಸಲಿದೆ. ಕ್ಯಾಂಟೀನ್, ಶವಾಗಾರ, ದ್ರವ ತ್ಯಾಜ್ಯ ಸಂಸ್ಕರಣಾ ಘಟಕ, ಆಟದ ಮೈದಾನ, ಒಳಾಂಗಣ ಕ್ರೀಡಾಂಗಣ ಮತ್ತು ಇತರ ಹಾಸ್ಟೆಲ್ ಕಟ್ಟಡಗಳ ನಿರ್ಮಾಣವನ್ನು ತ್ವರಿತಗೊಳಿಸುವಂತೆ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಆದೇಶಿಸಿದರು.

ವೈದ್ಯಕೀಯ ಕಾಲೇಜಿನ ಬಳಿ ಆಡಳಿತ ಕಾಲೇಜು ಕಟ್ಟಡ ನಿರ್ಮಾಣವನ್ನು ಪ್ರಾರಂಭಿಸಲು ಮತ್ತು ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಕಾಸರಗೋಡು ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎ.ಅರುಣ್‌ಕುಮಾರ್, ಉಪ ಪ್ರಾಂಶುಪಾಲೆ ಟಿ.ಜಿ.ಸಿಂಧು, ವೈದ್ಯಕೀಯ ಕಾಲೇಜು ಆಸ್ಪತ್ರೆ ಅಧಿಕಾರಿ ಡಾ.ಆರ್.ಪ್ರವೀಣ್, ಜನರಲ್ ಮೆಡಿಸಿನ್ ಎಚ್‌ಒಡಿ ಡಾ.ಆರ್. ಹರಿಕೃಷ್ಣನ್, ಫೊರೆನ್ಸಿಕ್ ಮೆಡಿಸಿನ್ ಎಚ್ ಒಡಿ ಡಾ.ಪಿ.ಟಿ.ರತೀಶ್, ನರ್ಸಿಂಗ್ ಕಾಲೇಜು ಪ್ರಾಂಶುಪಾಲೆ ಪಿ.ಎಸ್.ಶೋಭಾ, ಎಂಬಿಬಿಎಸ್ ಹಾಸ್ಟೆಲ್ ಸಹಾಯಕ ವಾರ್ಡನ್ ಡಾ.ಕಾಂತೆ ಇಳಂಕೋವನ್, ಎಲ್‌ಎಸ್‌ಜಿಡಿ ಉಪ ನಿರ್ದೇಶಕ ಕೆ.ವಿ.ಹರಿದಾಸ್, ಕೆಡಬ್ಲ್ಯೂಎ ಸಹಾಯಕ ಇಂಜಿನಿಯರ್ ಜಿ.ಮಂಜು, ಪಿಡಬ್ಲ್ಯೂಡಿ ಸಹಾಯಕ ಇಂಜಿನಿಯರ್ ಪಿ.ರೇಷ್ಮಾ, ಜಿಲ್ಲಾ ಸಹಾಯಕ ಇಂಜಿನಿಯರ್ ಎಂ.ರೇಷ್ಮಾ, ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ವಿಶೇಷಾಧಿಕಾರಿ ವಿ.ಚಂದ್ರನ್, ಕಿಟ್ಕೋ ಪ್ರತಿನಿಧಿಗಳಾದ ವಿ.ನಿತಿನ್, ಟೋನಿ ಜಾರ್ಜ್ ಮುಂತಾದವರು ಉಪಸ್ಥಿತರಿದ್ದರು.

ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ವಂಚನೆ

ಬೆಂಗಳೂರು: ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿ ಸುಮಾರು 410 ಕೋಟಿ ರೂ. ಮೊತ್ತದ ನಕಲಿ ವಹಿವಾಟಿನ ಮೂಲಕ 102.50 ಕೋಟಿ ರೂ. ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚಿಸುತ್ತಿದ್ದ ಬೃಹತ್ ಜಾಲವೊಂದನ್ನು ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಸಕ್ರಿಯವಾಗಿದ್ದ ಈ ಜಾಲದ ಪ್ರಮುಖ ಆರೋಪಿ ಮೊಹಮ್ಮದ್ ತೌಕೀರ್ (42) ಎಂಬಾತನನ್ನು ಅಧಿಕಾರಿಗಳು ಬಂಧಿಸಿದ್ದಾರೆ. 2025ರ ನವೆಂಬರ್‌ನಲ್ಲಿ ಬೆಂಗಳೂರಿನ ಎಸ್‌ಜೆಪಿ ರಸ್ತೆ, ಜೆ.ಸಿ ರಸ್ತೆ, ಕಲಾಸಿಪಾಳ್ಯ ಹಾಗೂ ಬಿವಿಕೆ ಅಯ್ಯಂಗಾರ್ ರಸ್ತೆಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗವು ನಡೆಸಿದ ಕಾರ್ಯಾಚರಣೆಯ ವೇಳೆ ಈ ಬೃಹತ್ ತೆರಿಗೆ ವಂಚನೆ ಪ್ರಕರಣ ಬೆಳಕಿಗೆ ಬಂದಿತ್ತು.

ವಂಚನೆ ಜಾಲದಲ್ಲಿ ಬೆಂಗಳೂರು ನಿವಾಸಿಗಳೂ ಭಾಗೀ: ಅಂದು ಒಟ್ಟು 1,464 ಕೋಟಿ ರೂ. ಮೊತ್ತದ ನಕಲಿ ವಹಿವಾಟು ನಡೆಸಿ 350 ಕೋಟಿ ರೂ. ಐಟಿಸಿ ಪಡೆದಿರುವುದು ದೃಢಪಟ್ಟಿತ್ತು. ಈ ಜಾಲವನ್ನು ರೇವತಿ, ಇ.ಪ್ರತಾಪ್, ಇಬ್ರಾಜ್ ಅಹ್ಮದ್ ಮತ್ತು ನಫೀಜ್ ಅಹ್ಮದ್ ಎಂಬವರು ನಡೆಸುತ್ತಿದ್ದರು. ಪ್ರಕರಣದ ಆಳವಾದ ತನಿಖೆ ನಡೆಸಿದಾಗ, ಈ ಇಡೀ ಜಾಲದ ಹಿಂದೆ ಆಂಧ್ರಪ್ರದೇಶದ ಚಿತ್ತೂರು ಮೂಲದ ಹಾಗೂ ಬೆಂಗಳೂರು ನಿವಾಸಿಗಳಾದ ಮೊಹಮ್ಮದ್ ತೌಕೀರ್ ಮತ್ತು ಶೇಖ್ ಜಾಕಿರ್ ಹುಸೇನ್ ಎಂಬವರು ಮಾಸ್ಟರ್ ಮೈಂಡ್ ಆಗಿ ಕೆಲಸ ಮಾಡುತ್ತಿರುವುದು ಪತ್ತೆಯಾಗಿದೆ.

ಈ ಆರೋಪಿಗಳು ವಂಚನೆಗಾಗಿ ಅತ್ಯಂತ ವ್ಯವಸ್ಥಿತ ಜಾಲವನ್ನು ರೂಪಿಸಿಕೊಂಡಿದ್ದರು. ಅವರು ವಿವಿಧ ಸ್ಥಳಗಳಲ್ಲಿ ನಕಲಿ ವಿಳಾಸಗಳನ್ನು ನೀಡಿ, ಬಾಡಿಗೆ ಮತ್ತು ಭೋಗ್ಯದ ಕರಾರು ಪತ್ರಗಳನ್ನು ನೋಂದಾಯಿಸಿಕೊಳ್ಳುತ್ತಿದ್ದರು. ಈ ದಾಖಲೆಗಳ ಜತೆಗೆ ಬೇರೆಯವರ ಪಾನ್ ಮತ್ತು ಆಧಾರ್ ವಿವರಗಳನ್ನು ಬಳಸಿಕೊಂಡು ಏಕವ್ಯಕ್ತಿ ಮಾಲೀಕತ್ವದ ಅಥವಾ ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಕಂಪನಿಗಳನ್ನು ಆರಂಭಿಸುತ್ತಿದ್ದರು.

ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣ ಲೂಟಿ ಮಾಡಿದ್ದ ಆರೋಪಿಗಳು: ಈ ನಕಲಿ ಕಂಪನಿಗಳ ಹೆಸರಿನಲ್ಲಿ ಜಿಎಸ್‌ಟಿ ನೋಂದಣಿ ಪಡೆದು, ಸಿಮೆಂಟ್, ಕಬ್ಬಿಣದ ಸಲಾಕೆ, ಜಿಂಕ್ ಶೀಟ್ ಮತ್ತು ಪೈಪ್‌ಗಳ ಖರೀದಿಯ ಹೆಸರಿನಲ್ಲಿ ಕೇವಲ ಕಾಗದದ ಮೇಲೆ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸುತ್ತಿದ್ದರು. ಆದರೆ, ವಾಸ್ತವದಲ್ಲಿ ಯಾವುದೇ ಸರಕುಗಳ ಸಾಗಣೆ ನಡೆಯುತ್ತಿರಲಿಲ್ಲ. ಕೇವಲ ಬಿಲ್‌ಗಳನ್ನು ಒಂದು ಕಂಪನಿಯಿಂದ ಮತ್ತೊಂದಕ್ಕೆ ವರ್ಗಾಯಿಸುವ ಮೂಲಕ ಸರ್ಕಾರದಿಂದ ಬರಬೇಕಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಹಣವನ್ನು ಲೂಟಿ ಮಾಡುತ್ತಿದ್ದರು.

ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದ ವಂಚಕರು: ಈ ಅಕ್ರಮ ಹಣದ ಚಲಾವಣೆಗಾಗಿ ಆರೋಪಿಗಳು ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಹತ್ತಾರು ಬ್ಯಾಂಕ್ ಖಾತೆಗಳನ್ನು ತೆರೆದಿದ್ದರು. ಇಲಾಖೆಯ ಅಧಿಕಾರಿಗಳಿಗೆ ಈ ಬಗ್ಗೆ ಅನುಮಾನ ಬಂದು ನೋಟಿಸ್ ನೀಡಿದ ತಕ್ಷಣವೇ ಆರೋಪಿಗಳು ಆ ಕಂಪನಿಯ ನೋಂದಣಿಯನ್ನು ರದ್ದುಪಡಿಸಿ ಹೊಸ ಹೆಸರಿನಲ್ಲಿ ಮತ್ತೊಂದು ಕಂಪನಿ ತೆರೆಯುತ್ತಿದ್ದರು. ಈ ಹಿಂದೆ ಪತ್ತೆಯಾಗಿದ್ದ 1,464 ಕೋಟಿ ರೂ.ವಂಚನೆಯ ಹೊರತಾಗಿ, ಈ ಇಬ್ಬರು ಆರೋಪಿಗಳು ಹೆಚ್ಚುವರಿಯಾಗಿ 410 ಕೋಟಿ ರೂ. ಮೊತ್ತದ ವಂಚನೆ ನಡೆಸಿ 102.50 ಕೋಟಿ ರೂ. ಐಟಿಸಿ ಪಡೆದುಕೊಂಡಿದ್ದಾರೆ.

ಈ ಪ್ರಕರಣದ ಇತರ ಆರೋಪಿಗಳನ್ನು ಈಗಾಗಲೇ ಜನವರಿ ತಿಂಗಳಿನಲ್ಲಿ ಬಂಧಿಸಲಾಗಿತ್ತು. ಬಂಧನದ ಭೀತಿಯಲ್ಲಿದ್ದ ತೌಕೀರ್ ಮತ್ತು ಜಾಕಿರ್ ನಗರದ 69ನೇ ಸಿವಿಲ್ ನ್ಯಾಯಾಲಯಕ್ಕೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ನ್ಯಾಯಾಲಯವು ಅರ್ಜಿಯನ್ನು ವಜಾ ಮಾಡಿದ ಬೆನ್ನಲ್ಲೇ ಜಾಕಿರ್ ವಿದೇಶಕ್ಕೆ ಪರಾರಿಯಾಗಿದ್ದಾನೆ. ತಲೆಮರೆಸಿಕೊಂಡಿದ್ದ ತೌಕೀರ್‌ನನ್ನು ವಿಶೇಷ ಕಾರ್ಯಾಚರಣೆಯ ಮೂಲಕ ಬಂಧಿಸಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ನ್ಯಾಯಾಲಯವು ಆರೋಪಿಯನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಮೂಲಗಳು ತಿಳಿಸಿವೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಬೆಂಗಳೂರು: ತೃತೀಯ ಭಾಷೆಗೆ ಗ್ರೇಡ್ ಹಾಗೂ ಅಂಕಗಳ ಗೊಂದಲದ ನಡುವೆಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಪರೀಕ್ಷೆ -1ರ ಫಲಿತಾಂಶವು ಏ.23ರಂದು ಮಧ್ಯಾಹ್ನ 12 ಗಂಟೆಗೆ ಪ್ರಕಟವಾಗಲಿದ್ದು, ವಿದ್ಯಾರ್ಥಿಗಳು https://karresults.nic.in/ ಲಿಂಕ್ ಹಾಗೂ ಕರ್ನಾಟಕ ಒನ್ ಮೊಬೈಲ್ ಆ್ಯಪ್ ಮೂಲಕವೂ ಪಡೆಯಬಹುದಾಗಿದೆ. ಅಲ್ಲದೇ ವಿದ್ಯಾರ್ಥಿಗಳ ನೊಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಾಪ್/ಎಸ್‌ಎಂಎಸ್ ಮೂಲಕವೂ ಫಲಿತಾಂಶದ ಮಾಹಿತಿಯನ್ನು ರವಾನಿಸಲಾಗುವುದು ಎಂದು ತಿಳಿಸಿದೆ.

ಇದೇ ಮೊದಲ ಬಾರಿಗೆ ವಿದ್ಯಾರ್ಥಿಗಳ ಫಲಿತಾಂಶದ ಅಂಕಪಟ್ಟಿಯನ್ನು ಡಿಜಿಲಾಕರ್ ಮೂಲಕ ಮಧ್ಯಾಹ್ನ 12ಗಂಟೆಗೆ ಲಭ್ಯವಾಗಲಿದೆ. ಆದರಿಂದ ವಿದ್ಯಾರ್ಥಿಗಳು https://www.digilocker.gov.in/ ಅನ್ನು ಬಳಸಿ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದೆ.

ಮಾ.18ರಿಂದ ಏ.2ರವರೆಗೂ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರಲ್ಲಿ 7,75,979 ಹೊಸಬರು, ಪುನರಾವರ್ತಿತ ವಿದ್ಯಾರ್ಥಿಗಳು 62,938, ಹೊಸ ಖಾಸಗಿ ಅಭ್ಯರ್ಥಿಗಳು 23,510 ಮತ್ತು ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು 3,561 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ.



> ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಹಿಂದಿಗೆ ಗ್ರೇಡ್ ಬದಲಿಗೆ ಅಂಕವನ್ನು ನೀಡುವಂತೆ ಹೈಕೋರ್ಟ್ ಆದೇಶ ಹೊರಡಿಸಿದ್ದು, ಕೋರ್ಟ್ ಆದೇಶದಂತೆ ಅಂಕ ನೀಡಲಾಗುವುದು. ಈ ವಿಷಯವನ್ನು ಸಿಎಂ ಅವರ ಗಮನಕ್ಕೂ ತರಲಾಗಿದೆ.
> ■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಅಲ್ಲದೇ 5,106 ವಿಶೇಷ ಚೇತನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಆದರಲ್ಲಿ ಬೆಂಗಳೂರು ದಕ್ಷಿಣ ವಲಯ-1ರಲ್ಲಿ ಎರಡನೇ ಬಾರಿಗೆ 16 ವಿಶೇಷ ಚೇತನ ಮಕ್ಕಳು ಬರಹಗಾರರ ಸೌಲಭ್ಯವನ್ನು ಬಳಸದೆ ಲ್ಯಾಪ್ ಟಾಪ್‌ಗಳನ್ನು ಬಳಸಿ ಸ್ವತಃ ಪರೀಕ್ಷೆ ಬರೆದಿದ್ದಾರೆ. ಸರ್ಕಾರಿ ಶಾಲೆಯ 3,59,594, ವಿದ್ಯಾರ್ಥಿಗಳು, ಅನುದಾನಿತ ಶಾಲೆಯ 2,11,486 ವಿದ್ಯಾಥಿಗಳು ಮತ್ತು ಅನುದಾನ ರಹಿತ ಶಾಲೆಗಳ 2,94,908 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಾನು ದೇವರು ಇದ್ದಾನೆ ಎಂದು ನಂಬಿದ್ದೇನೆ. ಆದರೆ ದೇವಸ್ಥಾನದಲ್ಲಿ ಮಾತ್ರವಲ್ಲ, ದೇವರು ಎಲ್ಲಾ ಕಡೆಯೂ ಇದ್ದಾನೆ - ಸಿದ್ದರಾಮಯ್ಯ

- ಗಾಳಿ ಎಲ್ಲಾ ಕಡೆ ಇದೆ ಅಂತ ಗೊತ್ತಿದ್ದರೂ ಸೆಕೆ ಜೋರಾದಾಗ ನಾವು ಮರದ ಕೆಳಗೋ ಫ್ಯಾನಿನ ಅಡಿಗೋ ಹೋಗುತ್ತೇವೆ, ಅಲ್ವಾ?

ದಿನ ಭವಿಷ್ಯ

ಮೇಷ ಮಾಡುವ ಕೆಲಸದಲ್ಲಿ ಸಫಲತೆ. ಆದರೆ ಸುಲಭದಲ್ಲಿ ಆಗದು. ಅಡ್ಡಿ, ವಿಳಂಬ ಸಾಧ್ಯತೆ. ಕೌಟುಂಬಿಕ ಮನಸ್ತಾಪ ನೆಮ್ಮದಿ ಕೆಡಿಸುವುದು.

ವೃಷಭ ಭಿನ್ನಾಭಿಪ್ರಾಯ ನಿವಾರಣೆ. ಅನಿರೀಕ್ಷಿತ ವಿದ್ಯಮಾನ ಸಂಭವಿಸಿದರೆ ಅಂಜಬೇಡಿ. ವಿಶ್ವಾಸದಿಂದ ಎದುರಿಸಿ. ನೆರೆಮನೆಯವರ ಕಿರಿಕಿರಿ.

ಮಿಥುನ ಹದಗೆಟ್ಟ ಸಂಬಂಧ ಸುಧಾರಿಸಲು ಆದ್ಯತೆ ಕೊಡಿ. ಬಿಗುಮಾನ ಬಿಟ್ಟು ವ್ಯವಹರಿಸಿ. ಸಣ್ಣ ವಿಷಯವೂ ಅತಿಯಾದ ಬೇಸರ ತರಬಹುದು.

ಕಟಕ ವೃತ್ತಿ ಒತ್ತಡ ಕಡಿಮೆ ಮಾಡಲು ಯತ್ನಿಸಿ. ಇಲ್ಲವಾದರೆ ದೇಹದ ಮೇಲೂ ಪರಿಣಾಮ. ಮೆಚ್ಚಿನ ಹವ್ಯಾಸದಲ್ಲಿ ಚಿಂತೆ ಮರೆಯಿರಿ.

ಸಿಂಹ ನಿಮ್ಮ ಗುರಿ ಈಡೇರಬೇಕೆ? ವಸ್ತುಸ್ಥಿತಿ ಅರಿತು ವ್ಯವಹರಿಸಿ. ಆಕಾಶದಲ್ಲಿ ತೇಲಬೇಡಿ. ಮನೆಯವರ ಬೆಂಬಲ ಪಡೆಯಿರಿ.

ಕನ್ಯಾ ಇತರರ ಜತೆ ವಿನಯದಿಂದ ವರ್ತಿಸಿ. ಇಲ್ಲವಾದರೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆರ್ಥಿಕ ವ್ಯವಹಾರ ತುಸು ಚಿಂತೆಗೆ ಕಾರಣವಾದೀತು.

ತುಲಾ ವೃತ್ತಿಯಲ್ಲಿ ಯಾವುದೇ ಕೆಲಸ ಬಾಕಿ ಉಳಿಸಬೇಡಿ. ವಿಳಂಬ ದೊಡ್ಡ ಹಾನಿ ತಂದೀತು. ಅನಾರೋಗ್ಯಕರ ಆಹಾರ ಸೇವಿಸಬೇಡಿ.

ವೃಶ್ಚಿಕ ಮಾನಸಿಕ ಅಶಾಂತಿ. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರದಲ್ಲಿ ತೊಡಕು. ಎಲ್ಲರ ಜತೆ ಹೊಂದಾಣಿಕೆ ಬೆಳೆಸಿ. ಭಿನ್ನವಾಗಿ ವರ್ತಿಸಲು ಹೋಗದಿರಿ.

ಧನು ವೃತ್ತಿಯಲ್ಲಿ ಯಶಸ್ಸು. ಮನೆಯಲ್ಲಿ ಸೌಹಾರ್ದ. ಬಂಧುಗಳ ಭೇಟಿ. ಧನವ್ಯಯ ಹೆಚ್ಚಾದರೂ ಬೇಸರ ಮೂಡದು.

ಮಕರ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಉಂಟಾದೀತು. ಬಂಧು ಭೇಟಿಯಿಂದ ಸಂತೋಷ. ವೃತ್ತಿ ಸಮಸ್ಯೆಯೊಂದು ಪರಿಹಾರ ಕಾಣಲಿದೆ.

ಕುಂಭ ಆದಾಯ ಹೆಚ್ಚಳದ ಸಂಕೇತ ತೋರಲಿದೆ. ಎಲ್ಲರಿಂದ ಉತ್ತಮ ಸಹಕಾರ ಪಡೆಯುವಿರಿ. ಆರೋಗ್ಯದ ಸಮಸ್ಯೆ ಕಡೆಗಣಿಸಬೇಡಿ.

ಮೀನ ಮನೆಯಲ್ಲಿ ಶಾಂತಿ, ಸೌಹಾರ್ದ. ಹಣದ ವ್ಯವಹಾರ ಸಫಲ. ಆರೋಗ್ಯದ ಚಿಂತೆ ಪರಿಹಾರ. ಮಕ್ಕಳ ಸಾಧನೆಯ ಖುಷಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 8,3,9,4

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರ ಅಭಿಮತ

ತರಬೇತಿ ಶಿಬಿರ ಅಗತ್ಯ

ಬೆಂಗಳೂರು: ಮಕ್ಕಳ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಗೆ ಗುರುಕುಲ ಶಿಕ್ಷಣದ ಜತೆಗೆ ವಸಂತ ಶಿಬಿರಗಳಂತಹ ಸಂಸ್ಕಾರಾತ್ಮಕ ತರಬೇತಿ ಶಿಬಿರಗಳು ಅತ್ಯಂತ ಅಗತ್ಯವೆಂದು ಉಡುಪಿಯ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟರು.

ಬುಧವಾರ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆದ ವಸಂತ ಧಾರ್ಮಿಕ ಶಿಬಿರದ ಸಮಾರೋಪದಲ್ಲಿ ಆಶೀರ್ವಚನ ನೀಡಿದ ಅವರು, ವರ್ಷಪೂರ್ತಿ ಮಕ್ಕಳಿಗೆ ಉತ್ತಮ ಗುರುಕುಲ ಶಿಕ್ಷಣ ನೀಡಲು ಸಾಧ್ಯವಾಗದಿದ್ದರೂ, ಕನಿಷ್ಠ ವರ್ಷಕ್ಕೆ ಕೆಲವು ದಿನಗಳಾದರೂ ಇಂತಹ ಶಿಬಿರಗಳಲ್ಲಿ ಭಾಗವಹಿಸುವುದು ಮಕ್ಕಳ ಜೀವನಕ್ಕೆ ದಿಕ್ಕು ತೋರಿಸುತ್ತದೆ ಎಂದರು.

ಯುವಾ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ಮಕ್ಕಳ ಸಹಜ ಬೆಳವಣಿಗೆಗೆ ಪರಿಸರದೊಂದಿಗೆ ಹೆಚ್ಚು ಸಮಯ ಕಳೆಯುವುದು ಅತ್ಯಂತ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಸಂತ ವೈಭವದಂತಹ ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಮಹತ್ವದ ಪಾತ್ರವಹಿಸುತ್ತವೆ. ಮಕ್ಕಳ ಬೆಳವಣಿಗೆ, ಪೋಷಕರ ನಡೆ ನುಡಿಗಳ ಮೇಲೆ ಹೆಚ್ಚು ಅವಲಂಬಿತವಾಗಿರುತ್ತದೆ. ಆದ್ದರಿಂದ ಪೋಷಕರು ಮಕ್ಕಳ ಮೇಲೆ ಯಾವುದಕ್ಕೂ ಒತ್ತಾಯ ಹೇರದೇ, ಸಹಜ ಹಾಗೂ ಪ್ರಾಯೋಗಿಕ ರೀತಿಯಲ್ಲಿ ಕಲಿಕೆಯ ವಾತಾವರಣವನ್ನು ನಿರ್ಮಿಸಬೇಕು ಎಂದರು.

ಇಂದಿನ ಭಾರತಕ್ಕೆ ಪ್ರಾಣ ತ್ಯಾಗ ಮಾಡುವವರಿಗಿಂತ ದೇಶಕ್ಕಾಗಿ ಬದುಕುವ ನಾಗರಿಕರು ಅಗತ್ಯವಿದ್ದಾರೆ. ಸರಿಯಾದ ಸಂಸ್ಕಾರ ಮತ್ತು ಸಮಗ್ರ ಶಿಕ್ಷಣ ಮುಂದಿನ ಪೀಳಿಗೆಗೆ ಸಿಗದಿದ್ದರೆ ಸಮಾಜದ ಭವಿಷ್ಯಕ್ಕೆ ಅಪಾಯ ಎದುರಾಗುವ ಸಾಧ್ಯತೆ ಇದೆ. ಆದ್ದರಿಂದ ಪೋಷಕರು ಮಕ್ಕಳನ್ನು ಇಂತಹ ಶಿಬಿರಗಳಿಗೆ ಸೇರಿಸಿ ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಉಪಸ್ಥಿತರಿದ್ದರು.



ವಸಂತ ವೈಭವದಂತಹ ಶಿಬಿರಗಳು ಅವಶ್ಯಕ

ಇಂದಿನ ಕಾಲದಲ್ಲಿ ಮೊಬೈಲ್ ಬಳಕೆ, ಮಕ್ಕಳ ಮೇಲೆ ಹೆಚ್ಚಾಗಿ ಪರಿಣಾಮ ಬೀರುತ್ತಿದೆ. ರಾಮಾಯಣ ಮತ್ತು ಮಹಾಭಾರತದಂತಹ ಇತಿಹಾಸ-ಪೌರಾಣಿಕ ಕಥೆಗಳನ್ನೂ ಮಕ್ಕಳು ಕುಟುಂಬ ಸದಸ್ಯರಿಗಿಂತ ಕಾರ್ಟೂನ್ ಮಾಧ್ಯಮಗಳ ಮೂಲಕವೇ ಹೆಚ್ಚು ನಂಬುವ ಸ್ಥಿತಿ ಉಂಟಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಕಾರ್ಯ, ಗರ್ಭಧಾರಣೆಯ ಮುಂಚೆಯೇ ಪೋಷಕರಿಂದ ಆರಂಭವಾಗಬೇಕು. ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯುವ ಮೂಲಕ ಅವರಲ್ಲಿ ಉತ್ತಮ ಅಭ್ಯಾಸಗಳನ್ನು ಬೆಳೆಸಬಹುದು. ಮನೆಯಲ್ಲಿ ಸಂಸ್ಕಾರ ದೊರೆಯದ ಸಂದರ್ಭದಲ್ಲಿ ಇಂತಹ ಸಂಸ್ಕಾರ ಶಿಬಿರಗಳು ಮಕ್ಕಳಿಗೆ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಪರಿಚಯಿಸುವಲ್ಲಿ ಸಹಾಯಕವಾಗುತ್ತವೆ ಎಂದು ಚಕ್ರವರ್ತಿ ಸೂಲಿಬೆಲೆ ತಿಳಿಸಿದರು.

> ನಮ್ಮ ದೇಶದಲ್ಲಿ ವೇದಗಳು ಮತ್ತು ಉಪನಿಷತ್ತುಗಳಂತಹ ಅಮೂಲ್ಯ ಜ್ಞಾನಸಂಪತ್ತು ಅಪಾರವಾಗಿದೆ. ಹಿರಿಯರು ನಿರ್ಮಿಸಿದ ಆಧ್ಯಾತ್ಮಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆ ಬೆಟ್ಟದಷ್ಟಿದ್ದು, ಅದರ ಒಂದು ಭಾಗವಾದರೂ ಮಕ್ಕಳಿಗೆ ಪರಿಚಯಿಸುವುದು ಇಂದಿನ ಪೋಷಕರ ಜವಾಬ್ದಾರಿಯಾಗಿದೆ.
> ■ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಉಡುಪಿಯ ಪೇಜಾವರ ಅಧೋಕ್ಷಜ ಮಠ

ಪೋಷಕರ ಸಹಕಾರ ಅಗತ್ಯ

ಶಿಬಿರಗಳ ಮೂಲಕ ಮಕ್ಕಳಿಗೆ ಜೀವನದಲ್ಲಿ ಅಗತ್ಯವಿರುವ ಮೌಲ್ಯಗಳು, ಶಿಸ್ತು, ಸಂಸ್ಕಾರ ಮತ್ತು ಸಾಮಾಜಿಕ ಜವಾಬ್ದಾರಿತನವನ್ನು ಅಳವಡಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಶಿಬಿರಗಳಲ್ಲಿ ಕಲಿತ ವಿಚಾರಗಳನ್ನು ಮಕ್ಕಳ ದಿನನಿತ್ಯದ ಜೀವನದಲ್ಲಿ ಅನುಸರಿಸಲು ಪೋಷಕರ ಸಹಕಾರ ಅತ್ಯಂತ ಅಗತ್ಯವಾಗಿದೆ ಎಂದು ವಿಶ್ವಪ್ರಸನ್ನತೀರ್ಥ ಶ್ರೀಪಾದರು ತಿಳಿಸಿದರು.

ತೃತೀಯಲಿಂಗಿ ವಿಸ್ಮಯ

ಪುಟ ೧➡ ಮನೆಯವರು ಮತ್ತು ಸಮಾಜ ಒಪ್ಪದ ಕಾರಣ ಕೈತಟ್ಟಿ ಭಿಕ್ಷೆ ಬೇಡುವುದನ್ನೇ ರೂಢಿಸಿಕೊಂಡಿದ್ದರು. ಆದರೆ, ಅದೊಂದು ಘಟನೆ ಅವರ ಸ್ವಾಭಿಮಾನವನ್ನೇ ಬಡಿದೆಬ್ಬಿಸಿತು. ಭಿಕ್ಷೆ ಕೇಳಿಕೊಂಡು ಹೋಗುತ್ತಿದ್ದಾಗ ದೇವರು ಕೈಕಾಲು ಚೆನ್ನಾಗಿ ಕೊಟ್ಟಿದ್ದಾನೆ. ದುಡಿದು ತಿನ್ನಲು ಯೋಗ್ಯತೆ ಇಲ್ಲವೇ ಎಂದು ಕೆಲವರು ಪ್ರಶ್ನಿಸಿದರು. ಈ ಘಟನೆಯಿಂದ ಕೋಪಗೊಳ್ಳದೆ ಆತ್ಮವಿಮರ್ಶೆ ಮಾಡಿಕೊಂಡು ಉತ್ತಮ ದಾರಿಯ ಹುಡುಕಾಟ ಆರಂಭಿಸಿದರು. ಆಗ ಅವರ ನೆರವಿಗೆ ಬಂದಿದ್ದು ಪೀಸ್ ಆಟೋ.

ವಾಹನ ಚಾಲನೆಗೆ ಪರವಾನಗಿ ನೀಡುವಾಗ ಅಧಿಕಾರಿಗಳು ಹಿಂದೇಟು ಹಾಕಿದರೂ ಛಲ ಬಿಡದೇ ಓಡಿಸಿ ಅಧಿಕಾರಿಗಳಿಗೆ ಉತ್ತರ ನೀಡಿದರು. ಮೊದಲಿಗೆ ಬಾಡಿಗೆ ಆಟೋ ಓಡಿಸುತ್ತಿದ್ದರು. ಆಗ ಪೀಸ್ ಆಟೋ ಸಂಸ್ಥಾಪಕ ರಘು ಅವರು ಆಟೋ ಖರೀದಿಸಲು 60 ಸಾವಿರ ರೂ. ನೀಡಿ ಸ್ವಾವಲಂಬಿ ಬದುಕಿಗೆ ಪುಷ್ಟಿ ನೀಡಿದರು. ಮೊದಲು ಬೆಳಗ್ಗೆ ಐದು ಗಂಟೆಯಿಂದ ರಾತ್ರಿ 12 ಗಂಟೆವರೆಗೆ ದುಡಿಮೆ ಮಾಡುತ್ತಿದ್ದರು. ದಿನಕ್ಕೆ ಸರಾಸರಿ ನಾಲ್ಕು ಸಾವಿರ ರೂ. ಸಂಪಾದಿಸಿ, ಮೂರು ಸಾವಿರ ರೂ. ಉಳಿತಾಯ ಮಾಡಿ, ತಂಗಿಯ ವಿದ್ಯಾಭ್ಯಾಸ, ಮದುವೆ ಖರ್ಚಿಗಾಗಿ ಬ್ಯಾಂಕ್‌ನಲ್ಲಿ ಕೂಡಿಟ್ಟಿದ್ದರು. ಆದರೆ, ಈಗ ಬಿಸಿಲ ಝಳ ಮತ್ತು ಗ್ಯಾಸ್ ಸಮಸ್ಯೆಯಿಂದ ಸಾವಿರ ರೂ. ಸಿಗುವುದೂ ಕಷ್ಟವಾಗಿದೆ ಎನ್ನುತ್ತಾರೆ, ವಿಸ್ಮಯ.

ಆಟೋದಲ್ಲಿ ಪ್ರೀತಿಯ ಪಯಣ

ಸಂಜಯ್-ವಿಸ್ಮಯ ಪ್ರೀತಿ ಅರಳಿದ್ದು ಆಟೋದಲ್ಲೇ. ಆಟೋ ಪ್ರಯಾಣದಲ್ಲಿ ವಿಸ್ಮಯ ಅವರಲ್ಲಿನ ಬೆರೆಯುವ ಗುಣ, ಹಿತವಾದ ಮಾತು ಸಂಜಯ್‌ಗೆ ಹಿಡಿಸಿತು. ತಿರಸ್ಕಾರವನ್ನೇ ಕಂಡಿದ್ದ ವಿಸ್ಮಯ ಅವರಿಗೆ ಸಂಜಯ್ ತೋರಿದ ಕಾಳಜಿ, ಗೌರವ ನೆಮ್ಮದಿ ನೀಡಿತು. ಆ ನೆಮ್ಮದಿಯೇ ಪ್ರೀತಿಯಾಯಿತು. ಕೊನೆಗೆ ಇಬ್ಬರೂ ಒಪ್ಪಿ ಕಬ್ಬಾಳಮ್ಮನ ದೇವಸ್ಥಾನದಲ್ಲಿ ಮದುವೆಯಾಗಿ ನೆಮ್ಮದಿಯಾಗಿದ್ದೇವೆ ಎನ್ನುತ್ತಾರೆ, ವಿಸ್ಮಯ.

ಕನಸಿನ ಬೆನ್ನೇರಿ...: ಕೆಲ ಪ್ರಯಾಣಿಕರು ಮುಖ ನೋಡಿ ಪ್ರಯಾಣ ರದ್ದು ಮಾಡಿದರೆ, ಆಟೋ ಚಾಲಕರು ನಮ್ಮ ಅನ್ನ ಕಸಿಯಲು ಬಂದಿದ್ದೀರಾ ಎಂದು ಟೀಕಿಸುತ್ತಿದ್ದಾಗ ಬೇಸರಗೊಳ್ಳದೆ ನಸುನಗುತ್ತಿದ್ದರು. ಮುಂದಿನ ದಿನಗಳಲ್ಲಿ ವಿಸ್ಮಯ ಅವರಿಗೆ ಆಂಬುಲೆನ್ಸ್ ಚಾಲಕಿ ಆಗಬೇಕೆನ್ನುವ ಆಸೆಯಿದೆಯಂತೆ.

ಮಾರಾಟಕ್ಕೆ ಉತ್ತೇಜನ

ಪುಟ ೧➡ ಈ ಡಚ್ ಮ್ಯಾಟ್‌ಗಳು ಬಲಿಷ್ಠ, ದೀರ್ಘಕಾಲಿಕ, ಪರಿಸರ ಸ್ನೇಹಿ ಹಾಗೂ ಅಲಂಕಾರಿಕ ಗುಣಗಳನ್ನು ಹೊಂದಿರುವುದರಿಂದ ಇವುಗಳು ದೇಶಾದ್ಯಂತ ಜನಪ್ರಿಯವಾಗಿವೆ. ಉಪ ಹಿಮಾಲಯ ರಾಜ್ಯಗಳಲ್ಲಿ ಡಚ್ ಮ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ನಿಗಮದ 35 ಉತ್ಪಾದನಾ ಘಟಕಗಳಲ್ಲಿ ಮುಖ್ಯಮಂತ್ರಿಗಳ ಆಶಯದಂತೆ, ನಿಗಮದ ಉತ್ಪನ್ನಗಳ ಮಾರಾಟ ಹೆಚ್ಚಿಸಲು ವೆಬ್‌ಸೈಟ್ ಸಿದ್ಧಪಡಿಸಿ ಇದರೊಂದಿಗೆ ಖಾಸಗಿ ಸಹಭಾಗಿತ್ವದಲ್ಲಿ ಡಿಜಿಟಲ್ ಮಾರಾಟಕ್ಕೂ ಒಪ್ಪಂದ ಮಾಡಿಕೊಂಡಿದ್ದು, ಮಾರಾಟವನ್ನು ಉತ್ತೇಜಿಸಲು ಕ್ರಮ ವಹಿಸಲಾಗುತ್ತಿದೆ ಎಂದು ನಟರಾಜ್ ತಿಳಿಸಿದರು.

ಮಮತಾಗೆ ಛೀಮಾರಿ

ಪುಟ ೧➡ **ಅಭ್ಯರ್ಥಿಗಳಿಗೆ ಇಡಿ ಆತಂಕ:** ಒಂದೆಡೆ ನ್ಯಾಯಾಂಗದ ಛೀಮಾರಿ, ಇನ್ನೊಂದೆಡೆ ಕೇಂದ್ರ ತನಿಖಾ ಸಂಸ್ಥೆಗಳ ಕಾನೂನು ಕ್ರಮಗಳು ಟಿಎಂಸಿ ನಾಯಕರಿಗೆ ಸಂಕಷ್ಟ ತಂದಿವೆ. ಬಿಧಾನ್ ನಗರ ಕ್ಷೇತ್ರದ ಅಭ್ಯರ್ಥಿ ಸುಜಿತ್ ಬೋಸ್ ಹಾಗೂ ಮಧ್ಯಮಗ್ರಾಮದ ರತಿನ್ ಘೋಷ್ ಅವರಿಗೆ ಇಡಿ ನಾಲ್ಕನೇ ಬಾರಿ ಸಮನ್ಸ್ ನೀಡಿದೆ. ಏಪ್ರಿಲ್ 24ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿರುವುದರಿಂದ ಪಕ್ಷದೊಳಗೆ ಆತಂಕ ಹೆಚ್ಚಿಸಿದೆ.



ಈ ಬೆಳವಣಿಗೆ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಏನಿದು ಐ-ಪ್ಯಾಕ್ ಪ್ರಕರಣ?: ಜನವರಿ 8ರಂದು ಕೋಲ್ಕತ್ತಾದಲ್ಲಿ ಇಂಡಿಯನ್ ಪೊಲಿಟಿಕಲ್ ಆ್ಯಕ್ಷನ್ ಕಮಿಟಿ (ಐ-ಪ್ಯಾಕ್) ಸಹ-ಸಂಸ್ಥಾಪಕ ಪ್ರತೀಕ್ ಜೈನ್ ನಿವಾಸದ ಮೇಲೆ ಇಡಿ ದಾಳಿ ನಡೆಸಿತ್ತು. ಉದ್ಯಮಿ ಅನುಪ್ ಮಜೀಗೆ ಸಂಬಂಧಿಸಿದ ಕಲ್ಲಿದ್ದಲು ಕಳ್ಳಸಾಗಣೆ ಹಾಗೂ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಈ ಕಾರ್ಯಾಚರಣೆ ನಡೆದಿತ್ತು. ದಾಳಿಯ ಸಮಯದಲ್ಲಿ ಮಮತಾ ಬ್ಯಾನರ್ಜಿ ಸ್ಥಳಕ್ಕೆ ತೆರಳಿ, ಇಡಿ ವಶದಲ್ಲಿದ್ದ ಕೆಲವು ದಾಖಲೆಗಳು ಹಾಗೂ ಎಲೆಕ್ಟ್ರಾನಿಕ್ ಸಾಧನಗಳನ್ನು ತೆಗೆದುಕೊಂಡು ಹೋಗಿ ತನಿಖೆಗೆ ಅಡ್ಡಿಪಡಿಸಿದ್ದಾರೆ ಎಂಬ ಆರೋಪವನ್ನು ಇಡಿ ಮಾಡಿದೆ. ಆದರೆ, ಈ ಆರೋಪಗಳನ್ನು ತಳ್ಳಿಹಾಕಿರುವ ಮಮತಾ, ಇಡಿ ರಾಜಕೀಯಪ್ರೇರಿತ ಕ್ರಮ ಕೈಗೊಳ್ಳುತ್ತಿದೆ ಎಂದು ವಾದಿಸಿದ್ದಾರೆ. ವಶಪಡಿಸಿಕೊಂಡ ದಾಖಲೆಗಳು 2019ರ ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದ್ದೇ ಹೊರತು ಯಾವುದೇ ಹಗರಣಕ್ಕೆ ಸಂಬಂಧಿಸಿದವು ಅಲ್ಲ ಎಂದು ಅವರು ಹೇಳಿದ್ದಾರೆ.

ಹಾರ್ಮುಜ್ ಉದ್ವಿಗ್ನ

ಪುಟ ೧➡ **ರಾಜತಾಂತ್ರಿಕ ಬಿಕ್ಕಟ್ಟು:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಅಂತ್ಯಗೊಳ್ಳಬೇಕಿದ್ದ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸುವುದಾಗಿ ಘೋಷಿಸಿದ ಬೆನ್ನಲ್ಲೇ ಈ ಘಟನೆ ನಡೆದಿದೆ. ಆದರೆ, ಅಮೆರಿಕ ಇರಾನ್ ಬಂದರುಗಳ ಮೇಲಿನ ದಿಗ್ಬಂಧನವನ್ನು ಮುಂದುವರಿಸಿದೆ. ಈ ದಿಗ್ಬಂಧನವನ್ನು ತೆರವುಗೊಳಿಸುವವರೆಗೆ ಮಾತುಕತೆಗೆ ಯಾವುದೇ ನಿಯೋಗವನ್ನು ಕಳುಹಿಸುವುದಿಲ್ಲ ಎಂದು ಇರಾನ್ ರಾಜತಾಂತ್ರಿಕ ಮೊಜ್ತಬಾ ಫೆರ್ದೌಸಿ ಪೋರ್ ತಿಳಿಸಿದ್ದಾರೆ.

ಆರ್ಥಿಕ ಪರಿಣಾಮಗಳು: ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲದ ಶೇ.20ರಷ್ಟು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುತ್ತದೆ. ಈ ದಾಳಿಯ ನಂತರ, ಬ್ರೆಂಟ್ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್‌ಗೆ 98 ಡಾಲರ್‌ಗಿಂತ ಹೆಚ್ಚಾಗಿದ್ದು, ಯುದ್ಧ ಪ್ರಾರಂಭವಾದಾಗಿನಿಂದ ಶೇ.35 ರಷ್ಟು ಏರಿಕೆ ಕಂಡಿದೆ. ಇಂಧನ ಬೆಲೆ ಏರಿಕೆ, ಜಾಗತಿಕ ಆಹಾರ ಮತ್ತು ಇತರ ಉತ್ಪನ್ನಗಳ ಬೆಲೆಗಳ ಮೇಲೆ ಪರಿಣಾಮ ಬೀರಿದೆ.

ಫೆಬ್ರವರಿ 28ರಂದು ಯುದ್ಧ ಪ್ರಾರಂಭವಾದಾಗಿನಿಂದ ಸಮುದ್ರದಲ್ಲಿ 30ಕ್ಕೂ ಹೆಚ್ಚು ದಾಳಿಗಳು ನಡೆದಿವೆ. ಈ ಸಂಘರ್ಷದಲ್ಲಿ ಇರಾನ್‌ನಲ್ಲಿ 3,375 ಮತ್ತು ಲೆಬನಾನ್‌ನಲ್ಲಿ 2,290 ಜನರು ಸಾವನ್ನಪ್ಪಿದ್ದಾರೆ. ಕದನ ವಿರಾಮದ ಅಂಗವಾಗಿ ವೈಮಾನಿಕ ದಾಳಿಗಳನ್ನು ನಿಲ್ಲಿಸಿದ್ದರೂ, ಪ್ರಾದೇಶಿಕ ಆಸ್ತಿಗಳ ಮೇಲೆ ಮತ್ತಷ್ಟು ದಾಳಿ ನಡೆಸುವುದಾಗಿ ರೆವಲ್ಯೂಷನರಿ ಗಾರ್ಡ್ ಎಚ್ಚರಿಸಿದೆ. ಲೆಬನಾನ್‌ನಲ್ಲಿ ಇಸ್ರೇಲಿ ಡ್ರೋನ್ ದಾಳಿಯಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದ್ದರೂ ಇಸ್ರೇಲ್ ಇದನ್ನು ನಿರಾಕರಿಸಿದೆ.

ಇರಾನ್‌ಗೆ ಭಾರತ ಪಾವತಿಸಿಲ್ಲ

ಪುಟ ೧➡ ಸನ್ಮಾರ್ ಹೆರಾಲ್ಡ್ ಹಡಗಿನ ಕ್ಯಾಪ್ಟನ್ ದಾಳಿ ನಿಲ್ಲಿಸಲು ವಿನಂತಿಸಿದ್ದ ಆಡಿಯೋ ವೈರಲ್ ಆಗಿದೆ. ಈ ಘಟನೆ ನಂತರದ ವರದಿಗಳನ್ನು ಸರ್ಕಾರ ತಳ್ಳಿಹಾಕಿದ್ದು, ಯಾವುದೇ ಹಣ ಪಾವತಿ ನಡೆದಿಲ್ಲ ಎಂದು ಹೇಳಿದೆ. ಬಂದರು, ನೌಕಾಯಾನ ಸಚಿವಾಲಯದ ಅಧಿಕಾರಿ ಮುಕೇಶ್ ಮಂಗಲ್ ಇದನ್ನು ಸುಳ್ಳು ಸುದ್ದಿ ಎಂದು ಹೇಳಿದ್ದಾರೆ. ಕೆಲವು ವರದಿಗಳ ಪ್ರಕಾರ, ಮೋಸಗಾರರು ಹಡಗು ಮಾಲೀಕರಿಗೆ ಸುರಕ್ಷಿತ ಮಾರ್ಗದ ಭರವಸೆ ನೀಡಿ ಕ್ರಿಪ್ಟೋ ಹಣ ಕೇಳುತ್ತಿದ್ದಾರೆ. ಆದರೆ ಚೆನ್ನೈ ಮೂಲದ ಸನ್ಮಾರ್ ಶಿಪ್ಪಿಂಗ್ ಕೂಡ ಯಾವುದೇ ಪಾವತಿ ನಡೆದಿಲ್ಲ ಎಂದು ತಿಳಿಸಿದೆ. ಪರ್ಷಿಯನ್ ಕೊಲ್ಲಿಯಲ್ಲಿ ಉದ್ಭವಿಸಿದ ಸಂಘರ್ಷದಿಂದ ಹಲವಾರು ಹಡಗುಗಳು ಸಿಲುಕಿಕೊಂಡಿದ್ದು, ಜಾಗತಿಕ ಇಂಧನ ಸರಬರಾಜಿನ ಮೇಲೆ ಪರಿಣಾಮ ಬೀರಿದೆ.

ಮೋದಿ ಟೆರರಿಸ್ಟ್ ಎಂದ ಖರ್ಗೆಗೆ ಇಸಿ ನೋಟಿಸ್

ಪುಟ ೧➡ ಅವರು ಪ್ರಜಾತಂತ್ರವನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದ ಬೆನ್ನಲ್ಲೇ, ಈ ಕ್ರಮ ಕೈಗೊಳ್ಳಲಾಗಿದೆ. ಹಿರಿಯ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಕಿರಣ್ ರಿಜಿಜು ಅವರನ್ನೊಳಗೊಂಡ ಬಿಜೆಪಿ ನಿಯೋಗ ಬುಧವಾರ ಚುನಾವಣಾ ಆಯೋಗವನ್ನು ಭೇಟಿ ಮಾಡಿ ದೂರು ನೀಡಿತ್ತು.

ಒಂದೂವರೆ ಗಂಟೆ ತಡವಾಗಿ ಫ್ಲೈ91 ವಿಮಾನ ಭೂ ಸ್ಪರ್ಶ

ಹುಬ್ಬಳ್ಳಿ: ಬೆಂಗಳೂರಿನಿಂದ ಹುಬ್ಬಳ್ಳಿಗೆ ಮಂಗಳವಾರ ಸಂಜೆ 6.45ಕ್ಕೆ ಹೊರಟಿದ್ದ ಹೊರಟಿದ್ದ ಫ್ಲೈ91 ವಿಮಾನವು ಹವಾಮಾನ ವೈಪರಿತ್ಯದಿಂದಾಗಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಒಂದೂವರೆ ಗಂಟೆ ತಡವಾಗಿ ಭೂ ಸ್ಪರ್ಶ ಮಾಡಿದೆ.

ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾತ್ರಿ 8.15ಕ್ಕೆ ಭೂ ಸ್ಪರ್ಶ ಮಾಡಬೇಕಿತ್ತು. ಪ್ರಕ್ಷುಬ್ಧ ಹವಾಮಾನದಿಂದಾಗಿ ರಾತ್ರಿ 9.40ಕ್ಕೆ ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿದೆ. 21 ಮಂದಿ ಪ್ರಯಾಣಿಕರು ಇದ್ದರು ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏ. 19ರಂದು ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೊರಟಿದ್ದ ಫ್ಲೈ91 ವಿಮಾನವು ಸಹ, ಹವಾಮಾನ ವೈಪರೀತ್ಯದಿಂದಾಗಿ ಮೂರು ಗಂಟೆಗೂ ಹೆಚ್ಚು ಕಾಲ ಆಕಾಶದಲ್ಲಿಯೇ ಹಾರಾಡಿ, ನಂತರ ಬೆಂಗಳೂರಿನಲ್ಲಿ ಸುರಕ್ಷಿತವಾಗಿ ಭೂ ಸ್ಪರ್ಶಮಾಡಿತ್ತು.

ವಿದ್ವಾನ್ ನಾಗಭೂಷಣ್‌ಗೆ ಡಾಕ್ಟರೇಟ್ ಪ್ರದಾನ



ಬೆಂಗಳೂರು: ತಬಲ ವಾದ್ಯದ ಹಿನ್ನಲೆ ಹಾಗೂ ತಬಲಾ ಕಲಾವಿದರು ಎಂಬ ಪ್ರಬಂಧಕ್ಕೆ ವಿದ್ವಾನ್ ಶ್ರೀ ನಾಗಭೂಷಣ್ ಅವರಿಗೆ ಶ್ರೀ ವಿದ್ಯಾ ಅಂತಾರಾಷ್ಟ್ರೀಯ ವೇದ ವಿಜ್ಞಾನ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿದೆ.

ಬನಶಂಕರಿಯ ಗಾನಲಿಂಗ ಶಿವಯೋಗಿ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀವಿದ್ಯಾ ಅಂತಾರಾಷ್ಟ್ರೀಯ ವೇದ ವಿಜ್ಞಾನ ವಿಶ್ವವಿದ್ಯಾಲಯ ಹಾಗೂ ಶ್ರೀವಿದ್ಯಾ ವಿಶ್ವ ಸಂಶೋಧನಾ ಪ್ರತಿಷ್ಠಾನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪ್ರಧಾನ ಮಾಡಲಾಯಿತು. ಶ್ರೀ ಶಂಕರ ಕ್ಯಾನ್ಸರ್ ಹಾಸ್ಪಿಟಲ್ ಡಾ.ಬಿ.ಎಸ್.ಶ್ರೀನಾಥ್, ರಾಮಕೃಷ್ಣ ಆಶ್ರಮದ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮಿಜೀ, ವಿಶ್ವ ವಿದ್ಯಾಲಯದ ಡಾ.ನರಸಿಂಹಮೂರ್ತಿ, ಡಾ.ಶ್ರೀನಿವಾಸಮೂರ್ತಿ ಹಾಗೂ ಡಾ.ಅರ್ಚನ ಉಪಸ್ಥಿತರಿದ್ದರು.

ನಿವೃತ್ತಿ ಹೊಸ್ತಿಲಲ್ಲಿ ಸಾಧನೆ ರೂವಾರಿ ಡಾ.ಡಿ.ಕೆ.ಸುನೀಲ್

ಪುಟ ೧➡ ಅಂದರೆ, ನಾವು ಎಚ್‌ಎಎಲ್ ಸಾಮರ್ಥ್ಯವನ್ನು ವಿಸ್ತರಿಸಿದ್ದೇವೆ. ಆರ್ಥಿಕ ಸ್ಥಿರತೆ ಮತ್ತು ಕಾರ್ಯಾಚರಣೆಯನ್ನು ಬಲಗೊಳಿಸಿದ್ದೇವೆ.

▸ ಈ ಅವಧಿಯಲ್ಲಿ ಎದುರಿಸಿದ ಸವಾಲುಗಳನ್ನು ಹೇಳುವುದಾದರೆ?

ಸವಾಲುಗಳೆಂದರೆ ಕೋಸ್ಟ್ ಗಾರ್ಡ್‌ನ ಒಂದು ಹೆಲಿ ಕಾಪ್ಟರ್ ಪತನವಾಗಿತ್ತು. ಇದರಿಂದ ನಮ್ಮ ಬಗ್ಗೆ ಬಹಳಷ್ಟು ನಕಾರಾತ್ಮಕ ಅಭಿಪ್ರಾಯ ವ್ಯಕ್ತವಾಯಿತು. ಅದರ ವಿನ್ಯಾಸ ಅಧ್ಯಯನ ಮಾಡಿ, ಚರ್ಚೆ ನಡೆಸಿ ಅದಕ್ಕೊಂದು ಪರಿಹಾರ ಕಂಡುಕೊಂಡಿದ್ದೇವೆ. ಅಲ್ಲದೆ, ಎಲ್‌ಸಿಎಗೆ ಅಗತ್ಯವಿರುವ ಎಂಜಿನ್ ನಮಗೆ ಸರಬರಾಜು ಆಗದೇ ಇರುವುದು ಕೂಡ ಸವಾಲಿನ ಸಂಗತಿಯಾಗಿತ್ತು. ಈಗಲೂ ಎಂಜಿನ್ ಬಂದಿಲ್ಲ, ಐದು ಎಂಜಿನ್‌ಗಳಷ್ಟೇ ಬಂದಿವೆ. ಜಿಇ ದೈತ್ಯ ಕಂಪನಿ, ನಮಗೆ ಅದರ ಮೇಲೆ ನಿಯಂತ್ರಣವಿಲ್ಲ. ಆದರೂ ಸಾರ್ವಜನಿಕವಾಗಿ ನಾವು ಟೀಕೆಗೊಳಗಾಗುತ್ತಲೇ ಇದ್ದೇವೆ. ಎಚ್‌ಎಎಲ್ ಹೆಮ್ಮೆ ಎನ್ನುವುದು ಎಲ್ಲರಿಗೂ ಗೊತ್ತಿದೆ, ಅದೇ ರೀತಿ ಎಚ್‌ಎಎಲ್ ಮೇಲೆ ಇಂತಹ ವಾಗ್ದಾಳಿ ಮಾಡುವವರೂ ತುಂಬಾ ಜನರಿದ್ದಾರೆ. ಇದನ್ನು ನಾವು ನಿರ್ವಹಣೆ ಮಾಡಲೇಬೇಕಿತ್ತು. ಸ್ವಲ್ಪ ಮಟ್ಟದಲ್ಲಿ ನಿರ್ವಹಣೆ ಮಾಡಿದ್ದೇವೆ. ನಮ್ಮಲ್ಲಿ 21 ವಿಮಾನಗಳು ಸಿದ್ಧವಾಗಿವೆ. ಆದರೆ, ಎಂಜಿನ್‌ಗಳಿಲ್ಲ. ಏನೂ ಮಾಡುವುದಕ್ಕಾಗುತ್ತಿಲ್ಲ.

▸ ಎಚ್‌ಎಎಲ್ ಇಂಡಿಜಿನಸ್ ಕಂಟೆಂಟ್‌ನಲ್ಲಿ ಎಷ್ಟು ಪ್ರಗತಿ ಸಾಧಿಸಿದೆ?

ನಮ್ಮ ಪ್ರಾಡಕ್ಟ್ ರೇಂಜ್ ನೋಡಿದರೆ, ಕಾನ್ಪುರ ಘಟಕದಲ್ಲಿ ವೇಗವರ್ಧಕಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಧ್ರುವ್, ಪ್ರಚಂಡ್, ಎಲ್‌ಯುಎಚ್, ಎಚ್‌ಟಿಟಿ-40, ಎಲ್‌ಸಿಎ ಎಂಕೆ1, ಎಲ್‌ಸಿಎ ಎಂಕೆ1ಎ ಹೀಗೆ ನಾವು ಸ್ಥಳೀಯವಾಗಿ ಅಭಿವೃದ್ಧಿಪಡಿಸಿ ಉತ್ಪಾದನೆ ಮಾಡುತ್ತಿದ್ದೇವೆ. ನಮ್ಮ ಭವಿಷ್ಯದ ಬೆಳವಣಿಗೆ ನಾವು ವಿನ್ಯಾಸಗೊಳಿಸಿದ ನಮ್ಮ ಉತ್ಪನ್ನಗಳಿಂದಲೇ ಬರುತ್ತದೆ.

▸ ಎಚ್‌ಎಎಲ್ ಉತ್ಪನ್ನಗಳನ್ನು ಸ್ಥಳೀಯವಾಗಿ ಎಷ್ಟೇ ವಿನ್ಯಾಸ ಅಭಿವೃದ್ಧಿಗೊಳಿಸಿದರೂ ಇಂಜಿನ್‌ಗಾಗಿ ಬೇರೆಯವರತ್ತ ನೋಡಬೇಕಾಗಿದೆ. ಇದಕ್ಕೆ ಪರಿಹಾರವೇನು?

ಎಚ್‌ಎಎಲ್‌ನಲ್ಲಿ ಏರೋ ಇಂಜಿನ್ ಆರ್ ಆ್ಯಂಡ್ ಡಿ (ಸಂಶೋಧನೆ ಮತ್ತು ಅಭಿವೃದ್ಧಿ) ಸೆಕ್ಟರ್ ಇದೆ. ಅಲ್ಲಿ ಸ್ಟಾರ್ಟರ್ ಎಂಜಿನ್‌ಗಳ ಅಭಿವೃದ್ಧಿ ಮಾಡುತ್ತೇವೆ. ಜಿಇ ಇಂಜಿನ್‌ಗೂ ನಾವೇ ಸ್ಟಾರ್ಟರ್ ಇಂಜಿನ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದ್ದೇವೆ. ಅದು ಯಶಸ್ವಿಯಾಗಿದೆ. ಎಎನ್32 ಎನ್ನುವ ರಷ್ಯನ್ ವಿಮಾನಕ್ಕೆ ಸ್ಟಾರ್ಟರ್ ಇಂಜಿನ್ ಮಾಡಿದ್ದೇವೆ, ಅದೂ ಯಶಸ್ವಿಯಾಗಿದೆ. ಸುಮಾರು ಸಣ್ಣ ಸ್ಟಾರ್ಟರ್ ಇಂಜಿನ್‌ಗಳನ್ನು ನಾವು ವಿನ್ಯಾಸಗೊಳಿಸಿ, ಅಭಿವೃದ್ಧಿ ಮಾಡಿದ್ದೇವೆ. ಪ್ರಸಕ್ತ ಎರಡು ಇಂಜಿನ್‌ಗಳ ವಿನ್ಯಾಸ ನಡೆಯುತ್ತಿದೆ. ಅದರಲ್ಲಿ ಒಂದು ಹೆಲಿಕಾಪ್ಟರ್ ಇಂಜಿನ್, ಇನ್ನೊಂದು ಫೈಟರ್ (ತರಬೇತಿ ವಿಮಾನ) ಇಂಜಿನ್. ಮುಂದಿನ 3-4 ವರ್ಷಗಳಲ್ಲಿ ಇವುಗಳಿಗೆ ಪ್ರಮಾಣಪತ್ರ ಲಭಿಸಿ, ಉತ್ಪಾದನೆ ಸಾಧ್ಯವಾಗಲಿದೆ. ಅದು ಎಲ್‌ಸಿಎಗೆ ಬಳಸುವಷ್ಟು ಸಾಮರ್ಥ್ಯದಲ್ಲ; ಹಾಕ್, ಯಶಸ್ ರೇಂಜ್‌ನ ವಿಮಾನಗಳಿಗೆ ಬಳಸುವ 25 ಕಿಲೋ ನ್ಯೂಟನ್ ಸಾಮರ್ಥ್ಯದ ಎಂಜಿನ್ ಇದಾಗಲಿದೆ. ದೊಡ್ಡ ಇಂಜಿನ್‌ಗಳನ್ನು ಜಿಟಿಆರ್‌ಇ (ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್ಮೆಂಟ್) ಸಂಸ್ಥೆಯವರು ಮಾಡುತ್ತಿದ್ದಾರೆ.

▸ ಉತ್ಪಾದನಾ ಸಮಯ ಕಡಿಮೆ ಮಾಡಬೇಕೆಂಬ ರಕ್ಷಣಾ ಸಚಿವರ ಕರೆಯನ್ನು ಎಚ್‌ಎಎಲ್ ಯಾವ ರೀತಿ ಸ್ವೀಕರಿಸಿದೆ? ಏನೆಲ್ಲ ಕ್ರಮ ತೆಗೆದುಕೊಂಡಿದೆ?

ರಕ್ಷಣಾ ಸಚಿವರು ಉತ್ಪಾದನೆಯನ್ನು ತ್ವರಿತವಾಗಿ ಮಾಡಬೇಕೆಂದು ಕರೆಕೊಟ್ಟಿದ್ದಾರೆ. ಅದಕ್ಕಾಗಿ ನಾವು ತೇಜಸ್ ವಿಮಾನ ಉತ್ಪಾದನೆಗಾಗಿ ನಾಸಿಕ್‌ನಲ್ಲಿ ಮೂರನೇ ಘಟಕವನ್ನು ತೆರೆದಿದ್ದೇವೆ. ಇದರಿಂದ ವರ್ಷಕ್ಕೆ 24 ವಿಮಾನಗಳನ್ನು ಎಚ್‌ಎಎಲ್ ಪೂರೈಕೆ ಮಾಡಬಹುದಾಗಿದೆ. ಮುಂದಿನ ಏಳೆಂಟು ವರ್ಷಗಳಲ್ಲಿ ಆರ್ಡರ್ ಪೂರೈಕೆ ಮಾಡಲು ಸಾಧ್ಯವಾಗಲಿದೆ. ತ್ವರಿತ ಉತ್ಪಾದನೆಗಾಗಿ ಕೆಲವು ಭಾಗಗಳು, ಜೋಡಣೆ ಇತ್ಯಾದಿಗಳಾಗಿ ಖಾಸಗಿ ವಲಯದ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಮುಂದುವರಿಯುತ್ತಿದ್ದೇವೆ. ಇದರಿಂದ ಉತ್ಪಾದನೆಯ ವೇಗವರ್ಧನೆಯಾಗುತ್ತದೆ. ಈ ವರ್ಷ ನಾವು 15 ಹೆಲಿಕಾಪ್ಟರ್‌ಗಳನ್ನು ಪೂರೈಸಿದ್ದೇವೆ. ಇನ್ನೂ 13 ಹೆಲಿಕಾಪ್ಟರ್‌ಗಳನ್ನು ಪೂರೈಸುತ್ತೇವೆ.

ಮಹಿಳೆ ಮೇಲೆ ದೌರ್ಜನ್ಯ: ವರದಿ ಸಲ್ಲಿಸಲು ಸೂಚನೆ

ಬೆಂಗಳೂರು: ಕೊಡಗು ಜಿಲ್ಲೆಯ ಕುಟ್ಟ ಪ್ರದೇಶದಲ್ಲಿರುವ ಖಾಸಗಿ ಹೋಂಸ್ಟೇಯಲ್ಲಿ ಅಮೆರಿಕಾ ಮೂಲದ ಮಹಿಳೆಯೊಬ್ಬರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣದ ಕುರಿತು ಶೀಘ್ರವೇ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್. ಭೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಚಿವರು, ಪ್ರಕರಣದ ವಿವರಗಳನ್ನು ಪಡೆದುಕೊಂಡರು. ಈ ಕೃತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಫ್‌ಐಆರ್ ದಾಖಲಾಗಿದ್ದು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಲಾಗಿದೆ. ಕೊಡಗು ಜಿಲ್ಲೆಯು ಪ್ರವಾಸೋದ್ಯಮಕ್ಕೆ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿದೆ. ಪ್ರವಾಸೋದ್ಯಮದ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕಾಂಗ್ರೆಸ್‌ನಿಂದಲೇ ಮಹಿಳಾ ಮೀಸಲಿಗೆ ವಿರೋಧ: ಈಶ್ವರಪ್ಪ

ಶಿವಮೊಗ್ಗ: ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ಎಲ್ಲಾ ಕಾಲದಲ್ಲೂ ವಿರೋಧಿಸುತ್ತಲೇ ಬಂದಿದ್ದು, ಈಗಲೂ ಅದೇ ಕೆಲಸ ಮಾಡಿದೆ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು.



ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಇಂಡಿ ಕೂಟ ಸೋಲಿಸುವ ಮೂಲಕ ತಾವು ಮಹಿಳಾ ವಿರೋಧಿಗಳು ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಕಾಂಗ್ರೆಸ್ 60 ವರ್ಷ ಆಡಳಿತ ನಡೆಸಿದರೂ ಮಹಿಳಾ ಮೀಸಲಾತಿ ಕಲ್ಪಿಸಿಲ್ಲ ಎಂದರು.

ವಾಜಪೇಯಿ ಸರ್ಕಾರದಲ್ಲಿಯೂ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಲಾಗಿತ್ತು. ರಾಜ್ಯಸಭೆಯಲ್ಲಿ ಮಸೂದೆ ಅಂಗೀಕಾರವಾಗಿತ್ತು. ಆದರೆ ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸದೆ ಕಾಂಗ್ರೆಸ್ ಅನ್ಯಾಯ ಮಾಡಿರುವುದು ಇತಿಹಾಸ. ಈಗಲೂ ಅದನ್ನೇ ಮಾಡಿದೆ ಎಂದು ದೂರಿದರು. ಕಾಯ್ದೆಯಲ್ಲಿ ಮುಸ್ಲಿಂ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎನ್ನುವುದು ಸಂವಿಧಾನ ವಿರೋಧಿಯಾಗಿದೆ. ಧರ್ಮಾಧಾರಿತ ಮೀಸಲಾತಿಗೆ ಅವಕಾಶವಿಲ್ಲ ಎಂದು ಸಂವಿಧಾನದಲ್ಲೇ ಹೇಳಲಾಗಿದೆ. ಆದರೂ ಕೂಡಾ ಮುಸ್ಲಿಮರನ್ನು ಓಲೈಸುವ ಹಠಕ್ಕೆ ಕಾಂಗ್ರೆಸ್ ಬಿದ್ದಿದೆ ಎಂದರು.

ಆರ್‌ಎಸ್‌ಎಸ್ ನಿಂದಿಸಿದವರು ಎಂದಿಗೂ ಉದ್ಧಾರವಾಗಿಲ್ಲ. ಆದರೂ ಮಲ್ಲಿಕಾರ್ಜುನ ಖರ್ಗೆಯವರು ಆರ್‌ಎಸ್‌ಎಸ್‌ನ್ನು ನಿಂದಿಸುತ್ತಿದ್ದಾರೆ. ಜಗತ್ತೇ ಮೆಚ್ಚಿರುವ ಪ್ರಧಾನಿ ಮೋದಿಯವರ ಬಗ್ಗೆಯೂ ಹದ್ದು ಮೀರಿ ಮಾತನಾಡುತ್ತಿರುವುದು ಸರಿಯಲ್ಲವೆಂದರು. ಖರ್ಗೆಯವರಾದರೂ ಕೂಡಾ ತಪ್ಪನ್ನು ತಿದ್ದಿಕೊಂಡಿದ್ದಾರೆ. ಆದರೆ ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಆರ್‌ಎಸ್‌ಎಸ್ ಬಗ್ಗೆ ಖರ್ಗೆ ಹೇಳಿದ ಮಾತನ್ನು ನಾನು ಸಮರ್ಥಿಸಿಕೊಳ್ಳುತ್ತೇನೆ ಎಂದಿದ್ದಾರೆ. ಆರ್‌ಎಸ್‌ಎಸ್ ಬಹುದೊಡ್ಡ ಸಂಘಟನೆ ಎಂಬುದು ಕಿಮ್ಮನೆಗೆ ಗೊತ್ತಿರಲಿ ಎಂದರು.

ವಿಶೇಷ ಪೂಜೆ



ಕಟೀಲು ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಬುಧವಾರ ಭಕ್ತರಿಂದ ತೂಟೆದಾರ ಸೇವೆ ಸಲ್ಲಿಸಲಾಯಿತು.

ಯಾವುದೇ ಬೆಟ್ಟಿಂಗ್ ಪ್ರಮೋಟ್ ಮಾಡಿಲ್ಲ: ಸಚಿವ ಪರಮೇಶ್ವರ

ಬೆಂಗಳೂರು: ಬೆಟ್ಟಿಂಗ್ ಕುರಿತಾದ ತಮ್ಮ ಹೇಳಿಕೆಯ ಬಗ್ಗೆ ನ್ಯಾಯಾಲಯದ ಆದೇಶಕ್ಕೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ. ಜಿ.ಪರಮೇಶ್ವರ, ನಾನು ಬೆಟ್ಟಿಂಗ್ ಪ್ರಮೋಟ್ ಮಾಡುವ ವ್ಯಕ್ತಿಯಲ್ಲ, ನನ್ನ ಮಾತನ್ನು ಅರ್ಥೈಸಿಕೊಂಡ ರೀತಿಯಲ್ಲಿ ತಪ್ಪಿದೆ ಎಂದು ಸ್ಪಷ್ಟಪಡಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಹಳ್ಳಿಗಳಲ್ಲಿ ಕಬಡ್ಡಿ ಆಟ ನಡೆಯು ವಾಗ ಸಹಜವಾಗಿ ಮಾತನಾಡುವಂತೆ ನಾನು ಹೇಳಿದ್ದೇನೆ. ಕಾನೂನು ದೃಷ್ಟಿಯಿಂದ ಅದು ತಪ್ಪಿರ ಬಹುದು, ಆದರೆ ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾನು ಬೆಟ್ಟಿಂಗ್ ಪ್ರೋತ್ಸಾಹಿ ಸುತ್ತೇನೆ ಎನ್ನುವುದು ಶುದ್ಧ ಸುಳ್ಳು. ಈಗಿನ ಪರಿಸ್ಥಿತಿಯಲ್ಲಿ ತಮಾಷೆ ಕೂಡ ಮಾಡುವಂತಿಲ್ಲ ಎಂಬಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೋರ್ಟ್ ನಿಂದ ನನಗೆ ಯಾವುದೇ ನೋಟಿಸ್ ಬಂದಿರಲಿಲ್ಲ, ನೋಟಿಸ್ ಬಂದಿದ್ದರೆ ನನ್ನ ನಿಲುವನ್ನು ಮನವರಿಕೆ ಮಾಡಿಕೊಡುತ್ತಿದ್ದೆ. ಏಕಾಏಕಿ ಆದೇಶ ಮಾಡಲಾಗಿದೆ. ಆದರೂ ಕಾನೂನಿಗೆ ಗೌರವ ಕೊಡುವ ವ್ಯಕ್ತಿಯಾಗಿ ನಾನು ಮುಂದಿನ ಕ್ರಮಕ್ಕೆ ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಕೊಡಗು ಹೋಮ್ ಸ್ಟೇ ಘಟನೆಗೆ ಕಠಿಣ ಕ್ರಮ: ಕೊಡಗಿನ ಹೋಮ್‌ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ನಡೆದ ಅತ್ಯಾಚಾರ ಪ್ರಕರಣದ ಬಗ್ಗೆ ಪರಮೇಶ್ವರ ಮಾಹಿತಿ ನೀಡಿ, ಘಟನೆ ತಿಳಿದ ತಕ್ಷಣ ಪೊಲೀಸರು ಕ್ರಮ ಕೈಗೊಂಡು ಜಾರ್ಖಂಡ್ ಮೂಲದ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹೋಮ್ ಸ್ಟೇಗಳು ಸರ್ಕಾರ ನೀಡಿರುವ ಎಸ್‌ಒಪಿ ಮತ್ತು ಲೈಸೆನ್ಸ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇಂತಹ ಘಟನೆ ಗಳು ಜಾಗತಿಕ ಮಟ್ಟದಲ್ಲಿ ರಾಜ್ಯದ ಬಗ್ಗೆ ತಪ್ಪು ಸಂದೇಶ ರವಾನಿಸುತ್ತವೆ. ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದರೆ ಅಥವಾ ನಿಯಮ ಉಲ್ಲಂಘಿಸಿದರೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

ಕಿರುಸುದ್ದಿ

ಪಿಎಸ್‌ಐ, ಓರ್ವ ಸಿಬ್ಬಂದಿ ಲೋಕಾಯುಕ್ತ ಬಲೆಗೆ

ಬಾಗಲಕೋಟೆ: ಸುಳ್ಳು ಆಪಾದನೆ ಮತ್ತು ಕೇಸ್ ಹಾಕುತ್ತೇನೆ ಎಂದು ಬೆದರಿಸಿ ಲಂಚಕ್ಕೆ ಬೇಡಿಕೆ ಇಟ್ಟು ಜಿಲ್ಲೆಯ ಕೆರೂರ ಪೊಲೀಸ್ ಠಾಣೆಯ ಪಿಎಸ್‌ಐ ಹಾಗೂ ಓರ್ವ ಸಿಬ್ಬಂದಿ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಬಾದಾಮಿ ತಾಲೂಕಿನ ಕೆರೂರ ಪಟ್ಟಣದ ಬೆಳಗಂಟಿ ಗ್ರಾಮದ ಮುತ್ತಪ್ಪ ಹುಲ್ಲಪ್ಪ ನಾಯ್ಕರ ಏ.21ರಂದು ಜಿಲ್ಲಾ ಲೋಕಾಯುಕ್ತ ಪೊಲೀಸ್ ಕಚೇರಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದೆ. ಫಿರ್ಯಾದಿ ಮುತ್ತಪ್ಪ ನಾಯ್ಕರ ಸ್ನೇಹಿತನಾದ ಕೆರೂರಿನ ಶಂಕ್ರಪ್ಪ ನೀಲಪ್ಪ ಬೂದಿಹಾಳನನ್ನು ಏ.17ರಂದು ಕೆರೂರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಠಾಣೆಯಲ್ಲಿ ಅಧಿಕಾರಿಗಳು ವಿಚಾರಣೆ ಮಾಡುತ್ತಾ ಇಸ್ಪೇಟ್ ಆಡಿಸುತ್ತಿದ್ದೀಯಾ, ಬಡ್ಡಿ ಆಡುತ್ತಿದ್ದೀಯಾ ಎಂದು ಸುಳ್ಳು ಆಪಾದನೆ ಮಾಡಿ ನಿನ್ನ ಮೇಲೆ ಕೇಸ್ ದಾಖಲಾಗುತ್ತದೆ ಎಂದು ಹೆದರಿಸಿ 1,70,000 ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಏ.18ರಂದು ಶಂಕ್ರಪ್ಪನನ್ನು ಠಾಣೆಯಿಂದ ಕಳುಹಿಸಿ ಲಂಚದ ಬೇಡಿಕೆ ಹಣವನ್ನು ಕೊಟ್ಟು ನಿನ್ನ ಬೈಕ್ ತೆಗೆದುಕೊಂಡು ಹೋಗಲು ತಿಳಿಸಿದ್ದರು ಎಂದು ಫಿರ್ಯಾದಿದಾರರು ಬಾಗಲಕೋಟೆ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ದೂರಿನ ಮೇರೆಗೆ ಲಂಚದ ಪ್ರಕರಣದಲ್ಲಿ ಭಾಗಿಯಾಗಿದ್ದ ಕೆರೂರ ಪೊಲೀಸ್ ಠಾಣೆಯ ಪಿಎಸ್‌ಐ ಭೀಮಪ್ಪ ರಬಕವಿ, ಕಾನ್ಸ್‌ಟೇಬಲ್ ಸಂತೋಷ ಬಿರಾದಾರ ಇವರು ಏ.22ರಂದು ಫಿರ್ಯಾದಿಯಿಂದ 1,70,000 ರೂ. ಸ್ವೀಕರಿಸುವಾಗ ಲೋಕಾಯುಕ್ತ ಬಲಗೆ ಬಿದ್ದಿದ್ದಾರೆ.

ಅಭಿಪ್ರಾಯ ವ್ಯಕ್ತಪಡಿಸಲು ಅರ್ಜಿ

ಬೆಂಗಳೂರು: ರಾಜ್ಯ ಸರ್ಕಾರ ರಚಿಸಿದ್ದ ಸಂಪನ್ಮೂಲ ಸಂಗ್ರಹ ಸಮಿತಿಯು ಮದ್ಯದ ಅಂಶದ ಆಧಾರದ ಮೇಲೆ ತೆರಿಗೆ ವಿಧಿಸುವ ವ್ಯವಸ್ಥೆಗೆ ಶಿಫಾರಸ್ಸು ಮಾಡಿದ್ದು, ಈ ಶಿಫಾರಸ್ಸಿನ ಸಮಾಲೋಚನೆಗೆ ಉದ್ಯಮ ಕ್ಷೇತ್ರದ ಪ್ರತಿನಿಧಿಗಳು, ಸಾರ್ವಜನಿಕ ಆರೋಗ್ಯ ತಜ್ಞರು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ನಾಗರಿಕರು ಸೇರಿದಂತೆ ಎಲ್ಲಾ ಆಸಕ್ತ ಪಾಲುದಾರರು ವರದಿಯನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯಗಳನ್ನು spobud&fdkarnataka.gov.inಗೆ ಕಳುಹಿಸಲು ಆಹ್ವಾನಿಸಲಾಗಿದೆ. ಪಾಲುದಾರರು ತಮ್ಮ ಅಭಿಪ್ರಾಯಗಳನ್ನು 22 ಮೇ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕಿದ್ದು, ಸಮಿತಿಯ ಈ ವರದಿಯ ಸಂಪೂರ್ಣ ಮಾಹಿತಿಗೆ ಹಾಗೂ ಸಮಾಲೋಚನೆಗಾಗಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ವೆಬ್‌ಸೈಟ್ finance.karnataka.gov.inನಲ್ಲಿ ಲಭ್ಯವಾಗಲಿದೆ ಎಂದು ಅಬಕಾರಿ ಇಲಾಖೆ ಪ್ರಕಟಣೆ ಹೊರಡಿಸಿದೆ.

ನದಿಯಲ್ಲಿ ಮುಳುಗಿ ತಾಯಿ-ಮಗ ಸಾವು

ಸಂಕೇಶ್ವರ: ಹಿರಣ್ಯಕೇಶಿ ನದಿಯಲ್ಲಿ ಮಂಗಳವಾರ ಸಂಭವಿಸಿದ ತಾಯಿ-ಮಗನ ದಾರುಣ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ, ಬಾಲಕ ಸುಪ್ರಿತನ ಶವಕ್ಕಾಗಿ ಅಗ್ನಿಶಾಮಕ ದಳದ ಸಿಬ್ಬಂದಿ ಪೋಲಿಸರು ಕಳೆದ ಎರಡು ದಿನಗಳಿಂದ ಸತತ ಕಾರ್ಯಾಚರಣೆಯು ಮುಂದುವರಿಸಿದ್ದಾರೆ. ಮಂಗಳವಾರ ನದಿಯಲ್ಲಿ ಈಜಲು ತೆರಳಿದ ಮಗನ್ನು ರಕ್ಷಿಸಲು ಹೋದ ತಾಯಿ ಸಹ ನೀರಿನಲ್ಲಿ ಮುಳಗಿ ಮೃತಪಟ್ಟ ಘಟನೆ ಸಂಭವಿಸಿತ್ತು. ಪಟ್ಟಣದ ಹನುಮಾನ ನಗರದ ನಿವಾಸಿಗಳಾದ ಲಕ್ಷ್ಮೀ ಸುಧಾಕರ ಕುಟೋಳಿ (27) ಹಾಗೂ ಅವರ ಪುತ್ರ ಸುಪ್ರಿತ ಸುಧಾಕರ ಕುಟೋಳಿ (9) ಮೃತ ದುರ್ದೈವಿಗಳು. ಮಂಗಳವಾರ ರಾತ್ರಿ ಮಹಿಳೆ ಲಕ್ಷ್ಮೀ ಅವರ ಮೃತದೇಹ ಪತ್ತೆಯಾಗಿದೆ.

ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಮತ

ನಾರೀಶಕ್ತಿ ಪ್ರಗತಿಯ ಪ್ರತೀಕ

ಕಲಬುರಗಿ: ದೇಶದ ನಾರಿ ಶಕ್ತಿಯ ಉದಯವು ಸಮಾನತೆ, ಸಬಲೀಕರಣ ಮತ್ತು ಭವಿಷ್ಯದ ನಾಯಕತ್ವದತ್ತ ಸಾಗುತ್ತಿರುವ ಬಹುದೊಡ್ಡ ಪರಿವರ್ತನೆಯ ಪ್ರತೀಕವಾಗಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.



ಬುಧವಾರ ಕಲಬುರಗಿಯ ಕಡಗಂಚಿ ಬಳಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದ ಅವರು, ಶಿಕ್ಷಣ, ಸಂಶೋಧನೆ, ಆಡಳಿತ, ಉದ್ಯಮಶೀಲತೆ, ನಾವೀನ್ಯತೆ, ಅಂತರಿಕ್ಷ ಸಂಶೋಧನೆ ಹಾಗೂ ಸಶಸ್ತ್ರ ಪಡೆಗಳಲ್ಲಿಯೂ ಮಹಿಳೆಯರು ರಾಷ್ಟ್ರದ ಭವಿಷ್ಯ ರೂಪಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸಂಸತ್ತು ಮತ್ತು ವಿಧಾನ ಸಭೆಗಳಲ್ಲಿ ಮಹಿಳೆಯರ ಪ್ರತಿನಿಧಿತ್ವವೂ ಹೆಚ್ಚಲಿದೆ ಎಂಬ ನಿರೀಕ್ಷೆಯಿದೆ ಎಂದು ಹೇಳಿದರು.

ನಿಮ್ಮ ಶಿಕ್ಷಣ ನಿಮ್ಮ ಮಾರ್ಗದರ್ಶಿಯಾಗಲಿ. ನಿಮ್ಮ ಮೌಲ್ಯಗಳು ನಿಮ್ಮ ಗುರುತಾಗಲಿ. ಯಶಸ್ಸು ವೈಯಕ್ತಿಕ ಲಾಭದಿಂದ ಮಾತ್ರ ಅಳೆಯಲಾಗುವುದಿಲ್ಲ. ನೀವು ಸೃಷ್ಟಿಸುವ ಪರಿಣಾಮವೇ ಅದರ ಮೌಲ್ಯ. ನಿಮ್ಮ ಪ್ರಯತ್ನಗಳಲ್ಲಿ ನೀತಿಪರರಾಗಿರಿ. ಜೀವನದ ಮುಂದಿನ ಅಧ್ಯಾಯಕ್ಕೆ ಕಾಲಿಡುವಾಗ ನಿಮ್ಮನ್ನು ರೂಪಿಸಿದ ಮೌಲ್ಯಗಳನ್ನು ನೆನಪಿಡಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಆಧುನಿಕತೆ ಮತ್ತು ಜಾಗತಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡರೂ ನಮ್ಮ ದೇಶದ ಶ್ರೀಮಂತ ಸಾಂಸ್ಕೃತಿಕ ಮತ್ತು ಬೌದ್ಧಿಕ ಪರಂಪರೆಯನ್ನು ನಾವು ಯಾವತ್ತೂ ಮರೆಯಬಾರದು. ನಿಮ್ಮ ಪೋಷಕರು ನಿಮ್ಮ ಮೊದಲ ಗುರುಗಳು ಅವರು ನೀಡಿದ ಬೆಂಬಲ, ತ್ಯಾಗ ಮತ್ತು ಮಾರ್ಗದರ್ಶನ ಅಮೂಲ್ಯ. ನಿಮ್ಮ ಗುರುಗಳು ನಿಮ್ಮ ಬುದ್ಧಿಯನ್ನು ಬೆಳೆಸಿ, ಸಾಧನೆಗೆ ಪ್ರೇರೇಪಿಸಿದ್ದಾರೆ. ಇವರಿಬ್ಬರಿಗೂ ಗೌರವ ತೋರಿಸುವುದು ನಿಮ್ಮ ಜೀವನ ಪರ್ಯಂತದ ಕರ್ತವ್ಯವಾಗಿದೆ ಎಂದು ಹೇಳಿದರು.

> **ಭಾರತದ ಭವಿಷ್ಯ ಅದರ ಪ್ರಗತಿ ಮತ್ತು ಜಾಗತಿಕ ಸ್ಥಾನಮಾನ ನೀವು ಮಾಡುವ ಆಯ್ಕೆ ಮತ್ತು ಹಿಡಿಯುವ ದಾರಿಯ ಮೇಲೆ ಅವಲಂಬಿತವಾಗಿದೆ. ಆತ್ಮವಿಶ್ವಾಸದಿಂದ ಮುಂದೆ ಸಾಗಿರಿ. ದೊಡ್ಡ ಕನಸು ಕಾಣಿರಿ. ಜವಾಬ್ದಾರಿಯಿಂದ ನಡೆದುಕೊಳ್ಳಿ ಮತ್ತು ವಿಕಸಿತ ಭಾರತ ಹಾಗೂ ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಸಂಪೂರ್ಣವಾಗಿ ಕೊಡುಗೆ ನೀಡಿರಿ. ನಿಮ್ಮ ಭವಿಷ್ಯದ ಪ್ರಯಾಣಕ್ಕೆ ನನ್ನ ಶುಭಾಶಯಗಳು.**
> ■ ಸಿ.ಪಿ.ರಾಧಾಕೃಷ್ಣನ್, ಉಪ ರಾಷ್ಟ್ರಪತಿ

ರಾಜ್ಯಪಾಲ ಥಾವರ್‌ಚಂದ ಗೆಹಲೋತ್ ಮಾತನಾಡಿ, ಕನ್ನಡದಲ್ಲೇ ಎಲ್ಲರಿಗೂ ನಮಸ್ಕಾರ ತಿಳಿಸಿದರು. ಭಾರತದ ಉಜ್ವಲ ಭವಿಷ್ಯ ನನ್ನ ಕಣ್ಣೆದುರಿಗೆ ನೋಡುತ್ತಿರುವುದು ಸೌಭಾಗ್ಯದ ಕ್ಷಣವಾಗಿದೆ. ವರ್ಷದ ಸಂಘರ್ಷ ಹಾಗೂ ನಿಮ್ಮ ಬುದ್ಧಿಕ್ಷಮತೆ ಸಮಾಜಕ್ಕೆ ಹೊಸ ದಿಕ್ಕು ನೀಡಲಿದೆ. ನೀವು ಸಂಪಾದನೆ ಮಾಡಿರುವ ಜ್ಞಾನವನ್ನು ವ್ಯಕ್ತಿಗತದ ಜೊತೆ ಜೊತೆಗೆ ರಾಷ್ಟ್ರಕ್ಕಾಗಿಯೂ ಮೀಸಲಿಡಿ. ದೇಶದ ಅಭಿವೃದ್ಧಿಗೆ ವಿವಿ ತನ್ನ ಯೋಗದಾನ ನೀಡಿದೆ. ವಿಕಾಸದ ಜೊತೆಗೆ ಪರಿಸರ ಸಂರಕ್ಷಣೆ ಕೂಡ ನಮ್ಮ ಕರ್ತವ್ಯವಾಗಿದ್ದು, ವಿಕಸಿತ ಭಾರತ ಸಾಕಾರ ಮಾಡುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ವಾರ್ಷಿಕ ವರದಿ ಮಂಡಿಸಿ, ಸಿಯುಕೆ ದೇಶದ ವೇಗವಾಗಿ ಬೆಳೆಯುತ್ತಿರುವ ವಿವಿಯಾಗಿದೆ. ಕೃಷಿ ಆಧಾರಿತ ಮತ್ತು ಸಮಾಜಮುಖಿ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಈ ಬಾರಿ 197 ಪದವಿ, 547 ಸ್ನಾತಕೋತ್ತರ, 24 ಪಿಎಚ್.ಡಿ ಹಾಗೂ ಓರ್ವ ಎಂ.ಫಿಲ್ ಸೇರಿ ಒಟ್ಟು 769 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು.

ವೇದಿಕೆಯಲ್ಲಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ. ಭರತ್ ಕುಮಾರ್ ಸೇರಿದಂತೆ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಮಾಜಿ ಸಂಸದ ಬಸವರಾಜ್ ಪಾಟೀಲ್ ಸೇಡಂ ಸೇರಿ ವಿವಿಧ ನಿಕಾಯಗಳ ಮುಖ್ಯಸ್ಥರು ಹಾಗೂ ವಿದ್ಯಾರ್ಥಿಗಳು ಸೇರಿ ಅನೇಕರು ಉಪಸ್ಥಿತರಿದ್ದರು.

ವಿಎಚ್‌ಪಿ ಪ್ರ. ಕಾರ್ಯದರ್ಶಿ ಪರಾಂಡೆ ಆತಂಕ

ಐಟಿ ಕಂಪನಿಗಳಿಗೂ ನುಗ್ಗಿದ ಲವ್ ಜಿಹಾದ್

ಹಾಸನ: ಲವ್ ಜಿಹಾದ್ ಕಾರ್ಪೋರೇಟ್ ವಲಯ ಮತ್ತು ಐಟಿ ಕಂಪನಿಗಳ ಹವಾನಿಯಂತ್ರಿತ ಕೊಠಡಿಗಳಿಗೂ ನುಗ್ಗಿದೆ ಎಂದು ವಿಶ್ವ ಹಿಂದು ಪರಿಷತ್ (ವಿಎಚ್‌ಪಿ) ಅಂತಾರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಆತಂಕ ವ್ಯಕ್ತಪಡಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಾಂತರದ ಈ ಜಾಲವು ಆಧುನಿಕ ವೇಷ ಧರಿಸಿ ಹೈಟೆಕ್ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಮುಖ ಐಟಿ ಸಂಸ್ಥೆಯಾದ ಟಿಸಿಎಸ್‌ನ ಎಚ್‌ಆರ್ ವಿಭಾಗದಲ್ಲಿ ಕೇಳಿಬಂದಿರುವ ಆರೋಪಗಳನ್ನು ಉಲ್ಲೇಖಿಸಿದ ಅವರು, ವಿದ್ಯಾವಂತ ಮಹಿಳೆಯರನ್ನೇ ಈ ಜಾಲದಲ್ಲಿ ದಾಳವಾಗಿ ಬಳಸಿಕೊಳ್ಳುತ್ತಿರುವುದು ಅತ್ಯಂತ ಗಂಭೀರ ವಿಚಾರ ಎಂದರು. ಯುವತಿಯರಿಗೆ ಉದ್ಯೋಗ ಅಥವಾ ಸ್ನೇಹದ ಆಮಿಷವೊಡ್ಡಿ ಅವರನ್ನು ಜಾಲಕ್ಕೆ ಬೀಳಿಸುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಈ ಪಿತೂರಿಯಲ್ಲಿ ಮಹಿಳೆಯರೇ ಪ್ರಮುಖ ಪಾತ್ರ ವಹಿಸುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಿದೆ ಎಂದು ವಿಷಾದಿಸಿದರು.

ಮತಾಂತರದ ಹಿಂದೆ ಕೇವಲ ಮತೀಯ ಹಿತಾಸಕ್ತಿಯಿಲ್ಲ, ಬದಲಿಗೆ ಭಯೋತ್ಪಾದನೆ, ಮಾನವ ಕಳ್ಳ ಸಾಗಣೆಯ ದೊಡ್ಡ ಜಾಲವೇ ಇದೆ ಎಂದು ಪರಾಂಡೆ ಗಂಭೀರ ಆರೋಪ ಮಾಡಿದರು. ಕೇರಳ ದಿಂದ ಇಂಗ್ಲೆಂಡ್ ವರೆಗೆ ಈ ಕೃತ್ಯಗಳಲ್ಲಿ ಭಾಗಿಯಾದವರ ಹಿನ್ನೆಲೆ ಗಮನಿಸಿದರೆ, ಅವರಿಗೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನದ ವಿಧ್ವಂಸಕ ಶಕ್ತಿಗಳ ಜೊತೆ ನಂಟಿರುವುದು ಸ್ಪಷ್ಟವಾಗುತ್ತದೆ ಎಂದರು.

ಒಂದು ನಿರ್ದಿಷ್ಟ ಸಮುದಾಯದ ಯುವಕರಲ್ಲಿ ಕಂಡುಬರುತ್ತಿರುವ ಈ ವಿಕೃತ ಪ್ರವೃತ್ತಿಗೆ ಅವರ ಸಮುದಾಯದ ನಾಯಕತ್ವವೇ ಹೊಣೆ ಹೊರಬೇಕು. ತನ್ನ ಯುವಜನತೆಗೆ ನೀಡುತ್ತಿರುವ ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಸರಿಪಡಿಸಿಕೊಳ್ಳದಿದ್ದರೆ, ಇಡೀ ಸಮುದಾಯವು ಅನುಮಾನದ ದೃಷ್ಟಿಯಲ್ಲಿ ನಿಲ್ಲಬೇಕಾಗುತ್ತದೆ ಎಂದು ಎಚ್ಚರಿಸಿದರು.

ಎಚ್ಚರಿಸಿದ ವಿಎಚ್‌ಪಿ

ಹಿಂದೂ ಸಮಾಜವನ್ನು ಎಚ್ಚರಿಸಲು ವಿಎಚ್‌ಪಿ ಈಗ ಸಜ್ಜಾಗಿದೆ. ದಿ ಕೇರಳ ಸ್ಟೋರಿಯಂತಹ ಚಿತ್ರಗಳ ಮೂಲಕ ಯುವತಿಯರಲ್ಲಿ ಜಾಗೃತಿ ಮೂಡಿಸುವುದು ಮಾತ್ರವಲ್ಲದೆ, ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಮರಣದಂಡನೆಯಂತಹ ಕಠಿಣ ಶಿಕ್ಷೆ ವಿಧಿಸುವಂತಹ ಕಾನೂನು ರೂಪಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ಮಲ್ಲಿಕಾರ್ಜುನ ಖರ್ಗೆ ಕ್ಷಮೆ ಕೇಳಲಿ: ಅಶೋಕ್

ಬೆಂಗಳೂರು: ದೇಶದ ಪ್ರಧಾನಿಯನ್ನು ಟೆರರಿಸ್ಟ್ ಎಂದು ಕರೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಲೇ ಕ್ಷಮೆ ಯಾಚಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೂಡಲೇ ಖರ್ಗೆಯವರು ದೇಶದ ಜನರ ಕ್ಷಮೆ ಯಾಚಿಸಬೇಕು. ಈ ಹೇಳಿಕೆ ವಿರುದ್ಧ ಗುರುವಾರ ವಿಧಾನಸೌಧದ ಮುಂಭಾಗದಲ್ಲಿ ಬೆಂಗಳೂರಿನ ಶಾಸಕರೊಂದಿಗೆ ಪ್ರತಿಭಟನೆ ಮಾಡಲಿದ್ದೇವೆ ಎಂದು ತಿಳಿಸಿದರು.

ಹಿಂದೆ ಅವರನ್ನು ಚಾಯ್ ವಾಲಾ ಎಂದು ಟೀಕೆ ಮಾಡಿದ್ದಾಗ ಅದನ್ನೇ ಅಭಿಯಾನ ಮಾಡಲಾಯಿತು. ಇವರ ಟೀಕೆಗಳೇ ಬಿಜೆಪಿಗೆ ವರವಾಗಿದೆ. ಇನ್ನೆಂದೂ ಅಧಿಕಾರ ಸಿಗಲ್ಲ ಎಂಬ ಆತಂಕದಿಂದ ಕಾಂಗ್ರೆಸ್ ನಾಯಕರು ಈ ರೀತಿ ಮಾತಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾದಾಗ ಅವರನ್ನು ಬ್ರದರ್ಸ್ ಡಿ.ಕೆ. ಶಿವಕುಮಾರ್ ಎಂದು ಹೇಳಿದ್ದರು. ಖರ್ಗೆಯವರ ಬಲಗೈ ಮುಖಂಡನ ಬೆಂಬಲಿಗರು ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜೈಕಾರ ಕೂಗಿದ್ದರು. ಅವರ ಬಗ್ಗೆಯಾಗಲೀ, ಕುಕ್ಕರ್ ಬಾಂಬ್ ಬಗ್ಗೆಯಾಗಲೀ, ಪಾಕಿಸ್ತಾನದ ಬಗ್ಗೆಯಾಗಲೀ ಖರ್ಗೆ ಪ್ರತಿಕ್ರಿಯೆ ನೀಡಿಲ್ಲ ಹರಿಹಾಯ್ದರು.

ವಿಷಯಾಂತರಕ್ಕೆ ಮೋದಿ ನಿಂದನೆ: ಕೇರಳ ಹಾಗೂ ತಮಿಳುನಾಡಲ್ಲಿ ಬಿಜೆಪಿಗೆ ಉತ್ತಮ ಬೆಂಬಲ ಸಿಗುತ್ತಿದೆ. ಕಾಂಗ್ರೆಸ್‌ಗೆ ಸೋಲುವ ಲಕ್ಷಣ ಕಾಣಿಸಿದೆ. ಅಸ್ಸಾಂ ಹಾಗೂ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲ್ಲಲಿದೆ. ಚುನಾವಣಾ ಪೂರ್ವ ಸಮೀಕ್ಷಾ ವರದಿಗಳಿಂದಾಗಿ ಕಾಂಗ್ರೆಸ್ ನಾಯಕರು ಭ್ರಮನಿರಸನಗೊಂಡಿದ್ದಾರೆ. ಸೋಲಿನ ವಿಷಯಾಂತರ ಮಾಡಲು ಪ್ರಧಾನಿ ಮೋದಿಯನ್ನು ನಿಂದಿಸುತ್ತಿದ್ದಾರೆ ಎಂದರು.

ರಾಜಣ್ಣ ಹೇಳಿಕೆಯಲ್ಲಿ ಅರ್ಥವಿದೆ: ಇಡಿಯಿಂದ ಶಾಸಕ ಹ್ಯಾರಿಸ್ ಕುಟುಂಬದ ಆಸ್ತಿಗಳ ಮೇಲೆ ದಾಳಿ ನಡೆದಿದೆ. ಬಿಟ್ಕಾಯಿನ್ ಹಗರಣದ ತನಿಖೆ ಆರಂಭವಾಗಿ 3 ವರ್ಷವಾದರೂ ಚಾರ್ಜ್‌ಶೀಟ್ ಸಲ್ಲಿಸಿಲ್ಲ. ಗೃಹ ಸಚಿವರು ಈ ಬಗ್ಗೆ ಉತ್ತರ ನೀಡಬೇಕು.

ಮಾಜಿ ಸಚಿವ ರಾಜಣ್ಣ ಮಾಟ ಮಂತ್ರದ ಬಗ್ಗೆ ಹೇಳಿರುವುದರಲ್ಲಿ ಅರ್ಥವಿದೆ. ಈಗ ಸಿಎಂ ಸಿದ್ದರಾಮಯ್ಯ ಮಾಟ ಮಂತ್ರ ತೆಗೆದುಹಾಕಲು ತಯಾರಿ ಮಾಡಬೇಕಿದೆ ಎಂದರು.

ಖರ್ಗೆ ವ್ಯಕ್ತಿತ್ವಕ್ಕೆ ಧಕ್ಕೆ: ನಿಖಿಲ್ ಕುಮಾರಸ್ವಾಮಿ



ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರಿದ್ದಾರೆ. ಈ ಹೇಳಿಕೆ ಅವರಿಗೆ ಶೋಭೆ ತರುವುದಿಲ್ಲ. ಇಂಥಹ ಹೇಳಿಕೆ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆ ಎಂದು ನಿಖಿಲ್ ಹೇಳಿದರು. ಮೋದಿ ಟೆರರಿಸ್ಟ್ ಎಂದು ಖರ್ಗೆ ಹೇಳಿಕೆ ವಿಚಾರಕ್ಕೆ ನಗರದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ರಾಜಕೀಯದಲ್ಲಿ ಹಿರಿಯರು. ಸಂಸ್ಕಾರದಿಂದ, ಸಂಯಮದಿಂದ ವರ್ತನೆ ಮಾಡಬೇಕು. ಇವರು ಯುವಕರಿಗೆ ದಾರಿದೀಪ ಆಗಬೇಕು, ಆದರೆ ವೈಯಕ್ತಿಕ ಹೇಳಿಕೆ, ನಿಂದನೆ ಮಾಡಿದ್ದಾರೆ ಎಂದು ನಿಖಿಲ್ ಕಿಡಿಕಾರಿದರು.

ನಟಿ ರನ್ಯಾ ರಾವ್‌ಗೆ ಜಾಮೀನು

ಬೆಂಗಳೂರು: ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರಿಗೆ ಸುಮಾರು ಒಂದು ವರ್ಷದ ಸುದೀರ್ಘ ಸೆರೆವಾಸದ ಬಳಿಕ ಅಂತಿಮವಾಗಿ ಬಿಡುಗಡೆ ಭಾಗ್ಯ ಸಿಕ್ಕಿದೆ. ಕೋಟಿಗಟ್ಟಲೆ ಮೌಲ್ಯದ ಚಿನ್ನದ ಕಳ್ಳಸಾಗಣೆ ಆರೋಪದ ಮೇಲೆ ಬಂಧನ ಕ್ಕೊಳಗಾಗಿದ್ದ ನಟಿಗೆ ಆರ್ಥಿಕ ಅಪರಾಧಗಳ ತಡೆ ನ್ಯಾಯಾಲಯವು ಬುಧವಾರ ಜಾಮೀನು ಮಂಜೂರು ಮಾಡಿದೆ.



ಕಾಫಿಪೋಸಾ ಅಡಿಯಲ್ಲಿ ಒಂದು ವರ್ಷದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಹಾಗೂ ಆರ್ಥಿಕ ಅಪರಾಧಗಳ ನ್ಯಾಯಾಲಯವು ಜಾಮೀನು ನೀಡಿದ ಕಾರಣ, ರನ್ಯಾ ರಾವ್ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ಅಮಾನತುಗೊಂಡಿರುವ ಹಿರಿಯ ಐಪಿಎಸ್ ಅಧಿಕಾರಿ ರಾಮಚಂದ್ರರಾವ್ ಅವರ ಮಲಮಗಳಾಗಿರುವ ರನ್ಯಾ ರಾವ್, ದುಬೈನಿಂದ ಆಫ್ರಿಕಾವರೆಗೆ ಹರಡಿದ್ದ ದೊಡ್ಡ ಮಟ್ಟದ ಚಿನ್ನದ ದಂಧೆ ಯಲ್ಲಿ ಭಾಗಿಯಾಗಿದ್ದರು ಎಂಬ ಆರೋಪ ಎದುರಿಸು ತ್ತಿದ್ದಾರೆ. ಸದ್ಯ ಒಂದು ವರ್ಷದ ಜೈಲು ವಾಸದ ನಂತರ ರನ್ಯಾ ಬುಧವಾರ ಮನೆಗೆ ಮರಳಲಿದ್ದಾರೆ.

ಆರಂಭದಲ್ಲಿ ರನ್ಯಾ ರಾವ್ ಅವರಿಗೆ ನ್ಯಾಯಾಲಯದಿಂದ ಜಾಮೀನು ದೊರೆತಿತ್ತಾದರೂ, ಕೇಂದ್ರ ಆರ್ಥಿಕ ಗುಪ್ತಚರ ಬ್ಯೂರೋ ಇವರ ವಿರುದ್ಧ ಕಾಫಿಪೋಸಾ (ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆ) ಅಡಿಯಲ್ಲಿ ಬಂಧನ ಆದೇಶ ಹೊರಡಿಸಿತ್ತು.

ಪ್ರಕರಣದ ಹಿನ್ನೆಲೆ

ಸಿನಿಮಾ ರಂಗದಿಂದ ಅಂತರ ಕಾಯ್ದುಕೊಂಡು ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ ರನ್ಯಾ ರಾವ್, ಆಗಾಗ ವ್ಯವಹಾರದ ನಿಮಿತ್ತ ದುಬೈಗೆ ಭೇಟಿ ನೀಡುತ್ತಿದ್ದರು. ಇವರ ಈ ಸಂಶಯಾಸ್ಪದ ಓಡಾಟದ ಮೇಲೆ ಕಣ್ಣಿಟ್ಟಿದ್ದ ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, 2025ರ ಮಾ.3ರಂದು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಾಳಿ ನಡೆಸಿದ್ದರು. ಈ ವೇಳೆ ಸುಮಾರು 14.213 ಕೆ.ಜಿ. ಚಿನ್ನ ಪತ್ತೆಯಾಗಿತ್ತು. ತನಿಖೆ ಮುಂದುವರಿದಂತೆ ಸುಮಾರು 102 ಕೋಟಿ ರೂ.ಗೂ ಅಧಿಕ ಮೌಲ್ಯದ ಚಿನ್ನವನ್ನು ಕಳ್ಳಸಾಗಣೆ ಮಾಡಿರುವ ಆಘಾತಕಾರಿ ಅಂಶಗಳು ಬೆಳಕಿಗೆ ಬಂದಿದ್ದವು. ಈ ಹಿನ್ನೆಲೆಯಲ್ಲಿ ಅಂದೇ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದರು.

40ರಿಂದ 42.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು | ಆರೋಗ್ಯದ ಮೇಲೆ ಪರಿಣಾಮದ ಆತಂಕ

ಬಿಸಿಲಿನ ಹೊಡೆತಕ್ಕೆ ಬಳ್ಳಾರಿ ಜನ ಹೈರಾಣ

▸ ವೆಂಕಟೇಶ ದೇಸಾಯಿ

ಬಳ್ಳಾರಿ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಸೂರ್ಯನ ಶಾಖ ಹೆಚ್ಚಾಗುತ್ತಿದ್ದು, ಜನರು ಪರದಾಡುವ ಸ್ಥಿತಿ ಎದುರಾಗಿದೆ. ಬೇಸಿಗೆ ಬಿಸಿಲಿನ ತಾಪಮಾನ ಪ್ರಸಕ್ತ ವರ್ಷ ದಾಖಲೆಯತ್ತ ಏರಿಕೆಯಾಗಿದ್ದು, ಕಳೆದೊಂದು ವಾರದಲ್ಲಿ 40ರಿಂದ 42.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಬಿಸಿಗಾಳಿಯಿಂದ ಮಕ್ಕಳು, ವಯೋವೃದ್ಧರು, ಹಲವು ರೋಗಗಳಿಂದ ಬಳಲುವ ಸ್ಥಿತಿ ಎದುರಾಗಿದ್ದು, ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವ ಆತಂಕ ಸೃಷ್ಟಿಸಿದೆ. ಕಳೆದ ಮಾರ್ಚ್‌ನಿಂದ ಇಲ್ಲಿವರೆಗೆ ಏರಿಕೆಯಾಗುತ್ತಿರುವ ಬಿಸಿಲಿನ ತಾಪಮಾನ ದಾಖಲೆಯತ್ತ ಹೆಜ್ಜೆ ಹಾಕುತ್ತಿದ್ದು, ರಾಜ್ಯದಲ್ಲಿ ಗರಿಷ್ಠ ತಾಪಮಾನ ವಿರುವ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆ ಕೂಡ ಅಗ್ರಸ್ಥಾನದಲ್ಲಿದೆ.

ಕುಡಿಯುವ ನೀರಿಗೆ ಹಾಹಾಕಾರ: ನಗರದಲ್ಲಿ ತುಂಗಭದ್ರಾ ಕಾಲುವೆ ಹರಿದಿದ್ದರೂ ಜನರಿಗೆ ನೀರಿನ ಬವಣೆ ತಪ್ಪಿಲ್ಲ. ನಗರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ಕಳೆದ ತಿಂಗಳಿಂದ 10 ರಿಂದ 15 ದಿನಕ್ಕೊಮ್ಮೆ ನೀರು



ಸರಬರಾಜು ಮಾಡಲಾಗುತ್ತಿದೆ. ಜನರು ಬಿಸಿಲನ್ನೂ ಲೆಕ್ಕಿಸದೇ ಖಾಲಿ ಕೊಡ ಹಿಡಿದು, ಸರದಿಯಲ್ಲಿ ನಿಲ್ಲುವಂತಾಗಿದೆ. ಗ್ರಾಮೀಣ ಭಾಗಗಳಲ್ಲಿ ನೀರಿನ ಸಮಸ್ಯೆ ಬಿಗಡಾಯಿಸಿದ್ದು, ಸಮರ್ಪಕ ನೀರು ಸರಬರಾಜು ಮಾಡುವಲ್ಲಿ ಗ್ರಾಮೀಣ ಕುಡಿವ ನೀರು ಸರಬರಾಜು ಇಲಾಖೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ.

ಆರೋಗ್ಯ ಇಲಾಖೆಯಿಂದ ಸಿದ್ಧತೆ: ಗಣಿ ಜಿಲ್ಲೆಯಲ್ಲಿ ಬಿಸಿಲು ಹೆಚ್ಚಾಗಿದ್ದು, ಜಿಲ್ಲಾಡಳಿತ, ಆರೋಗ್ಯ ಇಲಾಖೆ ನಾನಾ ಅಗತ್ಯ ಮುಂಜಾಗೃತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಬಿಸಿಲಿನಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳಿಗೆ ಅಗತ್ಯ ಚಿಕಿತ್ಸಾ ಕ್ರಮ, ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಜಿಲ್ಲೆ ಎಲ್ಲ ವೈದ್ಯರಿಗೆ ತರಬೇತಿ ನೀಡಲಾಗಿದೆ. ಸನ್ ಸ್ಟ್ರೋಕ್ ಉಂಟಾದಲ್ಲಿ ಕೂಡಲೇ ಚಿಕಿತ್ಸೆ ಕಲ್ಪಿಸಲು ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಬೆಡ್‌ಗಳನ್ನು ಮೀಸಲಿರಿಸಲಾಗಿದೆ.

> **ಗಣಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಜನರು ಮೇ 15ರ ವರೆಗೆ ಆದಷ್ಟು ಅನಗತ್ಯವಾಗಿ ಹೊರಗಡೆ ಬರುವುದನ್ನು ತಪ್ಪಿಸಬೇಕು. ತೀರ ಅಗತ್ಯವಿದ್ದಲ್ಲಿ ಬೆಳಗ್ಗೆ 6ರಿಂದ 11ರ ವರೆಗೆ ಮಾತ್ರ ಸಂಚರಿಸಬೇಕು.**
> ■ ಡಾ.ರಮೇಶ್ ಬಾಬು, ಡಿಎಚ್‌ಒ

ವೈದ್ಯರ ಸಲಹೆಗಳು: ಬೇಸಿಗೆ ವೇಳೆ ಅಗತ್ಯ ಬಿದ್ದಾಗ ಮಾತ್ರ ಮನೆಯಿಂದ ಹೊರಬರಬೇಕು. ಅನಗತ್ಯ ತಿರುಗಾಟ ಕಡಿಮೆ ಮಾಡಬೇಕು. ಬಿಸಿಲಿನಲ್ಲಿ ಹೊರಗೆ ಹೋಗಬೇಕಾದ ಅನಿವಾರ್ಯತೆ ಇದ್ದಲ್ಲಿ ಛತ್ರಿ ಬಳಸಬೇಕು. ಮನೆಯಲ್ಲಿ ಅದಷ್ಟು ಫ್ಯಾನ್ ಬಳಸೇಕು.

ದಿಗಂತ ವಿಶೇಷ

ಬಿಸಿಲಿನ ಹೊಡೆತಕ್ಕೆ ವಾಂತಿ ಭೇದಿ, ಹೊಟ್ಟೆನೋವು | ರಸ್ತೆಗಿಳಿಯಲು ಹೆದರುತ್ತಿರುವ ಜನ

ಸನ್‌ಸ್ಟ್ರೋಕ್ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಪ್ರತ್ಯೇಕ ಬೆಡ್

▸ ಜಗದೀಶ ಎಂ.ಗಾಣಿಗೇರ

ಬಾಗಲಕೋಟೆ: ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ ಅತಿಯಾದ ರಣಬಿಸಿಲು ಕಾಣಿಸಿಕೊಳ್ಳುತ್ತಿರುವುದರಿಂದ ಕೆಲವರಲ್ಲಿ ವಾಂತಿ ಭೇದಿ, ಹೊಟ್ಟೆ ನೋವು ಶುರುವಾಗಿದೆ.

ಬಿಸಿಲಿಗೆ ಜನರ ಆರೋಗ್ಯದಲ್ಲಿ ಏರುಪೇರಾಗುತ್ತಿದ್ದು, ಆರೈಕೆಗಾಗಿ ಜಿಲ್ಲಾಸ್ಪತ್ರೆಯಲ್ಲಿ ಪ್ರತ್ಯೇಕ ಬೆಡ್ ಕೂಡ ಮಾಡಿಕೊಳ್ಳಲಾಗಿದೆ.

ಬಾಗಲಕೋಟೆ ನಗರದಲ್ಲಿ ಬುಧವಾರ ಬೆಳಗ್ಗೆ 11 ಗಂಟೆ ವೇಳೆಗೆ 35ರಿಂದ 36 ತಾಪಮಾನ ಇದ್ದರೆ ಮ.12ರಿಂದ 3 ಗಂಟೆಯೊಳಗೆ 38ರಿಂದ 39ವರೆಗೆ ಬಿಸಿಲಿನ ಪ್ರಮಾಣ ಏರಿಕೆಯಾಗಿತ್ತು. ರಣಬಿಸಿಲಿಗೆ ಜನ ಕೂಡ ತತ್ತರಗೊಂಡಿದ್ದಾರೆ. ಬಿಸಿಲಿನಲ್ಲಿ ಜನ ರಸ್ತೆಗೆ ಇಳಿಯಲು ಕೂಡ ಹೆದರುವಂತಾಗಿದೆ ಅಷ್ಟೊಂದು ಬಿಸಿಲು ಇದೆ.

ಪ್ರತ್ಯೇಕ ಬೆಡ್ ವ್ಯವಸ್ಥೆ: ದಿನದಿಂದ ದಿನಕ್ಕೆ ಬಿಸಿಲಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಮಕ್ಕಳು, ವಯೋವೃದ್ಧರಲ್ಲಿ ವಾಂತಿ ಭೇದಿ ಶುರುವಾಗಿದೆ. ಇನ್ನೂ ಯುವಕರಲ್ಲಿಯೂ ಕೂಡ ಬಿಸಿಲಿಗೆ ವಾಂತಿ ಭೇದಿ ಆಗುತ್ತಿದೆ.



ಸನ್‌ಸ್ಟ್ರೋಕ್ ಚಿಕಿತ್ಸೆ ಕೊಠಡಿ: ಹೆಚ್ಚು ಬಿಸಿಲಿನ ತಾಪಮಾನಕ್ಕೆ ಜನರ ಆರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತಿದ್ದು, ಇದನ್ನು ಮನಗಂಡು ಜಿಲ್ಲಾ ಆಡಳಿತ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಸನ್‌ಸ್ಟ್ರೋಕ್ ಚಿಕಿತ್ಸೆ ಕೊಠಡಿಯಲ್ಲಿ ಓರ್ವ ವೈದ್ಯ, ಇಬ್ಬರು ಸ್ಟಾಫ್ ನರ್ಸ್, 2ಡಿ ದರ್ಜೆಯ ನೌಕರನ್ನು ನಿಯೋಜಿಸಲಾಗಿದೆ. ಈ ಕೊಠಡಿಯಲ್ಲಿ ಬರುವ ರೋಗಿಗಳ ಕಾಳಜಿಯನ್ನು ವೈದ್ಯರು ತೆಗೆದುಕೊಳ್ಳುತ್ತಿದ್ದಾರೆ. ಆಸ್ಪತ್ರೆಗೆ ಬರುವ ರೋಗಿಗಳ ಸ್ಪೆಷಲ್ ವಾರ್ಡ್‌ನಲ್ಲಿ ಫ್ಯಾನ್, ವೆಂಟಿಲೇಟರ್, ನೀರಿನ ವ್ಯವಸ್ಥೆ ಕೂಡ ಮಾಡಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಆಸ್ಪತ್ರೆ ಸಹಯೋಗದೊಂದಿಗೆ ಪ್ರತ್ಯೇಕ ಸನ್ ಸ್ಟ್ರೋಕ್ ವಾರ್ಡ್ ಮಾಡಿದ್ದರಿಂದ ಆಸ್ಪತ್ರೆಗೆ ಬರುವ ಜನರಿಗೆ ತಕ್ಷಣಕ್ಕೆ ಸೂಕ್ತ ಚಿಕಿತ್ಸೆ ದೊರೆಯುವಂತಾಗಿದೆ.

ತಾಪಮಾನ ಹೆಚ್ಚಾಗುತ್ತಿರುವ ಪರಿಣಾಮದಿಂದ ಮನುಷ್ಯನ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುತ್ತಿದೆ. ಲವಣಾಂಶ ಕೂಡ ಕಡಿಮೆಯಾಗುತ್ತಿದ್ದು, ವಾಂತಿ ಭೇದಿ, ಹೊಟ್ಟೆ ನೋವು ಜಾಸ್ತಿಯಾಗಿಲಿದೆ. ಜನ ಮುಂಜಾಗೃತೆ ಕ್ರಮವಾಗಿ ಆಗಾಗ ಮನೆಯಲ್ಲಿ ತಂಪು ಪಾನೀಯಗಳನ್ನು ಮಾಡಿಕೊಂಡು ಸೇವಿಸಬೇಕು. ಆಗಾಗ ನೀರು ಕುಡಿಯ ಬೇಕು. ಹಣ್ಣುಗಳನ್ನು ಸೇವಿಸಬೇಕು. ಹೊರಗಡೆ ಹೋಗುವಾಗ ಛತ್ರಿ, ಕನ್ನಡಕ, ತೆಳುವಾದ ಬಟ್ಟೆ ಗಳನ್ನು ಹಾಕಿಕೊಂಡು ಹೋಗಬೇಕೆಂದು ಸಲಹೆಗಳನ್ನು ಜನ ಪಾಲಿಸಬೇಕಾಗಿದೆ.

> **ಬಿಸಿಲು ಹೆಚ್ಚಾಗಿದ್ದರಿಂದ ದೇಹದಲ್ಲಿ ನೀರಿನಾಂಶ ಕಡಿಮೆಯಾಗುತ್ತದೆ. ಆಗಾಗ ನೀರು ಕುಡಿಯಬೇಕು. ಲವಣಾಂಶ ಕಡಿಮೆಯಾಗಿ ಹೀಟ್ ಸ್ಟ್ರೋಕ್ ಜಾಸ್ತಿಯಾಗಲಿದೆ. ಬಿಸಿಲು ಹೆಚ್ಚಾಗಿದ್ದರಿಂದ ಆಸ್ಪತ್ರೆಗೆ ವಾಂತಿ ಭೇದಿ, ಹೊಟ್ಟೆ ನೋವು ಇರುವವರು ಜಾಸ್ತಿ ಬರುತ್ತಿದ್ದು, ಜಿಲ್ಲಾಸ್ಪತ್ರೆಯಲ್ಲಿ ಮಹಿಳೆಯರಿಗೆ, ಪುರುಷರಿಗೆ ಪ್ರತ್ಯೇಕ 10 ಬೆಡ್ ವ್ಯವಸ್ಥೆ ಕೂಡ ಮಾಡಲಾಗಿದೆ.**
> ■ ಡಾ.ವಿಕಾಸ್ ಪರ್ವತಿಕರ, ಜಿಲ್ಲಾಸ್ಪತ್ರೆ ವೈದ್ಯ

ಸಂಪಾದಕೀಯ

ಪದಬಳಕೆ ಮತ್ತು ರಾಜಕಾರಣದ ಸಭ್ಯತೆ

ಹಿರಿಯ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಮೋದಿವರನ್ನು ಭಯೋತ್ಪಾದಕ ಎಂದು ಟೀಕಿಸಿದ ಪ್ರಕರಣಕ್ಕೆ ದೇಶಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆ, ಖರ್ಗೆಯವರು ನಾನು ಹಾಗೆ ಹೇಳಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಅವರು ಹಾಗೆ ಹೇಳದಿದ್ದರೆ ಅದು ವ್ಯಾಪಕವಾಗಿ ಹರಡಿದ್ದಾದರೂ ಹೇಗೆ ಎಂಬುದು ಮುಖ್ಯಪ್ರಶ್ನೆ. ಮನಸ್ಸಿನ ಸ್ಥಿಮಿತತೆ ಕಳೆದುಕೊಂಡು ಮಾತಾಡಿದ ನಂತರ ನಾನು ಆಡಿಯೇ ಇಲ್ಲ, ಆ ಅರ್ಥದಲ್ಲಿ ಹೇಳಿಲ್ಲ ಎಂದು ಸಮಜಾಯಿಷಿಗಳನ್ನು ನೀಡುವುದು ರಾಜಕಾರಣಿಗಳ ಜಾಯಮಾನ! ಖರ್ಗೆಯಂಥ ಮಹಾ ನಾಯಕರ ಬಾಯಿಂದ ಅಂತಹ ಮಾತು ಬಂತೆಂದು ಸುಖಾಸುಮ್ಮನೆ ಸುದ್ದಿಯಾಗುವುದಿಲ್ಲ. ಅಲ್ಲದೆ ತೆಲಂಗಾಣದ ಕಾಂಗ್ರೆಸ್ ಮುಖ್ಯಮಂತ್ರಿ ರೇವಂತಿ ರೆಡ್ಡಿಯಂಥ ಬುದ್ಧಿವಂತರು ಕೂಡ ಮೋದಿಯವರನ್ನು ಮಾರೀಚನಿಗೆ ಹೋಲಿಸಿದ್ದಾರೆ. ಉಳಿದ ಸಂದರ್ಭಗಳಲ್ಲಿ ರಾಜಕಾರಣಿಗಳ ಬಾಯಿಂದ ಇಂಥ ಪುರಾಣಪಾತ್ರಗಳೇಕೆ ಉದುರುವುದಿಲ್ಲ ಎಂಬುದನ್ನು ಗಮನಿಸಿದರೆ ಅವರ ಮನಸ್ಸು ಮತ್ತು ಬುದ್ಧಿ ಎಲ್ಲಿಗೆ ಸೀಮಿತವಾಗುತ್ತಿದೆ ಎಂಬುದರ ಅಂದಾಜು ಸಿಗುತ್ತದೆ. ಅದೂ ಎಂತೆಂಥಾ ನಾಯಕರ ಬಾಯಿಂದ ಇಂಥ ಮಾತುಗಳು ಹೊರಬರುತ್ತಿವೆ ಎಂಬುದು ಕೂಡ ಇಲ್ಲಿ ಮುಖ್ಯ.

ಮಲ್ಲಿಕಾರ್ಜುನ ಖರ್ಗೆಯವರ ಅನುಭವ-ಮುತ್ಸದ್ಧಿತನಗಳಿಂದ ಅವರು ಕೇವಲ ಕಾಂಗ್ರೆಸಿನ ಸ್ವತ್ತು ಮಾತ್ರ ಅಲ್ಲ. ಅವರು ದಮನಿತ ವರ್ಗದಿಂದ ಮೇಲೆ ಬಂದವರು. ಭಾರತದ ಸಂವಿಧಾನ ಎಷ್ಟು ಪ್ರಬಲ ಎಂಬುದಕ್ಕೆ ನಿದರ್ಶನದಂತಿರುವವರು. ಇಂದು ದೇಶದ ರಾಜಕಾರಣಿಗಳ ಪೈಕಿ ಬೆಂಕಿಯಿಂದ ಅರಳಿದವರು ಯಾರೆಂದು ಹುಡುಕಿದರೆ ಮೊದಲ ಸಾಲಿನಲ್ಲಿ ಖರ್ಗೆಯವರದ್ದೇ ಹೆಸರು ಬರುತ್ತದೆ. ಅಂಥ ನಾಯಕರು ತಮ್ಮ ಪ್ರಬುದ್ಧತೆಯಿಂದಲೇ ಪಕ್ಷದಲ್ಲಿ ಮೇಲೇರಿದವರು ಮತ್ತು ಉನ್ನತ ಸ್ಥಾನಗಳನ್ನು ಪಡೆದವರು. ಕೆಲ ಸಮಯದ ಹಿಂದೆ ಖರ್ಗೆಯವರು ಇದೇ ರೀತಿ ವಿಷಸರ್ಪ ಎಂದು ಮೋದಿವರನ್ನು ಟೀಕಿಸಿದ್ದರು. ಹಿಂದೆಲ್ಲಾ ರಾಜಕಾರಣಿಗಳ ಟೀಕೆಗಳು ಆರೋಗ್ಯಪೂರ್ಣವಾಗಿರುತ್ತಿದ್ದವು ಎಂಬ ಸಂಗತಿಗಳನ್ನೂ ಕೇಳಿದ್ದೇವೆ. ಆಶ್ಚರ್ಯವೆಂದರೆ ಆ ಕಾಲದಲ್ಲೂ ಮಲ್ಲಿಕಾರ್ಜುನ ಖರ್ಗೆಯವರು ಸಕ್ರೀಯ ರಾಜಕಾರಣದಲ್ಲಿದ್ದರು. ಅಂದರೆ ಹಿಂದೆ ಹೀಗೆಲ್ಲಾ ಹೇಳಿಕೆಗಳನ್ನು ನೀಡದಿದ್ದವರು ಈಗ ಅಸಭ್ಯ ಭಾಷೆಗಳನ್ನು ಏಕೆ ಬಳಸುತ್ತಿದ್ದಾರೆ? ಈ ಬದಲಾವಣೆ ಅವರಲ್ಲಿ ಯಾಕಾಯಿತು? ಸತತವಾಗಿ ಸೋಲುತ್ತಾ ಬರುತ್ತಿರುವ ಕಾಂಗ್ರೆಸ್ ಒಂದೆಡೆಯಾದರೆ ಪಕ್ಷದಲ್ಲಿ ಕಾಣದ ಶಿಸ್ತು ಮತ್ತು ಅಧಿಕಾರ ಕಳೆದುಕೊಂಡ ಹತಾಶೆಯಿಂದ ಇಂಥ ಪದಪ್ರಯೋಗಗಳು ಬರುತ್ತಿವೆಯೇ? ಅದರಲ್ಲೂ ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಕಾಂಗ್ರೆಸ್ ನೆಲಕಚ್ಚಿರುವುದರ ಅಸಹಾಯಕತೆ ಇಂಥ ಮಾತುಗಳಿಗೆ ಕಾರಣವಾಗುತ್ತಿದೆಯಾ ತಿಳಿಯುತ್ತಿಲ್ಲ. ಆದರೆ ದೇಶದ ಪ್ರಜ್ಞಾವಂತ ತಮ್ಮ ಪ್ರಧಾನಮಂತ್ರಿಯವರನ್ನು ಹೀಗೆ ಕರೆಯುವುದನ್ನಂತೂ ಸಹಿಸುವುದಿಲ್ಲ. ಇದು ಕಾಂಗ್ರೆಸಿಗೂ ಹಿನ್ನಡೆ ಯಾಗುವುದರ ಜೊತೆಗೆ ಖರ್ಗೆಯವರ ವ್ಯಕ್ತಿತ್ವವನ್ನೂ ಕುಗ್ಗಿಸುತ್ತದೆ. ರಾಜಕಾರಣದ ಉನ್ನತ ಸ್ಥಾನದಲ್ಲಿರುವವರು ಹಿಡಿತ ತಪ್ಪದಂತೆ ಪದಗಳನ್ನು ಬಳಸಬೇಕಿದೆ. ಪದಬಳಕೆ ಅವರ ವ್ಯಕ್ತಿತ್ವದ ಪ್ರತಿಬಿಂಬ ಎನ್ನುವುದು ಹಿಂದೆಂದಿ ಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿರುವ ಮಾತು. ಈ ಪರಿಸ್ಥಿತಿಯಲ್ಲಿ ಖರ್ಗೆಯವರು ತಾನು ಆ ಪದ ಬಳಸಬಾರದಿತ್ತು ಎಂದಿದ್ದರೆ ಅವರ ವ್ಯಕ್ತಿತ್ವ ಇನ್ನಷ್ಟು ಹೆಚ್ಚುತ್ತಿತ್ತು.

ಹಳಿಗಳ ಆಧುನೀಕರಣ; ಪ್ರಯಾಣ ಮತ್ತಷ್ಟು ಸುಗಮ

▸ ಅಶ್ವಿನಿ ವೈಷ್ಣವ್, ಕೇಂದ್ರ ರೈಲ್ವೆ, ವಾರ್ತಾ ಮತ್ತು ಪ್ರಸಾರ ಹಾಗೂ ಎಲೆಕ್ಟ್ರಾನಿಕ್ಸ್ -ಮಾಹಿತಿ ತಂತ್ರಜ್ಞಾನ ಸಚಿವರು



ಭಾರತಾದ್ಯಂತ ಪ್ರತಿದಿನ 25,000ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ಇವು ಪ್ರತಿನಿತ್ಯ 2 ಕೋಟಿಗೂ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತವೆ ಮತ್ತು 1,37,000 ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ವ್ಯಾಪಿಸಿರುವ ಹಳಿ ಜಾಲದ ಮೂಲಕ ಕಲ್ಲಿದ್ದಲು, ಕಬ್ಬಿಣದ ಅದಿರು, ಧಾನ್ಯಗಳು, ಉಕ್ಕು, ಸಿಮೆಂಟ್ ಮತ್ತು ಇತರ ಸರಕುಗಳನ್ನು ಸಾಗಿಸುತ್ತವೆ.

ಈ ಸಂಪೂರ್ಣ ವ್ಯವಸ್ಥೆಯು ಕಾರ್ಯನಿರ್ವಹಿಸುವ ಅಡಿಪಾಯವೇ ರೈಲು ಹಳಿ. ಹಳಿಗಳು ಸುಸ್ಥಿತಿಯಲ್ಲಿದ್ದಾಗ ರೈಲುಗಳು ಹೆಚ್ಚಿನ ವೇಗದಲ್ಲಿ ಸುರಕ್ಷಿತವಾಗಿ ಚಲಿಸುತ್ತವೆ. ಹಳಿಗಳು ಸರಿಯಾಗಿಲ್ಲದಿದ್ದರೆ ವೇಗದ ಮಿತಿ ಮತ್ತು ವಿಳಂಬದಿಂದ ಹಿಡಿದು ಸುರಕ್ಷತೆಯ ಅಪಾಯಗಳವರೆಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಹಳಿಯಲ್ಲಿನ ಬಿರುಕು, ಸಡಿಲವಾದ ಫಿಟ್ಟಿಂಗ್ ಅಥವಾ ಜಲ್ಲಿ ಹಾಸುಗಳ ಅಡಚಣೆಗಳು ರೈಲಿನ ಚಲನೆಯ ಮೇಲೆ ಪರಿಣಾಮ ಬೀರಬಹುದು. ಹಳಿಗಳ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ರೈಲ್ವೆಯು ಒಂದು ದಶಕದ ಹಿಂದೆ ವ್ಯಾಪಕವಾದ ಆಧುನೀಕರಣ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕೆಲಸವು ಆಧುನಿಕ ಯಂತ್ರಗಳನ್ನು ಬಳಸಿ ಹಳಿಗಳ ನವೀಕರಣ, ಸುಧಾರಿತ ವಿಧಾನಗಳ ಮೂಲಕ ಪರೀಕ್ಷೆ ಮತ್ತು ತಪಾಸಣೆ, ಯಾಂತ್ರೀಕೃತ ನಿರ್ವಹಣೆ ಹಾಗೂ ಸುರಕ್ಷತಾ ಬೇಲಿಗಳನ್ನು ಅಳವಡಿಸುವುದು ಸೇರಿದಂತೆ ಹಲವು ಕಾರ್ಯಗಳನ್ನು ಒಳಗೊಂಡಿದೆ. ಒಟ್ಟಾರೆಯಾಗಿ ಈ ಪ್ರಯತ್ನಗಳು ರೈಲ್ವೆಜಾಲದ ಸ್ಥಿತಿಯನ್ನು ಗಮನಾರ್ಹವಾಗಿ ಬದಲಾಯಿಸಿವೆ.

2014ರಿಂದ ಇದುವರೆಗೆ ಸುಮಾರು 55,000 ಕಿ.ಮೀ ಹಳಿಗಳನ್ನು ನವೀಕರಿಸಲಾಗಿದೆ. ಇದು ಸುರಕ್ಷತೆ ಮತ್ತು ಪ್ರಯಾಣದ ಗುಣಮಟ್ಟವನ್ನು ಸುಧಾರಿಸಿದೆ ಹಾಗೂ ಪದೇಪದೇ ದುರಸ್ತಿ ಮಾಡುವ ಅಗತ್ಯವನ್ನು ಕಡಿಮೆ ಮಾಡಿದೆ. ಸುಮಾರು 44,000 ಕಿ.ಮೀ ಉದ್ದದ ರೈಲ್ವೆಹಳಿಗಳಿಗೆ ತಲಾ 260 ಮೀಟರ್ ಉದ್ದದ 'ಲಾಂಗ್ ರೈಲ್ಪ್ಯಾನಲ್' ಗಳನ್ನು ಅಳವಡಿಸಲಾಗಿದೆ. ಉದ್ದನೆಯ ಪ್ಯಾನಲ್‌ಗಳೆಂದರೆ ಹಳಿಗಳ ನಡುವೆ ಕಡಿಮೆ ಜೋಡಣೆಗಳು ಇರುತ್ತವೆ ಎಂದರ್ಥ. ಇದು ರೈಲು ಸುಗಮವಾಗಿ ಮತ್ತು ಸುರಕ್ಷಿತವಾಗಿ ಚಲಿಸಲು ಸಹಾಯ ಮಾಡುತ್ತದೆ. ಪ್ರಸ್ತುತ 80,000 ಕಿ.ಮೀಗಿಂತಲೂ ಹೆಚ್ಚು ಹಳಿಗಳಲ್ಲಿ ಬಲವಾದ 60 ಕೆಜಿ ತೂಕದ ಹಳಿಗಳನ್ನು ಬಳಸಲಾಗುತ್ತಿದೆ. ಇದು ಹೆಚ್ಚಿನ ಭಾರ ಮತ್ತು ವೇಗವನ್ನು ತಡೆದುಕೊಳ್ಳಬಲ್ಲದು. ಬಲವಾದ ಹಳಿಗಳನ್ನು ಅಳವಡಿಸುವುದು ಎಷ್ಟು ಮುಖ್ಯವೋ, ಸಮಸ್ಯೆಗಳನ್ನು ಮೊದಲೇ ಪತ್ತೆ ಹಚ್ಚುವುದು ಅಷ್ಟೇ ಮುಖ್ಯ. ಸುಮಾರು 4,50,000 ಕಿ.ಮೀ ಹಳಿಗಳ ಮೇಲೆ ಅಲ್ಟ್ರಾಸಾನಿಕ್ ದೋಷ ಪತ್ತೆ (ಯುಎಸ್‌ಎಫ್‌ಡಿ) ಪರೀಕ್ಷೆಯನ್ನು ನಡೆಸಲಾಗಿದೆ. ಈ ತಂತ್ರಜ್ಞಾನವು ಹಳಿಗಳ ಒಳಗೆ ಕಣ್ಣಿಗೆ ಕಾಣಿಸದ ಬಿರುಕುಗಳನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ. ಇದರ ಪರಿಣಾಮವಾಗಿ ಹಳಿ ಮತ್ತು ವೆಲ್ಡಿಂಗ್ ವೈಫಲ್ಯಗಳು ಸುಮಾರು ಶೇ.90 ರಷ್ಟು ಕಡಿಮೆಯಾಗಿವೆ. ಇದು ಸಮಸ್ಯೆಗಳು ಸಂಭವಿಸಿದ ನಂತರ ಸರಿಪಡಿಸುವ ಹಳೆಯ ಪದ್ಧತಿಯಿಂದ, ಅವುಗಳನ್ನು ಮೊದಲೇ ತಡೆಗಟ್ಟುವ ಆಧುನಿಕ ಪದ್ಧತಿಯತ್ತ ಆದ ಬದಲಾವಣೆಯಾಗಿದೆ.

ಪ್ರಸ್ತುತ ಬಳಕೆಯಲ್ಲಿರುವ ಇತರ ತಾಂತ್ರಿಕ ವಿಧಾನಗಳಲ್ಲಿ, ಫ್ಲ್ಯಾಶ್-ಬಟ್ ವೆಲ್ಡ್ ಗಳ ಪರೀಕ್ಷೆಗಾಗಿ 'ಫೇಸ್ಡ್-ಅರೇ' ತಂತ್ರಜ್ಞಾನ, ಹೊಸ ವೆಲ್ಡ್ ಗಳಿಗಾಗಿ ಮ್ಯಾಗ್ನೆಟಿಕ್-ಪಾರ್ಟಿಕಲ್ ತಪಾಸಣೆ ಮತ್ತು ಜಿಪಿಎಸ್ ಆಧಾರಿತ ಆಸಿಲೇಶನ್ ಮಾನಿಟರಿಂಗ್ ಸಿಸ್ಟಮ್‌ಗಳು (ಒಎಂಎಸ್) ಸೇರಿವೆ. ಇವು ಪ್ರಯಾಣದ ಗುಣಮಟ್ಟವನ್ನು ಅಳೆಯುವುದಲ್ಲದೆ, ರೈಲ್ವೆಹಳಿಗಳಲ್ಲಿನ ದೋಷಪೂರಿತ ಅಥವಾ ಒರಟಾದ ಸ್ಥಳಗಳನ್ನು ನಿಖರವಾಗಿ ಪತ್ತೆಹಚ್ಚುತ್ತವೆ. ರೈಲ್ವೆ ಟ್ರ್ಯಾಕ್ ಯಂತ್ರಗಳ ಸಂಖ್ಯೆಯು 2014 ರಲ್ಲಿ 748 ಇದ್ದದ್ದು 2026 ರ ವೇಳೆಗೆ ದುಪ್ಪಟ್ಟಾಗಿದೆ. ಈ ಯಂತ್ರಗಳು ಟ್ಯಾಂಪಿಂಗ್, ಜಲ್ಲಿಹಾಸು ಸ್ವಚ್ಛಗೊಳಿಸುವಿಕೆ ಮತ್ತು ಹಳಿಗಳ ಗ್ರೈಂಡಿಂಗ್ ಕೆಲಸಗಳನ್ನು ಹಸ್ತಚಾಲಿತ ಕೆಲಸಕ್ಕಿಂತ ಹೆಚ್ಚು ವೇಗವಾಗಿ, ಸಮರ್ಪಕವಾಗಿ ಮತ್ತು ಸಮಾನವಾಗಿ ನಿರ್ವಹಿಸುತ್ತವೆ. ಜಲ್ಲಿಹಾಸಿನ 'ಡೀಪ್ ಸ್ಕ್ರೀನಿಂಗ್' ಪ್ರಕ್ರಿಯೆಯಲ್ಲಿ ಈ ಯಂತ್ರಗಳು ಗಮನಾರ್ಹ ಬದಲಾವಣೆ ತಂದಿವೆ. ಜಲ್ಲಿಹಾಸು ನೀರು ಸರಾಗವಾಗಿ ಹರಿಯಲು ಮತ್ತು ಕಂಪನವನ್ನು ಕಡಿಮೆ ಮಾಡುತ್ತದೆ. ಸ್ಥಿರತೆಯನ್ನು ಕಾಪಾಡುತ್ತದೆ. ಕಾಲಕ್ರಮೇಣ, ರೈಲುಗಳ ಸತತ ಸಂಚಾರದ



ತೂಕ ಮತ್ತು ಕಂಪನದಿಂದಾಗಿ ಈ ಜಲ್ಲಿಕಲ್ಲುಗಳು ಪುಡಿಯಾಗಿ ಜಲ್ಲಿಹಾಸನ್ನು ಮುಚ್ಚಿಹಾಕುತ್ತವೆ. ಇದರಿಂದ ಅದರ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಸ್ಕ್ರೀನಿಂಗ್ ಪ್ರಕ್ರಿಯೆಯು ಈ ಜಲ್ಲಿಹಾಸನ್ನು ಪುನಃ ಸುಸ್ಥಿತಿಗೆ ತರುತ್ತದೆ. ಈವರೆಗೆ ಸುಮಾರು 1 ಲಕ್ಷಕ್ಕೂ ಅಧಿಕ ಕಿ.ಮೀಗಳಲ್ಲಿ ಈ ಕೆಲಸವನ್ನು ಹೆಚ್ಚಾಗಿ ಯಂತ್ರಗಳ ಮೂಲಕವೇ ನಿರ್ವಹಿಸಲಾಗಿದೆ.

ವರ್ಷದಿಂದ ವರ್ಷಕ್ಕೆ ರೈಲು ಸಂಚಾರ ಹೆಚ್ಚಾಗುತ್ತಿರುವುದರಿಂದ ರೈಲುಗಳ ನಡುವೆ ಸಿಗುವ ನಿರ್ವಹಣಾ ಸಮಯ ಕಡಿಮೆಯಾಗುತ್ತಿದೆ. ರೈಲು ಸಂಚಾರಕ್ಕೆ ಅಡ್ಡಿಯಾಗದಂತೆ ಕಡಿಮೆ ಸಮಯದಲ್ಲಿ ಹೆಚ್ಚಿನ ಕೆಲಸಮಾಡಲು ಈ ಯಂತ್ರಗಳು ಸಹಕಾರಿಯಾಗಿವೆ. ವಿಶೇಷವಾಗಿ ಗಂಟೆಗೆ 110 ಕಿಲೋಮೀಟರ್‌ಗಿಂತ ಹೆಚ್ಚಿನ ವೇಗದಲ್ಲಿ ರೈಲುಗಳು ಸಂಚರಿಸುವ ಸ್ಥಳಗಳಲ್ಲಿ ಸುಮಾರು 17,500 ಕಿಲೋಮೀಟರ್ ಉದ್ದದ ಸುರಕ್ಷತಾ ಬೇಲಿಗಳನ್ನು ಅಳವಡಿಸಲಾಗಿದೆ. ಇದು ಹಳಿಗಳ ಮೇಲೆ ಜನರು ಮತ್ತು ಜಾನುವಾರುಗಳ ಪ್ರವೇಶವನ್ನು ತಡೆಯಲು ಸಹಾಯ ಮಾಡುತ್ತದೆ. ರೈಲು ಹಳಿ ಬದಲಿಸುವ ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳಲ್ಲಿ 36,000 'ಥಿಕ್-ವೆಬ್ ಸ್ವಿಚ್' ಗಳನ್ನು ಮತ್ತು 7,500 ವೆಲ್ಡಬಲ್ ಸಿಎಂಎಸ್ ಕ್ರಾಸಿಂಗ್ ಗಳನ್ನು ಅಳವಡಿಸಲಾಗಿದೆ. ಇವು ದೀರ್ಘಕಾಲ ಬಾಳಿಕೆ ಬರುವುದಲ್ಲದೆ, ರೈಲುಗಳ ಸುಗಮ ಚಲನೆಗೆ ಅನುವು ಮಾಡಿಕೊಡುತ್ತವೆ. 2019ರಲ್ಲಿ ಅಳವಡಿಸಿಕೊಳ್ಳಲಾದ ಹೆಚ್ಚು ಅಗಲವಾದ ಮತ್ತು ತೂಕದ ಸ್ಲೀಪರ್ ಗಳು ವಿಶೇಷವಾಗಿ ಬೇಸಿಗೆಯ ತೀವ್ರ ಶಾಖದ ಸಮಯದಲ್ಲಿ ಹಳಿಗಳ ಸ್ಥಿರತೆಯನ್ನು ಹೆಚ್ಚಿಸುತ್ತವೆ. ಗರ್ಡರ್ ಸೇತುವೆಗಳ ಮೇಲೆ ಅಳವಡಿಸಲಾದ 'ಹೆಚ್-ಬೀಮ್' ಸ್ಲೀಪರ್ ಗಳು ಮತ್ತು ರೈಲ್ವೆ ಯಾರ್ಡ್‌ಗಳ ಮೂಲಕ ಹಾದುಹೋಗುವ 'ಲಾಂಗ್ ವೆಲ್ಡೆಡ್ರೈಲ್ಸ್' ರೈಲ್ವೆ ಜಾಲವನ್ನು ಮತ್ತಷ್ಟು ಬಲಪಡಿಸಿವೆ. ಗಂಟೆಗೆ 130 ಕಿಲೋಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ವೇಗವನ್ನು ತಡೆದುಕೊಳ್ಳುವ ಹಳಿಗಳ ಪ್ರಮಾಣವು ಶೇ. 6 ರಿಂದ ಸುಮಾರು ಶೇ. 23 ಕ್ಕೆ ಏರಿದೆ. ಗಂಟೆಗೆ 110 ಕಿಲೋಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ವೇಗಕ್ಕೆ ಸೂಕ್ತವಾದ ಹಳಿಗಳ ಪ್ರಮಾಣವು ಸುಮಾರು ಶೇಕಡಾ 40 ರಿಂದ 80ಕ್ಕೆ ಏರಿಕೆಯಾಗಿದೆ. ಇದು ಪ್ರಯಾಣದ ಸಮಯವನ್ನು ಕಡಿಮೆ ಮಾಡಿದೆ. ಸಮಯ ಪಾಲನೆಯನ್ನು ಸುಧಾರಿಸಿದೆ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ನಂತಹ ಸೆಮಿ-ಹೈಸ್ಪೀಡ್ ರೈಲು ಸೇವೆಗಳನ್ನು ಒದಗಿಸಲುಸಾಧ್ಯವಾಗಿಸಿದೆ.

ಈ ಎಲ್ಲಾ ಆಧುನೀಕರಣ ಕ್ರಮಗಳ ಒಟ್ಟು ಫಲಿತಾಂಶವು ಸುರಕ್ಷತೆಯನ್ನು ಹೆಚ್ಚಿಸುತ್ತದೆ. ಗಂಭೀರ ರೈಲು ಅಪಘಾತಗಳ ಸಂಖ್ಯೆಯು 2014-15ರಲ್ಲಿ 135 ಇದ್ದದ್ದು 2025-26ರ ವೇಳೆಗೆ 16ಕ್ಕೆ ಇಳಿದಿದೆ. ಅಂದರೆ ಸುಮಾರು ಶೇಕಡಾ 89 ರಷ್ಟು ಇಳಿಕೆ ಕಂಡಿದೆ. ಪ್ರತಿ ಮಿಲಿಯನ್ ರೈಲು ಕಿಲೋ ಮೀಟರ್‌ಗೆ ಸಂಭವಿಸುವ ಅಪಘಾತದ ದರವು 0.11 ರಿಂದ 0.01 ಕ್ಕೆ ಸುಧಾರಿಸಿದೆ. ಇದು ಶೇ.90ರಷ್ಟು ಸುಧಾರಣೆಯಾಗಿದೆ.

ರೈಲು ಸಂಚಾರ, ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದರೂ ಸಹ ಅಪಘಾತಗಳ ಸಂಖ್ಯೆಇಳಿಕೆಯಾಗಿರುವುದು ಗಮನಾರ್ಹ. ವೆಬ್-ಆಧಾರಿತ 'ಟ್ರ್ಯಾಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್' (ಟಿಎಂಎಸ್) ಈಗ ಅಲ್ಟ್ರಾಸಾನಿಕ್ ಪರೀಕ್ಷೆ, ಪ್ರಯಾಣದ ಗುಣಮಟ್ಟದ ರೀಡಿಂಗ್ ಮತ್ತು ಹಳಿಯ ವಿನ್ಯಾಸದ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದರಿಂದ ಆದ್ಯತೆಗಳನ್ನು ನಿರ್ಧರಿಸಲು ಮತ್ತು ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಳ್ಳಲು ಸುಲಭವಾಗಿದೆ.

ಹನ್ನೆರಡು ವರ್ಷಗಳ ಹಿಂದೆ ಭಾರತದ ಶೇಕಡಾ 60 ರಷ್ಟು ರೈಲು ಹಳಿಗಳ ವೇಗವು ಗಂಟೆಗೆ 110 ಕಿಲೋಮೀಟರ್ ಗಿಂತ ಕಡಿಮೆ ಇತ್ತು. ಹಳಿಗಳ ಬಿರುಕುಗಳು ಸಾಮಾನ್ಯವಾಗಿದ್ದವು ಮತ್ತು ಹೆಚ್ಚಿನ ನಿರ್ವಹಣಾ ಕೆಲಸಗಳನ್ನು ಕೈಯಿಂದಲೇ ಮಾಡಲಾಗುತ್ತಿತ್ತು. ಇಂದು ಸುಮಾರು ಶೇಕಡಾ 80 ರಷ್ಟು ಜಾಲವು ಗಂಟೆಗೆ 110 ಕಿಲೋಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ವೇಗವನ್ನು ನಿಭಾಯಿಸುತ್ತದೆ. ಹಳಿ ಮತ್ತು ವೆಲ್ಡಿಂಗ್ ವೈಫಲ್ಯಗಳು ಶೇಕಡಾ 90 ರಷ್ಟು ಕಡಿಮೆಯಾಗಿವೆ ಮತ್ತು ಸುಮಾರು 1,800 ಟ್ರ್ಯಾಕ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. ಲಕ್ಷಾಂತರ ಪ್ರಯಾಣಿಕರಿಗೆ ಮತ್ತು ಸರಕು ಸಾಗಣೆಯ ಮೇಲೆ ಅವಲಂಬಿತವಾಗಿರುವ ವ್ಯವಹಾರಗಳಿಗೆ ಈ ಬದಲಾವಣೆಗಳು ನಿಜವಾದ ವ್ಯತ್ಯಾಸವನ್ನು ಉಂಟುಮಾಡುತ್ತಿವೆ. ಸುಗಮ ಪ್ರಯಾಣ, ಕಡಿಮೆ ಸಮಯ ಮತ್ತು ನಂಬಿಕಸ್ತ ರೈಲು ಜಾಲವನ್ನು ಇದು ಒದಗಿಸುತ್ತಿದೆ. ಕೆಲಸವು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಈವರೆಗಿನ ಪ್ರಗತಿಯು ನಿರಂತರ ಪ್ರಯತ್ನ ಮತ್ತು ಹೂಡಿಕೆಯಿಂದ ಏನನ್ನು ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದೆ.

ಇರಾನ್‌ನಲ್ಲಿ ಅಮೆರಿಕದ ರಕ್ಷಣಾ ಕಾರ್ಯಾಚರಣೆಯ ಹಿಂದಿನ ನಿಗೂಢತೆ

▸ ಅಶ್ವಿನ್ ಬಿಲ್ವಪತ್ರ

ಇರಾನ್‌ನಲ್ಲಿ ಬಿದ್ದಿದ್ದ ತನ್ನ ಸೈನಿಕನನ್ನು ರಕ್ಷಿಸಲು ಅಮೆರಿಕ ನಡೆಸಿದ ಕಾರ್ಯಾಚರಣೆಯ ಹಿಂದೆ ಬೇರೆಯೆ ಉದ್ದೇಶಗಳಿದ್ದವೆ?

ಕೊಲ್ಲಿ ಸಮರದ ವೇಳೆ ಅಮೆರಿಕದ ಯುದ್ಧ ವಿಮಾನವೊಂದು ಪತನಗೊಂಡುದು, ಇರಾನಿನಲ್ಲಿ ಬಿದ್ದ ಸೈನಿಕನನ್ನು ಬಳಿಕ ಅಮೆರಿಕವು ವಿಶೇಷ ಕಾರ್ಯಾಚರಣೆ ನಡೆಸಿ ಕರೆತಂದುದು ಎಲ್ಲರಿಗೂ ತಿಳಿದಿರುವುದೆ. ವಿಮಾನ ಪತನದ ಕೆಲವು ವಾರಗಳ ಮೊದಲು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ 'ಇರಾನಿನ ಮೇಲೆ ಅಮೆರಿಕವು ಸಂಪೂರ್ಣ ವಾಯು ಪ್ರಾಬಲ್ಯ ಸ್ಥಾಪಿಸಿದೆ' ಎಂದು ಹೇಳಿದ್ದರು. ಇರಾನ್‌ನ ಬಳಿ ವಿಮಾನ ನಿರೋಧಕ ಸಾಧನವೇ ಇಲ್ಲ ಎಂದು ಹೇಳಿದ್ದ ಟ್ರಂಪ್, ಇರಾನಿನ ರಾಡಾರ್‌ಗಳನ್ನು ಸಂಪೂರ್ಣ ನಾಶಪಡಿಸಲಾಗಿದೆ ಎಂದು ಕೊಚ್ಚಿಕೊಂಡಿದ್ದರು. ಅಮೆರಿಕದ ಯುದ್ಧ ವಿಮಾನಗಳಿಗೆ ಇರಾನ್ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿದೆ ಎಂದು ಮಾರ್ಚ್ 24ರಂದು ಟ್ರಂಪ್ ನುಡಿದಿದ್ದರು.

ಆದರೆ ಅವರು ಹಾಗೆ ಹೇಳಿದ 9 ದಿನಗಳ ಬಳಿಕ ಅಂದರೆ ಏ.3ರಂದು ಅಮೆರಿಕದ ಯುದ್ಧ ವಿಮಾನ 'ಎಫ್-15ಇ'ಯನ್ನು ಇರಾನ್‌ನ ನೈಋತ್ಯ ಭಾಗದಲ್ಲಿ ಹೊಡೆದುರುಳಿಸಲಾಯಿತು. ಇರಾನಿನ ಸೈನಿಕನೊಬ್ಬ ಹೆಗಲ ಮೇಲಿಂದ ಉಡಾಯಿಸುವ ಕ್ಷಿಪಣಿ ಪ್ರಯೋಗಿಸಿ ಅದನ್ನು ಉರುಳಿಸಿದ್ದಾಗಿ ಅಮೆರಿಕವು ಹೇಳಿಕೊಂಡಿತು. ಆದರೆ ತಾವು ಹೊಸದಾದ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಯುದ್ಧ ವಿಮಾನ ಹೊಡೆದು ಹಾಕಿದ್ದಾಗಿ ಇರಾನ್ ಹೇಳಿಕೊಂಡಿತು.

ಯಾವುದನ್ನು ನಂಬುವುದೋ ತಿಳಿಯದು. ಆದರೆ ಅಮೆರಿಕದ ಅತ್ಯಂತ ಪ್ರಬಲ ಯುದ್ಧ ವಿಮಾನವು ಬಿದ್ದುದಂತೂ ಸತ್ಯ. ಐದು ವಾರಗಳ ಕಾಲ ಅಮೆರಿಕವು ನಡೆಸಿದ ಬಾಂಬ್ ದಾಳಿಯ ಬಳಿಕವೂ ಇರಾನ್ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಉಳಿಸಿಕೊಂಡು ಈ ಅತ್ಯಾಧುನಿಕ ಯುದ್ಧ ವಿಮಾನ ಹೊಡೆದು ಹಾಕಿತೆಂದರೆ ಅದು ಆಶ್ಚರ್ಯಕರವೆ. ಸೈನಿಕನೊಬ್ಬ ಹೆಗಲ ಮೇಲಿಂದ ಉಡಾಯಿಸುವ ಕ್ಷಿಪಣಿ ಬಳಸಿ ಅದನ್ನು ಕೆಡವಿ ಹಾಕಿದ್ದು ನಿಜವಾದರೆ ಅದು ಕೂಡಾ ಆಶ್ಚರ್ಯವೆ. ಏಕೆಂದರೆ ಇಲ್ಲಿ ಯಾವುದೇ ವಿವರಣೆಯೂ ವಿಶ್ವಾಸ ಮೂಡಿಸುವಂತಿಲ್ಲ. ಪ್ರತಿಯೊಂದು ವಿವರಣೆ ಕೂಡಾ ಹಲವು ಅನುಮಾನ ಹುಟ್ಟಿಸುವಂತಿದೆ.

ವಿವಾದಾತೀತವಾಗಿರುವುದೆಂದರೆ ಒಂದೇ ವಿಷಯ- ಯುದ್ಧ ವಿಮಾನ ಹೊಡೆದುರುಳಿಸಲ್ಪಟ್ಟಿತೆಂಬುದು! ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ವಿಮಾನದಿಂದ ಇಜೆಕ್ಟ್ ಆಗಿ ಇರಾನಿನ ಪರ್ವತ ಪ್ರದೇಶದಲ್ಲಿ ಆಶ್ರಯಪಡೆದರು. ಅಮೆರಿಕವು ಅವರಿಗಾಗಿ ಹುಡುಕಾಟ ಆರಂಭಿಸಿ ಅವರನ್ನು ರಕ್ಷಿಸಲು ಸಫಲವಾಯಿತು. ಬಳಿಕ ಅಮೆರಿಕವು ಇದು ಅಮೆರಿಕದ ಮಿಲಿಟರಿ ಇತಿಹಾಸದಲ್ಲೇ ಅತ್ಯಂತ ಸಂಕೀರ್ಣ ರಕ್ಷಣಾ ಕಾರ್ಯಾಚರಣೆ ಎಂದು ಬಣ್ಣಿಸಿತು.

ಹಾಗೆ ಉರುಳಿದ 'ಎಫ್-15ಇ ಸ್ಟ್ರೈಕ್ ಈಗಲ್' ಯುದ್ಧ ವಿಮಾನವು ಶತ್ರು ರಾಷ್ಟ್ರದೊಳಕ್ಕೆ ತೀರಾ ಒಳನುಗ್ಗಿ ದಾಳಿ ಮಾಡುವಂತಹ ಸಾಮರ್ಥ್ಯ ಹೊಂದಿರುವಂತಹುದು. ಅಂತಹ ಒಂದು ವಿಮಾನದ ತಯಾರಿ ವೆಚ್ಚ 100 ಮಿಲಿಯ ಡಾಲರ್. ಅದರಲ್ಲಿ ಇಬ್ಬರು ಪ್ರಯಾಣಿಸುತ್ತಾರೆ. ಮುಂಭಾಗದಲ್ಲಿ ಪೈಲಟ್ ಮತ್ತು ಹಿಂಭಾಗದಲ್ಲಿ 'ಶಸ್ತ್ರಾಸ್ತ್ರ ವ್ಯವಸ್ಥೆ ಆಫೀಸರ್'(ಡಬ್ಲ್ಯುಎಸ್‌ಒ). ಕರ್ನಲ್ ಶ್ರೇಣಿಯ ಡಬ್ಲ್ಯುಎಸ್‌ಒ ಯಾವೆಲ್ಲ ಗುರಿಗಳಿಗೆ ದಾಳಿ ನಡೆಸಬೇಕು ಎಂದು ನಿರ್ಧರಿಸುತ್ತಾನೆ.

ಅಮೆರಿಕದ ಪೈಲಟ್‌ನ ಸಂಕೇತ ನಾಮ 'ಡ್ಯೂಡ್ 44 ಆಲ್ಫಾ'. ಡಬ್ಲ್ಯುಎಸ್‌ಒ ಸಂಕೇತ ನಾಮ 'ಡ್ಯೂಡ್ 44 ಬ್ರಾವೊ'. ಇವರಿಬ್ಬರ ಕುರಿತು ಇಷ್ಟೇ ತಿಳಿದಿರುವುದು. ಅವರ ನಿಜವಾದ ಹೆಸರುಗಳನ್ನು ಅಮೆರಿಕ ಬಹಿರಂಗಪಡಿಸಲಿಲ್ಲ.



ಅಮೆರಿಕದ ವಿಮಾನಗಳ ಅವಶೇಷಗಳು

ಈ ವಿಮಾನವುದ ದಾಳಿಗೆ ಸಿಲುಕಿ ಉರುಳಿದ್ದು ನೈಋತ್ಯ ಇರಾನ್‌ನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾಗ. ತಕ್ಷಣವೇ ಇರಾನಿನ ಸೈನಿಕರು ಅವರಿಗಾಗಿ ಹುಡುಕಾಟ ಆರಂಭಿಸಿದರು. ಇರಾನಿನ ಸೇನೆಯು ಕರೆ ನೀಡಿದರನ್ವಯ ಇರಾನಿನ ನಾಗರಿಕರು ಕೂಡಾ ಶೋಧ ನಡೆಸಲಾರಂಭಿಸಿದರು.

ಇಬ್ಬರೂ ಸೈನಿಕರು ಸುರಕ್ಷಿತವಾಗಿ ವಿಮಾನದಿಂದ ಇಜೆಕ್ಟ್ ಆಗಿದ್ದರು. ಆದರೆ ನಂತರ ಏನಾಯಿತೆಂಬುದರ ಬಗ್ಗೆ ಮಾತ್ರ ಸ್ಪಷ್ಟ ವಿವರಗಳು ಸಿಗುವುದಿಲ್ಲ. ಪೈಲಟ್ ಇರಾನ್‌ನ ಖುಜೆಸ್ತಾನ್ ಪ್ರಾಂತ್ಯದಲ್ಲಿ ಹಾಗೂ ಕರ್ನಲ್ ಇರಾನಿನ ಜಾಗ್ರೋಸ್ ಪರ್ವತ ಪ್ರದೇಶದಲ್ಲಿ ಬಿದ್ದ ಎಂದು ಹೇಳಲಾಯಿತು. ಆದರೆ ಅದೇಕೆ ಇಬ್ಬರು ಪೈಲಟ್‌ಗಳು ಅಷ್ಟು ದೂರದಲ್ಲಿ ವಿಭಿನ್ನ ಪ್ರಾಂತ್ಯಗಳಲ್ಲಿ ನೆಲಕ್ಕೆ ಬಿದ್ದರು ಎಂಬ ಕುರಿತಂತೆ ಯಾವುದೇ ಸ್ಪಷ್ಟನೆ ಸಿಗಲಿಲ್ಲ. ಡಬ್ಲ್ಯುಎಸ್‌ಒ ಸೈನಿಕ 480 ಕಿ.ಮೀ.ನಷ್ಟು ಒಳಗೆ ಇರಾನ್‌ನಲ್ಲಿ ಬಿದ್ದಿದ್ದ.

ರಕ್ಷಣೆ ಕಾರ್ಯಾಚರಣೆ

ಅಮೆರಿಕವು ಇಬ್ಬರು ಸೈನಿಕರನ್ನು ರಕ್ಷಿಸಲು ಕ್ಷಿಪ್ರ ಕಾರ್ಯಾಚರಣೆ ನಡೆಸಿತು. ಒಂದು ಹೆಲಿಕಾಪ್ಟರ್ ಹಾಗೂ ಮತ್ತೊಂದು ಯುದ್ಧ ವಿಮಾನ ಇರಾನ್‌ನ ವಾಯುಪ್ರದೇಶವನ್ನು ಪ್ರವೇಶಿಸಿತು. ನೆಲಕ್ಕೆ ಬಿದ್ದಿರುವ ಪೈಲಟ್‌ಗಳಿಗೆ ರಕ್ಷಣೆ ನೀಡುವುದು ಮತ್ತು ಅವರನ್ನು ಸುರಕ್ಷಿತವಾಗಿ ಕರೆತರುವುದು ಈ ಕಾರ್ಯಾಚರಣೆಯ ಉದ್ದೇಶವಾಗಿತ್ತು. ವಿಮಾನದ ಪೈಲಟ್‌ನನ್ನು ಗಂಟೆಯೊಳಗೆ ಪತ್ತೆ ಹಚ್ಚಿ ರಕ್ಷಿಸಲಾಯಿತು. ಈ ಬೆಳವಣಿಗೆ ವೇಳೆ ಅಮೆರಿಕದ ಹೆಲಿಕಾಪ್ಟರ್‌ಗೆ ಇರಾನ್ ಹಾರಿಸಿದ ಗುಂಡು ತಗಲಿತಾದರೂ ಅದು ಸುರಕ್ಷಿತವಾಗಿ ಇರಾನ್‌ನಿಂದ ಹೊರಬರಲು ಸಫಲವಾಯಿತು.

ಅಮೆರಿಕಕ್ಕೆ ಇನ್ನೊಬ್ಬ ಸೈನಿಕನನ್ನು ರಕ್ಷಿಸುವುದೇ ಕಠಿಣವಾದುದಾಗಿತ್ತು. ಆತ ಇರಾನ್‌ನ ಪರ್ವತ ಪ್ರದೇಶದಲ್ಲಿ ಇರುವುದು ಅಮೆರಿಕಕ್ಕೆ ತಿಳಿದಿತ್ತಾದರೂ ಆತನಿರುವ ನಿಖರ ಜಾಗ ತಿಳಿದಿರಲಿಲ್ಲ. ಅಮೆರಿಕ ಹೇಳುವ ಪ್ರಕಾರ ಬಿದ್ದ ರಭಸಕ್ಕೆ ಆತನ ಕಾಲಿನ ಮೂಳೆಗೆ ಏಟಾಗಿತ್ತು. ಆದರೂ ಆತ ನಡೆಯಲು ಶಕ್ತನಾಗಿದ್ದ. ಆತ ಪರ್ವತವೊಂದನ್ನೇರಿ ಅಲ್ಲಿ ಕಲ್ಲುಬಂಡೆಗಳ ಮಧ್ಯೆ ಅವಿತು ಕುಳಿತಿದ್ದ. ಇರಾನ್ ಆತನ ತಲೆಗೆ 60 ಸಾವಿರ ಡಾಲರ್ ಬಹುಮಾನ ಘೋಷಿಸಿತು. ಆತನನ್ನು ಪತ್ತೆ ಹಚ್ಚಿ ಕೊಲ್ಲುವಂತೆ ಅಥವಾ ತಮಗೆ ಒಪ್ಪಿಸುವಂತೆ ಇರಾನ್ ಮಿಲಿಟರಿಯು ನಾಗರಿಕರಿಗೆ



ಕರೆ ನೀಡಿತು. ಇತ್ತ ಅಮೆರಿಕನ್ ಮಿಲಿಟರಿಗೂ 14 ಗಂಟೆಗಳ ಕಾಲ ಆ ಸೈನಿಕನಿಂದ ಯಾವುದೇ ಸುದ್ದಿ ಬರಲಿಲ್ಲ. ಆ ಬಳಿಕ "ಗಾಡ್ ಈಸ್ ಗುಡ್" ಎಂಬ ತುಣುಕು ಸಂದೇಶ ಬಂತು. ಮತ್ತಾವುದೇ ವಿವರವಿಲ್ಲ! ಇದು ಆತನದ್ದೇ ಸಂದೇಶವೆ ಅಥವಾ ಇರಾನ್ ಅಮೆರಿಕವನ್ನು ಬಲೆಗೆ ಕೆಡವಲು ಕಳಿಸಿದ ಸಂದೇಶವೆ ಎಂಬ ಗೊಂದಲ ಅಮೆರಿಕದ ಮಿಲಿಟರಿ ತಜ್ಞರಿಗೆ.

ಆದರೆ ಬಳಿಕ ಅಮೆರಿಕ ಇದು ತಮ್ಮ ಸೈನಿಕನದ್ದೇ ಸಂದೇಶ ಎಂಬ ನಿರ್ಧಾರಕ್ಕೆ ಬಂತು. ಅದನ್ನು ಯಾವ ರೀತಿ ದೃಢಪಡಿಸಲಾಯಿತೆಂಬ ವಿವರ ನೀಡಲಿಲ್ಲ. 'ಘೋಸ್ಟ್ ಮರ್ಮರ್' ಎಂಬ ಅತ್ಯಾಧುನಿಕ ವ್ಯವಸ್ಥೆಯ ಮೂಲಕ ಆತನ ಇರವನ್ನು ಪತ್ತೆ ಹಚ್ಚಲಾಯಿತೆಂಬ ಮಾತುಗಳು ಹರಿದಾಡಿದವು. ಮನುಷ್ಯನ ಹೃದಯಬಡಿತವನ್ನು ಬಹುದೂರದಿಂದಲೇ ಆಲಿಸಿ ಆತ ಎಲ್ಲಿದ್ದಾನೆಂದು ಪತ್ತೆ ಹಚ್ಚುವ ಸಾಧನವನ್ನು ಇದಕ್ಕಾಗಿ ಬಳಸಲಾಯಿತು ಎಂಬುದಾಗಿ ಹೇಳಲಾಗುತ್ತಿದೆ. ಆದರೆ ಅಮೆರಿಕವು ಅಧಿಕೃತವಾಗಿ ಇದನ್ನು ಎಲ್ಲಿಯೂ ದೃಢಪಡಿಸಿಲ್ಲ.

ಅಮೆರಿಕದ ಕಾರ್ಯಾಚರಣೆ ಮತ್ತು ಅದರ ನಿಗೂಢತೆ

ಕೆಲವೇ ಗಂಟೆಗಳಲ್ಲಿ ಇಸ್ಫಹಾನ್ ಪ್ರದೇಶದಲ್ಲಿ ಅಮೆರಿಕದ ವಿಮಾನಗಳು ಹಾರಾಡತೊಡಗಿದವು. ಒಟ್ಟು 155 ವಿಮಾನಗಳು (4 ಬಾಂಬರ್‌ಗಳು, 64 ಫೈಟರ್ ಜೆಟ್‌ಗಳು, 48 ಇಂಧನ ಪೂರೈಕೆ ಟ್ಯಾಂಕರ್‌ಗಳು, 13 ರಕ್ಷಣಾ ವಿಮಾನ ಗಳು ಸೇರಿದಂತೆ) ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡವು. ಬಳಸದೆ ಬಿಟ್ಟಿದ್ದ ಕೃಷಿ ಪ್ರದೇಶದ ಏರ್‌ಸ್ಟ್ರಿಪ್‌ನ್ನು ತಾತ್ಕಾಲಿಕ ನೆಲೆಯನ್ನಾಗಿ ಮಾಡಲಾಯಿತು.

ಮೊತ್ತ ಮೊದಲ ಕ್ಷಣದಿಂದಲೇ ಇದೊಂದು ರಕ್ಷಣಾ ಕಾರ್ಯಾಚರಣೆ ಎಂಬಂತೆ ಕಂಡುಬರಲೇ ಇಲ್ಲ. ಇಸ್ಫಹಾನ್ ಮೇಲೆ ವೈಮಾನಿಕ ಪ್ರಾಬಲ್ಯದ ಕೋಟೆಯನ್ನೇ ಕಟ್ಟಿದಂತೆ ಭಾಸವಾಯಿತು. ನೆಲದಲ್ಲಿ ಏನು ನಡೆಯುತ್ತಿದೆಯೋ ಅದು ಯಾರಿಗೂ ತಿಳಿಯದ ರೀತಿಯಲ್ಲಿ ಅಮೆರಿಕದ ಈ ವಾಯು ಕೋಟೆ ನಿರ್ಮಾಣವಾಗಿತ್ತು.

ಬಳಿಕ ಪರ್ವತ ಪ್ರದೇಶದಲ್ಲಿದ್ದ ಸೈನಿಕನನ್ನು ತಲುಪಿ ಆತನನ್ನು ಸುರಕ್ಷಿತವಾಗಿ ನೆಲೆಗೆ ತರಲಾಯಿತು. ತಮ್ಮ ನೆಲೆಗೆ ಇರಾನ್ ಪಡೆಗಳು ಹಿಂಬಾಲಿಸಿ ಬರದಂತೆ ಮಾಡಲು ಅಮೆರಿಕದ ವಿಮಾನಗಳು ರಸ್ತೆಯುದ್ದಕ್ಕೂ ಬಾಂಬ್ ಚೆಲ್ಲಿ ರಸ್ತೆ ಹಾಳು ಮಾಡಿದವು. ತಾವು ನೆಲೆ ಸ್ಥಾಪಿಸಿದ ಫಾರ್ಮ್ ಕಡೆಗೆ ವೈರಿ ರಾಷ್ಟ್ರದ ಒಬ್ಬನೇ ಒಬ್ಬ ಸೈನಿಕ ಪ್ರವೇಶಿಸದ ರೀತಿಯಲ್ಲಿ ಬಂದೋಬಸ್ತು ಮಾಡಿದರು. ಇದೇವೇಳೆ ಎರಡು ಸರಕುಸಾಗಣಾ ವಿಮಾನಗಳು ಅಲ್ಲಿ ಕಾದು ನಿಂತಿದ್ದವು. ಆದರೆ ಅವುಗಳಿಗೆ ಮೇಲೇರಲಾಗಲಿಲ್ಲ. ಅವು ಅಲ್ಲೇ ಉಳಿಯಬೇಕಾಯಿತು. ಅಲ್ಲಿನ ಮರಳಿನ ಕಾರಣದಿಂದಾಗಿ ವಿಮಾನದ ಚಕ್ರಗಳು ಹೂತು ಹೋದವು ಎಂಬುದು ಅಮೆರಿಕ ನೀಡುತ್ತಿರುವ ಕಾರಣ. ಆದರೆ ಬಳಿಕ ತಿಳಿದುಬಂದಂತೆ ಇರಾನಿನ ಸೈನಿಕರು ಹಾರಿಸಿದ ಗುಂಡೇಟುಗಳಿಂದ ವಿಮಾನಗಳಿಗೆ ಬಹಳಷ್ಟು ಹಾನಿಯಾಗಿತ್ತು.ಈ ವಿಮಾನಗಳು ವೈರಿ ರಾಷ್ಟ್ರದ ಕೈಗೆ ಸಿಗದಂತೆ ಮಾಡಲು ಅಮೆರಿಕವು ಅವುಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿತು. ಜತೆಗೇ ಹಾನಿಗೀಡಾದ 4 ಹೆಲಿಕಾಪ್ಟರ್‌ಗಳಿಗೂ ಬೆಂಕಿ ಹಚ್ಚಲಾಯಿತು.

ಹೆಚ್ಚುವರಿಯಾಗಿ ಆಗಮಿಸಿದ ಕೆಲವು ಅಮೆರಿಕನ್ ವಿಮಾನಗಳು ರಕ್ಷಿಸಲ್ಪಟ್ಟ ಸೈನಿಕನನ್ನು ಹೊತ್ತು ಬೆಳಕು ಮೂಡುವುದರೊಳಗೆ ಇರಾನ್‌ನ ವಾಯುಪ್ರದೇಶ ದಾಟಿ ಹೊರ ಬಂದವು.

ಉತ್ತರವಿಲ್ಲದ ಪ್ರಶ್ನೆಗಳು

ಅಮೆರಿಕದ ಇಷ್ಟು ದೊಡ್ಡ ಮಟ್ಟದ ಕಾರ್ಯಾಚರಣೆಯು ನಿಜವಾಗಿಯೂ ಒಬ್ಬ ಸೈನಿಕನನ್ನು ರಕ್ಷಿಸಲು ನಡೆದುದೇ ಅಥವಾ ಅದರ ಹಿಂದೆ ಬೇರೆಯೆ ಆದ ಇನ್ನೂ ದೊಡ್ಡ ಯೋಜನೆ ಇತ್ತೆ? ಅಮೆರಿಕ ನೆಲೆ ಸ್ಥಾಪಿಸಿದ ಫಾರ್ಮ್ ಶಹ್ರೇಜಾ ನಗರದಿಂದ 14 ಮೈಲು ದೂರವಿದೆ. ಇರಾನ್ ಸಂಸ್ಕರಿತ ಯುರೇನಿಯಂನನ್ನು ಸಂಗ್ರಹಿಸಿಟ್ಟಿರುವ ಜಾಗವು ಇಸ್ಫಹಾನ್ ಪ್ರಾಂತ್ಯದಲ್ಲಿದೆಯೆಂಬುದಾಗಿ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಈ ಹಿಂದೆಯೇ ಖಚಿತಪಡಿಸಿತ್ತು. ಇರಾನ್ ಬಳಿ 440 ಕಿಲೋ ಯುರೇನಿಯಂ ಇದೆ ಎಂದು ಅಂದಾಜಿಸಲಾಗಿದ್ದು, ಇದರಿಂದ 10 ಪರಮಾಣು ಬಾಂಬುಗಳನ್ನು ತಯಾರಿಸಬಹುದಾಗಿದೆ. ಈ ಯುರೇನಿಯಂನ್ನು ಇರಾನ್‌ನಿಂದ ತರುವುದೇ ಅಮೆರಿಕದ ಮುಖ್ಯ ಕಾರ್ಯಾಚರಣೆಯಾಗಿತ್ತೆಂದು ಅನುಮಾನ ವ್ಯಕ್ತಪಡಿಸಲಾಗುತ್ತಿದೆ.

ಅಮೆರಿಕದ ವಿಮಾನ ಪತನಗೊಳ್ಳುವ ಹತ್ತು ದಿನಗಳ ಮೊದಲು ವಾಲ್ ಸ್ಟ್ರೀಟ್ ಜರ್ನಲ್ ಪತ್ರಿಕೆಯು ವಿಶೇಷ ವರದಿಯೊಂದನ್ನು ಪ್ರಕಟಿಸಿ ಇರಾನ್‌ನ ಯುರೇನಿಯಂನ್ನು ತೆಗೆದುಕೊಂಡು ಬರಲು ವಿಶೇಷ ಕಮಾಂಡೋ ಕಾರ್ಯಾಚರಣೆ ನಡೆಸುವ ಬಗ್ಗೆ ಟ್ರಂಪ್‌ಗೆ ಸೇನಾಧಿಕಾರಿಗಳು ಮಾಹಿತಿ ನೀಡಿದ್ದರು ಎಂದಿತ್ತು. ವಾಷಿಂಗ್ಟನ್ ಪೋಸ್ಟ್ ಕೂಡಾ ಇದೇ ಸುದ್ದಿಯನ್ನು ದೃಢಪಡಿಸಿತ್ತು.

ಒಬ್ಬ ಸೈನಿಕನನ್ನು ರಕ್ಷಿಸಲು ಯಾವುದೇ ದೇಶವು ಅಷ್ಟು ದೊಡ್ಡ ಪ್ರಮಾಣದಲ್ಲಿ ಮಿಲಿಟರಿ ಶಕ್ತಿಯನ್ನು ಬಳಸುವುದಿಲ್ಲ. ಅಷ್ಟೆಲ್ಲಾ ಯುದ್ಧ ವಿಮಾನಗಳನ್ನು ಉಪಯೋಗಿಸುವುದಿಲ್ಲ. ಇಸ್ಫಹಾನ್‌ನಲ್ಲಿ ಅಮೆರಿಕ ನಡೆಸಿದ ಕಾರ್ಯಾಚರಣೆ ಗಮನಿಸುವಾಗ ಇದು ಸೈನಿಕನನ್ನು ರಕ್ಷಿಸಲು ತುರ್ತಾಗಿ ನಡೆಸಿದ ಕಾರ್ಯಾಚರಣೆಗಿಂತಲೂ ಹೆಚ್ಚಾಗಿ ಬಹಳ ಪೂರ್ವಸಿದ್ಧತೆಯೊಂದಿಗೆ ಸಾಕಷ್ಟು ಯೋಜನಾಬದ್ಧವಾಗಿ ನಡೆಸಿದ ಕಾರ್ಯಾಚರಣೆ ಎಂಬಂತೆ ಕಂಡುಬರುತ್ತದೆ.

ಈ ಕಾರ್ಯಾಚರಣೆಯ ಕುರಿತಂತೆ ಸ್ಪಷ್ಟತೆಯ ಅಲಭ್ಯತೆಯಿರುವುದು ಯಾವುದೇ ಸಂವಹನದ ಕೊರತೆಯಿಂದಲ್ಲ. ಇದು ಉದ್ದೇಶಪೂರ್ವಕ! ಕಾರ್ಯಾಚರಣೆಯ ವೇಗ, ಸಿದ್ಧತೆ, ಬಳಿಕ ವಿವರಗಳನ್ನೆಲ್ಲ ಮುಚ್ಚಿಟ್ಟ ರೀತಿ ಗಮನಿಸುವಾಗ ಇದು ನಿಗೂಢತೆ ಕಾಯ್ದುಕೊಂಡ ಕಾರ್ಯಾಚರಣೆ ಎಂಬುದು ಸ್ಪಷ್ಟವಾಗುತ್ತದೆ.

ಅಲ್ಲಿ ಮಹತ್ತರವಾದುದೇನೋ ಸಂಭವಿಸಿರುವುದು ದಿಟ. ರಾಜಕೀಯ ದಾಟದಲ್ಲಿ ಮೌನವೆಂಬುದು ಖಾಲಿಯಾಗಿರುವುದಿಲ್ಲ. ನಿಜವಾದ ಗುರಿ ಬೇರೇಯೇ ಆಗಿತ್ತೆಂಬುದು ಅದರ ಸಂಕೇತವಾಗಿರುತ್ತದೆ.


ನಾವೇಕೆ ಪುಸ್ತಕ ಓದಬೇಕೆಂದರೆ...

▸ ಯಜ್ಞ ನಾರಾಯಣ ಉಳ್ಳೂರ

ಪುಸ್ತಕಗಳು ಬದುಕಿನ ಕೈಗನ್ನಡಿ ಇದ್ದಂತೆ. ಪುಸ್ತಕಗಳು ಸಮಾಜದ ಪ್ರತಿಬಿಂಬ, ಪುಸ್ತಕಗಳು ಮಾನವ ಮಿತ್ರ. ಪುಸ್ತಕಗಳು ಜ್ಞಾನ ನೀಡುವ ಕಲ್ಪವೃಕ್ಷಗಳಿದ್ದಂತೆ.

"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" ಎಂದಿದೆ ಗೀತೆ. ಪ್ರಪಂಚದಲ್ಲಿ ಜ್ಞಾನಕ್ಕಿಂತ ಮಿಗಿಲಾದುದು ಇಲ್ಲ. ನಮ್ಮ ಅಜ್ಞಾನವೇ ಬದುಕಿನ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ನಾವು ಬದುಕಿನಲ್ಲಿ ಜ್ಞಾನವನ್ನು ಗಳಿಸಬೇಕು. ನಮ್ಮೆಲ್ಲ ಸಮಸ್ಯೆಗಳಿಗೆ ಜ್ಞಾನದಿಂದ ಪರಿಹಾರವಿದೆ. ಜ್ಞಾನದಿಂದ ನಮ್ಮ ಮನಸ್ಸು ವಿಶಾಲವಾಗುತ್ತದೆ. ಜ್ಞಾನಾರ್ಜನೆಗಾಗಿ ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ಜ್ಞಾನಾರ್ಜನೆಗೆ ಪುಸ್ತಕ ಓದುವುದಕ್ಕಿಂತ ನೇರವಾದ, ಸುಲಭವಾದ ಬೇರೆ ಮಾರ್ಗವಿಲ್ಲ.

ಉತ್ತಮ ಪುಸ್ತಕಗಳ ಓದಿನಿಂದ ನಮ್ಮ ಮನಸ್ಸಿಗೆ ಹಿತಾನುಭವ ವಾಗುತ್ತದೆ, ಸಂತೋಷವಾಗುತ್ತದೆ. ಆ ಓದಿನ ಸಮಯದಲ್ಲಿ ನಮ್ಮ ಬದುಕಿನ ಸಮಸ್ಯೆಗಳನ್ನೆಲ್ಲ ನಾವು ಮರೆಯುತ್ತೇವೆ. ಓದಿನ ಸುಖದಲ್ಲಿ ನಾವು ನಮ್ಮ ಪ್ರಪಂಚವನ್ನೇ ತಾತ್ಕಾಲಿಕವಾಗಿ ಮರೆತು ಬಿಡುತ್ತೇವೆ. ಇದೇ ಓದಿನ ಸುಖ, ಓದಿನ ಖುಷಿ. ನಮ್ಮ ಮನಸ್ಸು ಒಂದಿಷ್ಟು ಹೊತ್ತು ದೈನಂದಿನ ಜೀವನದ ರಗಳೆಗಳನ್ನೆಲ್ಲ ಮರೆತು ಬೇರೊಂದು ಲೋಕದಲ್ಲಿ ವಿಹರಿಸುತ್ತದೆ. ಓದುವ ಹವ್ಯಾಸ ಇಲ್ಲದವರು ಇಂತಹ ಸುಖದಿಂದ ವಂಚಿತರೇ ಸರಿ. ಜನಸಾಮಾನ್ಯರಲ್ಲಿ, ಮುಖ್ಯವಾಗಿ ಯುವಕರಲ್ಲಿ ಓದುವ ಹವ್ಯಾಸವನ್ನು ಉತ್ತೇಜಿಸುವ ಉದ್ದೇಶದಿಂದಾಗಿ ಯುನೆಸ್ಕೊ 1995ರಿಂದ ವಿಶ್ವ ಪುಸ್ತಕ ದಿನಾಚರಣೆಯನ್ನು ಪ್ರತಿವರ್ಷ ಏ. 23ರಂದು ಆಚರಿಸಲಾರಂಭಿಸಿತು. ಪುಸ್ತಕಗಳನ್ನು



ಓದುವುದು ಕೂಡಾ ಒಂದು ರೀತಿಯ ವಿದ್ಯಾಭ್ಯಾಸ ಎನ್ನುತ್ತಾರೆ. ಪುಸ್ತಕಾ ಭ್ಯಾಸವು ತಿಳುವಳಿಕೆ, ಓದಿನ ಖುಷಿಯ ಜೊತೆಗೆ ಯೋಚನಾ ಶಕ್ತಿಯನ್ನು ಓದುಗನಿಗೆ ನೀಡುತ್ತದೆ. ನಮ್ಮದೇ ಸಣ್ಣ ಪ್ರಪಂಚದಲ್ಲಿ ನಾವಿರುವಾಗ ಉತ್ತಮ ಪುಸ್ತಕಗಳ ಓದು ನಮ್ಮ ಪ್ರಪಂಚದ ಪರಿಧಿಯನ್ನು ವಿಸ್ತರಿಸುತ್ತದೆ.

ನಮಗೆ ನಮ್ಮದೇ ಕಷ್ಟಗಳು, ಸಮಸ್ಯೆಗಳು ನಮ್ಮ ಬದುಕಿನಲ್ಲಿ ದೊಡ್ಡದೆನಿಸಬಹುದು. ಬೇರೆಯವರ ಕಷ್ಟ ನಷ್ಟಗಳನ್ನು ಓದಿ ತಿಳಿದುಕೊಂಡಾಗ ನಮ್ಮ ಕಷ್ಟಗಳು ನಗಣ್ಯವೆನಿಸಬಹುದು. ಓದುವಿಕೆಯು ಹೊಸ ಆಲೋಚನಗಳತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಬದುಕನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಒಂದು ಒಳ್ಳೆಯ ಪುಸ್ತಕ ಓದಲು ದೊರೆತಾಗ ನಾವು ಅದರ ಓದಿನಲ್ಲಿ ನಮ್ಮನ್ನೇ ಮರೆಯುತ್ತೇವೆ. ಒಳ್ಳೆಯ ಪುಸ್ತಕವನ್ನು ಮತ್ತೆ ಮತ್ತೆ ಓದಿದಾಗ ಹೊಸ ಹೊಸ ಅರ್ಥಗಳು ನಮ್ಮ ಅರಿವಿಗೆ ಬರುತ್ತದೆ. ಉತ್ತಮ ಪುಸ್ತಕಗಳು ಮನುಷ್ಯ ಸ್ವಭಾವವನ್ನು ಅರ್ಥೈಸಿಕೊಳ್ಳಲು ನಮಗೆ ನೆರವಾಗುತ್ತದೆ. ಓದಿನ ಹವ್ಯಾಸವು ಓದುಗನ ಬುದ್ಧಿಯನ್ನು ಹೆಚ್ಚು ಸೂಕ್ಷ್ಮಗೊಳಿಸುತ್ತದೆ, ಹರಿತವಾಗಿಸುತ್ತದೆ.

ನಮ್ಮ ಬದುಕು ಸಹನೀಯವಾಗಲು, ಸಾರ್ಥಕವಾಗಲು ಉತ್ತಮ ಪುಸ್ತಕಗಳನ್ನು ಓದಬೇಕು. ಪುಸ್ತಕ ಗಳ ಪುಟ ಪುಟಗಳಲ್ಲಿ ಪ್ರಪಂಚದ ಜ್ಞಾನವೆಲ್ಲ ಅಡಗಿದೆ. ಪುಸ್ತಕ ಗಳ ಪುಟ ಪುಟಗಳಲ್ಲಿರುವ ಅಕ್ಷರಗಳು, ಪದಗಳು ನಿರ್ಜೀವ ವಲ್ಲ ಅವು ಓದುಗನೊಂದಿಗೆ ಸಂತೋಷಿಸುತ್ತವೆ, ದುಃಖಿಸು ತ್ತವೆ, ನಲಿಯತ್ತವೆ. ಸದಾ ಹರಿದಾಡುತ್ತಿರುವ ಚಂಚಲ ಮನ ಸ್ಸನ್ನು ಏಕಾಗ್ರತೆಗೊಳಿಸಲು ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ನಮ್ಮ ಮನಸ್ಸು ಆಲೋಚನೆಗಳ ಗುಚ್ಛವಾಗಿದ್ದು, ನಮ್ಮ ಆಲೋಚನೆಗಳೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ. ಉತ್ತಮ ಆಲೋಚನೆಗಳು ಮೂಡಿ ಬರಲು ನಾವು ಉತ್ತಮ ಪುಸ್ತಕಗಳನ್ನು ಓದಬೇಕು. ಉತ್ತಮ ಪುಸ್ತಕಗಳ ಓದಿನಿಂದ

ಇಂದು ವಿಶ್ವ ಪುಸ್ತಕ ದಿನ. ನಮ್ಮ ಮಾನಸಿಕ ಆರೋಗ್ಯಕ್ಕೆ ಉತ್ತಮ ಪುಸ್ತಕಗಳ ಓದು ಅಗತ್ಯವಾಗಿದೆ.

ಓದುಗನ ಏಕಾಗ್ರತೆಯು ವೃದ್ಧಿಯಾಗುವುದಲ್ಲದೆ ಆತನ ಸೃಜನಶೀಲತೆ, ಕಲ್ಪನಾ ಶಕ್ತಿ ಹೆಚ್ಚುತ್ತದೆ. ಬದುಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವು ಓದುಗನಿಗೆ ಲಭಿಸುತ್ತದೆ. ಸರಿಯಾದ ಕಾಲದಲ್ಲಿ, ಸರಿಯಾದ ಪುಸ್ತಕಗಳನ್ನು ಓದಿದಾಗ ಉಂಟಾಗುವ ಪರಿಣಾಮವು ವಿಶೇಷವಾದುದು.

ಮಕ್ಕಳು, ವಿದ್ಯಾರ್ಥಿಗಳು ಪಾಠ ಪುಸ್ತಕಗಳ ಜೊತೆಗೆ ಅವರಿಗೆ ಆಸಕ್ತಿ ಇರುವ ಇತರ ಪುಸ್ತಕಗಳನ್ನು ಓದುವಂತೆ ಶಿಕ್ಷಕರು ಹಾಗೂ ಪಾಲಕರು ಪ್ರೋತ್ಸಾಹಿಸಬೇಕು. ಇಂದಿನ ದಿನಗಳಲ್ಲಿ ಪೋಷಕರ ಅತಿಯಾದ ಆರೈಕೆಯಲ್ಲಿ ಬೆಳೆಯುವ ಮಕ್ಕಳಿಗೆ ಕಷ್ಟ ಸುಖಗಳ ಅರಿವು ಇರುವುದಿಲ್ಲ. ಹಾಗಾಗಿ ತಮ್ಮ ಜೀವನದಲ್ಲಿ ಒಂದು ಸಣ್ಣ ಸಮಸ್ಯೆ ಎದುರಾದರೂ ಕಂಗಾಲಾಗಿ ಬಿಡುತ್ತಾರೆ. ಭವಿಷ್ಯದ ಬದುಕಿನಲ್ಲಿ ಕಷ್ಟಗಳೆದುರಾದಾಗ ಗೊಂದಲಕ್ಕೊಳಗಾಗುತ್ತಾರೆ. ಉತ್ತಮ ಪುಸ್ತಕಗಳ ಓದಿನಿಂದ ಅವರಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ಓದುವಿಕೆಯಿಂದ ವಿದ್ಯಾರ್ಥಿಗಳಲ್ಲಿ ಉಚ್ಚಾರದಲ್ಲಿ ಸ್ಪಷ್ಟತೆ, ಮಾತಿನಲ್ಲಿ ನಿರರ್ಗಳತೆ, ವಿಷಯ ಸಂಗ್ರಹ ಹೆಚ್ಚುತ್ತದೆ. ಓದುವ ಅಭ್ಯಾಸದಿಂದಾಗಿ ಅವರಲ್ಲಿ ಶಬ್ದ ಸಂಗ್ರಹವು ಉತ್ತಮಗೊಳ್ಳುತ್ತದೆ. ಓದುವ ಅಭ್ಯಾಸವು ವಿದ್ಯಾರ್ಥಿ ಜೀವನದ ರಾಜಮಾರ್ಗವಾಗಿದೆ. ಶಿಕ್ಷಕರಿಗಾಗಲಿ, ಪೋಷಕರಿಗಾಗಲೀ ಓದುವ ಹವ್ಯಾಸವಿದ್ದಲ್ಲಿ ಮಕ್ಕಳು ಬೇಗನೆ ಅವರನ್ನು ಅನುಸರಿಸುತ್ತಾರೆ. ಏಕೆಂದರೆ ಸಾಮಾನ್ಯವಾಗಿ ಮಕ್ಕಳು ತಮ್ಮ ಸುತ್ತಲಿನವರ ನಡವಳಿಕೆ, ಕ್ರಿಯೆಗಳನ್ನು ಗಮನಿಸುತ್ತಾರೆ ಹಾಗೂ ಅದನ್ನು ಅನುಕರಿಸಲು ತೊಡಗುತ್ತಾರೆ. ಮಕ್ಕಳ ಮೇಲೆ ಹೆಚ್ಚು ಪ್ರಭಾವ ಬೀರುವವರೆಂದರೆ ಶಿಕ್ಷಕರು ಹಾಗೂ ಪೋಷಕರು.

ದೇಹಾರೋಗ್ಯಕ್ಕೆ ಪೌಷ್ಟಿಕ ಆಹಾರವು ಅಗತ್ಯವಾಗಿರುವಂತೆ, ನಮ್ಮ ಮಾನಸಿಕ ಆರೋಗ್ಯಕ್ಕೆ ಉತ್ತಮ ಪುಸ್ತಕಗಳ ಓದುವಿಕೆ ಅತ್ಯಗತ್ಯವಾಗಿದೆ. ಓದುವಿಕೆಯು ಒಂದು ಮಾನಸಿಕ ವ್ಯಾಯಾಮವಿದ್ದಂತೆ. ಪುಸ್ತಕ ಪ್ರೇಮಿಯಾಗಿ ಇಷ್ಟಪಟ್ಟು ಓದಿದಾಗ ನಮಗಾಗುವ ಆನಂದವೇ ಬೇರೆ ರೀತಿಯದು. ನಮ್ಮ ಬದುಕಿನ ಮೂಲ ಉದ್ದೇಶವೇ ಸಂತೋಷವಾಗಿರುವುದು, ನೆಮ್ಮದಿಯಾಗಿರುವುದು. ನಮ್ಮ ದೈನಂದಿನ ಹೋರಾಟ, ಪ್ರಯತ್ನಗಳೆಲ್ಲ ಅದಕ್ಕಾಗಿಯೇ ಇದೆ, ದಿನಾಲೂ ಕನಿಷ್ಠ ಪಕ್ಷ ಒಂದು ಗಂಟೆ ಸಮಯವಾದರೂ ಉತ್ತಮ ಪುಸ್ತಕಗಳ ಓದಿನಲ್ಲಿ ಕಳೆದಲ್ಲಿ ನಾವು ಸಂತೋಷವಾಗಿರಬಹುದು, ನೆಮ್ಮದಿಯಾಗಿರಬಹುದು.

ಉತ್ತಮ ಪುಸ್ತಕಗಳನ್ನು ಓದೋಣ, ಪುಸ್ತಕ ಪ್ರೀತಿಯನ್ನು ಉಳಿಸಿ, ಬೆಳೆಸೋಣ.

ಕಿರುಸುದ್ದಿ

ಪ್ರಮೋದ್ ಎಸ್. ನಾಯ್ಕ್‌ಗೆ ಬೀಳ್ಕೊಡುಗೆ

ಕೈಕಂಬ: ಮುತ್ತೂರು ಗ್ರಾಮ ಪಂಚಾಯತ್ ನಲ್ಲಿ ಕಳೆದ ಐದು ವರ್ಷಗಳಿಂದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಳ್ಳುತ್ತಿರುವ ಅಭಿವೃದ್ಧಿ ಅಧಿಕಾರಿ ಪ್ರಮೋದ್ ಎಸ್ ನಾಯ್ಕ್ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮ ಗ್ರಾಮ ಪಂಚಾಯತ್‌ನಲ್ಲಿ ಮಂಗಳವಾರ ನಡೆಯಿತು. ಪಂಚಾಯತ್ ನ ನಿಕಟಪೂರ್ವ ಅಧ್ಯಕ್ಷ ಪ್ರವೀಣ್ ಆಳ್ವ ಗುಂಡ್ಯ, ಕಳೆದ 5 ವರ್ಷಗಳಿಂದ ನಮ್ಮ ಪಂಚಾಯತ್‌ನಲ್ಲಿ ಸೇವೆ ಸಲ್ಲಿಸಿ ಪಂಚಾಯತ್ ಆಡಳಿತ ಹಮ್ಮಿಕೊಂಡಿದ್ದ ಗ್ರಾಮದ ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿ ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ ಇವರ ಸೇವೆ ಮುಂದೆಯೂ ಇದೇ ರೀತಿಯಲ್ಲಿ ನಡೆಯಲಿ. ಅವರ ಮುಂದಿನ ವೃತ್ತಿ ಜೀವನ ಯಶಸ್ಸು ಕಾಣಲಿ ಎಂದು ಹಾರೈಸಿದರು . ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಬಳ್ಳಾಜೆ, ಗ್ರಾಮದ ಜನರ ಯಾವುದೇ ಸಮಸ್ಯೆಗಳಿಗೆ ಕುಂದು ಕೊರತೆಗಳಿಗೆ ತಕ್ಷಣ ಸ್ಪಂದಿಸಿ ಪಂಚಾಯತ್ ನಿಂದ ಆಗುವ ಎಲ್ಲಾ ಸೇವೆ ಸೌಲಭ್ಯಗಳನ್ನು ತ್ವರಿತವಾಗಿ ಜನರಿಗೆ ಮಾಡಿಕೊಂಡು ಬಂದಿದ್ದಾರೆ ಎಂದು ಪಿಡಿಓ ಅವರನ್ನು ಅಭಿನಂದಿಸಿದರು. ಪೇಟ ತೊಡಿಸಿ, ಸಮ್ಮಾನ ಪತ್ರ, ಫಲಪುಷ್ಪ ನೀಡಿ ಪಿಡಿಓ ಅವರನ್ನು ಗೌರವಿಸಲಾಯಿತು.ನಿಕಟಪೂರ್ವ ಉಪಾಧ್ಯಕ್ಷೆ ಸುಷ್ಮಾ , ಮಾಜಿ ಉಪಾಧ್ಯಕ್ಷೆ ಮಾಲತಿ , ನಿಕಟಪೂರ್ವ ಸದಸ್ಯರುಗಳಾದ ತೋಮಸ್ ಹೆರಾಲ್ಡ್ ರೋಜಾರಿಯೋ , ರುಕ್ಮಿಣಿ , ಶಶಿಕಲಾ , ಮಾಜಿ ಅಧ್ಯಕ್ಷೆ ನಾಗಮ್ಮ , ಸಂಜೀವಿನಿ ಒಕ್ಕೂಟದ ಸದಸ್ಯರು , ಗುತ್ತಿಗೆದಾರರಾದ ರಾಜೇಶ್ ದಾಸ್ , ಅಣ್ಣು ಗೌಡ ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಪಂಚಾಯತ್ ಕಾರ್ಯದರ್ಶಿ ವಸಂತಿ ನಿರೂಪಿಸಿದರು. ಸಿಬ್ಬಂದಿ ಲಕ್ಷ್ಮಣ್ ಸ್ವಾಗತಿಸಿ ವಂದಿಸಿದರು. ಸಿಬ್ಬಂದಿಗಳಾದ ಮೋಹಿನಿ .ಪಿ ಮತ್ತು ಮೋಹಿನಿ ಎಂ. ಇದ್ದರು.

ಕರಾವಳಿ ಫ್ರೆಂಡ್ಸ್ : ಕೆ.ಪಿ.ಎಲ್ -2026 ಕ್ರಿಕೆಟ್ ಪಂದ್ಯಾಟ

ಕೋಟ: ಕೋಟತಟ್ಟುವಿನ ಕರಾವಳಿ ಫ್ರೆಂಡ್ಸ್ ಆಶ್ರಯದಲ್ಲಿ ಐದನೇ ಬಾರಿಗೆ ಲೀಗ್ ಮಾದರಿಯ 60ಗಜಗಳ ಕ್ರಿಕೆಟ್ ಪಂದ್ಯಾಕೂಟ ಕೆ.ಪಿ ಎಲ್ 2026 ಎ. 19ರಂದು ಕರಾವಳಿ ಮೈದಾನ ಕೋಟತಟ್ಟು ಇಲ್ಲಿ ಆಯೋಜಿಸಿತು. ಪಂದ್ಯಾಕೂಟದ ಸಭಾಕಾರ್ಯಕ್ರಮವನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ರಕ್ತದಾನಿ ದಿನೇಶ್ ಕಾಂಚನ್ ಬೆಟ್ಟಿನಮನೆ ಬಾರಿಕೆರೆ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಅದೇ ರೀತಿ ಶೈಕ್ಷಣಿಕ ಸಾಧಕರು ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ವಿಶೇಷ ಅಭಿನಂದನೆ ಸಲ್ಲಿಸಲಾಯಿತು.ಕಾರ್ಯಕ್ರಮದಲ್ಲಿ ಜಿ.ಪಂ ಮಾಜಿ ಸದಸ್ಯ ರಾಘವೇಂದ್ರ ಕಾಂಚನ್ ಬಾರಿಕೆರೆ, ಕೋಟತಟ್ಟು ಪಂಚಾಯತ್ ನಿಕಟಪೂರ್ವ ಅಧ್ಯಕ್ಷ ಸತೀಶ್ ಬಾರಿಕೆರೆ, ಕೃಷಿಕ ರವೀಂದ್ರ ಐತಾಳ್, ಕೋಟ ಸಿಎ ಬ್ಯಾಂಕ್ ನಿರ್ದೇಶಕ ರಂಜೀತ್ ಬಾರಿಕೆರೆ, ಸಾಲಿಗ್ರಾಮ ಪಟ್ಟಣಪಂಚಾಯತ್ ಮಾಜಿ ಸದಸ್ಯ ಮಹಾಬಲ ಮಡಿವಾಳ, ಪಂಚವರ್ಣ ಸಂಘಟನೆಯ ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಕರಾವಳಿ ಫ್ರೆಂಡ್ಸ್ ನ ಸಂತೋಷ್ ಉಪಸ್ಥಿತರಿದ್ದರು. ರವಿ ಬನ್ನಾಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಸಂಘಟಕರಾದ ರೋಹಿತ್ ಸಹಕರಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ। ಕಾಳಪ್ಪ ಸಾಲ್ಯಾನ್, ದಿ। ಸುನಂದ ಸಾಲ್ಯಾನ್ ಸ್ಮರಣಾರ್ಥ ಮಕ್ಕಳು ಕೊಡೆತ್ತೂರು, ಮದರ್ ತೆರೇಝಾ ಲೇ ಔಟ್ ಪಕ್ಷಿಕೆರೆ.
2. ಕೆ. ಸುನಂದ ಬಂಗೇರ, 'ಬಂಗೇರ ನಿಲಯ', ಕಾರ್ನಾಡು, ಮೂಲ್ಕಿ
3. ಸುಂದರಿ ಸಾಲ್ಯಾನ್, ಕಾಪು ಮನೆ, ಅಳಿಯೂರು, ವಾಲ್ಪಾಡಿ, ವಯಾ ಶಿರ್ತಾಡಿ, ಮೂಡುಬಿದ್ರಿ
4. ಶ್ರೀ ಮಹಾಮ್ಮಾಯಿ ದೇವಸ್ಥಾನ, ಮೂರು ಕಾವೇರಿ, ಕಿನ್ನಿಗೋಳಿ.
5. ಪದವು ಮೇಗಿನಮನೆ ದಿ। ತಿಮ್ಮಪ್ಪ ಶೆಟ್ರ ಸ್ಮರಣಾರ್ಥ ಮಗಳು ಅನಸೂಯ ಪಿ. ಶೆಟ್ಟಿ ಮುಂಬಾಯಿ ? ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
6. ಶೋಭಾ ಅಶೋಕ್ ಆಚಾರ್ಯ, 'ಶ್ರೀ ಬ್ರಾಹ್ಮರಿ', ಕೊಂಡೋಲಿ, ದುರ್ಗಾನಗರ, ಶಿಬ್ರಿಕೆರೆ, ತೆಂಕ ಎಡಪದವು.
7. ಪದ್ಮನಾಭ ಕಟೀಲು (ದುಬಾಯಿ), 'ಶ್ರೀ ದೇವಿ ಕೃಪಾ', ಮಚ್ಚಾರು, ಪಡೀಲು, ಎಕ್ಕಾರು.

ಶ್ರೀ ಧರ್ಮಸ್ಥಳ ಮೇಳ
ನಿಡ್ಡೋಡಿ ಮಿತ್ತ ಮಾಣಿಲದಲ್ಲಿ
ಶ್ರೀಮತಿ ಮತ್ತು ಶ್ರೀ ಎಂ.ಬಿ.ಕರ್ಕೇರಾ ಮತ್ತು ಮಕ್ಕಳು ಕೈಲಾಸ್ ಮನೆ

ಶ್ರೀ ಸಾಲಿಗ್ರಾಮ ಮೇಳ
ಬಳ್ಕೂರು ಮುರಾಣಿಮರದಲ್ಲಿ ಬಯಲಾಟ
-ರಂಗನಾಯಕಿ

ಶ್ರೀ ಪೆರ್ಡೂರು ಮೇಳ
ಸಸಿಗೊಳ್ಳಿಯಲ್ಲಿ-**ಭಸ್ಮಾಸುರ ಮೋಹಿನಿ, ರಾಜಾ ರುದ್ರಕೋಪ**

ಶ್ರೀ ಹನುಮಗಿರಿ ಮೇಳ
ನಿಟ್ಟೂರಿನಲ್ಲಿ

ಶ್ರೀ ಪಾವಂಜೆ ಮೇಳ
ಪೆರಡಾಲ ಉದನೇಶ್ವರ ದೇವಸ್ಥಾನದಲ್ಲಿ
- ಕಂಸ ವಿವಾಹ-ನರಕಾಸುರ ಮೋಕ್ಷ-ಅಂಬಾಶಪಥ




ಡಾ.ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಅಂಬಲಪಾಡಿ ವತಿಯಿಂದ ಕೋಡಿ ಕನ್ಯಾಣದ ಶ್ರೀ ಮಹಾಸತೀಶ್ವರಿ ದೇವಸ್ಥಾನದ ವಠಾರದಲ್ಲಿ ಶ್ರೀ ಕ್ಷೇತ್ರ ಸಾಲಿಗ್ರಾಮ ಮೇಳದ ಯಕ್ಷಗಾನ ಕಾರ್ಯಕ್ರಮದ ವೇದಿಕೆಯಲ್ಲಿ ಮೇಳದ ಪ್ರಧಾನ ವೇಷಧಾರಿ ಪ್ರಸನ್ನ ಶೆಟ್ಟಿಗಾರ್ ಅವರನ್ನು ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಶಿವ ಎಸ್. ಕರ್ಕೇರ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಶಂಕರ್ ಕುಂದರ್, ಕೋಡಿ ಪಂಚಾಯತ್ ಮಾಜಿ ಅಧ್ಯಕ್ಷ ಪ್ರಭಾಕರ್ ಮೆಂಡನ್, ಪೂರ್ಣಿಮಾ ಅಧಿಕಾರಿ, ಮೊಗವೀರ ಯುವ ಸಂಘಟನೆಯ ಮಾಜಿ ಜಿಲ್ಲಾಧ್ಯಕ್ಷ ಜಯಂತ್ ಅಮೀನ್, ಸ್ಥಳೀಯರಾದ ಸತೀಶ್ ತಿಂಗಳಾಯ,ಲೋಕೇಶ್ ಮೆಂಡನ್ ಸೇರಿದಂತೆ ಮತ್ತಿತರರು ಇದ್ದರು.

ಜನಗಣತಿ 2027 ಕಾರ್ಯಕ್ರಮ: ಜುಲೈ 1 ರಿಂದ ಮೊದಲ ಹಂತ

ಜೂನ್ 16 ರಿಂದ 30ರ ವರೆಗೆ ಸ್ವಯಂ ಗಣತಿ

ಕಾಸರಗೋಡು: ಜನಗಣತಿ 2027 ಕಾರ್ಯಕ್ರಮದ ಅಂಗವಾಗಿ 2011ರ ನಂತರ ದೇಶದ ಜನಗಣತಿಯನ್ನು ಎರಡುಹಂತಗಳಲ್ಲಿನಡೆಸಲಾಗುವುದು. ಇದು ದೇಶದ ಮೊದಲ ಡಿಜಿಟಲ್ ಜನಗಣತಿಯಾಗಿದೆ. ಮೊದಲ ಹಂತವು 2026ನೇ ಜುಲೈ 1 ರಿಂದ 30ರ ವರೆಗೆ ನಡೆಯಲಿದೆ. ಈ ಹಂತದಲ್ಲಿ ಗಣತಿದಾರರು ಪ್ರತಿ ಮನೆಗೆ ಭೇಟಿ ನೀಡಿ 34 ಪ್ರಶ್ನೆಗಳನ್ನು ಕೇಳಿ ಸ್ಮಾರ್ಟ್‌ಫೋನ್‌ನಲ್ಲಿರುವ ಅಪ್ಲಿಕೇಶನ್ ಮೂಲಕ ಉತ್ತರಗಳನ್ನು ಸಂಗ್ರಹಿಸುತ್ತಾರೆ.



ಇದಕ್ಕೂ ಮೊದಲು ನಾಗರಿಕರು ಪೋರ್ಟಲ್ ಮೂಲಕ ಸ್ವಂತವಾಗಿ ಸ್ವಯಂ ಎಣಿಕೆ ಮಾಡಬಹುದು. ಈ ಪ್ರಕ್ರಿಯೆಯು 2026ನೇ ಜೂನ್ 16 ರಿಂದ 30ರ ತನಕ ಇರುತ್ತದೆ. ಸ್ವಯಂ ಎಣಿಕೆಯ ನಂತರ ಪಡೆದ ಸ್ವೀಕೃತಿಯನ್ನು ಮನೆ ಭೇಟಿಗೆ ಬರುವ ಗಣತಿದಾರರಿಗೆ ಮಾತ್ರ ಹಸ್ತಾಂತರಿಸಬೇಕು ಎಂದು ತಿಳಿಸಲಾಗಿದೆ.

2026ನೇ ಜುಲೈ ತಿಂಗಳಲ್ಲಿ ನಡೆಯಲಿರುವ ಜನಗಣತಿಯ ಮೊದಲ ಹಂತದಲ್ಲಿ ಮನೆಗಳ ಪಟ್ಟಿ ಮತ್ತು ಮನೆ ಗಣತಿ ನಡೆಯಲಿದೆ. ಪ್ರಶ್ನೆಗಳಲ್ಲಿ ಮನೆಯ ಸ್ಥಿತಿ, ಛಾವಣಿ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳ ಲಭ್ಯತೆ, ಗೃಹೋಪಯೋಗಿ ಉಪಕರಣಗಳು, ವಾಹನಗಳು, ಮೊಬೈಲ್ ಫೋನ್ ಸಂಖ್ಯೆ ಇತ್ಯಾದಿಗಳು ಸೇರಿವೆ. 2027ನೇ ಫೆಬ್ರವರಿ ತಿಂಗಳಿನಲ್ಲಿ ನಡೆಯಲಿರುವ ಎರಡನೇ ಹಂತದಲ್ಲಿ ಜನಗಣತಿ ನಡೆಯಲಿದೆ.

ಜನಗಣತಿಯ ಮೂಲಕ ಸರಕಾರವು ಸಂಗ್ರಹಿಸುವ ದತ್ತಾಂಶವು ಅತ್ಯಂತ ಗೌಪ್ಯವಾಗಿದ್ದು, ಮಾಹಿತಿ ಹಕ್ಕು ಕಾಯ್ದೆ ಅಥವಾ ಭಾರತೀಯ ಸಾಕ್ಷ್ಯ ಕಾಯ್ದೆಯಂತಹ ಯಾವುದೇ ಕಾನೂನಿನಡಿ ಅದನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದು ಸೂಚಿಸಲಾಗಿದೆ.

ಏ.24–ಮೇ 3: ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಸಮ್ಮಿಲನದಲ್ಲಿ ವಿರಾಟ್ ಮಹೋತ್ಸವ

ನಿಡ್ವಾಳ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ

ಸುಬ್ರಹ್ಮಣ್ಯ: ಭಕ್ತಿಯಿಂದ ಬೇಡಿ ಬಂದ ಭಕ್ತರ ಕಷ್ಟಗಳನ್ನು ಹೋಗಲಾಡಿಸಿ ಇಷ್ಟಾರ್ಥಗಳನ್ನು ನೆರವೇರಿಸುತ್ತಿರುವ ಮತ್ತು ತುಳುನಾಡಿನ ಅವಳಿ ವೀರ ಸಹೋದರರಾದ ಕೋಟಿ–ಚೆನ್ನಯರು ಆರಾಧಿಸುತ್ತಿದ್ದ ಕಾರಣಿಕ ಕ್ಷೇತ್ರ ನಿಡ್ವಾಳ ಶ್ರೀ ಮಹಾವಿಷ್ಣು ದೇವಳದಲ್ಲಿ ಪುನರ್ ನಿರ್ಮಾಣ ಪುನ:ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವವು ಏ.24ರಿಂದ ಮೇ 2ರ ತನಕ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರುಗಲಿದೆ.

ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಮ್ಮಿಲನದಲ್ಲಿ ವಿರಾಟ್ ಮಹೋತ್ಸವ ನಡೆಯಲಿದ್ದು, ಸಡಗರಕ್ಕೆ ದಿನಗಣನೆ ಆರಂಭವಾಗಿದೆ. ಭಕ್ತರು ದೇವಳದಲ್ಲಿ ನಿರಂತರ ಶ್ರಮಸೇವೆ ಮಾಡುತ್ತಾ ದೇವತಾ ಕಾರ್ಯಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ.

ಹಸಿರು ಕಾಣಿಕೆ

ಏ.24ರಂದು ಬೆಳಗ್ಗೆ 9.30ರಿಂದ ಸಾಮೂಹಿಕ ಪ್ರಾರ್ಥನೆ, ಉಗ್ರಾಣ ಮುಹೂರ್ತ, ಊರ ಹಾಗೂ ಪರಊರ ಭಕ್ತಾದಿಗಳಿಂದ ಹಸಿರು ಹೊರೆ ಕಾಣಿಕೆ ಸಮರ್ಪಣೆ. ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ, ಸಂಜೆ ಭಜನಾ ಕಾರ್ಯಕ್ರಮ, ಸಂಜೆ 5.30ರಿಂದ ಕ್ಷೇತ್ರದ ತಂತ್ರಿಗಳಿಗೆ ಹಾಗೂ ಇತರ ಋತ್ವಿಜರಿಗೆ ಪೂರ್ಣ ಕುಂಭ ಸ್ವಾಗತ, ರಾತ್ರಿ ವಿವಿಧ ವೈದಿಕ ಕಾರ್ಯಕ್ರಮಗಳು



ನಡೆಯಲಿದೆ. ಉಗ್ರಾಣವನ್ನು ನ್ಯಾಯವಾದಿ ಬಿ. ಶಂಕರ್ ಕುಮಾರ್ ಮುಚ್ಚಿಲ ಉದ್ಘಾಟಿಸಲಿದ್ದಾರೆ. ಮೆರವಣಿಗೆಗೆ ಕೃಷ್ಣಪ್ಪ ಗೌಡ ಮರಕ್ಕಡ ಚಿಲ್ಮೆ ಚಾಲನೆ ನೀಡಲಿದ್ದಾರೆ.

ಸುದರ್ಶನ ಹೋಮ

ಏ.25ರಂದು ಬೆಳಗ್ಗೆ 5.30ರಿಂದ ಉಷಃಪೂಜೆ, ಮಹಾಗಣಪತಿ ಹೋಮ, ಅಂಕುರ ಪೂಜೆ, ಚತುಃಶುದ್ಧಿ ಧಾರೆ, ಅವಗಾಹ ಪಂಚಕ ಬಿಂಬಶುದ್ಧಿ, ಬನನಾದಿಸ್ಥಳ ಶುದ್ಧಿ, ಪ್ರಾಯಶ್ಚಿತ್ತ ಹೋಮಗಳು, ಗೀತಾ ಜ್ಞಾನ ಯಜ್ಞ ಪಾರಾಯಣ ತಂಡ ಬಾಳಿಲ ಅವರಿಂದ ಪ್ರತೀ ದಿನ ಶ್ರೀಮದ್ ಭಗವದ್ ಗೀತಾ ಪಾರಾಯಣ, ವಿವಿಧ ಭಜನಾ ತಂಡಗಳಿಂದ ಭಜನ ಸಂಕೀರ್ತನೆ, ಪ್ರತಿ ದಿನ ಸಂಜೆ ದೀಪಾರಾಧನೆ, ಅಂಕುರಪೂಜೆ, ಸುದರ್ಶನ ಹೋಮ, ಕುಂಡ ಶುದ್ಧಿ, ದುರ್ಗಾಪೂಜೆ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಲಿದೆ.

ಏ.26ರಂದು ಬೆಳಗ್ಗೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು. ರಾತ್ರಿ ಸಭಾಕಾರ್ಯಕ್ರಮದಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಉದ್ಯಮಿ ಕುಶಾಲಪ್ಪ ಮೇಲ್ವಾಡಿ ಅಧ್ಯಕ್ಷತೆ ವಹಿಸಲಿದ್ದಾರೆ. ನಿವೃತ್ತ ಉಪನ್ಯಾಸಕ ಡಾ. ಶ್ರೀಶಕುಮಾರ ಎಂ.ಕೆ. ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ.

ಏ.27ರಂದು ಬೆಳಗ್ಗೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಧ್ಯಾಹ್ನ 12ರಿಂದ ಹೊಸನಗರ ಶ್ರೀ ರಾಮಚಂದ್ರಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಜಿಗಳು ಆಶೀರ್ವಚನ ನೀಡಲಿದ್ದಾರೆ. ರಾತ್ರಿ ಸಭಾ ಕಾರ್ಯಕ್ರಮದಲ್ಲಿ ಒಡಿಯೂರು ಕ್ಷೇತ್ರ ಗುರುದೇವದತ್ತ ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಉದ್ಯಮಿ ಕಿರಣ್‌ಚಂದ್ರ ಡಿ. ಪುಷ್ಪಗಿರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಉಡುಪಿ ನಾಗಧರ್ಮೇಂದ ಸಂಸ್ಕೃತ ವೇದ ಸಂಜೀವಿನಿ ಪಾಠ ಶಾಲೆ ಪ್ರಾಚಾರ್ಯ ವಿದ್ವಾನ್ ಮೌನೇಶ್ ಶರ್ಮಾ ಬಾಳಿಲ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ.

» ಕೋಟಿ-ಚೆನ್ನಯರು ಆರಾಧಿಸುತ್ತಿದ್ದ ಕಾರಣಿಕ ಕ್ಷೇತ್ರ ನಿಡ್ವಾಳ ಶ್ರೀ ಮಹಾವಿಷ್ಣು ದೇವಳದಲ್ಲಿ ಪುನರ್ ನಿರ್ಮಾಣ ಪುನ:ಪ್ರತಿಷ್ಠಾ ಅಷ್ಟಬಂಧ

ಸಭಾ ಕಾರ್ಯಕ್ರಮ ಉದ್ಘಾಟನೆ

ಏ.25ರಂದು ರಾತ್ರಿ 7ರಿಂದ ನಡೆವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಂಬೆತ್ತಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್ ಕುಮಾರ್ ಕರಿಕಳ ವಹಿಸಲಿದ್ದಾರೆ. ಶಾಸಕಿ ಭಾಗೀರಥಿ ಮುರುಳ್ಯ ಉದ್ಘಾಟಿಸಲಿದ್ದಾರೆ. ಕ್ಷೇತ್ರದ ವಾಸ್ತು ಶಿಲ್ಪಿ ಎಸ್.ಎಂ. ಪ್ರಸಾದ್ ಮುನಿಯಂಗಳ ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಅಶೋಕ್ ಕುಮಾರ್ ರೈ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಈ ಸಂದರ್ಭ ದೇಗುಲದ ವಾಸ್ತುಶಿಲ್ಪಿ ಎಸ್. ಎಂ. ಪ್ರಸಾದ್ ಮುನಿಯಂಗಳ, ಶ್ರೀ ಚಾಮುಂಡಿ ದೈವದ ಸ್ಥಳದಾನಿ ಸಿ.ಎಂ. ಅಬ್ದುಲ್ ರಹಿಮಾನ್ ಐವತ್ತೊಕ್ಲು ಮತ್ತು ಸಹೋದರರು, ಗುಳಿಗ ದೈವದ ಸ್ಥಳ ದಾನಿ ಮತ್ತು ಗುಳಿಗ ಕಟ್ಟೆಯ ಸೇವಾರ್ಥಿ ಜಗನ್ನಾಥ ರೈ ಕುಳಾಯಿತ್ತೋಡಿ, ದೇಗುಲದ ಶಿಲಾ ಶಿಲ್ಪಿ ಈಶ್ವರಚಂದ್ರ ಮುಂಡೂರು, ದೇಗುಲದ ಕಾಷ್ಠ ಶಿಲ್ಪಿ ವಸಂತ ಆಚಾರ್ಯ ಅವರನ್ನು ಗೌರವಿಸಲಾಗುವುದು.

ಮಕ್ಕಳ ಜ್ಞಾನ ವರ್ಧನೆಗೆ ಶಿಬಿರಗಳು ಸಹಕಾರಿ



ಮಂಗಳೂರು: ಶಾಲಾ ಪಠ್ಯಗಳಿಂದ ಭಿನ್ನವಾದ ಅನೇಕ ಉಪಯುಕ್ತ ಮಾಹಿತಿಗಳು ಶಿಬಿರಗಳಲ್ಲಿ ಮಾತ್ರ ಮಕ್ಕಳಿಗೆ ಲಭಿಸಬಲ್ಲುದು. ಆದುದರಿಂದ ಮಕ್ಕಳ ಜ್ಞಾನ ವರ್ಧನೆಗೆ ಇಂತಹ ಶಿಬಿರಗಳು ಸಹಕಾರಿಯಾಗುತ್ತದೆ ಎಂದು ಆನೆಗುಂದಿ ಸರಸ್ವತೀ ಪೀಠ ಪ್ರತಿಷ್ಠಾನದ ಕೋಶಾಧಿಕಾರಿ ಅರವಿಂದ ವೈ. ಆಚಾರ್ಯ ಬೆಳುವಾಯಿ ಹೇಳಿದರು.

ಆನೆಗುಂದಿ ಗುರುಸೇವಾ ಪರಿಷತ್ ಮಹಾಮಂಡಲ ಮಂಗಳೂರು ಘಟಕವು ಮಂಗಳೂರು ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ 'ಜ್ಞಾನ ವಿಕಾಸ ಶಿಬಿರ–2026'ರ ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿ ಅವರು ಮಾತನಾಡಿದರು.

ಪರಿಷತ್ತಿನ ಮಂಗಳೂರು ವಲಯದ ಅಧ್ಯಕ್ಷ ಎಂ.ಶೇಖರ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಉದ್ಯಮಿ, ಕೈಕಂಬ ವಿಶ್ವಕರ್ಮ ಸಭಾಭವನ ನಿರ್ಮಾಣ ಸಮಿತಿಯ ಗೌರವಾಧ್ಯಕ್ಷ ಉಮೇಶ್ ಆಚಾರ್ಯ ಕರಿಯಂಗಳ, ವಿಶ್ವಕರ್ಮ ಯುವ ವೇದಿಕೆಯ ಅಧ್ಯಕ್ಷ ಭರತ್ ನಿಡ್ಪಳ್ಳಿ, ವಿಶ್ವಕರ್ಮ ಯುವ ಮಿಲನದ ಅಧ್ಯಕ್ಷ ವಿಕ್ರಂ ಐ.ಆಚಾರ್ಯ, ಆನೆಗುಂದಿ ಗುರುಸೇವಾ ಪರಿಷತ್ತಿನ ಕೇಂದ್ರ ಸಮಿತಿಯ ಅಧ್ಯಕ್ಷ ಕೆಮ್ಮಣ್ಣು ಗಣೇಶ್ ಆಚಾರ್ಯ ಉಪಸ್ಥಿತರಿದ್ದರು.

ಶಿಬಿರದಲ್ಲಿ ಭಾಗವಹಿಸಿದ್ದ ನೂರು ಮಂದಿ ವಿದ್ಯಾರ್ಥಿಗಳಿಗೆ ಅತಿಥಿಗಳು ಪ್ರಶಂಸಾ ಪತ್ರಗಳನ್ನು ವಿತರಿಸಿದರು. ಶಿಬಿರಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಗುರುಸೇವಾ ಪರಿಷತ್ತಿನ ಸದಸ್ಯ ಸುಂದರ ಆಚಾರ್ಯ ಮರೋಳಿ ಸ್ವಾಗತಿಸಿದರು. ಪಿ.ರವೀಂದ್ರ ಮಂಗಳಾದೇವಿ ಪ್ರಸ್ತಾವನೆಗೈದರು, ಗುರುರಾಜ್ ಕೆ.ಜೆ., ಪ್ರಕಾಶ್ ಹಲೇಜಿ, ವಿಘ್ನೇಶ್ ಟಿ., ಸಂಧ್ಯಾ ಎಂ.ಶೇಖರ ಆಚಾರ್ಯ ಸಹಕರಿಸಿದರು. ಜಗದೀಶ್ ಸಿದ್ಧಕಟ್ಟೆ ವಂದಿಸಿದರು. ಪಶುಪತಿ ಉಳ್ಳಾಲ್ ಕಾರ್ಯಕ್ರಮ ನಿರೂಪಿಸಿದರು.

ಮಳಲಿ ಸೂರ್ಯನಾರಾಯಣ ದೇವಸ್ಥಾನ ನಾಗದೇವರ ಪ್ರತಿಷ್ಠಾ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ



ಕೈಕಂಬ: ಮಳಲಿ(ಮಣೇಲ್) ದೇವರಗುಡ್ಡೆಶ್ರೀಸೂರ್ಯನಾರಾಯಣ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ವತಿಯಿಂದ ನಾಗದೇವರ ಪ್ರತಿಷ್ಠಾಪನೆಯ ಪೂರ್ವಭಾವಿ ಸಭೆಯು ಇತ್ತೀಚೆಗೆ ಜರುಗಿತು. ಇದೇ ವೇಳೆ ಕ್ಷೇತ್ರದಲ್ಲಿ ಶೀಘ್ರದಲ್ಲಿಯೇ ನಡೆಯಲಿರುವ ನಾಗದೇವರ ಪ್ರತಿಷ್ಠಾ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಗಣ್ಯರ ಸಮ್ಮುಖದಲ್ಲಿ ಬಿಡುಗಡೆಗೊಳಿಸಲಾಯಿತು.

ದೇವಸ್ಥಾನದ ಅಭಿವೃದ್ಧಿ ಮತ್ತು ಜೀರ್ಣೋದ್ಧಾರ ಕಾರ್ಯಗಳಿಗೆ ಹೆಚ್ಚಿನ ವೇಗ ನೀಡುವ ನಿಟ್ಟಿನಲ್ಲಿ ಸಭೆಯಲ್ಲಿ ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕ್ಷೇತ್ರದ ಧಾರ್ಮಿಕ ಚಟುವಟಿಕೆಗಳಲ್ಲಿ ಮಹಿಳೆಯರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು, ಮಹಿಳಾ ಜೀರ್ಣೋದ್ಧಾರ ಸಮಿತಿ'ಯನ್ನು ಹಾಗೂ ಭಜನಾ ಕಾರ್ಯಕ್ರಮಗಳ ಸುಗಮ ನಿರ್ವಹಣೆಗಾಗಿ, ಭಜನಾ ನಿರ್ವಹಣಾ ಸಮಿತಿ'ಯನ್ನು ರಚಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶೇಖರ್ ಜೋಗಿ ಮಟ್ಟಿ, ಜೀರ್ಣೋದ್ಧಾರ ಕಾರ್ಯದಲ್ಲಿ ಭಕ್ತಾದಿಗಳ ಸಹಕಾರದ ಮಹತ್ವದ ಬಗ್ಗೆ ತಿಳಿಸಿದರು. ಕಾರ್ಯಾಧ್ಯಕ್ಷ ಭಾಸ್ಕರ ಭಟ್ ಗಂಜಿಮಠ, ಮುಂದಿನ ಧಾರ್ಮಿಕ ಕಾರ್ಯಕ್ರಮಗಳ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡಿದರು.

ಪ್ರಧಾನ ಕಾರ್ಯದರ್ಶಿ ಶಿವರಾಜ್ ನಾರಳ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ಹರೀಶ್ ಮಟ್ಟಿ ವಂದಿಸಿದರು. ಊರಿನ ಹಿರಿಯರು, ಸಮಿತಿಯ ಸದಸ್ಯರು ಹಾಗೂ ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

ಅಡುಗೆ ಭಾರತೀಯ ಸಂಸ್ಕೃತಿಯ ಮಹತ್ವದ ಭಾಗ



ಕುಂದಾಪುರ: ಅಡುಗೆ ಭಾರತೀಯ ಸಂಸ್ಕೃತಿಯ ಮಹತ್ವದ ಭಾಗಗಳಲ್ಲಿ ಒಂದು. ಪ್ರದೇಶದಿಂದ ಪ್ರದೇಶಕ್ಕೆ ವಿವಿಧ ಸ್ವರೂಪದ ಆಹಾರ ಪದ್ಧತಿಯನ್ನು ಭಾರತದಲ್ಲಿ ಕಾಣಬಹುದು. ವಿದ್ಯಾರ್ಥಿಗಳು ಸಾಂಪ್ರದಾಯಿಕ ಆಹಾರದ ವೈಜ್ಞಾನಿಕ ಮಹತ್ವದ ಕುರಿತು ತಿಳಿದುಕೊಳ್ಳಬೇಕು. ಆಹಾರ ತಯಾರಿಕೆಯಲ್ಲಿ ಆಧುನಿಕತೆಯ ಅಲಂಕಾರವಿರಲಿ, ಸಾಂಪ್ರದಾಯಿಕತೆಯ ಶುದ್ಧತೆಯಿರಲಿ ಎಂದು ಬಸ್ರೂರಿನ ಸೈಂಟ್ ಫಿಲಿಪ್ ನೆರಿ ಸೆಂಟ್ರಲ್ ಶಾಲೆಯ ಶಿಕ್ಷಕಿ ಅಮಿತಾ ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಆಶ್ರಯದಲ್ಲಿ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಶನಿವಾರ ಜರಗಿದ ಫುಡ್‌ಆರ್ಟ್– ಬೆಂಕಿರಹಿತ ಅಡುಗೆ ಸ್ಪರ್ಧೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪ– ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ, ಕಾರ್ಯಕ್ರಮದ ಸಂಯೋಜಕ ಸತೀಶ ಕಾಂಚನ್ ಉಪಸ್ಥಿತರಿದ್ದರು.

ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ವೀಣಾ ಭಟ್ ಸ್ವಾಗತಿಸಿ, ಪ್ರಸ್ತಾವಿಸಿದರು. ಕಾರ್ಯಕ್ರಮದ ಸಂಯೋಜಕ ಯೋಗೀಶ ಶ್ಯಾನುಭೋಗ ವಂದಿಸಿದರು. ವಿದ್ಯಾರ್ಥಿನಿ ಲಾವಣ್ಯ ನಿರೂಪಿಸಿದರು.

ವಿಶ್ವ ಆರೋಹ ಸೊಸೈಟಿಯಿಂದ ಶೈಕ್ಷಣಿಕ, ಔದ್ಯೋಗಿಕ ಕಾರ್ಯಾಗಾರ

ಮಂಜೇಶ್ವರ: ವಿಶ್ವಕರ್ಮ ಸಮಾಜದಿಂದ ಶೈಕ್ಷಣಿಕ ಸಹಕಾರ, ಆರ್ಥಿಕ ನೆರವು ಮತ್ತು ಔದ್ಯೋಗಿಕ ಮಾರ್ಗದರ್ಶನದ ಮೂಲಕ ಸಮಾಜದ ಸರ್ವಾಂಗೀಣ ಅಭಿವೃದ್ಧಿಯನ್ನು ಧ್ಯೇಯವಾಗಿಸಿದ ವಿಶ್ವ ಆರೋಹ ಚಾರಿಟೇಬಲ್ ಸೊಸೈಟಿಯ ನೇತೃತ್ವದಲ್ಲಿ ಉಚಿತ ಏಕದಿನ ಶೈಕ್ಷಣಿಕ ಮತ್ತು ಔದ್ಯೋಗಿಕ ಕಾರ್ಯಾಗಾರವು ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರಿ ಸಭಾಭವನದಲ್ಲಿ ಜರಗಿತು.

ಸೊಸೈಟಿಯ ಅಧ್ಯಕ್ಷ ಎಂ.ಮೋಹನ ಆಚಾರ್ಯ ಕೋಟೆಕ್ಕಾರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮವನ್ನು ಹೊಸದಿಲ್ಲಿಯ ಡಾ.ನಿರ್ಮಲ್ ಜಿತ್ ಸಿಂಗ್ ಕಲ್ಸಿ ಆನ್‌ಲೈನ್ ಮೂಲಕ ಉದ್ಘಾಟಿಸಿದರು. ಸಮಾರಂಭದಲ್ಲಿ ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರಿ ಕ್ಷೇತ್ರದ ಅರ್ಚಕ ಪ್ರಕಾಶ್‌ಚಂದ್ರ ದೀಪ ಬೆಳಗಿಸಿದರು.

ಡಾ.ಬಾಲಕೃಷ್ಣ ಬಿ.ಎಂ. ಹೊಸಂಗಡಿ, ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಿ.ಎಂ.ಯದುನಂದನ ಆಚಾರ್ಯ, ಮಹಿಳಾ



ಸಂಘದ ಅಧ್ಯಕ್ಷೆ ಪ್ರಿಯಾ ನಾಗರಾಜ ಆಚಾರ್ಯ, ಓಜ ಸಾಹಿತ್ಯ ಕೂಟದ ಅಧ್ಯಕ್ಷ ಬಿ.ಎಂ. ಮೋಹನಚಂದ್ರ ಆಚಾರ್ಯ, ವಿಶ್ವಕರ್ಮ ಸಮಾಜ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಎ.ಗಂಗಾಧರ ಆಚಾರ್ಯ, ವಿಶ್ವ ಕಲಾಮೃತದ ಅಧ್ಯಕ್ಷ ಸದಾಶಿವ ಪುತ್ತೂರು, ವಿಶ್ವಕರ್ಮ ಸಾಹಿತ್ಯ ದರ್ಶನದ ಜಯ ಮಣಿಯಂಪಾರೆ ಮೊದಲಾದವರು ಉಪಸ್ಥಿತರಿದ್ದರು.

ಬಳಿಕ 8ನೇ ತರಗತಿಯಿಂದ ಪಿಎಚ್‌ಡಿ ವರೆಗಿನ ವಿದ್ಯಾರ್ಥಿಗಳಿಗೆ ಶಿಕ್ಷಣ ಕೌಶಲ್ಯ ಹಾಗೂ ವೃತ್ತಿ ಮಾರ್ಗದರ್ಶನದ ತರಬೇತಿಗಳನ್ನು ನೀಡಲಾಯಿತು. ಸದ್ಯೋಜಾತ ಆಚಾರ್ಯ ಕೊಲ್ಯ ಯೋಗ ಶಿಕ್ಷಣದ ಬಗ್ಗೆ, ಡಾ.ಅನಂತಪದ್ಮನಾಭ ಆಚಾರ್ಯ ಉದ್ಯೋಗಾವಕಾಶಗಳ ಬಗ್ಗೆ, ರಾಜಶೇಖರ ಎನ್ ಐಟಿಐನ ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನದ ಬಗ್ಗೆ, ಕುಶಾಲ್ ಯೂನಿವರ್ಸಿಟಿಯ ಡಾ.ಕೆ. ಶ್ಯಾಮಲಾ ಸಂಶೋಧನೆಯ ಅವಕಾಶಗಳ ಬಗ್ಗೆ, ಡಾ.ಗುರುರಾಜ ಪಿ. ಸೈಬರ್ ಭದ್ರತೆಯ ಬಗ್ಗೆ ತರಗತಿ ನಡೆಸಿಕೊಟ್ಟರು.

ನಂತರ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಪಟ್ಟಂತೆ ಆರ್ಥಿಕ, ಆಪ್ತ ಸಲಹೆ, ಆರೋಗ್ಯ ವಿಮೆ, ಗುಂಪು ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಮನುಪ್ರಸಾದ್ ಕನೀರ್‌ತೋಟ ಅವರು ಯತೀಶ್ ಕೊಯಂಬತೂರು, ಅನಿಲ್ ಆಚಾರ್ಯ ಅವರ ಮಾರ್ಗದರ್ಶನದಲ್ಲಿ ತಯಾರಿಸಿದ ದತ್ತಾಂಶ ಸಮೀಕ್ಷೆ ತಂಡ ಸಂಗ್ರಹಿಸಿದ ವಿದ್ಯಾರ್ಥಿ ಡೇಟಾಬೇಸ್ ಅಪ್ಲಿಕೇಶನ್‌ನ್ನು ಅನಾವರಣಗೊಳಿಸಿದರು.

ಮೇಘಶ್ರೀ ಆಚಾರ್ಯ ಮತ್ತು ಶಿಕ್ಷಕರ ಬಳಗದ ವರು ಪ್ರಾರ್ಥನೆಗೈದರು. ಗಣೇಶ್ ಆಚಾರ್ಯ ಜಾಲ್ಸೂರು ಮತ್ತು ಪವಿತ್ರಾ ಮಿಥುನ್ ಆಚಾರ್ಯ ಪುತ್ತೂರು ಕಾರ್ಯಕ್ರಮ ನಿರೂಪಿಸಿದರು. ಯೋಗೇಂದ್ರ ಆಚಾರ್ಯ ಸ್ವಾಗತಿಸಿ, ವಂದಿಸಿದರು.

ತಾಳಮದ್ದಳೆಗೆ ಹೊಸ ತಲೆಮಾರನ್ನು ಹುಟ್ಟು ಹಾಕುವುದು ಅನಿವಾರ್ಯವಾಗಿದೆ: ಜಬ್ಬಾರ್ ಸಮೋ

ಕೋಟ: ಇಲ್ಲಿನ ಶ್ರೀ ಕೋಟಿಲಿಂಗೇಶ್ವರ ದೇಗುಲದಲ್ಲಿ ಇತ್ತೀಚಿಗೆ ನೆರೆದ ಭಕ್ತರ ಸಮ್ಮುಖದಲ್ಲಿ ಅರ್ಥಾಂಕುರ ಕಾರ್ಯಕ್ರಮವನ್ನು ಯಕ್ಷಗಾನದ ಖ್ಯಾತ ಅರ್ಥಧಾರಿ ಜಬ್ಬಾರ್ ಸಮೋ ಸಂಪಾಜೆ ಉದ್ಘಾಟಿಸಿದರು.

ಬಳಿಕಮಾತನಾಡಿದಅವರು, ಯಕ್ಷಗಾನತಾಳಮದ್ದಳೆಯಲ್ಲಿ ಕ್ಷೇತ್ರದ ಹಿರಿಯ ಅರ್ಥಧಾರಿಗಳು ತೆರೆಯಿಂದ ಮರೆಗೆ ಸರಿಯುವ ಕಾಲಘಟ್ಟದಲ್ಲಿದ್ದು, ಹೊಸ ತಲೆಮಾರನ್ನು ಹುಟ್ಟುಹಾಕ ಬೇಕಾಗಿರುವುದು ಅತೀ ಅಗತ್ಯವಾಗಿದೆ. ಇಂದಿನ ಈ ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ಇಂತಹ ಕಾರ್ಯಕ್ರಮಗಳಿಂದ ಯುವ ಪೀಳಿಗೆಗಳ ರಂಗ ಪ್ರವೇಶವಾಗುವಂತಾಗಲಿ ಎಂದರು.

ಅರ್ಥಧಾರಿ, ಪ್ರಸಂಗಕರ್ತ ಪ್ರೊ. ಪವನ್ ಕಿರಣ್ ಕೆರೆ ಮಾತನಾಡಿ, ಜಗತ್ತಿನಲ್ಲಿ ಒಂದು ಕಲೆಗೆ ಹೋಲುವ ಅನೇಕ ಪ್ರಾಕಾರಗಳಿವೆ. ಆದರೆ ತಾಳಮದ್ದಲೆಯಂತಹ ಒಂದು ಕಾರ್ಯಕ್ರಮವಿರುವುದು ಇಡೀ ವಿಶ್ವದಲ್ಲೇ ಯಕ್ಷಗಾನ ಕಲೆಯಲ್ಲಿ ಮಾತ್ರ ಎಂದರು.

ಸಮಿತಿ ಸದಸ್ಯ ಡಾ. ಸುಧಾಕರ ನಂಬಿಯಾರ್ ಉಪಸ್ಥಿತರಿದ್ದರು. ಶಂಕರನಾರಾಯಣ ಉಪಾಧ್ಯಾಯ ಕಾರ್ಯಕ್ರಮ ನಿರ್ವಹಿಸಿದರು. ದೇಗುಲದ ವ್ಯವಸ್ಥಾಪನಾ



ಸಮಿತಿ ಅಧ್ಯಕ್ಷ ಗೋಪಾಲಕೃಷ್ಣ ಶೆಟ್ಟಿ ಮಾರ್ಕೋಡು ಪ್ರಸ್ತಾವಿಸಿ, ಸ್ವಾಗತಿಸಿದರು.

ಕೋಟಿಲಿಂಗೇಶ್ವರ ದೇಗುಲ, ಯಶಸ್ವಿ ಕಲಾ ವೃಂದ ಕೊಮೆ ತೆಕ್ಕಟ್ಟೆ, ಯಕ್ಷ ನುಡಿಸಿರಿ ಬಳಗ ಸಿದ್ಧಾಪುರ ಇವರ ನೇತೃತ್ವದಲ್ಲಿ ವರುಷವಿಡೀ ತಿಂಗಳಿಗೊಮ್ಮೆ ಯಕ್ಷಗಾನ ತಾಳಮದ್ದಳೆ ನಡೆಸುವ ಕಾರ್ಯಕ್ರಮದ ಸಹಭಾಗಿತ್ವ ವಹಿಸಿ, ಈ ಕಾರ್ಯಕ್ರಮದಲ್ಲಿ 'ವೀರಮಣಿ' ಯಕ್ಷಗಾನ ತಾಳಮದ್ದಳೆ ರಂಗ ಪ್ರಸ್ತುತಿಗೊಂಡಿತು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ

ನಂ:ಕಾ.ನಿ.ಇಂ/ ಗ್ರಾಕುನೀ & ನೈವಿ/ಧಾ/ ಕಿಇಂ-1/ಇ-ಟೆಂಡರ್/ 2026-27/ 87
ದಿನಾಂಕ: 22-04-2026

WORK ಟೆಂಡರ್‌ನ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರ್‌ನ ಪ್ರಕಟಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ್ ಕರೆಯಲಾಗಿದೆ.
ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಧಾರವಾಡ ಜಿಲ್ಲೆ: ಸಾಮಾನ್ಯ : **Works Indent No: RWSSD/2026-27/WS/WORK_INDENT10034**
ಕನಿಷ್ಠ ಮೊತ್ತ: **165.51 ಲಕ್ಷ**. ಗರಿಷ್ಠ ಮೊತ್ತ: **165.51 ಲಕ್ಷ**

ಗುತ್ತಿಗೆ ಕಾರ್ಯಾಕ್ರಮದ ವಿವರಗಳು ಈ ಕೆಳಗಿನಂತಿದೆ. (Calender of Events)
1. ಖಾಲಿ ಟೆಂಡರ್ ಫಾರ್ಮಗಾಗಿ ಇ-ಪ್ರೋಕ್ಯೂರಮೆಂಟ್ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: **23.04.2026 ರಿಂದ 04.05.2026 ಸಾಯಂಕಾಲ 04.00 ಗಂಟೆಗೆ.**
2. ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **05.05.2026 ಸಾಯಂಕಾಲ 04.30 ಗಂಟೆಗೆ.**
3. ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತಿಮ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಮ್.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ **kppp.karnataka.gov.in** ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಮಾಡಿದವರು ಹೊಂದಿರುತ್ತಾರೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/85/2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಿರಿಯೂರು-577598
ದೂರವಾಣಿ ಸಂಖ್ಯೆ:08193-271630 emil: ghhiriyur@gmail.com

ಸಂ.ಸಾ.ಆ(ಹಿ)/ನಾ.ಕ್ಲಿ./ಗ್ರೂಫ್ ಡಿ/ಟೆಂ/29/2026-27 ದಿನಾಂಕ: 21.04.2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ದತಿ)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರಿಯೂರು ಇಲ್ಲಿನ ನಾನ್ ಕ್ಲಿನಿಕಲ್ ಮತ್ತು ಗ್ರೂಫ್ ಡಿ ಹಾಗೂ ಕಂಪ್ಯೂಟರ್ ಆಪರೇಟರ್ ಸೇವೆಯನ್ನು ನಿರ್ವಹಿಸಲು 2026-27ನೇ ಸಾಲಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ದಿ:31/03/2027 ರವರೆಗೆ ಪ್ರತಿಷ್ಠಿತ ನೊಂದಾಯಿತ ಸಂಸ್ಥೆಯವರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ, ಇ ಪ್ರೊಕ್ಯೂರ್ಮೆಂಟ್ ಮೂಲಕ ಟೆಂಡರ್‌ನ್ನು ಕರೆಯಲಾಗಿದೆ. ಇ-ಟೆಂಡರ್ ವಿವರ ಈ ಕೆಳಕಂಡಂತೆ ಇರುತ್ತದೆ. (1) ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ 100 ಬೆಡ್ ಆಸ್ಪತ್ರೆ, 100 ಹಾಸಿಗೆ : ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹಿರಿಯೂರು 10 ಜನ ನಾನ್ ಕ್ಲಿನಿಕಲ್ ಸಿಬ್ಬಂದಿ, 10 ಗ್ರೂಪ್ ಡಿ ಸಿಬ್ಬಂದಿ 01 ಡಾಟಾ ಎಂಟ್ರಿ ಆಪರೇಟರ್. (2) ಇ-ಟೆಂಡರ್ ಫಾರಂ ಬೆಲೆ:- ಇ ಪ್ರೊಕ್ಯೂರ್ಮೆಂಟ್ ನಿಯಮಾನುಸಾರ (3) ಅಂತರ್ ಜಾಲದಲ್ಲಿ ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ:- 22.04.2026 ರಿಂದ 21.05.2026 ರವರೆಗೆ (4) ಅಂತರ್ ಜಾಲದಲ್ಲಿ ಟೆಂಡರ್ ಫಾರಂಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ:-21.05.2026 ಅಪರಾಹ್ನ 5.00 ಗಂಟೆಗೆ (5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:- 22.05.2026 ಬೆಳಿಗ್ಗೆ 11.00 ಗಂಟೆಗೆ ಸ್ಥಳ:-ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ತಾ.ಸಾ.ಆಸ್ಪತ್ರೆ, ಹಿರಿಯೂರು (6) ಟೆಂಡರ್ ಅವಧಿ:-ಕಾರ್ಯಾದೇಶ ನೀಡಿದ ದಿನಾಂಕದಿಂದ 31/03/2027ರ ವರೆಗೆ ಅಥವಾ ಮುಂದಿನ ಆದೇಶದ ವರೆಗೆ
(7) ಇ.ಎಂ.ಡಿ 10 ನಾನ್ ಕ್ಲಿನಿಕಲ್ ಸಿಬ್ಬಂದಿಗೆ 20% ರಂತೆ:-ರೂ. 619852.56/-
(8) ಇ.ಎಂ.ಡಿ 10, ಗ್ರೂಫ್ ಡಿ ಸಿಬ್ಬಂದಿಗೆ 2.50% ರಂತೆ:-ರೂ. 62943.39/-
(9) ಇ.ಎಂ.ಡಿ 01, ಡಾಟಾ ಎಂಟ್ರಿ ಅಪರೇಟ್ ರೂ. 5928/-
(10) ಇ-ಟೆಂಡರ್ ವೆಬ್ ಸೈಟ್ ವಿಳಾಸ:-
https://kppp.karnataka.gov.in/#/

DIPR/CTA/KSMCA/56/2026-27
ಸಹಿ/- ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸತ್ರೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ.

ಪುರಸಭೆ ಕಾರ್ಯಾಲಯ, ಕಾಪು
ಹರಾಜು ಪ್ರಕಟಣೆ

ಕ್ರ.ಸಂ:ಪುಸಕಾ/ತಾಂತ್ರಿಕ/ಸಿ.ಆರ್/01/2026-27 ದಿನಾಂಕ : 21-04-2026

ಕಾಪು ಪುರಸಭೆ ವ್ಯಾಪ್ತಿಯ ವಾರ್ಡ್ ನಂ.14ರ ಮೂಳೂರು ದುಗ್ಗನ್ ತೋಟ ಫಿಶರೀಸ್ ಶಾಲೆ ಬಳಿ ಮತ್ತು ವಾರ್ಡ್ ನಂ. 23ರ ಮಲ್ಲಾರು ಗ್ರಾಮದ ಫಕೀರನಕಟ್ಟೆ ಬಳಿ ಇರುವ ಓವರ್‌ಹೆಡ್ ಟ್ಯಾಂಕ್‌ಗಳನ್ನು ಮಾನವ ಸಂಪನ್ಮೂಲ, ವಾಹನ, ಇಂಧನ ಸಂರಕ್ಷಣಾ ಪರಿಕರಗಳನ್ನು ಒದಗಿಸಿ ಕೆಡವಿ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಉಪಯುಕ್ತ ಕಬ್ಬಿಣ ಇತ್ಯಾದಿ ವಸ್ತುಗಳ ಬಗ್ಗೆ ಪುರಸಭೆಗೆ ಪಾವತಿಸುವ ಬಿಡ್ ಮೊತ್ತವನ್ನು ಸೂಚಿಸಲು ಅರ್ಹ ವಿಜ್ಞಾಪನದಾರರಿಂದ ಬಿಡ್ ಆಹ್ವಾನಿಸಲಾಗಿದೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಯಾವುದೇ ಹಾನಿಯಾಗದಂತೆ ಕೆಲಸ ನಿರ್ವಹಿಸತಕ್ಕದ್ದು. ಪುರಸಭೆಗೆ ಪಾವತಿಸುವ ಮೊತ್ತವನ್ನು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ **ದಿನಾಂಕ : 28-04-2026ರ** ಒಳಗಾಗಿ ಬಿಡ್ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ **www.kauptown.mrc.gov.in** ವೆಬ್‌ಸೈಟ್‌ನಲ್ಲಿ ಅಥವಾ ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಮುಖ್ಯಾಧಿಕಾರಿ, ಪುರಸಭೆ, ಕಾಪು, ಉಡುಪಿ ಜಿಲ್ಲೆ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ
ಬೆಂಗಳೂರು ನಗರ ಜಿಲ್ಲೆ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು 560038
ದೂರವಾಣಿ ಸಂಖ್ಯೆ : 080-25202265, ಇ-ಮೇಲ್ : dhobangaloreurban@gmail.com

ಸಂಖ್ಯೆ : ಜಿ.ಆ.ಕು.ಕ/ಅಭಿವೃದ್ಧಿ/ಟೆಂಡರ್/01/2026-27 ದಿನಾಂಕ: 17/04/2026

ಇ-ಟೆಂಡರ್ ಪ್ರಕಟಣೆ

ಟೆಂಡರ್ ಅಧಿಸೂಚನೆ ಸಂಖ್ಯೆ: **DHO/DEV/TENDER/01/2026-27, ದಿನಾಂಕ: 17.04.2026**
2026-27 ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ವ್ಯಾಪ್ತಿಯ ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ / ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರದ ಮಾರ್ಗಸೂಚಿಗಳನ್ವಯ ಖಾಲಿ ಇರುವ ಅವಶ್ಯ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಗುತ್ತಿಗೆ ಆಧಾರದ ನೇಮಿಸಲು ಕೆಟಿಪಿಪಿ ನಿಯಮಾನುಸಾರ **E-Procurement** ಮುಖಾಂತರ ಟೆಂಡರ್‌ನ್ನು ಕರೆದಿದ್ದು **https://kppp.karnataka.gov.in** ಇ-ಪೋರ್ಟಲ್ ಮುಖಾಂತರ ಆಸಕ್ತಿಯುಳ್ಳ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್‌ನ್ನು ಇ-ಪೋರ್ಟಲ್ ಮುಖಾಂತರ ದಿನಾಂಕ: 18.04.2026 ರಿಂದ ದಿನಾಂಕ: 16.05.2026 ರಂದು ಮಧ್ಯಾಹ್ನ 03:00 ಗಂಟೆವರೆಗೂ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಹಳೇ ಟಿ ಬಿ ಆಸ್ಪತ್ರೆ ಆವರಣ, ಇಂದಿರಾನಗರ, ಬೆಂಗಳೂರು-560038 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಂಗಳೂರು ನಗರ ಜಿಲ್ಲೆ

DIPR/CP/286/Zen/2026-27

ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್, ಕೋಲಾರ ಜಿಲ್ಲೆ
ದೂರವಾಣಿ ಸಂಖ್ಯೆ: 08153-200898, e-mail:dsghkgf@gmail.com
ಸಂಖ್ಯೆ: ಸಾ.ಆ.ಕೆ/ಕೆ.ಮಾ.ಇ-ಟೆಂಡರ್/ನಾಕ್ಲಿ/03/2025-26
ದಿನಾಂಕ: 13.04.2026

ಟೆಂಡರ್ ಪ್ರಕಟಣೆ

ವಿಷಯ: 2026-27 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಕೆ.ಜಿ.ಎಫ್. ಇಲ್ಲಿಗೆ ಶೇ.40% ರಂತೆ 40 ಸಿಬ್ಬಂದಿ ನೌಕರರನ್ನು ನಾನ್-ಕ್ಲಿನಿಕಲ್ ಹೊರಸಂಪನ್ಮೂಲದಡಿಯಲ್ಲಿ ಸೇವೆಗಳನ್ನು ಒದಗಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ **http://kppp.karnataka.gov.in** ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ ಕುರಿತು.
ಸಾರ್ವಜನಿಕ ಆಸ್ಪತ್ರೆ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಹಾಗೂ ಮಹಿಳೆಯರು ಮತ್ತು ಮಕ್ಕಳ ಆಸ್ಪತ್ರೆ ಕೆ.ಜಿ.ಎಫ್, ಕೋಲಾರ ಜಿಲ್ಲೆ ಇಲ್ಲಿನ ಮೂರು ಆಸ್ಪತ್ರೆಗಳ ಆಸ್ಪತ್ರೆಗಳ 2026-27ನೇ ಸಾಲಿಗಾಗಿ ಇ-ಟೆಂಡರ್ (ಟೆಂಡರ್ ಅಂಗೀಕೃತಗೊಂಡ **ದಿನಾಂಕ: 10.04.2026** ರಿಂದ **24.04.2026** ರವರೆಗೆ) 15 ದಿನಗಳ ಅವಧಿಗೆ ನಾನ್ -ಕ್ಲಿನಿಕಲ್ ಶೇ.40% ರಂತೆ 40 ಸಿಬ್ಬಂದಿ ನೌಕರರ ಸೇವೆ ಒದಗಿಸಲು ಕರ್ನಾಟಕ ಕಾರ್ಮಿಕ ಇಲಾಖೆಯಿಂದ ಅಂಗೀಕೃತಗೊಂಡ ಅರ್ಹಗುತ್ತಿಗೆದಾರರಿಂದ **http://kppp.karnataka.gov.in** ಕೆ.ಪಿ.ಪಿ. ಪೋರ್ಟಲ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಅಲ್ಪಾವಧಿ ಮರು ಇ-ಟೆಂಡರ್ ಫಾರಂನ್ನು ದಿನಾಂಕ: **10.04.2026** ರಿಂದ **24.04.2026** ರವರೆಗೆ ಅಪರಾಹ್ನ **03:00** ಗಂಟೆಯವರೆಗೆ **http://kppp.karnataka.gov.in** ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಅಲ್ಪಾವಧಿ ಮರು ಇ-ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **24.04.2026** ರಂದು ಅಪರಾಹ್ನ **03.00** ಗಂಟೆಯವರೆಗೆ ಮಾತ್ರ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಸಾರ್ವಜನಿಕ ಆಸ್ಪತ್ರೆ, ಕೆ.ಜಿ.ಎಫ್

ವಾಸಾಇಸಂ/ಕೋಲಾರ/ಆರ್.ಓ.ಸಂಖ್ಯೆ35/ಕೆಎಸ್ಎಂಸಿಎ/2026-27

ಪುತ್ತೂರು ಮಾರುಕಟ್ಟೆ ಧಾರಣೆ
22-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	350 - 400
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಟ್ಟೆ	70 - 100
ಒಣ ಕೊಟ್ಟೆ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 675

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	230.50
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	142.00
ಸ್ಕ್ರಾಪ್ 2	125.00

PUBLIC NOTICE

The public is hereby Informed that my client **Mr. Arjun Janario Moraes**, S/o Late V.H.Moraes, aged 58 years, Residing at 4-8-739/60, Flat No. 804, Divya Enclave, Jall Road, Opposite Canara College, Mangalore -575003 have acquired the below mentioned properties from its respective owners by means of a registered Sale deeds 1091/2008-09 dated 28.05.2008; 4405/09-10 dated 09.11.2009; and the documents are registered in the office of the Sub-Registrar, Mangalore Taluk and he is in possession of the properties as absolute owner by mutating the RTC in his name. Whereas while tracing the title to the property it is found that the (a) General Power of Attorney of Avil Pereira in favour of Maurice Pereira and (b) Death Certificate of Bhoja Moolya is missing.

Any one has got custody or any claim over the Schedule properties may lodge their claim with documentary proof with the undersigned within a week of the publication of this notice.

SCHEDULE

Non-agricultural immovable property situated in 103 Neermarga Village of Mangalore Taluk within the registration Sub-District of Mangalore Taluk and comprised in:

Item No.	Sy. No.	Kissam	Extent (A-C)	Portion
1	133/2A (As per RTC S.No. 133/2AP1)	Converted	0-37	North Eastern
2	130/2B (As per RTC 130/2BP2)	Converted	0-25	North Portion
3	133/4 (As per RTC 133/4P4)	Converted	0-34.86	South West

BOUNDARIES of Item No.1:
North : Portion of S.No.130/1
South : Survey Line
East : Portion of S.No. 132/2AP2
West : Portion of S.No.133/1A

BOUNDARIES of Item No.2:
North : Survey Sub-Division Line
South : Survey Sub-Division Line
East : Portion of the same S.No.
West : Survey Line

BOUNDARIES of Item No.3:
North : Survey Sub-Division Line
South : Portion of the same S.No. reserved for the road
East : Portion of the same S.No.
West : Survey Line

Sd/- B.Shrikrishna Bhat
Advocate,
Adithi Arcade, Karangalapady
Mangalore-575003

Mangalore
17.04.2026

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು (ಗ್ರಾ) ಜಿಲ್ಲೆ, ಕೊಠಡಿ ಸಂಖ್ಯೆ:216, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರಗ್ರಾಮ, ದೇವನಹಳ್ಳಿ-562110, ದೂರವಾಣಿ ಸಂ:080-29787455
ಇ-ಮೇಲ್: dombengalururural@gmail.com

ಸಂ: ಅಸಂಇ/ಬೆಂಗ್ರಾ/ ಹೊ.ಸಂ/ ಟೆಂಡರ್/ ಸಿಆರ್-01/ 2026-27 ದಿನಾಂಕ: 22-04-2026

ಪ್ರಕಟಣೆ

2026-27ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕಛೇರಿ, ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳು, ಮೌಲಾನಾ ಆಜಾದ್ ಮಾದರಿ ಶಾಲೆಗಳು, ಮಹಿಳಾ ಪದವಿ ಪೂರ್ವ ಕಾಲೇಜು, ವಿದ್ಯಾರ್ಥಿ ನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾ ಸಿಬ್ಬಂದಿ, ರಾತ್ರಿ ಕಾವಲುಗಾರರು, ಶುಶ್ರೂಷಕರು, ಗ್ರೂಪ್ ಡಿ ಹಾಗೂ ಜಿಲ್ಲಾ & ತಾಲ್ಲೂಕು ಮಟ್ಟದ ಕಛೇರಿಗೆ ವಾಹನ ಚಾಲಕರು, ಕಂಪ್ಯೂಟರ್ ಡಾಟಾ ಎಂಟ್ರಿ ಆಪರೇಟರ್‌ಗಳು, ಗ್ರೂಪ್ 'ಡಿ' ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ (https://kppp.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

1. ಟೆಂಡರ್‌ಗೆ ಇಟ್ಟ ಮೊತ್ತ ರೂ.1,34,50,000/- ಹಾಗೂ ಇ.ಎಂ.ಡಿ. ಮೊತ್ತ ರೂ.2,02,000/-
2. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 22-04-2026.
3. kppp-portal ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07-05-2026 ಸಂಜೆ 4.00ಗಂಟೆಯೊಳಗೆ
4. kppp-portal ಮೂಲಕ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-05-2026 (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).
5. kppp-portal ಮೂಲಕ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 15-05-2026 (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ).

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೊಠಡಿ ಸಂಖ್ಯೆ:216, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ-562110 (ದೂರವಾಣಿ ಸಂಖ್ಯೆ: 080-29787455) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಜಿಲ್ಲಾ ಅಧಿಕಾರಿಗಳು,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾ.ಸಾ.ಸ.ಇ/ಬೆಗ್ರಾ/292/ಕಸಂಇ/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಕನೀನಿನಿ. ಮಎಕಾನಿ, ವಿಭಾಗ ನಂ.1 ರಾಮದುರ್ಗ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ:-ಕಾ.ಇಂ/ಕನೀನಿನಿ/ಮಎಕಾನಿ.ವಿ-1/ಡಿ.ಬಿ/ಟೆಂಪ್ರ/8.ಟ್ಯಾಂಕ ಪಿಲ್ಲಿಂಗ್ /ಅರಡನೇಯ ಕರೆ ಸಂಖ್ಯೆ:125, ದಿ :21/04/2026.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಮಎಕಾನಿ, ವಿಭಾಗನಂ.1 ರಾಮದುರ್ಗ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯೂ-IV ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. 8 ಟ್ಯಾಂಕ ಫಿಲ್ಲಿಂಗ್ ಸ್ಟೇಜ್-೫ ಟರ್ನ-ಕೀ ಆಧಾರಿತ ಕಾಮಗಾರಿಗೆ (ಕಾಮಗಾರಿಯ ಇಂಡೆಂಟ್ ನಂಬರ 3924/Call-2) ಟೆಂಡರ್ ಕರೆಯಲಾಗಿದೆ.

ಈ ಕಾಮಗಾರಿಯ ಅಂದಾಜು ಮೊತ್ತ ರೂ. 39.22 ಕೋಟಿ ಇರುತ್ತದೆ. (ಜಿಎಸ್‌ಟಿ ಹೊರತುಪಡಿಸಿ) (ಒಟ್ಟು ಕಾಮಗಾರಿ-1) ಇ ಎಂ ಡಿ ಮೊತ್ತವು ಕೆ.ಪಿ.ಪಿ. ಪೋರ್ಟಲ್ ನಲ್ಲಿ ಪ್ರಕಟಿಸಲಾಗಿರುತ್ತದೆ.

1:ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ:21/04/2026 ರಿಂದ 30/04/2026 ರವರೆಗೆ 17.00 ಗಂಟೆಗೆ ವರೆಗೆ, 2:ಪ್ರೀ ಬಿಡ್ ಮೀಟಿಂಗ್ (ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಕಾಫೀ ಬೋರ್ಡ್ ಬಿಲ್ಡಿಂಗ್ ಬೆಂಗಳೂರು ಕಚೇರಿಯಲ್ಲಿ ಕರೆಯಲಾಗಿದೆ.):24/04/2026 12.30 ಗಂಟೆ ವರೆಗೆ, 3:ಟೆಂಡರ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ದಿನಾಂಕ (ಕಾನಿಇಂ ಕನೀನಿನಿ, ಮಎಕಾನಿ ವಿಭಾಗ ನಂ.1 ರಾಮದುರ್ಗ): 27/04/2026 ರವರೆಗೆ 17.00 ಗಂಟೆಗೆ ಸಾಯಂಕಾಲ ವರೆಗೆ, 4:ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 02/05/2026 ಸಾಯಂಕಾಲ 17:30 ಗಂಟೆಯ ನಂತರ, 5:ಆರ್ಥಿಕ ಬಿಡ್‌ತೆರೆಯುವ ದಿನಾಂಕ:04/05/2026 ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ, 6:ಕಾಲಾವಧಿ:18 ತಿಂಗಳು (ಮಳೆಗಾಲ ಸಹಿತ), 7:ಇ.ಎಂ.ಡಿ ಮೊತ್ತ :0.392 ಕೋಟಿ.

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್:- 08335- 242143

ಸಹಿ/-(ಪಿ.ಇ.ನಾಗರಾಜ)
ಕಾರ್ಯಪಾಲಕ ಇಂಜಿನಿಯರ್,(ಪ್ರ)
ಕನೀನಿನಿ, ಮಎಕಾನಿ, ವಿಭಾಗ ನಂ.1 ರಾಮದುರ್ಗ

DIPR/BGM/RO-NO-138/KSMCA/2026-27

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯತ್, ಬ್ರಹ್ಮಾವರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ
ಶಿಶು ಅಭಿವೃದ್ಧಿ ಯೋಜನೆ, ಬ್ರಹ್ಮಾವರ
ದೂರವಾಣಿ ಸಂಖ್ಯೆ: 0820-2562244 E-mail: cdpobrm@ymail.com

ಸಂ:ಶಿಅಯೋಬ್ರಾ:ಸಿಬ್ಬಂದಿ:ಹೊ.ಗು:ಇ-ಟೆಂ:2026-27/35 ದಿನಾಂಕ: 21-04-2026

ಇ-ಟೆಂಡರ್ ಪ್ರಕಟಣೆ

ಬ್ರಹ್ಮಾವರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ 2026-27ನೇ ಸಾಲಿನಲ್ಲಿ 'ಡಿ'- ದರ್ಜೆ ಹುದ್ದೆಯ ಸೇವೆಯನ್ನು ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ.

ಸೇವೆಗಳ ವಿವರ: (1) ಕಛೇರಿಯ ಡಿ-ದರ್ಜೆ ನೌಕರ ಹುದ್ದೆ-1 (2) ಇ.ಎಂ.ಡಿ ಮೊತ್ತ: 7000/- (3) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 07-05-2026 ರಂದು ಸಾಯಂಕಾಲ 5-30 ಗಂಟೆಯೊಳಗೆ: https://kppp.karnataka.gov.in Online ಮೂಲಕ (4) ಇ-ಪೋರ್ಟಲ್‌ನಲ್ಲಿ ದಾಖಲಾತಿಗಳ/ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09-05-2026 (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09-05-2026

ಹೆಚ್ಚಿನ ವಿವರಗಳಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬ್ರಹ್ಮಾವರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬ್ರಹ್ಮಾವರ
ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್, ಬ್ರಹ್ಮಾವರ

ವಾಸಾಇ/ಸಸಂಉ/ಕೆಎಸ್ಎಂಸಿಎ/53/26-27 ದಿ: 21.04.26

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಉರ್ವಾಸ್ಟೋರ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ: ತಾಂತ್ರಿಕ: ಜೆಇ(27) : 2026-27 ದಿನಾಂಕ: 21-04-2026

ಟೆಂಡರು ಪ್ರಕಟಣೆ

ಈ ಕೆಳಗೆ ತಿಳಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಇ-ಟೆಂಡರನ್ನು ಕರ್ನಾಟಕ ರಾಜ್ಯಸರ್ಕಾರದ ಪರವಾಗಿ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-1 & 2 ರ ಪ್ರಕಾರ ಆಹ್ವಾನಿಸಲಾಗಿರುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್‌ಜಾಲದ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಲಾಗಿರುವ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗಿರುತ್ತದೆ. ಇಂಡೆಂಟ್ ಸಂಖ್ಯೆ 110, 111ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06-05-2026 ಅಪರಾಹ್ನ 5.15 ಗಂಟೆ (17-15 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದಿನದಲ್ಲಿ (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಾಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-, ಆಯುಕ್ತರು
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/118/26-27 dt. 22.04.2026

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ
ಜಿಲ್ಲಾ ಆಡಳಿತ ಭವನ, ನವನಗರ, ಕೊಠಡಿ ಸಂಖ್ಯೆ : 201, ಬಾಗಲಕೋಟೆ - 587 102. ದೂರವಾಣಿ : 08354-235214,
ಇ-ಮೇಲ್ : dmbagalkot@rediffmail.com

ಸಂಖ್ಯೆ : ಡಾಬಿ.ಆರ್.ಅಂ.ಅ.ನಿ.ನಿ./ಜಿ.ವ್ಯ/ಬಾ./ಭೂ-ಒಡೆ/2026-27
ದಿನಾಂಕ : 18-04-2026

ಪ್ರಕಟಣೆ

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ-ಒಡೆತನ ಯೋಜನೆಯಡಿ ಈ ಕೆಳಗೆ ಕಾಣಿಸಿದ ಭೂ-ಮಾಲೀಕರಿಂದ ಪರಿಶಿಷ್ಟ ಜಾತಿಯ ಜನರಿಗೆ ಜಮೀನು ಮಾರಾಟಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ತಂಟೆ / ತಕರಾರು ಇದ್ದಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಸದರಿ ಜಮೀನಿಗೆ ಸಂಬಂಧಿಸಿದವರು ಯಾವುದೇ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆಯ ವಿಳ (07) ದಿನಗಳ ಒಳಗೆ ಸೂಕ್ತ ದಾಖಲೆಯೊಂದಿಗೆ ಆಕ್ಷೇಪಣೆಗಳನ್ನು ಖುದ್ದಾಗಿ ಅಥವಾ ರಜಿಸ್ಟರ್ ಎಡಿ ಮೂಲಕ ಸಲ್ಲಿಸಬಹುದಾಗಿದೆ. ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಮುಂದಿನ ಖರೀದಿ ಪ್ರಕ್ರಿಯೆಗೆ ಕ್ರಮ ವಹಿಸಲಾಗುವುದು. ಪ್ರಕರಣದ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಭೂ ಮಾಲೀಕರ ಹೆಸರು ಮತ್ತು ವಿಳಾಸ	ಜಮೀನು ಇರುವ ಸ್ಥಳ	ಸರ್ವೆ ನಂಬರ್/ ವಿಸ್ತೀರ್ಣ
01	ರೇವಣಸಿದ್ದಪ್ಪ ಜಂಗಮಶೆಟ್ಟಿ ಮುತ್ತಪ್ಪ, ಮಲ್ಲಪ್ಪ ಜಂಗಮಶೆಟ್ಟಿ ಮುತ್ತಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/2 ವಿಸ್ತೀರ್ಣ 0.25 ಎಕರೆ
02	ಸದಾಶಿವ ಜಂಗಮಶೆಟ್ಟಿ ಶಿವಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/8ವಿಸ್ತೀರ್ಣ 0.24 ಎಕರೆ
03	ಶೇಖರ ಜಂಗಮಶೆಟ್ಟಿ ಶಿವಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/6 ವಿಸ್ತೀರ್ಣ 0.25 ಎಕರೆ
04	ಬಸಪ್ಪ ಜಂಗಮಶೆಟ್ಟಿ ಶಿವಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	87/7 ವಿಸ್ತೀರ್ಣ 0.25 ಎಕರೆ
05	ಶೇಖರ ಜಂಗಮಶೆಟ್ಟಿ ರೇವಣೆಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	88/12 ವಿಸ್ತೀರ್ಣ 1.05 ಎಕರೆ
06	ಕಲ್ಲಪ್ಪ ಪರಮಗೊಂಡ ಚನ್ನಪ್ಪ ಹಾಗೂ ನಿಂಗಪ್ಪ ಪರಮಗೊಂಡ ಚನ್ನಪ್ಪ, ಸಾ. ಚಿಕ್ಕಪಡಸಲಗಿ, ತಾ. ಜಮಖಂಡಿ.	ಚಿಕ್ಕಪಡಸಲಗಿ	64/3 ವಿಸ್ತೀರ್ಣ 3.10 ಎಕರೆ

ಸಹಿ/- ರಮೇಶ ಜಿ. ಚವ್ಹಾಣ,
ಜಿಲ್ಲಾ ವ್ಯವಸ್ಥಾಪಕರು,
ಡಾ.ಬಿ.ಆರ್.ಅಂ.ಅ.ನಿ.ನಿ., ಬಾಗಲಕೋಟೆ.

ವಾಸಾಇ/ಬಾಗಲಕೋಟೆ/11/ಕೆಎಸ್‌ಎಂಸಿಎ/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ.ಮಂ.ವಿ.ಟಿ.ಎನ್.ಡಿ:03ಇ/56ಇ/60ಇ/59ಇ/66ಇ/:2025-26/2026-27:ಜಿಇ-1 ದಿನಾಂಕ: 21.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) / ಸಮಯಾವಧಿ ವಿಸ್ತರಣೆ, 2ನೇ ಕರೆ /3ನೇ ಕರೆ

ಲೆಕ್ಕಶೀರ್ಷಿಕೆ 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು ಬಂಡವಾಳ ವೆಚ್ಚದಡಿ ಇಂಡೆಂಟ್ ನಂ: 34437, 34438 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 06.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆಯಡಿ ಇಂಡೆಂಟ್ ನಂ: 35748, 35747, 34687, 34680, 35011, ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 02.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. **ಲೆಕ್ಕಶೀರ್ಷಿಕೆ 5054-03-101-0-02-132 ಜಿಲ್ಲಾ ಮುಖ್ಯ ರಸ್ತೆ ಸೇತುವೆಯಡಿ SE1197** ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ ಮತ್ತು **ಲೆಕ್ಕಶೀರ್ಷಿಕೆ 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆ** ಇಂಡೆಂಟ್ ನಂ: 35181, 35182 ಈ ಕಾಮಗಾರಿಗಳಿಗೆ **ಸಮಯಾವಧಿ ವಿಸ್ತರಣೆ** ಮಾಡಲಾಗಿದೆ, ಈ ಎಲ್ಲಾ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 29.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: 3054-04-337-1-10-200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಯಡಿ ಇಂಡೆಂಟ್ ನಂ:34672, ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 30.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ. **ಲೆಕ್ಕಶೀರ್ಷಿಕೆ: 3054-03-337-0-05-200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆಯಡಿ** ಇಂಡೆಂಟ್ ನಂ: 34856, **ಲೆಕ್ಕಶೀರ್ಷಿಕೆ: 3054-04-105-0-01-200 ಯೋಜನೆ ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳ ನಿರ್ವಹಣೆಯಡಿ** ಇಂಡೆಂಟ್ ನಂ:34900 **ಲೆಕ್ಕಶೀರ್ಷಿಕೆ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚದಡಿ** ಇಂಡೆಂಟ್ ನಂ: 32952, 32951, ಈ ಕಾಮಗಾರಿಗಳಿಗೆ **2ನೇ ಕರೆಯಾಗಿ** ಮತ್ತು ಇಂಡೆಂಟ್ ನಂ: 33619, 32956, 32954, 32950, 33947, 32621, 32940, 33619 ಈ ಕಾಮಗಾರಿಗಳಿಗೆ **3ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 28.04.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಮಂಗಳೂರು ತಾಲೂಕಿನ ದೇರೆಬೈಲ್‌ನಲ್ಲಿರುವ ವಸತಿಗೃಹ ಸಂಖ್ಯೆ 15 & 86 ರಲ್ಲಿ ಬಾಗಿಲುಗಳ ದುರಸ್ತಿ, ನೀರಿನ ಟ್ಯಾಂಕ್ ಹಾಗೂ ಇತರ ದುರಸ್ತಿ (ಅಂದಾಜು ಮೊತ್ತ ರೂ. 4.00 ಲಕ್ಷ) (ಇ.ಎಂ.ಡಿ. ರೂ. 10000/-) **ಈ ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 24.04.2026. ದಿನಾಂಕ: 27.04.2026 ರಂದು ಖಾಲಿ ಟೆಂಡರ್ ಫಾರಂ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 29.04.2026ರ ಸಂಜೆ 4.00 ರ ವರೆಗೆ ಎಂದು ನಿಗದಿಪಡಿಸಲಾಗಿದೆ.** ಟೆಂಡರ್ ಫಾರಂ ಬೆಲೆ: ರೂ. 500.00+ಜಿಎಸ್‌ಟಿ ಆಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.4.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.50.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ **KW-1, KW-2, KC-8** ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ರೂ.5.00ಲಕ್ಷ ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಹಾಗೂ ಕಾಮಗಾರಿಗಳ ವಿಸ್ತೃತ ವಿವರ, ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗೆ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. **ದೂರವಾಣಿ ಸಂಖ್ಯೆ: 0824-2423169.**

DIPR/DK/KSMCA/119/26-27 dt 22.04.2026
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು -584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2026-27 ದಿನಾಂಕ:21.04.2026

ಇ-ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಗೆ ಅವಶ್ಯವಿರುವ ಹೆಚ್‌ಎಸ್‌ಎಸ್ ಐಟಂಗಳು ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಯ ಕೇಂದ್ರ ಪ್ರಯೋಗಾಲಯಕ್ಕೆ ಹಾಗೂ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್‌ಗಳು ಮತ್ತು ಇತರೆ ಐಟಂಗಳು ಮತ್ತು ಸರ್ಜಿಕಲ್ಸ್ ಮತ್ತು ಮಿಸ್ಸಲೇನಿಯಸ್ ಐಟಂಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅವಶ್ಯವಿರುವ ವಿವಿಧ ರಸಾಯನಿಕಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು (ಆರ್‌ಜಿಎಸ್‌ಹೆಚ್)/ಟೆಂಡರ್/ ಡಯಾ-ಕೆಮ್/159/2026-27 (DME/2026-27IND2253)	99.34
2	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಯ ಕೇಂದ್ರ ಪ್ರಯೋಗಾಲಯಕ್ಕೆ ಅವಶ್ಯವಿರುವ ರಸಾಯನಿಕಗಳು, ರಿಏಜೆಂಟ್‌ಗಳು ಮತ್ತು ಇತರೆ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್ (ಆರ್‌ಜಿಎಸ್‌ಎಸ್‌ಹೆಚ್)/ಲ್ಯಾಬ್/160/ 2026-27 (DME/2026-27/ IND2257)	91.64
3	ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸರ್ಜಿಕಲ್ಸ್ ಮತ್ತು ಮಿಸ್ಸಲೇನಿಯಸ್ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು (ಆರ್‌ಜಿಎಸ್‌ಎಸ್‌ಹೆಚ್)/ಟೆಂಡರ್/ ಸರ್ಜಿಕಲ್/ 161/2026-27 (DME/ 2026-27/IND2262)	86.42
4	ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವಗಾಂಧಿ ಸೂಪರ್‌ಸ್ಪೆಷಾಲಿಟಿ (ಒಪೆಕ್) ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಹೆಚ್‌ಎಸ್‌ಎಸ್ ಐಟಂಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಹೆಚ್‌ಎಸ್‌ಎಸ್/01/2026-27/ ಕಾಲ್-2 (DME/2026-27/ IND2177)	83.00

1) ಟೆಂಡರ್‌ಗಳನ್ನು ದಿನಾಂಕ: 22.04.2026 ರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 2) ಪ್ರಶ್ನೆಗಳಿಗೆ ಕೊನೆಯ ದಿನಾಂಕ: 29.04.2026 ರ ಸಾಯಂಕಾಲ 5.00 ಗಂಟೆಯವರೆಗೆ, 3)ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.05.2026 ರ ಸಾಯಂಕಾಲ 5.00ಗಂಟೆಯವರೆಗೆ, 4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ : 08.05.2026 ಬೆಳಿಗ್ಗೆ 11.30ಗಂಟೆಗೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೆ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಸದರಿ ಟೆಂಡರ್‌ಗಳ ಯಾವುದೆ ಬದಲಾವಣೆಗಳನ್ನು ಇಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

DIP/RCR/32/KSMC&A/34/2025-26

ಭೂಗಳ್ಳರ ವಿರುದ್ಧ ಕಠಿಣ ಕ್ರಮಕ್ಕೆ ಬಿಜೆಪಿ ಆಗ್ರಹ



» ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಬಿಡಿಎ ಜಾಗ ಒತ್ತುವರಿ
» ಉದ್ಯಾನವನ ಹಾಗೂ ರಾಜಕಾಲುವೆ ಮೇಲೆ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಕೂಡಲೇ ನಿಲ್ಲಿಸಬೇಕು

• **ಬೆಂಗಳೂರು:** ನಗರದ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 3ನೇ ಬ್ಲಾಕ್‌ನಲ್ಲಿ ಬಿಡಿಎಗೆ ಸೇರಿದ ಬೆಲೆಬಾಳುವ ಉಳಿಕೆ ಜಾಗ, ಉದ್ಯಾನವನ ಹಾಗೂ ರಾಜಕಾಲುವೆಯನ್ನು ಒತ್ತುವರಿ ಮಾಡಿ ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡುತ್ತಿರುವ ಭೂಗಳ್ಳರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಆಗ್ರಹಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಜಿಬಿಎ ಆಯುಕ್ತರಿಗೆ ಈ ಕುರಿತು ದಾಖಲೆ ಸಹಿತ ದೂರು ನೀಡಿರುವ ಅವರು, ಪ್ರಭಾವಿ ರಾಜಕಾರಣಿಗಳ ಬೆಂಬಲದೊಂದಿಗೆ ನಡೆಯುತ್ತಿರುವ ಈ ಹಗರಣವನ್ನು ತಡೆಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 3ನೇ ಬ್ಲಾಕ್‌ನಲ್ಲಿರುವ ನಿವೇಶನ ಸಂಖ್ಯೆ 433ರ ಪಕ್ಕದಲ್ಲಿ ಅಂದಾಜು 30★40 ಅಡಿ ವಿಸ್ತೀರ್ಣದ ಉಳಿಕೆ ಜಾಗವಿದೆ. ನಿಯಮದ ಪ್ರಕಾರ ಉಳಿಕೆ ಜಾಗಗಳನ್ನು ಬಿಡಿಎ ಹರಾಜು ಹಾಕಬೇಕಿತ್ತು. ಆದರೆ ಜಾಗವನ್ನು ಹರಾಜು ಹಾಕಿಲ್ಲ. ಈಗ ಅದರ ಮೇಲೆ ಅಕ್ರಮವಾಗಿ ರಸ್ತೆ ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಖಾಸಗಿ ತೋಟದ ಮಾಲೀಕರು ಅಲ್ಲಿ ವಸತಿ ಸಂಕೀರ್ಣ ನಿರ್ಮಿಸಲು ಮುಂದಾಗಿದ್ದು, ಅವರಿಗೆ ಅನುಕೂಲ ಮಾಡಿಕೊಡಲು ಸ್ಥಳೀಯ ಪ್ರಭಾವಿ ರಾಜಕಾರಣಿಯೊಬ್ಬರು ಮುತುವರ್ಜಿ ವಹಿಸಿ ಸರ್ಕಾರಿ ಸ್ವತ್ತಿನಲ್ಲಿ ಕಾನೂನುಬಾಹಿರವಾಗಿ ರಸ್ತೆ ನಿರ್ಮಿಸುತ್ತಿದ್ದಾರೆ ಎಂದು ಎನ್.ಆರ್. ರಮೇಶ್ ಆರೋಪ ಮಾಡಿದ್ದಾರೆ.

ಈ ಹಿಂದೆ ಸ್ಥಳೀಯ ನಿವಾಸಿಗಳು ದೂರು ನೀಡಿದಾಗ ಕಾಮಗಾರಿ ಸ್ಥಗಿತಗೊಂಡಿತ್ತಾದರೂ, ಈಗ ಮತ್ತೆ ರಸ್ತೆ ನಿರ್ಮಾಣಕ್ಕೆ ಸಿದ್ಧತೆ ನಡೆಸಲಾಗುತ್ತಿದೆ.ಈ ಉಳಿಕೆ ಜಾಗವನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿದರೆ ಬಿಡಿಎಗೆ ಕೋಟ್ಯಂತರ ರೂಪಾಯಿ ಆದಾಯ ಬರಲಿದೆ. ಅದನ್ನು ಬಿಟ್ಟು ಖಾಸಗಿ ವ್ಯಕ್ತಿಗಳಿಗಾಗಿ ರಸ್ತೆ ನಿರ್ಮಿಸಿದರೆ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಬದಲಾಗಿ ಸ್ಥಳೀಯ ನಿವಾಸಿಗಳ ನೆಮ್ಮದಿಗೆ ಭಂಗ ಬರಲಿದೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಉಳಿಕೆ ಜಾಗ, ಉದ್ಯಾನವನ ಹಾಗೂ ರಾಜಕಾಲುವೆ ಮೇಲೆ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಕೂಡಲೇ ನಿಲ್ಲಿಸಬೇಕು.ವಿವಾದಿತ ಉದ್ಯಾನವನವನ್ನು ಕೂಡಲೇ ಸರ್ವೆ ಮಾಡಿಸಿ ಗಡಿ ಗುರುತಿಸಬೇಕು.ಭೂಕಬಳಿಕೆಗೆ ಮುಂದಾಗಿರುವ ವ್ಯಕ್ತಿಗಳು ಹಾಗೂ ಅವರಿಗೆ ಸಹಕರಿಸುತ್ತಿರುವ ಬಿಡಿಎ ಅಧಿಕಾರಿಗಳ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ್ದಾರೆ.

ಜಾಗೃತಿ



ವಿಶ್ವ ಭೂ ದಿನದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಆರ್ಟ್ ಕಲ್ಚರಲ್ ಎಜುಕೇಷನಲ್ ಎನ್ಸೆಟ್ ಫೌಂಡೇಷನ್ ನಿಂದ ನಮ್ಮ ಶಕ್ತಿ ನಮ್ಮ ಗ್ರಹ ಶೀರ್ಷಿಕೆಯಲ್ಲಿ ಪರಿಸರ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳು ನಗರದ ಬಾಲಭವನದಲ್ಲಿ ಜಾಗೃತಿ ಮೂಡಿಸಿದರು.

ಕಿರುಸುದ್ದಿ

ಪತಿ ಸ್ನೇಹಿತನ ಜತೆ ಓಡಿ ಹೋದ ಗೃಹಿಣಿ



• **ಬೆಂಗಳೂರು:** ವಿವಾಹಿತೆ ತನ್ನ ಪತಿಯ ಸ್ನೇಹಿತನ ಜತೆಗೆ ಓಡಿಹೋದ ವಿಚಿತ್ರ ಘಟನೆಯೊಂದು ಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಈ ಸಂಬಂಧ ಪತಿ ನಿತೀಶ್ ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಪರಾರಿಯಾಗಿದ್ದ ಮಹಿಳೆ ಹಾಗೂ ಆಕೆಯ ಪ್ರಿಯಕರ ನವೀನ್‌ನನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ನಿತೀಶ್ ಮತ್ತು ರಂಜಿತಾ ಎಂಬ ಮಹಿಳೆ ಪರಸ್ಪರ ಪ್ರೀತಿಸಿ ವಿವಾಹವಾಗಿದ್ದರು. ಮದುವೆಯ ನಂತರ ದಂಪತಿ ನಿತೀಶ್ ಅವರ ಸ್ನೇಹಿತ ನವೀನ್‌ನ ಮನೆಯನ್ನೇ ಬಾಡಿಗೆಗೆ ಪಡೆದು ವಾಸವಿದ್ದರು. ಈ ಸಮಯದಲ್ಲಿ ಪತ್ನಿ ಕದ್ದುಮುಚ್ಚಿ ನವೀನ್ ಜತೆ ಫೋನ್‌ನಲ್ಲಿ ಮಾತನಾಡುತ್ತಿರುವುದು ಪತಿಗೆ ತಿಳಿದುಬಂದಿತ್ತು. ಈ ವಿಷಯವಾಗಿ ಪತಿ ಹಲವು ಬಾರಿ ಬುದ್ಧಿ ಹೇಳಿದ್ದಲ್ಲದೆ, ಆ ಮನೆಯನ್ನು ಖಾಲಿ ಮಾಡಿ ಬೇರೆಡೆಗೆ ವಾಸ್ತವ್ಯ ಬದಲಿಸಿದ್ದರು. ಆದರೂ ತನ್ನ ಚಾಳಿ ಮುಂದುವರಿಸಿದ್ದ ಮಹಿಳೆ, ಅವನು ನನಗೆ ಅಣ್ಣನ ಸಮಾನ ಎಂದು ಪತಿಯನ್ನು ನಂಬಿಸಿದ್ದರು. ಮೂರು ದಿನಗಳ ಹಿಂದೆ ಕೆಲಸಕ್ಕೆಂದು ಮನೆಯಿಂದ ಹೊರಟಿದ್ದ ಮಹಿಳೆ, ಕಚೇರಿಯಲ್ಲಿ ಅರ್ಧ ದಿನ ರಜೆ ಪಡೆದು ಮೊದಲೇ ಸಿದ್ಧಪಡಿಸಿಕೊಂಡಿದ್ದ ಬ್ಯಾಗ್‌ನೊಂದಿಗೆ ಪ್ರಿಯಕರನ ಜತೆ ನಾಪತ್ತೆಯಾಗಿದ್ದರು. ಪತ್ನಿ ಕಾಣೆಯಾದ ಬಗ್ಗೆ ಆತಂಕಗೊಂಡ ನಿತೀಶ್ ಪೊಲೀಸರಿಗೆ ದೂರು ನೀಡಿದ್ದರು. ತನಿಖೆ ನಡೆಸಿದ ಪೊಲೀಸರು ಇಬ್ಬರನ್ನೂ ಪತ್ತೆ ಹಚ್ಚಿ ಠಾಣೆಗೆ ಕರೆತಂದಿದ್ದಾರೆ. ಆದರೆ, ಪೊಲೀಸರ ಮುಂದೆ ಹಠ ಹಿಡಿದಿರುವ ಮಹಿಳೆ, ನಾನು ಪತಿಯ ಜತೆ ಹೋಗುವುದಿಲ್ಲ, ಪಿ.ಜಿ.ಯಲ್ಲಿ ವಾಸಿಸುತ್ತೇನೆ ಎಂದು ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ಸದ್ಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಯನಗರ ಪೊಲೀಸರು ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಸ ಹಾಕಲು ಹೋದ ಮಹಿಳೆ ನಾಪತ್ತೆ

• **ಬೆಂಗಳೂರು:** ಮನೆಯಿಂದ ಕಸ ಹಾಕಲು ಹೊರಹೋದ ಗೃಹಿಣಿಯೊಬ್ಬರು ನಿಗೂಢವಾಗಿ ನಾಪತ್ತೆಯಾಗಿರುವ ಘಟನೆ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಟಿ.ಬಿ. ಕಾವಲ್ ಗ್ರಾಮದ ಪ್ರಿಯಾಂಕಾ ಕೆ.ಟಿ (28) ನಾಪತ್ತೆಯಾದ ಮಹಿಳೆ. ಕಳೆದ ಕೆಲವು ದಿನಗಳಿಂದ ಬಾಗಲಗುಂಟೆಯ ಪ್ರಜ್ಞಾ ನಿವಾಸದಲ್ಲಿ ವಾಸವಿದ್ದ ಪ್ರಿಯಾಂಕಾ ಅವರ ಪತಿ ಶರತ್ ಕುಮಾರ್ ನಾಯ್ಕ್ ಅವರು ಸುಧಾಮನಗರದ ಖಾಸಗಿ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಏ.11ರ ರಾತ್ರಿ ಸುಮಾರು 11.30ರ ವೇಳೆಗೆ ಕಸ ಎಸೆದು ಬರುವುದಾಗಿ ಹೇಳಿ ಮನೆಯಿಂದ ಹೊರಗೆ ಹೋದ ಪ್ರಿಯಾಂಕ ಅವರು ಮರಳಿ ಬಂದಿಲ್ಲ. ಮಧ್ಯರಾತ್ರಿಯಾದರೂ ಪತ್ನಿ ಮನೆಗೆ ಬಾರದಿದ್ದಾಗ ಆತಂಕಗೊಂಡ ಶರತ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು ಸಂಬಂಧಿಕರ ಮನೆಗಳಲ್ಲಿ ಹುಡುಕಾಟ ನಡೆಸಿದ್ದಾರೆ. ಎಲ್ಲಿಯೂ ಸುಳಿವು ಸಿಗದ ಹಿನ್ನೆಲೆಯಲ್ಲಿ ಪೊಲೀಸರ ಮೊರೆ ಹೋಗಿದ್ದಾರೆ. ಈ ಕುರಿತು ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಾಪತ್ತೆಯಾದ ಮಹಿಳೆಯ ಪತ್ತೆಗಾಗಿ ತನಿಖೆ ಚುರುಕುಗೊಂಡಿದೆ. ಪ್ರಿಯಾಂಕಾ ಅವರು ಕೌಟುಂಬಿಕ ಕಾರಣದಿಂದ ಅಥವಾ ಪರಿಚಯಸ್ಥರ ಜತೆ ಹೋಗಿರಬಹುದು ಎಂಬ ಶಂಕೆಯನ್ನು ದೂರಿನಲ್ಲಿ ವ್ಯಕ್ತಪಡಿಸಲಾಗಿದೆ. ಪೊಲೀಸರು ಮಹಿಳೆಯ ಭಾವಚಿತ್ರವನ್ನು ಬಿಡುಗಡೆ ಮಾಡಿದ್ದು, ಸಾರ್ವಜನಿಕರಿಗೆ ಯಾವುದೇ ಮಾಹಿತಿ ಸಿಕ್ಕಲ್ಲಿ ಕೂಡಲೇ ಠಾಣೆಗೆ ತಿಳಿಸುವಂತೆ ಕೋರಿದ್ದಾರೆ.

ಸೂರ್ಯನ ತಾಪಕ್ಕೆ ಕೆಂಡದುಂಡೆಯಾದ ನೆಲ | ದಿನದಿಂದ ದಿನಕ್ಕೆ ತಾಪಮಾನ ಹೆಚ್ಚಳ

ಗಾರ್ಡನ್ ಸಿಟಿಯಲ್ಲಿ ಬಿಸಿಲ ಝಳ

• **ಬೆಂಗಳೂರು:** ಒಂದು ಕಾಲದಲ್ಲಿ ತನ್ನ ಆಹ್ಲಾದಕರ ಹವಾಮಾನ ಮತ್ತು ಹಸಿರು ಹೊದಿಕೆಯಿಂದಾಗಿ ಗಾರ್ಡನ್ ಸಿಟಿ ಬೆಂಗಳೂರು ಈಗ ಬಿಸಿಲ ಬೇಗೆಗೆ ಬೆಂದು ಹೋಗುತ್ತಿದೆ. ನಗರದ ಹವಾಮಾನವು ಮೆಲ್ಲನೆ ತನ್ನ ಸಮತೋಲನ ಕಳೆದುಕೊಳ್ಳುತ್ತಿದ್ದು, ಬೆಂಗಳೂರಿಗರು ಈಗ ಸುಡುವ ಬಿಸಿಲಿಗೆ ಹೈರಾಣಾಗಿದ್ದಾರೆ.

ಸಾಮಾನ್ಯವಾಗಿ ವಾಡಿಕೆ ಪ್ರಕಾರ ನಗರದಲ್ಲಿ ಏಪ್ರಿಲ್ ತಿಂಗಳಲ್ಲಿ ಬೀಳುವ ಮಳೆ ನಗರವನ್ನು ತಂಪಾಗಿಸುತ್ತಿತ್ತು. ಆದರೆ ಈ ಬಾರಿ ಸುರಿದ ತುಂತುರು ಮಳೆ ಹೆಚ್ಚುತ್ತಿರುವ ತಾಪಮಾನವನ್ನು ತಗ್ಗಿಸುವಲ್ಲಿ ವಿಫಲವಾಗಿದೆ. ನಗರದಾದ್ಯಂತ ತಾಪಮಾನ ಏರುತ್ತಲೇ ಇರುವುದು ನಿವಾಸಿಗಳಲ್ಲಿ ಆತಂಕ ಮೂಡಿಸಿದೆ.

> ತಾಪಮಾನ ಹೆಚ್ಚಳಕ್ಕೆ ಪ್ರಮುಖವಾಗಿ ಮರಗಳ ಮಾರಣ ಹೋಮ ಮಾಡುತ್ತಿರುವುದು. ಅರಣ್ಯ ಇಲಾಖೆಯ ವರು ರಕ್ಷಕರಾಗಬೇಕಾಗಿರುವ ಅರಣ್ಯ ಇಲಾಖೆ ಭಕ್ಷಕರಾ ಗುತ್ತಿದ್ದಾರೆ. ಜನ ಸಂಖ್ಯೆಗೆ ಪೂರಕವಾಗಿ ಮರಗಳನ್ನು ಬೆಳೆಸದಿದ್ದರೆ ಮುಂದೆ ಬೆಂಗಳೂರಿನ ಜನತೆಗೆ ಉಸಿರಾಡಲು ಗಾಳಿ ಇಲ್ಲದ ಹಾಗೆ ಆಗುವುದಂತೂ ಸತ್ಯ..ಇನ್ನು ಮೇಲಾ ದರೂ ಸರಕಾರದ ಅರಣ್ಯ ಮತ್ತು ಸಂಭಂದ ಪಟ್ಟ ಉನ್ನತ ಅಧಿಕಾರಿಗಳು ಮರಗಳನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಅವರ ಕರ್ತವ್ಯವನ್ನು ಪಾಲಿಸುವುದು ಬಹಳ ಮುಖ್ಯ.
>
> ■ **ಪಾರ್ವತಿ ಶ್ರೀರಾಮ್,** ಪರಿಸರಕ್ಕಾಗಿ ನಾವು ಸಂಘಟನೆ



ಹೀಟ್ ಐಲೆಂಡ್ ಆದ ರಾಜಧಾನಿ

ಪರಿಸರ ಮತ್ತು ನಗರಾಭಿವೃದ್ಧಿ ತಜ್ಞರ ಪ್ರಕಾರ, ಬೆಂಗಳೂರಿನ ಈ ಸ್ಥಿತಿಗೆ ಅವೈಜ್ಞಾನಿಕ ನಗರೀಕರಣವೇ ಮುಖ್ಯ ಕಾರಣ. ಅಂಕಿಅಂಶಗಳ ಪ್ರಕಾರ, 1970ರ ದಶಕದಲ್ಲಿ ಬೆಂಗಳೂರಿನಲ್ಲಿ ಶೇ.78ರಷ್ಟಿದ್ದ ಹಸಿರು ಹೊದಿಕೆ ಈಗ ಕೇವಲ ಶೇ. 6ಕ್ಕೆ ಕುಸಿದಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮರಗಳ ಮಾರಣಹೋಮ ಮತ್ತು ಕೆರೆಗಳ ಒತ್ತುವರಿ ನಗರವನ್ನು ಹೀಟ್ ಐಲೆಂಡ್(ಶಾಖದ ದ್ವೀಪ) ಆಗಿ ಪರಿವರ್ತಿಸುತ್ತಿದೆ ಕಳವಳ ವ್ಯಕ್ತಪಡಿಸಿದ್ದಾರೆ.

» ★ನಗರದಲ್ಲಿ ತಾಪಮಾನವು 35ಕೆಸಿ ದಾಟುವುದು ಸಾಮಾನ್ಯವಾಗುತ್ತಿದೆ.
» ★ನಮ್ಮ ಪರಿಸರಕ್ಕೆ ಒಪ್ಪುವ ಸ್ಥಳೀಯ ತಳಿಗಳ ಗಿಡಗಳನ್ನು ನೆಡುವ ಸಣ್ಣ ಮತ್ತು ನಿರಂತರ ಅಭಿಯಾನ ನಡೆಸಬೇಕು.
» ★ ಮನೆಗಳಲ್ಲಿ ಟೆರೇಸ್ ಗಾರ್ಡನ್, ಸಾಧ್ಯವಾದಷ್ಟು ಕಾಂಕ್ರೀಟ್ ಬಳಕೆಯನ್ನು ಕಡಿಮೆ ಮಾಡಬೇಕು.

ಸುಸ್ಥಿರ ಅಭಿವೃದ್ಧಿ ಹೆಸರಲ್ಲಿ ಹಸಿರು ನಾಶ

ಸುಸ್ಥಿರ ಅಭಿವೃದ್ಧಿ ಎಂಬ ಹೆಸರಿನಲ್ಲಿ ಮೂಲಸೌಕರ್ಯ ಯೋಜನೆಗಳು ಜಾರಿಯಾಗುತ್ತಿವೆ. ಆದರೆ ವಾಸ್ತವದಲ್ಲಿ ಇದು ಪರಿಸರದ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಕಟ್ಟಡಗಳ ನಿರ್ಮಾಣಕ್ಕಾಗಿ ನಿಗದಿಪಡಿಸಲಾದ ನಿಯಮಗಳನ್ನು ಗಾಳಿಗೆ ತೂರಿ ಹಸಿರು ಪ್ರದೇಶಗಳನ್ನು ಕಾಂಕ್ರೀಟ್ ಮಯ ಮಾಡಲಾಗುತ್ತಿದೆ. ಇದು ಕೇವಲ ಪ್ರಕೃತಿಯ ನಾಶ ಮಾತ್ರವಲ್ಲದೆ, ಮುಂದಿನ ತಲೆಮಾರು ಸರಿಪಡಿಸಲಾಗದ ಪರಿಸರ ಹಾನಿಗೆ ಕಾರಣವಾಗುತ್ತಿದೆ ಎಂದು ಪರಿಸರ ತಜ್ಞರು ಎಚ್ಚರಿಸಿದ್ದಾರೆ. ಪರಿಸರವಾದಿಗಳ ಪ್ರಕಾರ, ಬೆಂಗಳೂರು ಒಂದು ಹೀಟ್ ಐಲೆಂಡ್ ಆಗಿ ಬದಲಾಗುತ್ತಿರುವ ಮುನ್ಸೂಚನೆಗಳು ಈಗ ಕಣ್ಣಮುಂದೆಯೇ ನಿಜವಾಗುತ್ತಿವೆ. ಮರಗಳ ಸಾಲುಗಳಿಂದ ಕೂಡಿದ್ದ ರಸ್ತೆಗಳು ಈಗ ಕಾಂಕ್ರೀಟ್ ಕಾಡುಗಳಾಗಿವೆ. ಪರಿಸರಕ್ಕೆ ಉಂಟಾಗಿರುವ ಈ ಹಾನಿಯನ್ನು ಸರಿಪಡಿಸಲು ದಶಕಗಳೇ ಬೇಕಾಗಬಹುದು. ಬೆಂಗಳೂರು ಮತ್ತೆ ತನ್ನ ಹಳೆಯ ಸೊಬಗನ್ನು ಪಡೆಯಬೇಕಾದರೆ ಕೇವಲ ಘೋಷಣೆಗಳಲ್ಲದೆ, ಕಟ್ಟುನಿಟ್ಟಾದ ಪರಿಸರ ಸಂರಕ್ಷಣಾ ಕ್ರಮಗಳು ಮತ್ತು ಗಿಡಗಳನ್ನು ನೆಡುವ ಆಂದೋಲನಗಳು ಸಮರೋಪಾದಿಯಲ್ಲಿ ನಡೆಯಬೇಕಿದೆ ಎಂದು ಸಾರ್ವಜನಿಕ ಮತ್ತು ತಜ್ಞರ ಆಗ್ರಹವಾಗಿದೆ.

1500 ಕೋಟಿ ರೂ. ಸ್ಥಿರ ಠೇವಣಿಗೆ ಬಿಡಿಎ ನಿರ್ಧಾರ

• **ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ಬಳಿ ಉಳಿತಾಯವಿರುವ ಬರೋಬ್ಬರಿ 1500 ಕೋಟಿ ರೂ.ಗಳನ್ನು ಸ್ಥಿರ ಠೇವಣಿ ಇಡಲು ನಿರ್ಧರಿಸಿದೆ. ಈ ಸಂಬಂಧ ರಾಷ್ಟ್ರೀಕೃತ ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಆಸಕ್ತಿದಾಯಕ ಬಡ್ಡಿ ದರದ ಪ್ರಸ್ತಾವನೆಯನ್ನು ಆಹ್ವಾನಿಸಿ ಪ್ರಾಧಿಕಾರವು ಪ್ರಕಟಣೆ ಹೊರಡಿಸಿದೆ.

2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಾಧಿಕಾರದ ಬಳಿ ಇರುವ ಈ ಮೊತ್ತವನ್ನು ಸುರಕ್ಷಿತವಾಗಿ ಹಾಗೂ ಲಾಭದಾಯಕವಾಗಿ ಹೂಡಿಕೆ ಮಾಡುವ ಉದ್ದೇಶವನ್ನು ಬಿಡಿಎ ಹೊಂದಿದೆ. ರಾಷ್ಟ್ರೀಕೃತ ಮತ್ತು ಶೆಡ್ಯೂಲ್ಡ್ ಬ್ಯಾಂಕುಗಳಿಗೆ ಮಾತ್ರ ಅವಕಾಶವಿದ್ದು,ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಪ್ರಸ್ತಾವನೆ ಸಲ್ಲಿಸಬೇಕು. ಆಸಕ್ತ ಬ್ಯಾಂಕುಗಳು ಏಪ್ರಿಲ್ 24 ರಂದು ಸಂಜೆ 4 ಗಂಟೆಯೊಳಗೆ ತಮ್ಮ ಬಿಡ್‌ಗಳನ್ನು ಸಲ್ಲಿಸುವಂತೆ ಬಿಡಿಎ ತಿಳಿಸಿದೆ.

ಪ್ರಾಧಿಕಾರದ ಆರ್ಥಿಕ ಶಿಸ್ತು ಮತ್ತು ಸಂಪನ್ಮೂಲಗಳ ಸದ್ಬಳಕೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದ್ದು, ಹೆಚ್ಚಿನ ಬಡ್ಡಿ ನೀಡುವ ಬ್ಯಾಂಕುಗಳಿಗೆ ಈ ಠೇವಣಿ ಮೊತ್ತವನ್ನು ಹಸ್ತಾಂತರಿಸಲಾಗುವುದು ಎಂದು ಬಿಡಿಎ ತಿಳಿಸಿದೆ.

ಸಾರಿಗೆ ನೌಕರರ ಪ್ರತಿಭಟನೆ

• **ಬೆಂಗಳೂರು:** ಸರ್ಕಾರಿ ನೌಕರರಿಗೆ ನೀಡುವ ವೇತನವನ್ನು ಸಾರಿಗೆ ನೌಕರರಿಗೂ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ನೌಕರರು ಹಮ್ಮಿಕೊಂಡಿದ್ದ ಬೆಂಗಳೂರು ಚಲೋ ಪಾದಯಾತ್ರೆಗೆ ಪೊಲೀಸರು ತಡೆಯೊಡ್ಡಿದ್ದಾರೆ. ಆದರೆ, ಸಾರಿಗೆ ನೌಕರರು ನಾವು ಯಾವುದೇ ಕಾರಣಕ್ಕೂ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಿಲ್ಲಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.ತಮ್ಮ ಬೇಡಿಕೆಗಳ ಈಡೇರಿಕೆಗೆ ಏ.8ರಿಂದ ಚಿತ್ರದುರ್ಗದಿಂದ ಪಾದಯಾತ್ರೆ ಹೊರಟು ಮಂಗಳವಾರ ನೆಲಮಂಗಲದ ಪವಾಡ ಶ್ರೀ ಬಸವಣ್ಣ ದೇವರ ಮಠದಿಂದ ಸ್ವಾತಂತ್ರ್ಯ ಉದ್ಯಾನವನದತ್ತ ಬರುತ್ತಿದ್ದ ಸಾರಿಗೆ ನೌಕರರನ್ನು ಅರಿಸಿನಕುಂಟೆ ಬಳಿ ಪೊಲೀಸರು ತಡೆದು ವಶಕ್ಕೆ ಪಡೆದು ಬಸ್‌ಗಳಲ್ಲಿ ತುಂಬಿಸಿ ಅಲ್ಲಿಂದ ಸ್ವಾತಂತ್ರ್ಯ ಉದ್ಯಾನವನಕ್ಕೆ ಕರೆ ತಂದಿದ್ದರು. ಆದರೆ, ಅಲ್ಲಿ ಉಪವಾಸ ಸತ್ಯಾಗ್ರಹ ಮಾಡಲು ಮುಂದಾಗಿದ್ದ ನೌಕರರನ್ನು ಮತ್ತೆ ಪೊಲೀಸರು ಬಂಧಿಸಿ, ಸಿಆರ್‌ಪಿಎಫ್ ಮೈದಾನಕ್ಕೆ ಬಿಟ್ಟಿದ್ದಾರೆ.

ಲೋಕಾ ಬಲೆಗೆ ಬಿದ್ದ ಪಶು ಇಲಾಖೆ ಅಧಿಕಾರಿ

• **ಬೆಂಗಳೂರು:** ಬಾಕಿ ಇರುವ ಕೆಲಸ ಮಾಡಿಕೊಡಲು ಲಂಚಕ್ಕೆ ಬೇಡಿಕೆಯಿಟ್ಟಿದ್ದ ಪಶುಸಂಗೋಪನಾ ಇಲಾಖೆಯ ಅಧಿಕಾರಿಯೊಬ್ಬರು ಲೋಕಾಯುಕ್ತ ಪೊಲೀಸರು ಬೀಸಿದ ಬಲೆಗೆ ಬಿದ್ದಿದ್ದಾರೆ. ಬೆಂಗಳೂರಿನ ಹೆಬ್ಬಾಳದಲ್ಲಿರುವ ಪಶುಸಂಗೋಪನಾ ಆಯುಕ್ತರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಮುದಾಸಿರ್ ಅಹ್ಮದ್ ಬಂಧಿತ ಆರೋಪಿಯಾಗಿದ್ದಾರೆ. ವಿಜಯಪುರ ಜಿಲ್ಲೆಯ ಪಶುವೈದ್ಯಕೀಯ ಪರಿಶೋಧಕರಾದ ಮಲ್ಲಿಕಾರ್ಜುನ ಶಂಕರ್ ನಿಡೋಣಿ ಎಂಬವರು ಈ ಸಂಬಂಧ ದೂರು ನೀಡಿದ್ದರು. ಮಲ್ಲಿಕಾರ್ಜುನ ಅವರ ಇಲಾಖಾ ವಿಚಾರಣೆಯ ಅಂತಿಮ ಆದೇಶದ ಪ್ರತಿಯನ್ನು ರವಾನಿಸಲು ಮುದಾಸಿರ್ ಅಹ್ಮದ್ 10,000 ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು.

ಅಭಿವೃದ್ಧಿ ಕಾರ್ಯ ಚುರುಕುಗೊಳಿಸಲಿ



• **ಬೆಂಗಳೂರು:** ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರು ಮಳೆಯ ಸಂದರ್ಭದಲ್ಲಿ ಪ್ರವಾಹ ಪೀಡಿತವಾಗುವ ಸಾಧ್ಯತೆ ಇರುವ ಪ್ರದೇಶಗಳಿಗೆ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಭೇಟಿ ನೀಡಿ ಪರಿಶೀಲಿಸಿದರು.

ವಿವಿಧ ಸ್ಥಳಗಳಲ್ಲಿ ನಡೆಯುತ್ತಿರುವ ಮಳೆ ನೀರು ಕಾಲುವೆ ಅಭಿವೃದ್ಧಿ ಕಾಮಗಾರಿ, ಮೂಲಸೌಕರ್ಯ ಕಾಮಗಾರಿಗಳಪ್ರಗತಿಬಗ್ಗೆಸಮಗ್ರವಾಗಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿದರು. ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ಅನುದಾನದಲ್ಲಿ ಕೈಗೊಂಡಿರುವ ಮಳೆ ನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳಾದ ಗುಂಜೂರು ರಾಜಕಾಲುವೆ, ವರ್ತೂರು ಕೆರೆ ಕೋಡಿ ರಾಜಕಾಲುವೆ, ಮಣಿಪಾಲ್ ಆಸ್ಪತ್ರೆ ಸಮೀಪದ ರಾಜಕಾಲುವೆ, ಯಮಲೂರು,ಚಲ್ಲಘಟ್ಟ, ಎಸ್ ಜಿಆರ್ ಡೆಂಟಲ್ ಕಾಲೇಜು ಸಮೀಪ ಹಾಗೂ ಮುನ್ನೇಕೊಳಲು ಪ್ರದೇಶಗಳಲ್ಲಿನ ಕಾಮಗಾರಿಯನ್ನು ಪರಿಶೀಲಿಸಿದರು.

> ಮುಂಗಾರು ಮಳೆಗೂ ಮುನ್ನ ಪ್ರವಾಹ ನಿಯಂತ್ರಣ ಹಾಗೂ ಮಳೆ ನೀರು ನಿರ್ವಹಣೆಗೆ ಅಗತ್ಯ ಮೂಲಸೌಕರ್ಯಗಳನ್ನು ಬಲಪಡಿಸುವುದು ಬೆಂಗಳೂರು ಪೂರ್ವ ನಗರ ಪಾಲಿಕೆಯ ಪ್ರಮುಖ ಆದ್ಯತೆಯಾಗಿದ್ದು, ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
>
> ■ **ಡಿ.ಎಸ್. ರಮೇಶ್,** ಪೂರ್ವ ನಗರ ಪಾಲಿಕೆ ಆಯುಕ್ತ

ಒತ್ತುವರಿ ತೆರವುಗೊಳಿಸಿ

ಕಾರ್ಯಾದೇಶ ನೀಡಿರುವ ಕಡೆಗಳಲ್ಲಿ ಕೂಡಲೇ ಅಭಿವೃದ್ಧಿ ಕಾಮಗಾರಿ ಆರಂಭಿಸುವುದು ಹಾಗೂ ಕಾಮಗಾರಿಗೆ ವೇಗ ನೀಡಿ. ಕಾಲುವೆ ಒತ್ತುವರಿ ಆಗಿರುವ ಸ್ಥಳಗಳಲ್ಲಿ ಒತ್ತುವರಿ ತೆರವುಗೊಳಿಸಿ ಕಾಮಗಾರಿ ಕೈಗೊಳ್ಳಿ.ಮಳೆಗಾಲದ ಮೊದಲು ಕಾಲುವೆಗಳ ಪ್ರಮುಖ ಸಂಪರ್ಕ ಭಾಗಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಎಂದು ನಿರ್ದೇಶನ ನೀಡಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-49) ಡ್ರಾ ಏಪ್ರಿಲ್ 22ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DE 555400 (PATTAMBI)

Consolation Prize Rs.5,000/-
DA 555400 DB 555400 DC 555400 DD 555400
DF 555400 DG 555400 DH 555400 DJ 555400
DK 555400 DL 555400 DM 555400

2nd Prize Rs.30,00,000/- [30 Lakhs]
DG 886498 (PATTAMBI)

3rd Prize Rs.5,00,000/- [5 Lakhs]
DJ 627205 (PALAKKAD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0326 0380 1569 3132 3554 3610 4193 4532 4824 5617
6464 6648 7116 8474 8849 9084 9302 9787 9834

5th Prize Rs.2,000/-
1002 3039 3992 4085 5712 6472

6th Prize Rs.1,000/-
0212 1121 2646 2656 2748 3147 3364 3483 3837 3948
4063 4505 4750 4803 4879 4897 5163 5543 6589 6893
8201 8457 8528 8864 9757

7th Prize Rs.500/-
0166 0219 0222 0224 0265 0364 0442 0574 0601 0802
0978 1057 1455 1531 1650 1707 1857 1864 1982 2103
2247 2351 2463 2532 2600 2609 3144 3237 3282 3412
3565 3662 3696 3744 3749 3958 4114 4153 4331 4622
4724 5021 5030 5106 5260 5268 5315 5330 5380 5530
5598 5692 5830 5841 5970 6733 6782 7095 7456 7572
7839 7985 8070 8096 8149 8292 8698 8737 8779 8797
9061 9519 9548 9601 9662 9801

8th Prize Rs.200/-
0021 0157 0180 0294 0467 0887 0968 1068 1148 1156
1158 1182 1189 1230 1244 1352 1627 1847 1962 2251
2321 2406 2560 2582 2947 3092 3109 3136 3211 3344
3405 3408 3497 3543 3595 3613 3636 3716 3945 3957
4202 4222 4270 4289 4304 4358 4457 4576 4740 5171
5223 5471 5591 5630 5952 6023 6082 6182 6259 6344
6552 6563 6873 6888 7003 7066 7156 7374 7540 7654
7689 7697 7730 7837 8087 8187 8216 8361 8530 8537
8578 8733 8735 8756 8761 8830 8925 8939 8977 9180
9261 9370 9612 9622 9789 9937

9th Prize Rs.100/-
0005 0149 0162 0207 0337 0432 0554 0555 0619 0624
0646 0656 0682 0698 0729 0742 0785 0819 0821 0889
0912 1031 1081 1107 1126 1377 1421 1430 1508 1660
1860 2035 2116 2127 2183 2238 2422 2521 2607 2728
2786 2844 2893 2993 3066 3069 3110 3181 3200 3325
3396 3468 3623 3633 3658 3688 3739 3843 3942 3986
4061 4072 4080 4090 4175 4209 4430 4445 4493 4508
4524 4603 4725 4748 4957 4966 5003 5045 5240 5263
5299 5308 5361 5386 5539 5646 5756 5811 5893 5966
5972 6012 6031 6058 6219 6236 6282 6471 6591 6646
6720 6745 6968 7115 7242 7322 7470 7664 7708 7748
7767 7904 8077 8124 8212 8220 8272 8275 8279 8589
8612 8757 8956 9032 9181 9413 9440 9661 9705 9747
9755 9828 9844 9865 9926 9930 9965 9968

ಕಿರುಸುದ್ದಿ

ಏ. 24: ದ.ಕ. ಉಸ್ತುವಾರಿ ಸಚಿವರು ಜಿಲ್ಲೆಗೆ

◆ಮಂಗಳೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಏಪ್ರಿಲ್ 24ರಂದು ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಏ. 24ರಂದು ಬೆಳಿಗ್ಗೆ 8.15ಕ್ಕೆ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಆಗಮನ, 9 ಗಂಟೆಗೆ ಉಳ್ಳಾಲ ತಾಲೂಕಿನ ಕುರ್ನಾಡಿನ ಪಶು ಚಿಕಿತ್ಸಾಲಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ, 9.30ಕ್ಕೆ ಮುಡಿಪು ಶ್ರೀಕೃಷ್ಣ ಧ್ಯಾನ ಮಂದಿರದಲ್ಲಿ ಬೃಹತ್ ಕೃಷಿ ಮೇಳ ಹಾಗೂ ಮುಡಿಪು ಉತ್ಸವ ಉದ್ಘಾಟನಾ ಕಾರ್ಯಕ್ರಮ, ಬೆಳಿಗ್ಗೆ 11.30ಕ್ಕೆ ಸಚಿವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಸಿಬಿಎಸ್‌ಇಯಲ್ಲಿ ಉನ್ನತ ಅಂಕ ಗಳಿಸಿದ ವಿದ್ಯಾರ್ಥಿನಿಗೆ ಅಭಿನಂದನೆ

◆**ಕಾಸರಗೋಡು:** ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಕಾಸರಗೋಡು ಕೇಂದ್ರೀಯ ವಿದ್ಯಾಲಯದಲ್ಲಿ 500ರಲ್ಲಿ 499 ಅಂಕಗಳನ್ನು ಗಳಿಸಿ ಆಲ್ ಇಂಡಿಯ ಕೇಂದ್ರೀಯ ವಿದ್ಯಾಲಯದ ಟಾಪರ್ ಆಗಿರುವ ಎದ್ರುತ್ತೋಡು ಅಜಕ್ಕೋಡು ನಿವಾಸಿ ಅಲ್ಕ ಸಜಿಯವರನ್ನು ಎಂಎಸ್‌ಎಫ್ ಎದ್ರುತ್ತೋಡು ಶಾಖಾ ಸಮಿತಿ ಅಭಿನಂದಿಸಿದೆ. ಎಂಎಸ್‌ಎಫ್ ರಾಜ್ಯ ಉಪಾಧ್ಯಕ್ಷ ಅನಸ್ ಎದ್ರುತ್ತೋಡು ಅಭಿನಂದಿಸಿ ಮಾತನಾಡಿದರು. ಮಂಡಲ ಅಧ್ಯಕ್ಷ ಹಾಶಿರ್ ಮೊಯ್ದೀನ್, ಚೆಂಗಳ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಇಬ್ರಾಹಿಂ ಕಪ್ಪಣ, ಅಬ್ದುಲ್ ಖಾದರ್ ಸಹಿತ ಹಲವಾರು ಮಂದಿ ಭಾಗವಹಿಸಿದ್ದರು.

ನಿಧನ ಸುದ್ದಿ

ಪಿ.ಕೆ.ದಾಮೋದರ ಆಚಾರ್ಯ

ಮಂಗಳೂರು: ಇಲ್ಲಿನ ಪಣಂಬೂರು ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘ ಕೃಷ್ಣಾಪುರ ಇದರ ಸ್ಥಾಪಕ ಕಾರ್ಯದರ್ಶಿ, ಪ್ರಸ್ತುತ ಗೌರವಾಧ್ಯಕ್ಷರಾಗಿದ್ದ ಪಿ.ಕೆ ದಾಮೋದರ ಆಚಾರ್ಯ (77) ಅವರು ಬುಧವಾರ ನಿಧನರಾದರು. ಮೃತರು 1997ರಲ್ಲಿ ನವಮಂಗಳೂರು ಬಂದರಿನಲ್ಲಿ ಅಸಿಸ್ಟೆಂಟ್ ಟ್ರಾಫಿಕ್ ಇನ್ ಸ್ಪೆಕ್ಟರ್ ಆಗಿ ಸೇವೆಸಲ್ಲಿಸಿ ಬಳಿಕ 2006ರಲ್ಲಿ ನಿವೃತ್ತರಾಗಿದ್ದರು. ಹಾರ್ಮೋನಿಯಂ ವಾದನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಕ್ಷಣವನ್ನು ಪಡೆದಿದ್ದ ಅವರು, ಪಣಂಬೂರು ಶ್ರೀ ನಂದನೇಶ್ವರ ಭಜನಾ ಮಂಡಳಿಯಲ್ಲಿ 15 ವರ್ಷಗಳ ಕಾಲ ಭಜನಾಸೇವೆಯಲ್ಲಿ ಪಾಲ್ಗೊಂಡಿದ್ದರು. ಮಂಗಳೂರಿನ ಶ್ರೀ ವಿಶ್ವಕರ್ಮ ಭಜನಾ ಮಂಡಳಿ, ಶ್ರೀ ಕಾಳಿಕಾಂಬ ಭಜನಾ ಮಂಡಳಿಯಲ್ಲಿ ಹಾರ್ಮೋನಿಯಂ ವಾದಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅನೇಕ ಮಕ್ಕಳಿಗೆ ಉಚಿತವಾಗಿ ಹಾರ್ಮೋನಿಯಂ ವಾದನ, ಭಜನಾ ತರಗತಿಯನ್ನು ನೀಡುತ್ತಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ.



ಕೋಟೆಮನೆ ಎಂ.ವೆಂಕಟ್ರಮಣ ಆಚಾರ್ಯ

ಮಂಜೇಶ್ವರ: ಹೊಸಂಗಡಿ ಬಳಿಯ ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರೀ ದೇವಸ್ಥಾನ ಪರಿಸರದ ನಿವಾಸಿ ಕೋಟೆಮನೆ ಎಂ.ವೆಂಕಟ್ರಮಣ ಆಚಾರ್ಯ (101) ಅಲ್ಪಾವಧಿಯ ಅಸೌಖ್ಯದಿಂದ ಬುಧವಾರ ಮುಂಜಾನೆ ಸ್ವಗೃಹದಲ್ಲಿ ನಿಧನರಾದರು. ಅವರು ಕಳೆದ 70 ವರ್ಷಗಳಿಂದ ಮಂಜೇಶ್ವರ ಶ್ರೀಮತ್ ಅನಂತೇಶ್ವರ ದೇವಸ್ಥಾನದ ರಥಬೀದಿಯಲ್ಲಿ ಶ್ರೀ ವಿಶ್ವಕರ್ಮ ಫರ್ನಿಚರ್ ಎಂಬ ಸಂಸ್ಥೆಯನ್ನು ಹೊಂದಿ, ಬಡಗಿ ವೃತ್ತಿಯಲ್ಲಿ ಜನಾನುರಾಗಿದ್ದರು. ಅಲ್ಲದೆ ಬಂಗ್ರಮಂಜೇಶ್ವರ ಶ್ರೀ ಕಾಳಿಕಾಪರಮೇಶ್ವರೀ ದೇವಸ್ಥಾನದ ಆಡಳಿತ ಸಮಿತಿಯ ಮಾಜಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಜೀವನದ ಸಾರ್ಥಕ 100 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಕಳೆದ ವರ್ಷ ಜನುಮದಿನದ ಶತಮಾನೋತ್ಸವವನ್ನು ವಿಶೇಷ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗಿತ್ತು. ಮಂಜೇಶ್ವರ ಸೇವಾ ಸಹಕಾರಿ ಬ್ಯಾಂಕ್‌ನ ಹಿರಿಯ ಸದಸ್ಯರಾಗಿದ್ದರಿಂದ ಬ್ಯಾಂಕ್‌ನ ಆಡಳಿತ ಮಂಡಳಿಯಿಂದ ಮನೆಯಲ್ಲಿ ಸನ್ಮಾನ ಸ್ವೀಕರಿಸಿದ್ದರು. ಮೃತರು ಮಕ್ಕಳಾದ ಹರಿಶ್ಚಂದ್ರ ಆಚಾರ್ಯ, ಪಾಂಡುರಂಗ ಆಚಾರ್ಯ ಪುತ್ತೂರು, ಗೀತಾ, ಲತಾ, ಪ್ರಭಾ, ಚಿತ್ರಾ, ಜ್ಯೋತಿ ಅವರನ್ನು ಅಗಲಿದ್ದಾರೆ.



ಗಂಗಾಧರನ್ ಆಚಾರಿ

ಕಾಸರಗೋಡು: ಉದುಮ ಎರೋಲ್ ವಡಕ್ಕೆಕ್ಕರ ಗಂಗಾಧರನ್ ಆಚಾರಿ (73) ನಿಧನರಾದರು. ಮೃತರು ಪತ್ನಿ ಬಾಲಾಮಣಿ, ಮಕ್ಕಳಾದ ದಿನಮಣೆಂದ್ರನ್ ವೈ., ಸುಚಿತ್ರಾ ವೈ., ಅಮ್ಮುಜಾಕ್ಷಿ ಅವರನ್ನು ಅಗಲಿದ್ದಾರೆ.





ಮಂಗಳೂರು ನಗರದ ಕದ್ರಿ ಮಲ್ಲಿಕಟ್ಟೆಯಲ್ಲಿರುವ ಕಾಂಗ್ರೆಸ್ ಕಚೇರಿ ಬಳಿ ಬುಧವಾರ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಕಾಂಗ್ರೆಸ್ ನಗರ ಸಮಿತಿ ವತಿಯಿಂದ 2023ರ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಆಗ್ರಹಿಸಿ ಪ್ರತಿಭಟನೆ ನಡೆಯಿತು. ಸಮಿತಿಯ ಅಧ್ಯಕ್ಷೆ ಅಪ್ಪಿ, ಕಾಂಗ್ರೆಸ್ ಮಹಿಳಾ ಮುಖಂಡರಾದ ಸ್ವರೂಪ ಶೆಟ್ಟಿ, ನೀತು ಡಿಸೋಜಾ, ಚಂದ್ರಕಲಾ ರಾವ್, ಸಬಿತಾ ಮಿಸ್ಕಿತ್, ವೀಣಾ, ಮೀನಾ ಟೆಲ್ಲಿಸ್, ಗೀತಾ, ಪ್ರವೀಣ್, ಶಾಂತಲಾ ಗಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮ

ಇಂದಿನಿಂದ ಮೇ 22ರವರೆಗೆ ಅಭಿಯಾನ

◆**ಮಂಗಳೂರು:** ಮಂಗಳೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬುಧವಾರ 9ನೇ ಸುತ್ತಿನ ಕಾಲು ಬಾಯಿ ಜ್ವರದ ಲಸಿಕಾ ಕಾರ್ಯಕ್ರಮದ ತಾಲೂಕು ಮಟ್ಟದ ನಿರ್ವಹಣಾ ಸಮಿತಿ ಸಭೆ ತಾ.ಪಂ.ಕಾರ್ಯನಿರ್ವಹಣಾಧಿಕಾರಿ ಮಹೇಶ್ ಕುಮಾರ್ ಹೊಳ್ಳ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.



ಪ್ರಸ್ತುತ ಮಂಗಳೂರು ತಾಲೂಕಿನಲ್ಲಿ 12545 ದನ, ಹಾಗೂ 42 ಎಮ್ಮೆ ಒಟ್ಟು 12587 ಜಾನುವಾರುಗಳಿಗೆ ಕಾಲು ಬಾಯಿ ಜ್ವರ ರೋಗದ ಲಸಿಕೆ ಹಾಕಿಸಲು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸರ್ವಸನ್ನದ್ಧವಾಗಿದೆ ಎಂದು ಸಂಬಂದಪಟ್ಟ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಜಾನುವಾರುಗಳಿಗೆ 9ನೇ ಸುತ್ತಿನ ಕಾಲು ಬಾಯಿ ಜ್ವರದ ಲಸಿಕಾ ಕಾರ್ಯಕ್ರಮವನ್ನು ದ.ಕ ಜಿಲ್ಲೆಯಾದ್ಯಂತ ಇಂದಿನಿಂದ (ಏ.22) ಮೇ 22ರವರೆಗೆ ಆಯೋಜಿಸಲಾಗಿದೆ. ಪ್ರತೀ ಬಾರಿಯಂತೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಕೆಎಂಎಫ್‌ನ ಲಸಿಕೆದಾರರು ಹಾಗೂ ಪಶುಸಖಿಯರು ಪ್ರತಿ ಗ್ರಾಮಗಳಿಗೆ ತೆರಳಿ ಜಾನುವಾರುಗಳಿಗೆ ಲಸಿಕೆ ಹಾಕಲಿದ್ದಾರೆ.

ಈ ಸಭೆಯಲ್ಲಿ ಪಶುಪಾಲನಾ ಇಲಾಖೆಯ ಮಂಗಳೂರು ತಾಲೂಕು ಮುಖ್ಯ ಪಶು ವೈದ್ಯಾಧಿಕಾರಿ ಡಾ.ಅಶೋಕ್ ಕೆ. ಆರ್, ಸಮಿತಿಯ ಸದಸ್ಯರು, ತಾಲೂಕು ಆರೋಗ್ಯಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಭಾರತೀಯ ಜೀವ ವಿಮಾ ನಿಗಮ ಸಹಭಾಗಿತ್ವ

365 ವಿಮಾ ಗ್ರಾಮಗಳ ಘೋಷಣೆ

◆**ಧರ್ಮಸ್ಥಳ:** ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಪರಿಕಲ್ಪನೆಯಂತೆ ಗ್ರಾಮಾಭಿವೃದ್ಧಿ ಯೋಜನೆಯು ಸ್ವ ಸಹಾಯ ಸಂಘಗಳ ಸದಸ್ಯರಿಗೆ ಮತ್ತು ಅವರ ಕುಟುಂಬಗಳಿಗೆ ವಿಮಾ ಭದ್ರತೆಯನ್ನು ನೀಡುವ ಸೇವೆಯನ್ನು ಕಳೆದ ಎರಡು ದಶಕಗಳಿಂದ ಮಾಡುತ್ತಾ ಬಂದಿದೆ.

ಸಂಪೂರ್ಣ ಸುರಕ್ಷಾ/ ಆರೋಗ್ಯ ರಕ್ಷಾ ವಿಮಾ ಯೋಜನೆ, ಯೋಜನೆಯ ಸದಸ್ಯರ ಸಾಲಗಳಿಗೆ ಭದ್ರತೆಗಾಗಿ 'ಪ್ರಗತಿ ರಕ್ಷಾ ಕವಚ', ಎನ್.ಪಿ.ಎಸ್, ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆ, ಪ್ರಧಾನಮಂತ್ರಿ ಜೀವನ ಜ್ಯೋತಿ ಭಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಜೀವನಮಧುರ / ಭಾಗ್ಯಲಕ್ಷ್ಮೀ, ಮೈಕ್ರೋಬಚತ್ ಮತ್ತು ಭಿಮಾ ಜ್ಯೋತಿ ಮುಂತಾದ ಹಲವಾರು ವಿಮಾ/ಪಿಂಚಣಿ ಸೌಲಭ್ಯಗಳ ಪ್ರಯೋಜನವನ್ನು ಈಗಾಗಲೇ ರಾಜ್ಯದ ಸುಮಾರು26,20,304ರಷ್ಟು ಮಂದಿ ಪಡೆದಿದ್ದಾರೆ.

ಯೋಜನೆಯ ಸಂಘಗಳ ಸದಸ್ಯರಿಗೆ ಪ್ರಯೋಜನವಾಗುವ ನಿಟ್ಟಿನಲ್ಲಿ 2007 ರಿಂದ ಗ್ರಾಮಾಭಿವೃದ್ಧಿ ಯೋಜನೆಯು ಭಾರತೀಯ ಜೀವ ವಿಮಾ ನಿಗಮದೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಕಡಿಮೆ ಪ್ರೀಮಿಯಂನ ವಿಶೇಷ ಪಾಲಿಸಿಗಳನ್ನು ಪರಿಚಯಿಸಲಾಗುತ್ತಿದೆ. ಪ್ರಸ್ತುತ 'ಮೈಕ್ರೋಬಚತ್' ಮತ್ತು 'ಭಿಮಾ ಜ್ಯೋತಿ' ಎಂಬ ಹೆಸರಿನ ಎರಡು ಪಾಲಿಸಿಗಳ ಪ್ರಯೋಜನವನ್ನು ಸದಸ್ಯರು ಪಡೆಯುತ್ತಿದ್ದಾರೆ.



ಕೋಲಾರ ಜಿಲ್ಲೆಯ ಹೋಳೂರು ಗ್ರಾಮದ ಕುವೆಂಪು ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಹಸ್ತಾಂತರಿಸಲಾಯಿತು.

ಮೈಕ್ರೋಬಚತ್ ಪಾಲಿಸಿಯಡಿ 'ವಿಮಾ ಗ್ರಾಮ'ಗಳನ್ನು ಗುರುತಿಸುವ ವಿಶೇಷ ಕಾರ್ಯವನ್ನು ಭಾರತೀಯ ಜೀವ ವಿಮಾ ನಿಗಮವು ಮಾಡುತ್ತಿದೆ. ಈಗಾಗಲೇ ರಾಜ್ಯದಾದ್ಯಂತ 15,92,889ಮಂದಿ ಮೈಕ್ರೋಬಚತ್ ಪಾಲಿಸಿಗಳನ್ನು ಮಾಡಿಸಿದ್ದಾರೆ.

ವಿಮಾ ಗ್ರಾಮ

ಪ್ರತಿ ಗ್ರಾಮದ ಜನಸಂಖ್ಯೆ ಮತ್ತು ಅಲ್ಲಿ ಮಾಡಲಾದ ಮೈಕ್ರೋಬಚತ್ ಪಾಲಿಸಿಯ ಆಧಾರದಲ್ಲಿ ವಿಮಾ ಗ್ರಾಮಗಳನ್ನು ಗುರುತಿಸುವ ಕೆಲಸವನ್ನು ಭಾರತೀಯ ಜೀವ ವಿಮಾ ನಿಗಮವು ಮಾಡುತ್ತದೆ.



ವಿಮಾ ಗ್ರಾಮದ ಸೌಲಭ್ಯ ಪಡೆಯಲು

ಮಾನದಂಡಗಳು

ಗ್ರಾಮದ ಜನಸಂಖ್ಯೆ 10,000ಕ್ಕಿಂತ ಕಡಿಮೆ ಇರಬೇಕು, ಸಂಬಂಧಿತ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ಹೊಸ ಪಾಲಿಸಿಗಳಾಗಿರಬೇಕು, ಸಂಬಂಧಿತ ಆರ್ಥಿಕ ವರ್ಷದಲ್ಲಿ 5,00,000 ಮೊತ್ತ ಪ್ರೀಮಿಯಂ ಸಂಗ್ರಹವಾಗಿದ್ದಲ್ಲಿ ಕನಿಷ್ಠ 50 ಹೊಸ ಪಾಲಿಸಿಗಳಾಗಿರಬೇಕು.

ಈವರೆಗೆ ನೀಡಲಾದ ಸೌಲಭ್ಯಗಳು

ಈಗಾಗಲೇ 2019ರಿಂದ ರಾಜ್ಯದಾದ್ಯಂತ 365 ವಿಮಾ ಗ್ರಾಮಗಳನ್ನು ಗುರುತಿಸಲಾಗಿದೆ. ಆಯ್ಕೆಯಾದ ಗ್ರಾಮಗಳಿಗೆ ಒಂದು ಘಟಕಕ್ಕೆ ರೂ. 50,000ದಿಂದ 1,00,000ದವರೆಗಿನ ವೆಚ್ಚದಲ್ಲಿ ಈ ಕೆಳಗಿನ ಯಾವುದಾದರೂ ಒಂದು ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಶಾಲೆ / ಗ್ರಾಮ ಪಂಚಾಯತ್/ ದೇವಸ್ಥಾನಗಳಿಗೆ ಕುಡಿಯುವ ನೀರಿನ ವ್ಯವಸ್ಥೆ (ನೀರಿನ ಟ್ಯಾಂಕ್, ಶುದ್ಧ ಕುಡಿಯುವ ನೀರಿನ ಘಟಕ), ಶಾಲೆಗಳಿಗೆ ಶೌಚಾಲಯ ಹಾಗೂ ಪೀಠೋಪಕರಣ, ಸೋಲಾರ್ ದಾರಿದೀಪ ವ್ಯವಸ್ಥೆ ಒಳಗೊಂಡಿರುತ್ತದೆ.

ಒದಗಿಸಲಾದ ಸೌಲಭ್ಯಗಳು ಮತ್ತು ವಿಮಾ ಗ್ರಾಮಗಳ ಸಂಖ್ಯೆ

ಶಾಲೆಗಳಿಗೆ ಹಾಗೂ ದೇವಸ್ಥಾನಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಒದಗಣೆ-256, ದೇವಸ್ಥಾನಗಳಿಗೆ ಹಾಗೂ ಸಾರ್ವಜನಿಕ ಜಂಕ್ಷನ್‌ಗಳಿಗೆ ಸೋಲಾರ್ ಲೈಟ್ ಅಳವಡಿಕೆ-86, ಶಾಲೆಗಳಿಗೆ ಹಾಗೂ ದೇವಸ್ಥಾನಗಳಿಗೆ ಶೌಚಾಲಯ ವ್ಯವಸ್ಥೆ-35, ಶಾಲೆಗಳಿಗೆ ಡೆಸ್ಕ್-ಬೆಂಚು-2. ಈಗಾಗಲೇ ಗ್ರಾಮಾಭಿವೃದ್ಧಿ ಯೋಜನೆಯ ಸಹಕಾರದಲ್ಲಿ ರಾಜ್ಯದಾದ್ಯಂತ 365 ವಿಮಾ ಗ್ರಾಮಗಳನ್ನು ಗುರುತಿಸಿ ರೂ.1,42,63,016 ವೆಚ್ಚದ ಸೌಲಭ್ಯಗಳನ್ನು ಒದಗಿಸಲಾಗಿದೆ.

ದ್ವಿತೀಯ ಪಿಯುಸಿ: ಸರಕಾರಿ ಕಾಲೇಜುಗಳ ಸಾಧಕರಿಗೆ ಸನ್ಮಾನ



◆**ಮಂಗಳೂರು:** ಈ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಸಾಧನೆಗೈದ ಜಿಲ್ಲೆಯ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸನ್ಮಾನಿಸಲಾಯಿತು.

ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ಕಲಿತ ವಿದ್ಯಾರ್ಥಿಗಳು ಉತ್ತಮ ಸಾಧನೆಗೈಯುವ ಮೂಲಕ ತಮ್ಮ ಪೋಷಕರಿಗೆ ಮತ್ತು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಮಕ್ಕಳ ಸಾಧನೆ ಹಿಂದೆ ಪೋಷಕರ ಕೊಡುಗೆ ಇದೆ. ವಿದ್ಯಾರ್ಥಿಗಳು ವಿದ್ಯೆಯ ಹಿಂದೆ ಹೋಗಬೇಕು, ಹಣದ ಹಿಂದೆ ಹೋಗಬಾರದು. ವಿದ್ಯೆಯ ಹಿಂದೆ ಹೋದರೆ ಹಣ ತಾನಾಗಿಯೇ ಬರುತ್ತದೆ ಎಂದರು.

ಸರಕಾರಿ ಕಾಲೇಜುಗಳ ಸೀಮಿತ ಸವಲತ್ತುಗಳ ಮಧ್ಯೆ ವಿದ್ಯಾರ್ಥಿಗಳು ಸಾಧನೆ ಗೈದಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಸನ್ಮಾನಿತ ವಿದ್ಯಾರ್ಥಿಗಳು

ಕಲಾ ವಿಭಾಗದಲ್ಲಿ ಪುತ್ತೂರು ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಸುಶ್ಮಿತಾ-582 ಅಂಕ, ವಾಣಿಜ್ಯ ವಿಭಾಗದಲ್ಲಿ ಪುತ್ತೂರು ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ನೇಹಾ ಎಂ. ಡಿ.-591, ವಾಮದಪದವು ಸರಕಾರಿ ಪದವಿ ಪೂರ್ವ ಕಾಲೇಜಿನ ದಕ್ಷಾ-591, ಬಲ್ಮಠ ಸರಕಾರಿ ಪದವಿ ಪೂರ್ವ ಕಾಲೇಜಿನ ಮಾನ್ವಿಕಾ-589 ಅಂಕ, ವಿಜ್ಞಾನ ವಿಭಾಗದಲ್ಲಿ ಪುತ್ತೂರು ಸರಕಾರಿ ಪದವಿ ಪೂರ್ವ ಕಾಲೇಜಿನ ಪವಿತ್ರ ಎಸ್. ಪಿ.-586, ಪುಂಜಾಲಕಟ್ಟೆ ಸರಕಾರಿ ಪದವಿ ಪೂರ್ವ ಕಾಲೇಜಿನ ಸಾತ್ವಿ ಬಾಳಿಗ-583.

ಪ್ರಾಂಶುಪಾಲರಿಗೆ ಸನ್ಮಾನ

ಇದೇ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಪಡೆದ ಜಿಲ್ಲೆಯ 5 ಸರಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲರನ್ನು ಜಿಲ್ಲಾಧಿಕಾರಿಗಳು ಸನ್ಮಾನಿಸಿದರು.

ಬೆಳ್ಳಾರೆ, ಗುತ್ತಿಗಾರು, ಕೊಯ್ಯೂರು, ಐವರ್ನಾಡು ಮತ್ತು ನಾಲ್ಯಪದವು ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ರಾಜು ಕೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ರಾಜೇಶ್ವರಿ ಮತ್ತಿತ್ತರರು ಉಪಸ್ಥಿತರಿದ್ದರು.

ನನ್ನನ್ನು, ಪಕ್ಷದ ಜಿಲ್ಲಾ ನಾಯಕತ್ವವನ್ನು ಅವಹೇಳನ ಮಾಡಲು ವ್ಯವಸ್ಥಿತ ಸಂಚು

◆**ಕಾಸರಗೋಡು:** ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ನನ್ನನ್ನು ಮತ್ತು ಪಕ್ಷವನ್ನು ಅವಹೇಳನ ಮಾಡಲು ವ್ಯವಸ್ಥಿತ ಸಂಚು ನಡೆಯುತ್ತಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ, ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಅವಲೋಕನಾ ಸಭೆಯು ನಡೆದಿದ್ದರೂ, ಬಿಜೆಪಿ ಕಾಸರಗೋಡು ಜಿಲ್ಲಾ ನಾಯಕತ್ವ ಮತ್ತು ನನ್ನ ವಿರುದ್ಧ ತೀವ್ರ ಟೀಕೆಗಳು ವ್ಯಕ್ತವಾಗಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಮತದಾರರ ಪಟ್ಟಿಗೆ ಹೆಸರು ಸೇರಿಸುವ ಕಾರ್ಯವನ್ನು ಸಮನ್ವಯಗೊಳಿಸಿಲ್ಲ ಮತ್ತು ಸ್ವತಹ ತನ್ನ ಪುತ್ರನ ಹೆಸರನ್ನೇ ಮತದಾರರ ಪಟ್ಟಿಗೆ ಸೇರಿಸಿಲ್ಲ ಎಂಬ ಆರೋಪಗಳು ತೀರಾ ಬಾಲಿಶವಾಗಿವೆ ಎಂದು ಅವರು ಉಲ್ಲೇಖಿಸಿದ್ದಾರೆ.



ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಕಾರ್ಯಕ್ಕೆ ಜಿಲ್ಲಾ ಸಮಿತಿಯು ಎಲ್ಲಾ ಕ್ಷೇತ್ರ ಸಮಿತಿಗಳಿಗೆ ಅಗತ್ಯವಿರುವ ಸಹಾಯ ಸಹಕಾರಗಳನ್ನು ಒದಗಿಸಿದೆ. ಎರಡು ತಿಂಗಳ ಹಿಂದೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಜವಾಬ್ದಾರಿಯಿಂದ ನಾನು ಹಿಂದೆ ಸರಿದಿದ್ದೇನೆ ಎಂಬ ಸುಳ್ಳು ಸುದ್ದಿಯನ್ನು ನೀಡಿದ ಮಾಧ್ಯಮಗಳೇ ಈ ಅಪಪ್ರಚಾರದ ಹಿಂದಿವೆ ಎಂದು ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಒಬ್ಬ ಮಹಿಳೆ ಎನ್‌ಡಿಎ ಕಾಸರಗೋಡು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದದ್ದು, ಬಿಜೆಪಿ ಕಾಸರಗೋಡು ಜಿಲ್ಲಾ ಅಧ್ಯಕ್ಷೆಯಾದದ್ದು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆಯಲ್ಲಿ 5 ಪಂಚಾಯತ್‌ಗಳಲ್ಲಿ ಆಡಳಿತ ಹಿಡಿಯುವ ಮೂಲಕ ಬಿಜೆಪಿ ಶಕ್ತಿ ಪ್ರದರ್ಶಿಸಿದ್ದನ್ನು ಮಾಧ್ಯಮದವರ ವೇಷದಲ್ಲಿರುವ ರಾಜಕಾರಣಿಗಳಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅವರು ನುಡಿದರು.

ಸುಳ್ಳು ಸುದ್ದಿಗಳ ಮೂಲಕ ಚಾರಿತ್ರ್ಯ ವಧೆ ಮಾಡಲು ಮತ್ತು ಪಕ್ಷದ ಘನತೆಗೆ ಧಕ್ಕೆ ತರಲು ಕೆಲವು ಮಾಧ್ಯಮ ಪ್ರತಿನಿಧಿಗಳು ಹಾಗೂ ಮಾಧ್ಯಮಗಳು ಬಹಳ ದಿನಗಳಿಂದ ಪ್ರಯತ್ನಿಸುತ್ತಿವೆ. ಇದರ ವಿರುದ್ಧ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಹಾಗೂ ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಮತ್ತು ಡಿಜಿಟಲ್ ಅಸೋಸಿಯೇಷನ್‌ಗೆ ದೂರು ನೀಡಲಾಗುವುದು ಅಲ್ಲದೆ ಮಾನನಷ್ಟ ಮೊಕದ್ದಮೆ ಸೇರಿದಂತೆ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಎಂ.ಎಲ್.ಅಶ್ವಿನಿ ಪ್ರತಿಕ್ರಿಯಿಸಿದ್ದಾರೆ.

- ಬಿಜೆಪಿ ಕಾಸರಗೋಡು ಜಿಲ್ಲಾ ನಾಯಕತ್ವ ಮತ್ತು ನನ್ನ ವಿರುದ್ಧ ತೀವ್ರ ಟೀಕೆಗಳು ವ್ಯಕ್ತವಾಗಿವೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.
- ಮತದಾರರ ಪಟ್ಟಿಗೆ ಹೆಸರು ಸೇರಿಸುವ ಕಾರ್ಯವನ್ನು ಸಮನ್ವಯಗೊಳಿಸಿಲ್ಲ ಮತ್ತು ಸ್ವತಹ ತನ್ನ ಪುತ್ರನ ಹೆಸರನ್ನೇ ಮತದಾರರ ಪಟ್ಟಿಗೆ ಸೇರಿಸಿಲ್ಲ ಎಂಬ ಆರೋಪಗಳು ತೀರಾ ಬಾಲಿಶವಾಗಿವೆ
- ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಕಾರ್ಯಕ್ಕೆ ಜಿಲ್ಲಾ ಸಮಿತಿಯು ಎಲ್ಲಾ ಕ್ಷೇತ್ರ ಸಮಿತಿಗಳಿಗೆ ಅಗತ್ಯವಿರುವ ಸಹಾಯ ಸಹಕಾರಗಳನ್ನು ಒದಗಿಸಿದೆ.

ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆಗೆ 19 ವಿದ್ಯಾರ್ಥಿಗಳ ಅರ್ಹತೆ | ಸಾಧಕರಿಗೆ ಅಭಿನಂದನೆ

ಶಾರದಾ ಕಾಲೇಜು ವಿದ್ಯಾರ್ಥಿಗಳ ಸಾಧನೆ





◆**ಮಂಗಳೂರು:** ಶಾರದಾ ಪಿಯು ಕಾಲೇಜು (ತಲಪಾಡಿ ಹಾಗೂ ಕೊಡಿಯಾಲ್‌ಬೈಲ್) ಮತ್ತೊಮ್ಮೆ ತನ್ನ ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಬೀತುಪಡಿಸಿದ್ದು, ಪ್ರತಿಷ್ಠಿತ ಜೆಇಇ ಮೈನ್ 2026 ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಇದರ ಜೊತೆಗೆ, ಕಾಲೇಜಿನ 19 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್‌ಡ್ 2026ಕ್ಕೆ ಅರ್ಹತೆ ಪಡೆದಿದ್ದು, ಸಂಸ್ಥೆಯ ಗುಣಮಟ್ಟದ ಬೋಧನೆ ಹಾಗೂ ಸ್ಪರ್ಧಾತ್ಮಕ ತರಬೇತಿಗೆ ಇದು ಸಾಕ್ಷಿಯಾಗಿದೆ.

ಜೆಇಇ ಅಡ್ವಾನ್ಸ್‌ಡ್‌ಗೆ ಅರ್ಹರಾದ ವಿದ್ಯಾರ್ಥಿಗಳು

ಪಿ.ಎಸ್. ಆಯುಷ್, ಶ್ರಾವಲ್ ನಾಯಕ್ ಟಿ., ಆದರ್ಶ್, ಪ್ರಜ್ವಲ್ ಪಿ. ಕಾಮತ್, ಕೆ. ಪ್ರಥಮ್, ಪಾರ್ವತಿ ಸುರೇಶ್, ವರ್ಣಿತಾ ವಿ., ಸೇವಂತಿ, ವಿಕಾಸ್ ಎನ್.ಯು., ಆರ್.ಕೆ. ಅದ್ವಿಕಾ, ಶ್ರೇಯಾ ಬಲ್ಲಾಲ್, ರಚನಾ ಆರ್., ವಿಜಯ್, ಅಜಯ್, ಶ್ರೀಜಲ್ ಮೋಹನ್‌ದಾಸ್, ಎಚ್. ಸ್ಕಂದರಾವ್, ಆದರ್ಶ್ ಹೆಗ್ಡೆ, ದಿಶಾ ಜಿ, ವೈಭವಿ.

ಈ ಸಾಧನೆಗೆ ಕಾಲೇಜಿನ ನಿರ್ವಹಣಾ ಮಂಡಳಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ. ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಫಲಿತಾಂಶ ಕೇಂದ್ರೀಕೃತ ತರಬೇತಿ ವ್ಯವಸ್ಥೆಯೇ ಈ ಯಶಸ್ಸಿನ ಮೂಲ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ದ.ಕ. ಜಿಲ್ಲೆಯಲ್ಲಿ 4666 ಎಚ್‌ಐವಿ ಸಕ್ರಿಯ ಪ್ರಕರಣ

ಡ್ರಗ್ಸ್ ವ್ಯಸನಿಗಳಿಗೆ ಎಚ್‌ಐವಿ ತಪಾಸಣೆ

◆**ಮಂಗಳೂರು:** ಮಾದಕ ವಸ್ತು ವ್ಯಸನಿಗಳಿಗೆ ಎಚ್‌ಐವಿ ರೋಗದ ಬಗ್ಗೆ ಪರೀಕ್ಷೆ ನಡೆಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ದರ್ಶನ್ ಎಚ್ ವಿ ಸೂಚಿಸಿದ್ದಾರೆ.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನದ ಗುರಿಗಳನ್ನು ಜಿಲ್ಲಾಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಡ್ರಗ್ಸ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗಿದ್ದು, ಈ ನಿಟ್ಟಿನಲ್ಲಿ ಮಿಷನ್ ಏಡ್ಸ್ ಅಭಿಯಾನದಡಿ ಅಗತ್ಯ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು.

ಜಿಲ್ಲೆಯ ಎಲ್ಲಾ ಖಾಸಗಿ ಕ್ಲಿನಿಕ್, ನರ್ಸಿಂಗ್ ಹೋಂ, ಆಸ್ಪತ್ರೆಗಳು ಎಚ್‌ಐವಿ ಪ್ರಕರಣಗಳ ಬಗ್ಗೆ ಆರೋಗ್ಯ ಇಲಾಖೆಗೆ ಮಾಹಿತಿ ನೀಡಬೇಕು. ಪ್ರಮುಖ ಜನಸಂದಣಿ ಘಟಕ, ಕೈಗಾರಿಕೆಗಳು, ವಲಸೆ ಕಾರ್ಮಿಕರಲ್ಲಿ ಹೆಚ್.ಐ.ವಿ ತಪಾಸಣೆ ಬಗ್ಗೆ ಸಹಕರಿಸಲು ಸಂಬಂಧಿಸಿದ ಇಲಾಖೆಗೆ ಸೂಚಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

4666 ಸಕ್ರಿಯ ಪ್ರಕರಣ

ದ.ಕ.ಜಿಲ್ಲೆಯಲ್ಲಿ 21 ಕೌನ್ಸಿಲಿಂಗ್ ಮತ್ತು ಪರೀಕ್ಷಾ ಕೇಂದ್ರಗಳು, 9 ಎ.ಆರ್.ಟಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಜಿಲ್ಲೆಯಲ್ಲಿ 4663 ಎಚ್‌ಐವಿ ಸಕ್ರಿಯ ಪ್ರಕರಣಗಳು ಇವೆ. ಕಳೆದ ವರ್ಷ ಜಿಲ್ಲೆಯಲ್ಲಿ 84893 ಹೆಚ್.ಐ.ವಿ ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 293 ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿದೆ. ಇದುವರೆಗೆ ಜಿಲ್ಲೆಯಲ್ಲಿ ಎಚ್‌ಐವಿಯಿಂದ 2972 ಮರಣ ಪ್ರಕರಣಗಳು ವರದಿಯಾಗಿದೆ ಎಂದು ತಿಳಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಖತೀಜಾ ದಿಲ್‌ಶಾದ್ ಮಾತನಾಡಿ, ಮಿಷನ್ ಏಡ್ಸ್ ಸುರಕ್ಷಾ ಅಭಿಯಾನದಡಿ, ಎಚ್‌ಐವಿ ಬಾಧಿತರ ಪೈಕಿ ಶೇಕಡ 95 ರಷ್ಟು ಮಂದಿಗೆ ತಮ್ಮ ಎಚ್‌ಐವಿ ಸ್ಥಿತಿಯ ಬಗ್ಗೆ ಅರಿವು ಮೂಡಿಸುವುದು, ಸೂಕ್ತ ಚಿಕಿತ್ಸೆ ಪಡೆದು ಮತ್ತು ವೈರಸ್ ನಿಯಂತ್ರಿಸುವುದು ಆದ್ಯತೆಯಾಗಿರುತ್ತದೆ. ಜಿಲ್ಲೆಯಲ್ಲಿ ಮಾರ್ಚ್ ಅಂತ್ಯದವರೆಗೆ ಎಚ್‌ಐವಿ ಬಾಧಿತರಲ್ಲಿ ಶೇ.85.23 ರಷ್ಟು ಮಂದಿ ಚಿಕಿತ್ಸೆ ಪಡೆದಿದ್ದಾರೆ ಎಂದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸ, ದ.ಕ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಜಯಲಕ್ಷ್ಮಿ ರಾಯಕೋಡ್, ಅಪರ ಜಿಲ್ಲಾಧಿಕಾರಿ ರಾಜು ಕೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಚ್. ಆರ್. ತಿಮ್ಮಯ್ಯ, ಉಪಸ್ಥಿತರಿದ್ದರು.

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ಅಭಿಷೇಕ್ ಶರ್ಮಾ (ಹೈದರಾಬಾದ್)	ಪ್ರಿನ್ಸ್ ಯಾದವ್ (ಲಖನೌ)
323 ರನ್	13 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	6	4	2	0	8	+1.171
ಹೈದರಾಬಾದ್	7	4	3	0	8	+0.820
ರಾಜಸ್ಥಾನ	6	4	2	0	8	+0.599
ದಿಲ್ಲಿ	6	3	3	0	6	-0.130
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	6	2	4	0	4	-1.173
ಕೆಕೆಆರ್	7	1	5	1	3	-0.879

ಕಿರುಸುದ್ದಿ

ಭಾರತಕ್ಕೆ ಬಾಂಗ್ಲಾದೇಶ ಎದುರು

ಸಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್

• **ಹೊಸದಿಲ್ಲಿ:** ಗೋವಾದ ಮಾರ್ಗಾವ್ನಲ್ಲಿ ಮೇ 25ರಿಂದ ಜೂನ್ 6ರವರೆಗೆ ನಡೆಯಲಿರುವ ಸಾಫ್ ಮಹಿಳಾ ಫುಟ್ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡ ಬಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಭಾರತದ ಜೊತೆ ಬಿ ಗುಂಪಿನಲ್ಲಿ ಬಾಂಗ್ಲಾದೇಶ ಮತ್ತು ಮಾಲ್ಡೀವ್ಸ್ ತಂಡಗಳಿವೆ. ಎ ಗುಂಪಿನಲ್ಲಿ ನೇಪಾಳ, ಶ್ರೀಲಂಕಾ ಮತ್ತು ಭೂತಾನ್ ತಂಡಗಳು ಸ್ಥಾನ ಪಡೆದಿವೆ. ಪ್ರತಿ ಗುಂಪಿನ ಮೊದಲ ಎರಡು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಡ್ರಾ ಪ್ರಕ್ರಿಯೆ ಢಾಕಾದಲ್ಲಿರುವ ಸಾಫ್ ಕಾರ್ಯಾಲಯದಲ್ಲಿ ಬುಧವಾರ ನಡೆಯಿತು. ಪಾಕಿಸ್ತಾನ ಈ ಬಾರಿ ತನ್ನ ತಂಡವನ್ನು ಕಳುಹಿಸದಿರಲು ನಿರ್ಧರಿಸಿದೆ. ಇದು ಭಾರತ ಆತಿಥ್ಯ ವಹಿಸುವ ಎರಡನೇ ಸಾಫ್ ಮಹಿಳಾ ಚಾಂಪಿಯನ್‌ಶಿಪ್ ಆಗಿದ್ದು, ಮೊದಲು 2016ರಲ್ಲಿ ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ನಡೆದಿತ್ತು. ಆ ವೇಳೆ ಭಾರತ ನಾಲ್ಕನೇ ಬಾರಿಗೆ ಪ್ರಶಸ್ತಿ ಗೆದ್ದಿತ್ತು. ಗೋವಾಕ್ಕೆ ಇದು ಎರಡನೇ ಸಾಫ್ ಟೂರ್ನಿಯ ಆತಿಥ್ಯ. 1999ರ ಪುರುಷರ ಚಾಂಪಿಯನ್‌ಶಿಪ್ ಕೂಡ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದಿತ್ತು.

ಫಿಫಾ ಆಧಾರದ ಮೇಲೆ ಪೋಲ್: ಭಾರತ ಮಹಿಳಾ ಸಾಫ್ ಚಾಂಪಿಯನ್‌ಶಿಪ್‌ನಲ್ಲಿ 5 ಬಾರಿ (2010, 2012, 2014, 2016, 2019) ಚಾಂಪಿಯನ್ ಆಗಿರುವ ದಾಖಲೆ ಹೊಂದಿದೆ. ಆದರೆ ಇತ್ತೀಚಿನ ಎರಡು ಆವೃತ್ತಿಗಳಲ್ಲಿ ಬಾಂಗ್ಲಾದೇಶ (2022, 2024) ಜಯ ಸಾಧಿಸಿದೆ. ಫಿಫಾ ಮಹಿಳಾ ರ್‍ಯಾಂಕಿಂಗ್ ಆಧಾರದಲ್ಲಿ ಸೀಡಿಂಗ್ ಮಾಡಲಾಗಿದ್ದು, ಭಾರತ (69ನೇ ಸ್ಥಾನ) ಮತ್ತು ನೇಪಾಳ (87) ಮೊದಲ ಪೊಟ್‌ನಲ್ಲಿ, ಬಾಂಗ್ಲಾದೇಶ (112) ಮತ್ತು ಶ್ರೀಲಂಕಾ (162) ಎರಡನೇ ಪೊಟ್‌ನಲ್ಲಿ, ಭೂತಾನ್ (164) ಮತ್ತು ಮಾಲ್ಡೀವ್ಸ್ (167) ಮೂರನೇ ಪೊಟ್‌ನಲ್ಲಿ ಇದ್ದವು.

ಫಿಫಾ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾರತ



• **ಹೊಸದಿಲ್ಲಿ:** ಜಾಗತಿಕ ಫುಟ್ಬಾಲ್ ಆಡಳಿತ ಸಂಸ್ಥೆಯಾದ ಫಿಫಾ ಆಯ್ಕೆ ಮಾಡಿದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮ (ವಾಣಿಜ್ಯ ತಂತ್ರಯೋಜನೆ 2026)ದಲ್ಲಿ ಭಾರತ ಸ್ಥಾನ ಪಡೆದಿದೆ. ಈ ಯೋಜನೆಗೆ ಜರ್ಮನಿ, ನೆದರ್ಲೆಂಡ್ಸ್, ಸ್ವೀಡನ್, ಸ್ಕಾಟ್ಲೆಂಡ್, ಕೆನಡಾ, ಮೆಕ್ಸಿಕೊ, ಫಿನ್‌ಲ್ಯಾಂಡ್, ಘಾನಾ, ಜೋರ್ಡನ್, ಲಿಥುವೇನಿಯಾ ಹಾಗೂ ಪರಾಗ್ವೆ ದೇಶಗಳು ಆಯ್ಕೆಯಾಗಿವೆ. ಭಾರತವನ್ನು ಈ ಕಾರ್ಯಕ್ರಮಕ್ಕೆ ಸೇರಿಸಿಕೊಳ್ಳುವುದನ್ನು ಅಖಿಲ ಭಾರತೀಯ ಫುಟ್ಬಾಲ್ ಸಂಸ್ಥೆ ಸಲ್ಲಿಸಿದ ಅರ್ಜಿ ಹಾಗೂ ಅದರ ನಂತರ ನೀಡಿದ ವಿವರವಾದ ಪ್ರಸ್ತುತಿಯ ಆಧಾರದ ಮೇಲೆ ದೃಢಪಡಿಸಲಾಗಿದೆ. ಈ ತರಬೇತಿ ಕಾರ್ಯಕ್ರಮವು 2026ರ ಮೇದಿಂದ ಆಕ್ಟೋಬರ್‌ವರೆಗೆ ಅಂತರ್ಜಾಲದ ಮೂಲಕ ನಡೆಯಲಿದೆ. ದೇಶದ ಮಹಿಳಾ ಫುಟ್‌ಬಾಲ್ ಕ್ಷೇತ್ರದ ವಿವಿಧ ಭಾಗಿಗಳ ಅಗತ್ಯಗಳಿಗೆ ಅನುಗುಣವಾಗಿ ಈ ಕೋರ್ಸ್ ರೂಪಿಸಲಾಗುತ್ತದೆ. ಭಾರತೀಯ ಫುಟ್‌ಬಾಲ್ ಮಹಾಸಂಘಕ್ಕೆ ಈಗ ವಾಣಿಜ್ಯ ಸಹಭಾಗಿಯ ಬೆಂಬಲ ದೊರೆತಿದ್ದು, ಈ ಕಾರ್ಯಕ್ರಮವು ಕ್ಲಬ್‌ಗಳಿಗೆ ದೀರ್ಘಕಾಲಿಕ ಮಾದರಿಗಳನ್ನು ನಿರ್ಮಿಸಲು ಅಗತ್ಯವಾದ ಜ್ಞಾನ ಮತ್ತು ಸಾಧನಗಳನ್ನು ಒದಗಿಸಲಿದೆ. ಜೊತೆಗೆ, ಏಷ್ಯಾ ಖಂಡದ ಫುಟ್ಬಾಲ್ ಆಡಳಿತ ಸಂಸ್ಥೆಯಾದ ಏಷ್ಯನ್ ಫುಟ್ಬಾಲ್ ಸಂಸ್ಥೆ ಪರಿಚಯಿಸಲು ಉದ್ದೇಶಿಸಿರುವ ಮಹಿಳಾ ಕ್ಲಬ್ ಮಾನ್ಯತಾ ವ್ಯವಸ್ಥೆಗೆ ಸಿದ್ಧರಾಗಲು ಸಹಾಯ ಮಾಡಲಿದೆ.

ವೇಗಿಗಳ ದಾಳಿಗೆ ಕುಸಿದ ಆರ್‌ಆರ್ | ಜಡೇಜಾ ಆಸರೆ

ಲಖನೌಗೆ ಸ್ಪರ್ಧಾತ್ಮಕ ಗುರಿ



• **ಲಖನೌ:** ಲಖನೌ ವೇಗಿಗಳ ಬಿಗಿ ದಾಳಿಯ ನಡುವೆ ತಾಳ್ಮೆ ಪ್ರದರ್ಶಿಸಿ ಆಸರೆಯಾದ ರವೀಂದ್ರ ಜಡೇಜಾ ರಾಜಸ್ಥಾನ ರಾಯಲ್ಸ್ ತಂಡವನ್ನು ಉತ್ತಮ ಸ್ಕೋರ್‌ನತ್ತ ಸಾಗಿಸಿದರು.

ದಿಢೀರ್ ಕುಸಿತ ಕಂಡಿರುವ ರಾಯಲ್ಸ್, ಸೂಪರ್ ಜೇಂಟ್ಸ್ ವಿರುದ್ಧದ ಪಂದ್ಯದಲ್ಲಿ 159 ರನ್‌ಗಳಿಸಿ ಸವಾಲೊಡ್ಡಿದೆ. ವೈಭವ್ ಸೂರ್ಯವಂಶಿ, ಜೈಸ್ವಾಲ್ ಉತ್ತಮ ಆರಂಭ ಕೊಟ್ಟರೂ, ಮುಂದೆ ಕುಸಿತ ಕಂಡ ರಿಯಾನ್ ಪಡೆ ತತ್ತರಿಸಿತು. ಶಮಿ(30/2), ಮೋಹ್ಸಿನ್(17/2) ಹಾಗೂ ಪ್ರಿನ್ಸ್(29/2) ದಾಳಿಗೆ ದಿಗ್ವೇಶ್ ಸಾಥ್ ಸಿಕ್ಕ ನಂತರ ಲಖನೌ ಮಿಂಚಿತು. ಆದಾಗ್ಯೂ ಇದೇ ಪಂದ್ಯದ ಮೂಲಕ ಮೈದಾನಕ್ಕೆ ಮರಳಿದ ಮಯಾಂಕ್ ಯಾದವ್ 4 ಓವರ್‌ಗಳಲ್ಲಿ 56 ರನ್ ನೀಡಿ ದುಬಾರಿಯಾದರು.

ಜಡೇಜಾ ಆಸರೆ: ಜೈಸ್ವಾಲ್(22) ಆರಂಭಿಕ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಮೂರನೇ ಓವರ್‌ನಲ್ಲಿ ಶಮಿ, ಜೈಸ್ವಾಲ್ ಹಾಗೂ ಜುರೇಲ್(0) ವಿಕೆಟ್ ಪಡೆದರು. ಮುಂದಿನ ಓವರ್‌ನಲ್ಲಿ ವೈಭವ್ ಕೂಡ (8) ವಿಕೆಟ್ ಒಪ್ಪಿಸಿದರು. ರಿಯಾನ್ ಪರಾಗ್ ಮತ್ತು ಹೆಟ್ಮೇರ್ ಕೊಂಚ ಹೊತ್ತು ನಿಂತರು. ಪವರ್‌ಪ್ಲೇ ಅಂತ್ಯಕ್ಕೆ ತಂಡ 44 ರನ್‌ಗಳಿಸಿತ್ತು. ಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದ ಹೆಟ್ಮೇರ್ (22) ಮೊಹ್ಸಿನ್‌ಗೆ ಕ್ಯಾಚಿತ್ತರು. ಜಡೇಜಾ(43★) ಮತ್ತು ಫೆರಾರಿಯಾ(20) ಉತ್ತಮ ಬ್ಯಾಟಿಂಗ್ ಮಾಡಿ ಆಸರೆಯಾದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ರಾಜಸ್ಥಾನ ಅಲ್ಲಿ 66 ರನ್ ಗಳಿಸಿತು. ಕೊನೆಯ ಓವರ್‌ನಲ್ಲಿ ಮಿಂಚಿನಾಟ. ಫೆರಾರಿಯಾ ವಿಕೆಟ್ ಒಪ್ಪಿಸಿದ ನಂತರ ಶುಭಂ ದುಬೆ ಇಂಪ್ಯಾಕ್ಟ್ ಆಟಗಾರನಾಗಿ ಬ್ಯಾಟಿಂಗ್‌ಗಿಳಿದರು. ಅಂತಿಮ ಎರಡು ಓವರ್‌ಗಳಲ್ಲಿ ಇಬ್ಬರೂ ಅಬ್ಬರಿಸಿದರು. ಡೆತ್ ಓವರ್‌ನಲ್ಲಿ ಆರ್‌ಆರ್ 49 ರನ್‌ಗಳಿತು.

500 ರನ್- ವೈಭವ್ ಇತಿಹಾಸ

ತಮ್ಮ ಬ್ಯಾಟಿಂಗ್‌ನೊಂದಿಗೆ ವಿಶ್ವ ಕ್ರಿಕೆಟ್‌ನಲ್ಲಿ ದಾಖಲೆಗಳ ಮೇಲೆ ದಾಖಲೆಗಳನ್ನು ಮಾಡುತ್ತಿರುವ 15 ವರ್ಷದ ವೈಭವ್ ಸೂರ್ಯವಂಶಿ ಮತ್ತೊಂದು ಮೈಲುಗಲ್ಲು ದಾಟಿದರು. ಪ್ರತಿ ಪಂದ್ಯಕ್ಕೂ ಹೊಸದೊಂದು ದಾಖಲೆಗಳನ್ನು ಮಾಡುವ ಅವರು, ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಮಹತ್ವದ ದಾಖಲೆಗಳನ್ನು ಮಾಡಿದ್ದಾರೆ. ವೃತ್ತಿಜೀವನದಲ್ಲಿ ತಮ್ಮ ಎರಡನೇ ಆವೃತ್ತಿಯಾಡುತ್ತಿರುವ ಅವರು, 500 ರನ್ ದಾಟಿದರು. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಅನ್‌ಕ್ಯಾಪ್ಡ್ ಆಟಗಾರರು ಮಾಡದ ಕೆಲವು ರೋಮಾಂಚನಕಾರಿ ದಾಖಲೆಗಳನ್ನೂ ಅವರು ಮಾಡಿದ್ದಾರೆ.

ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ

14 ಮಾತ್ರ ಪಂದ್ಯಗಳನ್ನಾಡಿರುವ ವೈಭವ್ ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ 500 ರನ್ ಮಾಡಿರುವ ದಾಖಲೆ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಶೌನ್ ಮಾರ್ಷ್(11 ಇನ್ನಿಂಗ್ಸ್) ಇದ್ದು ಎರಡನೇ ಸ್ಥಾನದಲ್ಲಿ ಮ್ಯಾಥೀವ್ ಹೈಡನ್(13 ಇನ್ನಿಂಗ್ಸ್) ಇದ್ದಾರೆ.

ಕಡಿಮೆ ಬಾಲ್‌ನಲ್ಲಿ ದಾಖಲೆ

ಐಪಿಎಲ್‌ನಲ್ಲಿ ಈವರೆಗೂ 227 ಬಾಲ್‌ಗಳನ್ನು ಮಾತ್ರ ಆಡಿರುವ ವೈಭವ್ ಸೂರ್ಯವಂಶಿ ಅತಿ ವೇಗವಾಗಿ 500 ರನ್ ಬಾರಿಸಿದ ಆಟಗಾರ ಎಂಬ ದಾಖಲೆ ಮಾಡಿದರು. ಇದಕ್ಕೂ ಮೊದಲು ಗ್ಲೇನ್ ಮ್ಯಾಕ್ಸ್‌ವೇಲ್ 260 ಬಾಲ್‌ಗಳಲ್ಲಿ 500 ಬಾರಿಸಿ ಹೊಂದಿದ್ದರು.

ಅತಿ ಕಡಿಮೆ ಬಾಲ್‌ಗಳಲ್ಲಿ 500 ರನ್ ಬಾರಿಸಿದ ಪ್ಲೇಯರ್ಸ್(ಐಪಿಎಲ್‌ನಲ್ಲಿ)

ಆಟಗಾರ	ಬಾಲ್
ವೈಭಯ್	227
ಮ್ಯಾಕ್ಸವೇಲ್	260
ಪ್ರಿಯಾಂಶ್	278
ಸೆಹವಾಗ್	280
ನಮನ್	283

ಅತಿ ಕಿರಿಯ: ಐಪಿಎಲ್‌ನಲ್ಲಿ 500 ರನ್ ಬಾರಿಸಿದ ಅತಿ ಕಿರಿಯ ಆಟಗಾರ ಎಂಬ ದಾಖಲೆಯನ್ನೂ ವೈಭವ್ ಸೂರ್ಯವಂಶಿ ಮಾಡಿದ್ದಾರೆ. 15 ವರ್ಷದ ವೈಭವ್ ಪೃಥ್ವಿ ಶಾ ದಾಖಲೆ ಮುರಿದಿದ್ದಾರೆ.

ಅತಿ ಕಡಿಮೆ ವಯಸ್ಸಿನಲ್ಲಿ 500 ರನ್

ಆಟಗಾರ	ವಯಸ್ಸು
ವೈಭವ್	15 ವರ್ಷ, 26 ದಿನ
ಪೃಥ್ವಿ ಶಾ	19 ವರ್ಷ, 164 ದಿನ
ಸಂಜು ಸ್ಯಾಮ್ಸನ್	19 ವರ್ಷ, 195 ದಿನ
ಪಂತ್	19 ವರ್ಷ, 220 ದಿನ
ಕಿಶನ್	19 ವರ್ಷ, 295 ದಿನ

ಇಂದು ಎಲ್‌ಕ್ಲಾಸಿಕೊ ಪಂದ್ಯ | ಧೋನಿ ಕಣಕ್ಕೆ?

ಮುಂಬೈ-ಚೆನ್ನೈ ಫೈಟ್

ಪಿಚ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ರನ್ ಹೊಳೆ ಹರಿಯುವ ಸಾಧ್ಯತೆ ಇದೆ. ಹೆಚ್ಚಿನ ಬೌನ್ಸ್ ಇರಲಿದೆ. ಮಳೆ ಸಾಧ್ಯತೆ ಕಮ್ಮಿ. ಸ್ಪಿನ್ನರ್‌ಗಳಿಗೆ ಸ್ವಲ್ಪ ಆಸರೆಯಾಗುತ್ತದೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಇರಲಿದೆ. ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇ ಜಾಸ್ತಿ.



• **ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಗುರುವಾರದ ಎಲ್‌ಕ್ಲಾಸಿಕೊ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಸದ್ಯ ಅಂಕಪಟ್ಟಿಯಲ್ಲಿ ಕೆಳಗಿರುವ ಎರಡೂ ತಂಡಗಳು ಗೆಲುವಿನ ಹಳಿಗೆ ಮರಳಲು ಪ್ರಯತ್ನಿಸಲಿವೆ. ಹಿಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹೈದರಾಬಾದ್ ವಿರುದ್ಧ ಸೋಲನುಭವಿಸಿದರೆ, ಇತ್ತ ಮುಂಬೈ ಇಂಡಿಯನ್ಸ್ ಭರ್ಜರಿ ಪ್ರದರ್ಶನ ನೀಡಿದ್ದು, ಗುಜರಾತ್ ವಿರುದ್ಧ ಗೆಲುವು ಸಾಧಿಸಿದೆ.

ಎರಡೂ ತಂಡಗಳು ಜೇಬಿನಲ್ಲಿ ಸಮಾನ ಅಂಕಗಳನ್ನು ಹೊಂದಿವೆ. ಮೊದಲನೇ ಪಂದ್ಯದಲ್ಲಿ ಗೆದ್ದಿದ್ದ ಮುಂಬೈ ಸತತ ಮೂರು ಸೋಲುಗಳನ್ನು ಎದುರಿಸಿತ್ತು. ಇತ್ತ ಚೆನ್ನೈ ಮೂರು ಸೋಲಿನ ನಂತರ ಸತತ ಎರಡು ಗೆಲುವು ಸಾಧಿಸಿತ್ತು. ಆದರೆ ಕಳೆದ ಪಂದ್ಯದಲ್ಲಿ ಮತ್ತೊಮ್ಮೆ ಸೋಲನುಭವಿಸಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಎಲ್‌ಕ್ಲಾಸಿಕೊ ಪಂದ್ಯ ನಡೆಯಲಿದೆ.

ಚೆನ್ನೈ ತಂಡಕ್ಕೆ ವಿಶ್ವಾಸ: ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿದರೂ ಕಳೆದ ಪಂದ್ಯದಲ್ಲಿ ಮತ್ತೊಮ್ಮೆ ನಿರಾಸೆ ಮೂಡಿಸಿದ್ದಾರೆ. 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಆಯುಷ್ ಮಾತ್ರೆ ಗಾಯದಿಂದ ಹೊರನಡೆದಿರುವುದು ತಂಡಕ್ಕಾದ ದೊಡ್ಡ ಆಘಾತ. ಮಧ್ಯಮ ಕ್ರಮಾಂಕದಲ್ಲಿ ಸರ್ಫರಾಜ್ ಖಾನ್, ಡೇವಾಲ್ಡ್ ಬ್ರೇವಿಸ್ ಸಿಕ್ಕಾಗಲೆಲ್ಲಾ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಫಿನಿಶಿಂಗ್‌ನಲ್ಲಿ ದುಬೆ ಸಿದ್ಧರಾಗಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಓವರ್‌ಟನ್ ಲಯದಲ್ಲಿದ್ದಾರೆ. ಕಳೆದೆರಡು ಪಂದ್ಯಗಳಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡಿದ್ದಾರೆ. ಇನ್ನು ತಂಡಕ್ಕೆ ಸ್ಪೇನ್ಸರ್ ಜಾನ್ಸನ್ ಕೂಡ ಬಂದಿದ್ದು, ವೇಗದಲ್ಲಿ ಬಲ ತಂದಿದೆ. ಸ್ಪಿನ್ ವಿಭಾಗದಲ್ಲಿ ನೂರ್ ಅಹ್ಮದ್ ಮಿಂಚಿರುವುದು ವಿಶ್ವಾಸ ಹಿಗ್ಗಿಸಿದೆ. ಮುಖ್ಯವಾಗಿ ಅಭ್ಯಾಸದ ವೇಳೆ ಧೋನಿ ಕೀಪಿಂಗ್ ಮಾಡಿದ್ದು, ತಂಡದಲ್ಲಿ ಮತ್ತು ಅಭಿಮಾನಿಗಳಲ್ಲಿ ಮಂದಹಾಸ ಮೂಡಿಸಿದೆ.

ಮುಂಬೈಗೆ ಗೆಲುವಿನ ತವಕ: ಮುಂಬೈ ಇಂಡಿಯನ್ಸ್ ತನ್ನ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಬಳಿಕ ನಡೆದ ಎಲ್ಲಾ ಪಂದ್ಯಗಳಲ್ಲಿ ಸೋತರೂ ಕಳೆದ ಪಂದ್ಯದಲ್ಲಿ ತಿಲಕ್ ವರ್ಮಾ ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಪಂದ್ಯಾವಳಿಯಲ್ಲಿ ಮರಳಿದೆ. ತಿಲಕ್ ವರ್ಮಾ ಶತಕ ಮುಂಬೈ ತಂಡದಲ್ಲಿ ಎಲ್ಲಿಲ್ಲದ ಉತ್ಸಾಹ ಹುಟ್ಟುಹಾಕಿದೆ. ಬೂಮ್ರಾ ವಿಕೆಟ್ ಪಡೆದಿದ್ದಾರೆ. ಅಶ್ವಿನಿ ಕುಮಾರ್ ಕಳೆದ ಪಂದ್ಯದಲ್ಲಿ ಪ್ರಮುಖ 4ವಿಕೆಟ್ ಕಿತ್ತರು. ರಯಾನ್ ರಿಕೆಲ್ಟನ್ ಲಯದ ಹುಡುಕಾಟದಲ್ಲಿದ್ದಾರೆ. ಸೂರ್ಯ ಕೂಡ ಲಯದಲ್ಲಿಲ್ಲ. ಡಿಕಾಕ್ ಆಡಿದ ಮೊದಲ ಪಂದ್ಯದಲ್ಲೇ ಶತಕ ಬಾರಿಸಿ ಮಿಂಚಿದ್ದಾರೆ.

ಪಂದ್ಯದ ವಿವರ

ಯಾವಾಗ: ಗುರುವಾರ, ಎಲ್ಲಿ: ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಮಾಣಿಕ್ ಶಾ ಪರೇಡ್ ಮೈದಾನದಿಂದ ಓಟ

10-ಕೆ ಬೆಂಗಳೂರಿನಲ್ಲಿ 36 ಸಾವಿರಕ್ಕೂ ಹೆಚ್ಚು ಅಥ್ಲೀಟ್ಸ್



- ಎಲೈಟ್ ಓಟಗಾರರು: 98
- ಓಪನ್ 10ಕೆ: 22,189
- ಹಿರಿಯ ನಾಗರಿಕರ ಓಟ: 1,559
- ದಿವ್ಯಾಂಗರ ವಿಭಾಗ: 804
- ಮಜ್ಜಾ ರನ್: 12,171

• **ಬೆಂಗಳೂರು:** ಭಾನುವಾರ ನಡೆಯಲಿರುವ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 18ನೇ ಆವೃತ್ತಿಗೆ ಭಾರೀ ಸಿದ್ಧತೆಗಳು ನಡೆದಿವೆ. ಏಪ್ರಿಲ್ 26ರಂದು ನಡೆಯುವ ಈ ಮ್ಯಾರಥಾನ್‌ನಲ್ಲಿ 36,000ಕ್ಕೂ ಹೆಚ್ಚು ಓಟಗಾರರು ಭಾಗವಹಿಸಲಿದ್ದಾರೆ. ಪ್ರಮುಖ ಆರಂಭ ಸ್ಥಳ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾಣಿಕ್ ಶಾ ಪೆರೇಡ್ ಮೈದಾನ ಆಗಿದ್ದು, ಓಟಗಾರರು ಉಲ್ಲೂರ್ ಕೆರೆ, ಡಿಕ್ಕನ್ಸನ್ ರಸ್ತೆ ಮತ್ತು ವಿಧಾನ ಸೌಧ ಸೇರಿದಂತೆ ನಗರದ ಪ್ರಮುಖ ಮಾರ್ಗಗಳಲ್ಲಿ ಓಡಲಿದ್ದಾರೆ. ಬುಧವಾರದಂದು ಮಾಧ್ಯಮಗೋಷ್ಠಿ ನಡೆಸಿದ ಆಯೋಜಕರು, ಕೂಟದ ಸಮಯದಲ್ಲಿರುವ ವ್ಯವಸ್ಥೆಗಳ ಬಗ್ಗೆ ವಿಸ್ತಾರವಾಗಿ ತಿಳಿಸಿದರು.

ರೇಸ್ ಸಮಯ ಪಟ್ಟಿ

ವಿಭಾಗ	ಆರಂಭ	ಅಂತ್ಯ
ಮಹಿಳಾ 10ಕೆ	05:30	06:10
ಪುರುಷರ 10ಕೆ	06:08	06:43
ಓಪನ್ 10ಕೆ	06:10	08:45
ಹಿರಿಯ/ ದಿವ್ಯಾಂಗರ ಓಟ	08:00	09:00
ಮಜ್ಜಾ ರನ್	08:30	10:00

ಆರೋಗ್ಯ ಮತ್ತು ಭದ್ರತೆ

- 30 ಹಾಸಿಗೆ ವೈದ್ಯಕೀಯ ಕೇಂದ್ರ (ಐಸಿಯು ಸಹಿತ)
- 5 ಮಾರ್ಗ ಮಧ್ಯ ವೈದ್ಯಕೀಯ ಕೇಂದ್ರಗಳು
- 10 ಆಂಬ್ಯುಲೆನ್ಸ್‌ಗಳು, ಬೈಕ್ ಮೆಡಿಕ್ಸ್
- 250+ ವೈದ್ಯಕೀಯ ಸಿಬ್ಬಂದಿ

ಇತರ ವ್ಯವಸ್ಥೆಗಳು

- 1200ಕ್ಕೂ ಹೆಚ್ಚು ಸ್ವಯಂಸೇವಕರು
- 1000 ಪೊಲೀಸ್ ಸಿಬ್ಬಂದಿ
- 8 ನೀರಿನ ಕೇಂದ್ರಗಳು, 3 ರಿಹೈಡ್ರೇಷನ್ ಕೇಂದ್ರ
- ಶೂನ್ಯ ತ್ಯಾಜ್ಯ ಮಾದರಿ

ವಿಶೇಷತೆಗಳು

- ಬಿಎಮ್‌ಆರ್‌ಸಿಎಲ್ ಮೆಟ್ರೋ ಸೇವೆ ಬೆಳಗ್ಗೆ ಬೇಗ ಆರಂಭ
- ಡೊಳ್ಳು ಕುಣಿತ, ಸಾಂಸ್ಕೃತಿಕ ಚೀರಿಂಗ್ ವಲಯಗಳು
- ಶೂ ಸಂಗ್ರಹಣೆ, ಆಹಾರ ಹಂಚಿಕೆ

ಹೈದರಾಬಾದ್‌ಗೆ 47 ರನ್‌ಗಳ ಗೆಲುವು | ಮಾಲಿಂಗಾ 32/4

ದಿಲ್ಲಿ ಕ್ಯಾಪಿಟಲ್ಸ್‌ಗೆ ಸೋಲಿನ ಕಹಿ

• **ಹೈದರಾಬಾದ್:** ಇಶಾನ್ ಮಾಲಿಂಗ್ ಅವರ ಕರಾರುವಾಕ್ ಬೌಲಿಂಗ್ ದಾಳಿ ಸಹಾಯದಿಂದ ದಿಲ್ಲಿ ತಂಡವನ್ನು ಮಣಿಸಿದ ಸನ್‌ರೈಸರ್ಸ್ ಹೈದರಾಬಾದ್ 47 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಅಭಿಷೇಕ್ ಶರ್ಮ ಅವರ ಅಬ್ಬರದ ಶತಕದ ಬ್ಯಾಟಿಂಗ್ ನೆರವಿನೊಂದಿಗೆ ದೊಡ್ಡ ಸ್ಕೋರ್ ಕಲೆಹಾಕಿದ್ದ ಹೈದರಾಬಾದ್ 2 ಸೋಲಿನ ನಂತರ ಹ್ಯಾಟ್ರಿಕ್ ಜಯ ಸಾಧಿಸಿತು. ಇದರೊಂದಿಗೆ ಗೆಲುವಿನ ನಾಗಾಲೋಟ ಮುಂದುವರಿಸುವ ಭರವಸೆ ಮೂಡಿಸಿತು. ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಹೈದರಾಬಾದ್ 2 ವಿಕೆಟ್ ಮಾತ್ರ ಕಳೆದುಕೊಂಡು 242 ರನ್ ಗಳಿಸಿತು. ಅಭಿಷೇಕ್ ಶರ್ಮ (135*, 68ಎ, 10ಬೌ, 10ಸಿ) ರನ್ ಬಾರಿಸಿದರು. ಟ್ರಾವಿಸ್ ಹೆಡ್, ಕ್ಲಾಸೆನ್ 37 ರನ್ ಮಾಡಿದರು. ಇತ್ತ ದಿಲ್ಲಿ ಕ್ಯಯಾಪಿಟಲ್ಸ್ ಪರ ಅಕ್ಷರ್ ಪಟೇಲ್ ಮಾತ್ರ ಒಂದು ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ದಿಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 195 ರನ್ ಗಳಿಸಿತು. ನಿತಿಶ್ ರಾಣಾ (57, 30ಎ, 7ಬೌ, 3ಸಿ) ರನ್ ಬಾರಿಸಿದರು. ರಿಜ್ವಿ 41 ರನ್ ಗಳಿಸಿದರು. ಹೈದರಾಬಾದ್ ಪರ ಇಶಾನ್ ಮಾಲಿಂಗಾ (4-0-32-4) ಮಿಂಚಿದರು.

ಅಭಿಷೇಕ್ ಶರ್ಮ 135 ರನ್ ಬಾರಿಸಿ ದಾಖಲೆ ಮಾಡಿದರು. ಹೈದರಾಬಾದ್ ಇನ್ನಿಂಗ್ಸ್ ಉದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದಿತು. ರನ್ ಉಳಿಸಿಕೊಳ್ಳುವ ಸಮಯದಲ್ಲಿ ಮಾಲಿಂಗಾ ತಮ್ಮ ಕರಾರುವಾಕ್ ದಾಳಿಯೊಂದಿಗೆ ದಿಲ್ಲಿ ಪಾಲಿನ ದುಃಸ್ವಪ್ನವಾದರು. ಮುಂದಿನ ಪಂದ್ಯದಲ್ಲಿ ಹೈದರಾಬಾದ್, ರಾಜಸ್ಥಾನವನ್ನು, ದಿಲ್ಲಿ ಪಂಜಾಬ್ ತಂಡವನ್ನು ಎದುರಿಸಲಿದೆ.

ಮಾಲಿಂಗಾ ಸ್ಟ್ರೈಕ್: ದಿಲ್ಲಿ ಮೊದಲಿನಿಂದಲೂ ಹಿನ್ನಡೆ ಅನುಭವಿಸಿತು, ನಿಸ್ಸಂಕಾ 8 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ನಿತಿಶ್ ರಾಣಾ ಅಬ್ಬರದ ಬ್ಯಾಟಿಂಗ್ ಮಾಡಿದರು. ರಾಹುಲ್ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಪವರ್‌ಪ್ಲೇ ಅಂತ್ಯಕ್ಕೆ 59 ರನ್‌ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ನಿತಿಶ್ ಸ್ಫೋಟಕ ಬೌಂಡರಿಗಳೊಂದಿಗೆ ಅರ್ಧ ಶತಕ ಪೂರೈಸಿಕೊಂಡು ಅಬ್ಬರದ ಬ್ಯಾಟಿಂಗ್ ಮುಂದುವರಿಸಿದರು. 37 ರನ್ ಗಳಿಸಿ ರಾಹುಲ್ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಸಮೀರ್ ರಿಜ್ವಿ ಕೂಡ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ರಾಣಾ 57, 30ಎ, 7ಬೌ, 1ಸಿಗೆ ಆಟ ನಿಲ್ಲಿಸಿದರು. ಅಲ್ಲಿಗೆ ದಿಲ್ಲಿ ಹೋರಾಟ ಮುಕ್ತಾಯಗೊಂಡಂತಾಯಿತು. ರಿಜ್ವಿ ಆಟ 41 ರನ್‌ಗೆ ಮುಗಿಯಿತು. ಮಿಲ್ಲರ್ ಶೂನ್ಯ ಸುತ್ತಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. 108 ರನ್‌ಗಳಿಸಿತು. ಡೆತ್ ಓವರ್‌ನಲ್ಲಿ ದಿಲ್ಲಿ ಹೆಚ್ಚಿನ ಹೋರಾಟ ನಡೆಸಲೇ ಇಲ್ಲ. ಬಂದ ಬ್ಯಾಟಿಗರೆಲ್ಲರೂ ಬೇಗನೇ ವಿಕೆಟ್ ಒಪ್ಪಿಸಿದರು. 28 ರನ್ ಗಳಿಸುವಷ್ಟರಲ್ಲಿ ದಿಲ್ಲಿ 4 ವಿಕೆಟ್ ಕಳೆದುಕೊಂಡಿತು. ಅಂತಿಮವಾಗಿ 195 ರನ್‌ಗಳಿಸಿ ಹೋರಾಟ ನಿಲ್ಲಿಸಿತು. ಹೈದರಾಬಾದ್ ಪರ ಹರ್ಷ ದುಬೆ 12 ರನ್ ಮಾತ್ರಕ್ಕೆ 3 ವಿಕೆಟ್ ಪಡೆದುಕೊಂಡರೆ, ಇಶಾನ್ ಮಾಲಿಂಗಾ 32 ರನ್ ನೀಡಿ 4 ವಿಕೆಟ್ ಪಡೆದರು.



ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 20 ಓವರ್‌ಗಳಲ್ಲಿ 242/2: ಅಭಿಷೇಕ್ 135*, ಕ್ಲಾಸೆನ್ 37*; ಅಕ್ಷರ್ 23/1
ದಿಲ್ಲಿ 20 ಓವರ್‌ಗಳಲ್ಲಿ 195/9: ನಿತಿಶ್ 57, ರಿಜ್ವಿ 41; ಮಾಲಿಂಗಾ 32/4, ಹರ್ಷ 12/3

ಕೋಚ್ ಮೇಲೆ ಹಲ್ಲೆ: 3 ಕ್ರಿಕೆಟಿಗರು ಅಮಾನತು

• **ಹೊಸದಿಲ್ಲಿ:** ಕೋಚ್ ಮೇಲೆ ಹಲ್ಲೆ ನಡೆಸಿದ ಪ್ರಕರಣದಲ್ಲಿ ಪುದುಚೆರಿ ಕ್ರಿಕೆಟ್ ಸಂಸ್ಥೆ ಪ್ರಥಮ ದರ್ಜೆ ಮೂರು ಕ್ರಿಕೆಟಿಗರನ್ನು ತಕ್ಷಣದಿಂದಲೇ ಅಮಾನತುಗೊಳಿಸಿದೆ.

ಅಮಾನತುಗೊಂಡ ಆಟಗಾರರು ಜೆ. ಕಾರ್ತಿಕೇಯನ್, ಎ. ಅರವಿಂದರಾಜ್ ಹಾಗೂ ಎಸ್. ಸಂತೋಷ್ ಕುಮಾರ್ ಆಗಿದ್ದಾರೆ. ಇವರು ಪುದುಚೇರಿ ತಂಡದ ಪರವಾಗಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಹಾಗೂ ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಗಳಲ್ಲಿ ಆಡಿದ್ದಾರೆ. ಅರವಿಂದರಾಜ್ ಕಳೆದ ಸೀಸನ್‌ನಲ್ಲೂ ತಂಡವನ್ನು ಪ್ರತಿನಿಧಿಸಿದ್ದರು. ಸಿಎಪಿ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಈ ಮೂವರು ಆಟಗಾರರು ಕಳೆದ ಡಿಸೆಂಬರ್ 8ರಂದು ಅಂಡರ್-19 ತಂಡದ ಕೋಚ್ ವೆಂಕಟರಮನ್ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿದ್ದಾರೆ. ಇವರ ವಿರುದ್ಧ ಹತ್ಯೆ ಯತ್ನ ಹಾಗೂ ಹಲ್ಲೆ ಪ್ರಕರಣ ದಾಖಲಿಸಲಾಗಿದೆ. ಸೇದುರಪೇಟೆ ಪೊಲೀಸ್ ಠಾಣೆಯ ಅಧಿಕಾರಿಗಳು ಎಫ್‌ಐಆರ್ ಸಂಖ್ಯೆ 100/2025 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದು, ಪ್ರಕರಣವು ಪುದುಚೇರಿ ನ್ಯಾಯಾಂಗ ಮ್ಯಾಜಿಸ್ಟ್ರೇಟ್-4 ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.

ಭಾರತೀಯ ವಾಲಿಬಾಲ್‌ಗೆ ಆಘಾತ | ನಿಯಮ ಪಾಲಿಸದ ಕಾರಣಕ್ಕೆ ಕ್ರಮ

ಎಫ್‌ಐವಿಬಿ ಅಂತಾರಾಷ್ಟ್ರೀಯ ಮಾನ್ಯತೆ ರದ್ದು!




• **ಹೊಸದಿಲ್ಲಿ:** ಭಾರತೀಯ ವಾಲಿಬಾಲ್ ಫೆಡರೇಶನ್‌ಗೆ (ವಿಎಫ್‌ಐ) ನೀಡಲಾಗಿದ್ದ ತಾತ್ಕಾಲಿಕ ಮಾನ್ಯತೆಯನ್ನು ಅಂತಾರಾಷ್ಟ್ರೀಯ ವಾಲಿಬಾಲ್ ಫೆಡರೇಶನ್ ತಕ್ಷಣದಿಂದಲೇ ರದ್ದುಪಡಿಸಿದೆ.

ಎಫ್‌ಐವಿಬಿ ತನ್ನ ಪ್ರಕಟಣೆಯಲ್ಲಿ, ಕಾನೂನು ಮತ್ತು ಆಡಳಿತಾತ್ಮಕ ನಿಯಮಗಳನ್ನು ಪಾಲಿಸದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ, ಎಂದು ತಿಳಿಸಿದೆ. ವಿ ಎಫ್ ಐಯ ತಾತ್ಕಾಲಿಕ ಆಡಳಿತವು ಅಗತ್ಯ ನಿಯಮಗಳನ್ನು ಪಾಲಿಸದ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದಾಗಿ, ಆಡಳಿತದಲ್ಲಿ ಸ್ಥಿರತೆ ತರಲು ಸ್ಟಿಯರಿಂಗ್ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯಲ್ಲಿ ರೋಹಿತ್ ರಾಜಪಾಲ್, ರಘುರಾಮ್ ಅಯ್ಯರ್, ಸ್ಟೀವ್ ಟಟ್ಟನ್, ಸ್ಟೀಫನ್ ಬಾಕ್ ಮತ್ತು ಹಿತೇಶ್ ಮಲ್ಹೋತ್ರಾ ಸೇರಿದ್ದಾರೆ. ಈ ಸಮಿತಿಯ ಪ್ರಮುಖ ಗುರಿ ಆಟಗಾರರ ಹಿತಾಸಕ್ತಿ ಕಾಪಾಡುವುದು. ಜೊತೆಗೆ ಆಟಗಾರರ ಆಯೋಗ ರಚನೆ, ರಾಜ್ಯ ಸಂಘಗಳ ಚುನಾವಣೆ ನಡೆಸುವುದು ಮತ್ತು ವಿ ಎಫ್ ಐ ಸಂವಿಧಾನವನ್ನು ಸರಿಪಡಿಸುವ ಜವಾಬ್ದಾರಿಯೂ ಇದೆ. ಇನ್ನೂ ಎಫ್‌ಐವಿಬಿ ತನ್ನ ವಾಲಿಬಾಲ್ ಎಂಪವರ್‌ಮೆಂಟ್ ಯೋಜನೆಯಡಿ ಭಾರತಕ್ಕೆ ಈ ವರ್ಷ ಸುಮಾರು 2.58 ಲಕ್ಷ ಡಾಲರ್ (ಸುಮಾರು 2.4 ಕೋಟಿ ರೂಪಾಯಿ) ನೆರವು ನೀಡಲಿದೆ. ಈ ಹಣವನ್ನು ಆಟಗಾರರ ಅಭಿವೃದ್ಧಿ ಮತ್ತು ರಾಷ್ಟ್ರೀಯ ತಂಡಗಳ ಉತ್ತೇಜನಕ್ಕೆ ಬಳಸಲಾಗುತ್ತದೆ. ಇತ್ತೀಚೆಗೆ, ಅಹಮದಾಬಾದ್‌ನ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಸೌಲಭ್ಯಗಳ ಕೊರತೆ ಕುರಿತು ದೂರು ನೀಡಿದ ನಂತರ, ಭಾರತೀಯ ಆಟಗಾರರಾದ ಆನಂದ್ ಕೆ ಮತ್ತು ಜಾನ್ ಜೋಸೆಫ್ ರಾಷ್ಟ್ರೀಯ ಶಿಬಿರವನ್ನು ತೊರೆದ ಘಟನೆ ಕೂಡ ವಿವಾದಕ್ಕೆ ಕಾರಣವಾಗಿತ್ತು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5962



ಎಡದಿಂದ ಬಲಕ್ಕೆ
1.ಹಾವನ್ನು ಆಭರಣವಾಗುಳ್ಳ ಶಿವ (5)
3. ಭಾಷೆಯೊಂದರ ವರ್ಣ (3)
5.ಉಗ್ರನಿಗೆ ಹತ್ತಿರದಲ್ಲೇ ಕಂಡ ಆಕಾಶಕಾಯ (2)
7.ಅರಿವನ್ನು ಪಡೆ-ಎಚ್ಚರಗೊಳ್ಳು (4)
9.ಅಂಬರೀಷ್-ಆರತಿ ಅಭಿನಯದ ಶರದ ಚಿತ್ರ ತಿರುಗಿದೆ (5)
10.ಇದು ನಿಬಂಧನೆಗಳ ಸಮೂಹ (5)
11.ಇದು ಗಂಡನ ಮನೆ (4)
12.ಕೊಂಚ-ಸ್ವಲ್ಪ ಎಂಬರ್ಥದ ಶಬ್ದ (2)
15.ಕಾನೂನು ಪ್ರಕ್ರಿಯೆಯಲ್ಲಿ ವಾದಿಸುವ ವ್ಯಕ್ತಿ (3)
16.ಹದ್ದಿನ ಚಿತ್ರವಿರುವ ಪತಾಕೆ (5)

ಮೇಲಿನಿಂದ ಕೆಳಕ್ಕೆ
1.ಇದು ಮೂಗಿನ ಆದಿಭಾಗ (3)
2.ನಡತೆಯಲ್ಲಿ ತಲೆಕೆಳಗಾಗಿದೆ (2)
4.ರವಿಯು ಅವಳಿಗೆ ಕೇಳಿಸಿದ ವಾದ್ಯಧ್ವನಿ (3)
6.ದುಡ್ಡಿನ ಯಜಮಾನಿಯಾಗಿ ಲಕ್ಷ್ಮಿ (5)
7.ಹೀನಾರ್ಥದಲ್ಲಿ ಮನುಷ್ಯನ ಮುಖ (2)
8.ಅರಿವು-ಗಮನಕ್ಕೆ ತರುವಿಕೆ (5)
10.ನೀರ ಬಿಂದುಗಳಿಂದ ಕೂಡಿರುವಂಥಾದ್ದು ತಲೆಕೆಳಗಾಗಿದೆ (2)
11.ಚಿಗುರು-ಅಂಕುರದ ಸಮಾನಪದ (3)
13.ತೊಡಕಿನಿಂದ ಕೂಡಿದ್ದು ತಲೆಕೆಳಗಾಗಿದೆ (3)
14.ಮನೆಯನ್ನು ಭದ್ರಪಡಿಸುವ ನೆಂಟ (2)

5961 ಉತ್ತರ

ಎಡದಿಂದ ಬಲಕ್ಕೆ:
1.ಕುಮಾರವ್ಯಾಸ
5.ಮಹಾನಗರ 8.ವೇಷ್ಕಾರ
9.ಗೆಣ್ಣು 10.ಜಯ
11.ವರ 12.ಕಾಸು
14.ದವಸ 15.ರಸಬುರುಡೆ
17.ನರವಾಹನ
ಮೇಲಿನಿಂದ ಕೆಳಕ್ಕೆ :
2.ಮಾದಕವೇಯ 3.ಸಮ
4.ಪರಮೇಶ್ವರ 6.ಹಾವುಗೆ
7.ಚರ 10.ಜಟಭರತ
11.ವಸತಿಗೃಹ
13.ಸುಮಾರು 14.ದಡ
16.ನಡೆ

ಕಿರುಸುದ್ದಿ

ಇಂದಿನಿಂದ ಸಿ.ಇ.ಟಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಮಂಗಳೂರು: ಸಿಇಟಿ ವೃತ್ತಿಪರ ಕೋರ್ಸ್ ಪರೀಕ್ಷೆಗಳು ಏ. 23 ಮತ್ತು 24 ರಂದು ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ 31 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಈ ಸಂದರ್ಭದಲ್ಲಿ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಸುಸೂತ್ರವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ. ಆದೇಶಿಸಿದ್ದಾರೆ.

ಸುಲಿಗೆ ಪ್ರಕರಣ: ಆರೋಪಿ ಬಂಧನ

ಮಂಗಳೂರು: ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯೊಬ್ಬನನ್ನು ಪಣಂಬೂರು ಠಾಣಾ ಪೊಲೀಸರು ಬಂಧಿಸಿದ್ದಾರೆ. ಕಸಬಾ ಬೆಂಗ್ರೆಯ ಚಂದು ಹಾರೀಸ್ (33) ಬಂಧಿತ. ಬಂಧಿತ ಹಾರೀಸ್ ಮತ್ತು ಆರೋಪಿ ಮತ್ತು ಇತರ ಇಬ್ಬರು ಆರೋಪಿಗಳಾದ ಮೊಹಮ್ಮದ್ ಸಿನಾನ್ (24) ಹಾಗೂ ಝುಹೀರ್ ನಿಸಾರ್ (22) ಸೇರಿಕೊಂಡು ಏ.13ರಂದು ತಣ್ಣೀರುಬಾವಿ ಬೀಚ್ ಬಳಿ ಮಡಿಕೇರಿಯ ಅಜಯ್ ಕೆ. ಎಂಬವರನ್ನು ಬೆದರಿಸಿ



ಅವರ ಬಳಿ ಇದ್ದ ಸುಮಾರು 24,500 ರೂ. ಮೌಲ್ಯದ ಸೊತ್ತುಗಳನ್ನು ದೋಚಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದರು. ತಲೆಮರೆಸಿಕೊಂಡಿದ್ದ ಚಂದು ಹಾರೀಸ್‌ನನ್ನು ಬುಧವಾರ ಬಂಧಿಸಲಾಗಿದೆ. ಚಂದು ಚಂದು ಹಾರೀಸ್ ವಿರುದ್ಧ 30 ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಈತನ ವಿರುದ್ಧ ಪಣಂಬೂರು ಠಾಣೆಯಲ್ಲಿ ಈಗಾಗಲೇ ರೌಡಿ ಪಟ್ಟಿ ತೆರೆಯಲಾಗಿದೆ. ಈತನ ವಿರುದ್ಧ ನ್ಯಾಯಾಲಯದಲ್ಲಿ ಹಳೆಯ ಪ್ರಕರಣಗಳಲ್ಲಿ ಮೂರು ವಾರೆಂಟ್‌ಗಳು ಕೂಡ ಜಾರಿಯಾಗಲು ಬಾಕಿ ಇದೆ. ಆರೋಪಿಯನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಆತ್ಮಹತ್ಯೆ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಕೆರೆಕಾಡು ಎಂಬಲ್ಲಿ ಯುವಕನೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮೃತ ಯುವಕನನ್ನು ರಾಘವೇಂದ್ರ (42) ಎಂದು ಗುರುತಿಸಲಾಗಿದೆ. ಮೃತ ರಾಘವೇಂದ್ರ, ಪತ್ನಿ ಜೊತೆ ಮನೆಯಲ್ಲಿ ವಾಸಿಸುತ್ತಿದ್ದು ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ರಾತ್ರಿ ವೇಳೆ ಮನೆಯ ಪಕ್ಕಾಸಿಗೆ ಶಾಲಿನಿಂದ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರು ಮಕ್ಕಳಿಲ್ಲದ ಚಿಂತೆ ಹಾಗೂ ಹಣಕಾಸಿನ ಮುಗ್ಗಟ್ಟಿನಿಂದ ಬಳಲುತ್ತಿದ್ದು ಆತ್ಮಹತ್ಯೆ ಮಾಡಿಕೊಂಡಿರಬೇಕು ಎಂದು ಪೊಲೀಸರು ತಿಳಿಸಿದ್ದಾರೆ. ಪತ್ನಿ ಚಂಚಲ ನೀಡಿದ ದೂರಿನಂತೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪೊಲೀಸ್ ಠಾಣಾ ವ್ಯಾಪ್ತಿಯ ಕೆಎಸ್ ರಾವ್ ನಗರದ ಲಿಂಗಪ್ಪಯ್ಯ ಕಾಡು ಎಂಬಲ್ಲಿ ಮಧ್ವರಾಜ್ (44) ಎಂಬವರು ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ಮಧ್ವರಾಜ್ ಏ. 10 ರಂದು ರಾತ್ರಿ ವಿಪರೀತ ತಲೆನೋವು ಎಂದು ಯಾವುದೋ ಮಾತ್ರೆ ಸೇವಿಸಿ ಅಸ್ವಸ್ಥಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ಮುಕ್ಕ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ ಏ. 21ರಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಮೃತನ ಅಣ್ಣ ದೇವರಾಜ ನೀಡಿದ ದೂರಿನಂತೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೈವದ ಭಂಡಾರ ಮೆರವಣಿಗೆ ವೇಳೆ ಮುರಿದು ಬಿದ್ದ ಕಾಲು ಸಂಕ: ಎಂಟು ಮಂದಿಗೆ ಗಾಯ

ಮೂಡುಬಿದಿರೆ: ಪುಚ್ಚೆಮೊಗರು ಸಮೀಪದ ಹೊಸಬೆಟ್ಟು ಗ್ರಾಪಂ ವ್ಯಾಪ್ತಿಯ ಬಾವದಬೈಲು ಎಂಬಲ್ಲಿ ಬಾವದಗುತ್ತುವಿನಿಂದ ಧರ್ಮನೇಮಕ್ಕೆ ಭಂಡಾರವನ್ನು ಪಲ್ಲಕ್ಕಿಯಲ್ಲಿ ಹೊತ್ತು ಮೆರವಣಿಗೆ ಸಾಗಿಸುತ್ತಿದ್ದಾಗ, ಕಾಲು ಸಂಕ (ಬೀಮ್) ಮುರಿದು ಪಲ್ಲಕ್ಕಿ ಉರುಳಿ ಬಿದ್ದು ಅನೇಕರು ಗಾಯಗೊಂಡಿದ್ದಾರೆ. ದೈವದ ಭಂಡಾರವನ್ನು ತಾಕೋಡೆ ಬರ್ಕೆ ಧರ್ಮನೇಮಕೆ ಕೊಂಡೊಯ್ಯುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ಕೊಂಬು ಮತ್ತು ಬ್ಯಾಂಡ್ ವಾದ್ಯಗಳೊಂದಿಗೆ ಮೆರವಣಿಗೆ ನಡೆಯುತ್ತಿತ್ತು. ತಾಕೋಡೆ ಬರ್ಕೆ ಅಮ್ಮಿ ಕೋಟ್ಯಾನ್ ಎಂಬವರ ಮನೆಯಲ್ಲಿ ಬುಧವಾರ ರಾತ್ರಿ ನಡೆಯಲಿದ್ದ ಕೊಡಮಣಿತ್ತಾಯ ದೈವದ ಧರ್ಮನೇಮಕ್ಕೆ ಸಾನದಗುಡ್ಡೆ ಪಡಿಹೊಡಿಬೆಟ್ಟ ದೈವಸ್ಥಾನದಿಂದ ಭಂಡಾರ ಮೆರವಣಿಗೆ ಹೋಗುತ್ತಿದ್ದ ವೇಳೆ ಕಾಲು ಸಂಕ ಮುರಿದು ಬಿತ್ತು ಭಂಡಾರದ ಪಲ್ಲಕ್ಕಿ ಹೊತ್ತಿದ್ದವರ ಪೈಕಿ ಹರೀಶ್ ಎಂಬವರ ಎರಡು ಕಾಲು ಮುರಿದಿದೆ. ದೈವದ ಮುಕ್ಕಾಲ್ದಿ ಸುನೀಲ್ ಶೆಟ್ಟಿ ಮಾರೂರು ಎಂಬವರಿಗೂ ತೀವ್ರ ಸ್ವರೂಪದ ಗಾಯಗಳಾಗಿವೆ. ಉಳಿದಂತೆ ರಾಜೇಶ್, ಯಶೋಧರ್, ಅಶೋಕ್, ದಿನೇಶ್, ಪ್ರವೀಣ್ ಶೆಟ್ಟಿ, ಲೋಕೇಶ್, ಉದಯ ಎಂಬವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು ಮೂಡಬಿದಿರೆ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಕಾಲು ಸಂಕವನ್ನು ಸುಮಾರು 50 ವರ್ಷಗಳ ಹಿಂದೆ ನಿರ್ಮಿಸಿದ್ದು ಶಿಥಿಲಗೊಂಡಿತ್ತು.

ನಡು ರಸ್ತೆಯಲ್ಲಿ ಬಾಕಿಯಾದ ಕೆಎಸ್ಸಾರ್ಟಿಸಿ ಬಸ್

ಸುಳ್ಯ: ಪೈಚಾರು ಎಂಬಲ್ಲಿ ಸುಳ್ಯದಿಂದ ಪುತ್ತೂರಿಗೆ ತೆರಳುತ್ತಿದ್ದ ಕೆಎಸ್ಸಾರ್ಟಿಸಿ ಬಸ್ಸು ಎಂಜಿನ್ ಆಫ್ ಆಗಿ ರಸ್ತೆ ಮಧ್ಯೆ ನಿಂತು ಟ್ರಾಫಿಕ್ ಜಾಮ್ ಉಂಟಾದ ಘಟನೆ ಮಂಗಳವಾರ ಸಂಜೆ ನಡೆದಿದೆ. ಇದರಿಂದಾಗಿ ಹಿಂಭಾಗದಲ್ಲಿ ಬರುತ್ತಿದ್ದ ಐರಾವತ ಬಸ್ ಸಿಲುಕಿ ಮುಂದೆ ಸಂಪರ್ಕಿಸಲು ರಸ್ತೆಯಿಲ್ಲದೇ ಇಲ್ಲದೆ ಕೆಲಕಾಲ ಟ್ರಾಫಿಕ್ ಸಮಸ್ಯೆ ಉಂಟಾಯಿತು. ಬಳಿಕ ಸ್ಥಳೀಯ ನಿವಾಸಿಗಳು ಬಸ್ಸನ್ನು ದೂಡಿ ಬದಿಗೆ ಸರಿಸಲು ಸಹಕರಿಸಿ ಬಳಿಕ ಸುಗಮ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ಇದೀಗ ಪದೇ ಪದೇ ರಾಜ್ಯದ ನಾನಾ ಭಾಗಗಳಲ್ಲಿ ಇಂತಹ ಸನ್ನಿವೇಶಗಳು ಕಂಡು ಬರುತ್ತಿದ್ದು ನಿಗಮ ಎಚ್ಚೆತ್ತುಕೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಶಿಮಂತೂರು ಮೈದಾನದಲ್ಲಿ ನಡೆದ ಕ್ರೀಡಾಕೂಟ | ಕಮಲಶಿಲೆ ಪ್ರಥಮ, ಧರ್ಮಸ್ಥಳ ರನ್ನರ್ ಅಪ್

ರಂಜಿಸಿದ ಯಕ್ಷ ಕಲಾವಿದರ ಕ್ರಿಕೆಟ್ ಪಂದ್ಯಾಟ





ಡಾ. ಹರಿಕೃಷ್ಣ ಪುನರೂರು ಅವರು ಬ್ಯಾಟಿಂಗ್ ಮಾಡುವ ಮೂಲಕ ಕ್ರಿಕೆಟ್ ಪಂದ್ಯಾಟಕ್ಕೆ ಚಾಲನೆ, ಪ್ರಥಮ ಪ್ರಶಸ್ತಿ ಪಡೆದ ಕಮಲಶಿಲೆ ಮೇಳ ಹಾಗೂ ರನ್ನರ್ ಅಪ್ ಆದ ಧರ್ಮಸ್ಥಳ ಮೇಳ ಟ್ರೋಫಿಯೊಂದಿಗೆ

ಕಟೀಲು : ಯಕ್ಷಗಾನ ರಂಗಸ್ಥಳದಲ್ಲಿ ವಿವಿಧ ವೇಷಗಳನ್ನು ಧರಿಸಿ ಯಕ್ಷಾಭಿಮಾನಿಗಳನ್ನು ರಂಜಿಸುತ್ತಿದ್ದ ಯಕ್ಷಗಾನ ಕಲಾವಿದರ ಕ್ರೀಡಾಸಕ್ತಿ ಮತ್ತೊಮ್ಮೆ ಬಯಲಾಗಿದೆ.

ಶಿಮಂತೂರು ಮೈದಾನದಲ್ಲಿ ನಡೆದ ಉಭಯ ಜಿಲ್ಲೆಗಳ ಯಕ್ಷಗಾನ ಮೇಳಗಳ ಕಲಾವಿದರ ಎರಡನೇ ವರ್ಷದ ಕ್ರಿಕೆಟ್ ಪಂದ್ಯಕೂಟದಲ್ಲಿ ವೇಷಧಾರಿಗಳು ಉತ್ಸಾಹದಿಂದ ಪಾಲ್ಗೊಂಡು ಆಟಕ್ಕೂ ಸೈ, ಕ್ರಿಕೆಟ್ ಆಟಕ್ಕೂ ಸೈ ಎಂದು ತೋರಿಸಿಕೊಟ್ಟರು.

ದೇವಿ, ಮಹಿಷ, ಚಂಡ ಮುಂಡ, ರಾಮ, ಕೃಷ್ಣ ರಾವಣ, ನಂದಿನಿ, ಮೋಹಿನಿ, ಅರ್ಜುನ ಭೀಮ ಹೀಗೆ ದಿನಪ್ರತಿ ನಾನಾ ವೇಷಗಳನ್ನು ಮಾಡುತ್ತ ಜನಪ್ರಿಯರಾಗಿದ್ದ ಕಲಾವಿದರು ಮಂಗಳವಾರ ಕ್ರಿಕೆಟ್ ಬ್ಯಾಟ್ ಬಾಲ್ ಹಿಡಿದು ಆಟವಾಡಿ ಸಂಭ್ರಮಿಸಿದರು.

ಯಕ್ಷಗಾನ ಕಲಾವಿದರಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿರುವ ಉಡುಪಿ ಯಕ್ಷಗಾನ ಕಲಾರಂಗದ ವತಿಯಿಂದ ಈ ಕ್ರೀಡಾಕೂಟಕ್ಕೆ ಪ್ರೋತ್ಸಾಹ ನೀಡುತ್ತಿದ್ದೇವೆ ಎಂದು ಕಲಾರಂಗದ ಕಾರ್ಯದರ್ಶಿ ಮುರಳೀ ಕಡೇಕರ್ 20 ಸಾವಿರ ರೂಪಾಯಿಯನ್ನು ನೀಡಿದರು. ಮುಂದಿನ ವರುಷ ಉಭಯ ಜಿಲ್ಲೆಗಳ ಮೂವತ್ತಕ್ಕೂ ಹೆಚ್ಚು ಮೇಳಗಳ ಕಲಾವಿದರನ್ನು ಒಟ್ಟು ಗೂಡಿಸಿ, ಕ್ರೀಡಾಕೂಟ ನಡೆಸುವ ಯೋಚನೆ ಇದೆ ಎಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಅಗರಿ ರಾಘವೇಂದ್ರ ರಾವ್, ಜಯಂತ ಅಮೀನ್ ಕೆರೆಕಾಡು, ರಘುನಾಥ ಶೆಟ್ಟಿ, ರಾಮ್ ಪ್ರಸಾದ್, ಪ್ರಮೋದ್ ತಂತ್ರಿ, ಸೂರಜ್ ರಾವ್, ಶ್ರೀವತ್ಸ ಕಟೀಲು, ದಿವಾಣ ದುರ್ಗಾಪ್ರಸಾದ್, ಮೋಹನ್ ಕುಮಾರ್ ಅಮ್ಮುಂಜೆ, ಅಶೋಕ ಕೊಂಡೇಲ, ವಿಷ್ಣುಪ್ರಸಾದ್ ಕಲ್ಲೂರಾಯ, ಪ್ರಥಮ್ ಮೂಡಿತ್ತಾಯ, ಪೃಥ್ವಿರಾಜ್ ಮತ್ತಿತರರಿದ್ದರು. ಉದ್ಘಾಟನೆ ಸಮಾರಂಭದಲ್ಲಿ ಹರಿಕೃಷ್ಣ

» ಮುಂದಿನ ವರುಷ ಉಭಯ ಜಿಲ್ಲೆಗಳ ಮೂವತ್ತಕ್ಕೂ ಹೆಚ್ಚು ಮೇಳಗಳ ಕಲಾವಿದರನ್ನು ಒಟ್ಟು ಗೂಡಿಸಿ, ಕ್ರೀಡಾಕೂಟ ನಡೆಸುವ ಯೋಚನೆ

» ವಿವಿಧ ಮೇಳಗಳ 160ಕ್ಕೂ ಹೆಚ್ಚು ಕಲಾವಿದರು ಈ ಕ್ರಿಕೆಟ್ ಪಂದ್ಯಕೂಟದಲ್ಲಿ ಭಾಗವಹಿಸಿದ್ದರು.

ಪುನರೂರು, ಭುವನಾಭಿರಾಮ ಉಡುಪ, ಐಕಳ ಗಣೇಶ್ ಶೆಟ್ಟಿ, ಅಜಿತ್ ಕೆರೆಕಾಡು, ದೊಡ್ಡಯ್ಯ ಮೂಲ್ಯ ಕಟೀಲು ಮುಂತಾದವರಿದ್ದರು. ಶ್ರುತಕೀರ್ತಿರಾಜ ನಿರೂಪಿಸಿದರು.

ಕಟೀಲು ಮೇಳಗಳ ಕಲಾವಿದರಾದ ರಾಮಪ್ರಕಾಶ್ ಕಲ್ಲೂರಾಯ, ಸಂದೇಶ್ ಬೆಳ್ಳೂರು, ರಾಜೇಶ್ ಕಟೀಲ್ ಸೇರಿದಂತೆ ಕಟೀಲು ಮೇಳದ ಕಲಾವಿದರ ಉತ್ಸಾಹದಲ್ಲಿ ಕಳೆದ ವರ್ಷದಂತೆ ಕ್ರಿಕೆಟ್ ಪಂದ್ಯಕೂಟ ಆಯೋಜಿಸಲಾಗಿತ್ತು.

ಆಟದಲ್ಲಿ ಕಮಲಶಿಲೆ ಮೇಳ ಪ್ರಥಮ ಸ್ಥಾನಿಯಾಗಿ ಶ್ರೀದುರ್ಗಾ ಟ್ರೋಫಿಯನ್ನು ಗೆದ್ದರೆ, ಧರ್ಮಸ್ಥಳ ಮೇಳ ರನ್ನರ್ ಅಪ್ ಪ್ರಶಸ್ತಿ ಪಡೆಯಿತು. ತೃತೀಯ ಸ್ಥಾನಿಯಾಗಿ ಕಟೀಲು ಐದನೇ ಮೇಳ, ನಾಲ್ಕನೇ ಸ್ಥಾನಿಯಾಗಿ ಕಟೀಲು ಮೂರನೇ ಮೇಳದ ಥ್ರೀ ಇಲೆವೆನ್ ಗುರುತಿಸಲ್ಪಟ್ಟರು. ವಿವಿಧ ಮೇಳಗಳ 160ಕ್ಕೂ ಹೆಚ್ಚು ಕಲಾವಿದರು ಈ ಕ್ರಿಕೆಟ್ ಪಂದ್ಯಕೂಟದಲ್ಲಿ ಭಾಗವಹಿಸಿದ್ದರು.

ಕಟೀಲು 1ನೇ ಮೇಳ ಸಮುದ್ರ ವಾರಿಯರ್ಸ್, ಮೂರನೇ ಮೇಳ ಕಟೀಲು 3 ಇಲೆವೆನ್, ಕಟೀಲು ನಾಲ್ಕನೇ ಮೇಳ ನ ಒದಿನೀ ಸ್ಕಟ್ರೈರ್ಸ್, ಐದನೇ ಮೇಳದ ಭ್ರಾಮರೀ ಸ್ಟ್ರೈಕರ್ಸ್, ಏಳನೇ ಮೇಳದ ವಜ್ರದುಂಬಿ ಸೆವೆನ್, ಕಮಲಶಿಲೆ, ಧರ್ಮಸ್ಥಳ, ಬೆಂಕಿನಾಥೇಶ್ವರ ಮೇಳಗಳು ಭಾಗವಹಿಸಿದ್ದ ಈ ಪಂದ್ಯಕೂಟದಲ್ಲಿ ಉತ್ತಮ ದಾಂಡಿಗ ಜಿತೇಶ್ ಕೋಳ್ಯೂರು, ಮೂರನೇ ಮೇಳದ ಮದ್ದೆಗಾರ, ಉತ್ತಮ ಬೌಲರ್ ಭರತೇಶ್ ಶೆಟ್ಟಿಗಾರ್. ಆಲ್ ರೌಂಡರ್ ಸುಬ್ರಹ್ಮಣ್ಯ ಆಚಾರ್ಯ, ಧರ್ಮಸ್ಥಳ ಮೇಳದಲ್ಲಿ ಆಡಿದ ಐಕೋನ್ ಆಟಗಾರ ಸುಬ್ರಹ್ಮಣ್ಯ ಆಚಾರ್ಯ, ಹಿರಿಯಡ್ಕ ಮೇಳದ ಅಮೃತ್ ಕಟೀಲು ಮೂರನೇ ಮೇಳದ ಐಕೋನ್ ಆಟಗಾರ ಮ್ಯಾನ್ ಆಫ್‌ದ ಸೀರೀಸ್, ಬೆಸ್ಟ್ ಫರ್ಮಾರ್ಮರ್ ಕಮಲಶಿಲೆ ಮೇಳದ ವಿಶ್ವನಾಥ ಹೆನ್ನಬೈಲ್ ಬಹುಮಾನ ಪಡೆದರು.

ಕಟೀಲು ಮೇಳಗಳ ನೇಪಥ್ಯ ಕಲಾವಿದರಿಗಾಗಿ ಆಯೋಜಿಸಿದ ಕ್ರಿಕೆಟ್ ಪಂದ್ಯಕೂಟದಲ್ಲಿ ಏಳನೇ ಮೇಳದ ವಜ್ರದುಂಬಿ ಬಿ. ತಂಡ ಪ್ರಥಮ, ಅದೇ ಮೇಳದ ಎ ತಂಡ ದ್ವಿತೀಯ ಸುದೀಪ್ ಉತ್ತಮ ದಾಂಡಿಗ, ಉತ್ತಮ ಎಸೆತಗಾರ ನಿತಿನ್, ಉತ್ತಮ ಆಲ್ ರೌಂಡರ್ ಪ್ರಶಾಂತ್ ಆಯ್ಕೆಯಾದರು.

ಕಳೆದ ವರ್ಷವೂ ಕಮಲಶಿಲೆ ಮೇಳವೇ ವಿಜೇತವಾಗಿತ್ತು.

ತಡೆಗೋಡೆ ಕುಸಿದು ಕಾರುಗಳ ಜಖಂ | ಉರುಳಿ ಬಿದ್ದ ಮರ

ದ.ಕ.ದ ಹಲವೆಡೆ ಗುಡುಗು ಸಹಿತ ಮಳೆ; ಹಲವೆಡೆ ಹಾನಿ





ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಹಲವೆಡೆ ಬುಧವಾರ ನಸುಕಿನ ವೇಳೆ ಗುಡುಗು ಸಹಿತ ಮಳೆಯಾಗಿದೆ. ಸತತವಾಗಿ ಸುರಿದ ಮಳೆಯ ಪರಿಣಾಮವಾಗಿ ಹಲವೆಡೆ ಹಾನಿಯೂ ಉಂಟಾಗಿದೆ.

ಮಂಗಳೂರಿನ ಅತ್ತಾವರದಲ್ಲಿ ತಡೆಗೋಡೆ ಕುಸಿದ ಪರಿಣಾಮ ತಡೆಗೋಡೆ ಬಳಿ ನಿಲ್ಲಿಸಿದ್ದ ಐದು ಕಾರುಗಳು ಜಖಂಗೊಂಡಿವೆ. ಇಲ್ಲಿನ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಬ್ರಹ್ಮಕಲಶ ಕಾರ್ಯಕ್ರಮಕ್ಕೆ ಸಿದ್ಧತೆ ನಡೆಯುತ್ತಿದ್ದರಿಂದ ತಡೆಗೋಡೆ ಪಕ್ಕದಲ್ಲಿ ಸ್ಥಳೀಯರು ತಮ್ಮ ಕಾರುಗಳನ್ನು ಪಾರ್ಕ್ ಮಾಡಿದ್ದರು. ಭಾರೀ ಮಳೆ ಹಾಗೂ ಗಾಳಿಯ ಆರ್ಭಟಕ್ಕೆ ತಡೆಗೋಡೆ ಕುಸಿದು ಅಪಾರ ಹಾನಿಯಾಗಿದೆ. ಅಲ್ಲದೆ ನಗರದ ರಥಬೀದಿ ಬಳಿಯ ಬಸವನಗುಡಿ ಮಠದ ಬಳಿ ಬೃಹತ್ ಅಶ್ವತ್ಥ ಮರವೊಂದು ಮನೆಯೊಂದರ ಮೇಲೆ ಉರುಳಿ ಬಿದ್ದು ಮನೆ ಭಾಗಶಃ ಹಾನಿಯಾಗಿದೆ. ಹೆಂಚಿನ ಮನೆ ಇದಾಗಿದ್ದು, ಮನೆಯಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ಸಿಡಿಲಾರ್ಭಟ ಜೋರು

ಜಿಲ್ಲೆಯ ಬೆಳ್ತಂಗಡಿ, ಪುತ್ತೂರು, ಬಂಟ್ವಾಳ ಸುತ್ತಮುತ್ತ ಸಿಡಿಲಿನ ಆರ್ಭಟ ಜೋರಾಗಿತ್ತು. ಮಂಗಳೂರು ನಗರದ ಕದ್ರಿ, ಉರ್ವಾ ಪರಿಸರದಲ್ಲಿ ಭಾರೀ ಮಳೆಯಾಗಿದೆ. ಐಎಂಡಿ ಮಾಹಿತಿಯಂತೆ ದ.ಕ. ಜಿಲ್ಲೆಯಲ್ಲಿ ಬುಧವಾರ ಬೆಳಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಕರಾವಳಿಯಲ್ಲಿ 6.3 ಸರಾಸರಿ ಮಳೆಯಾಗಿದ್ದು, ಮೂಡುಬಿದಿರೆ 5.3 ಮಿ.ಮೀ ಹಾಗೂ ಸುಳ್ಯದಲ್ಲಿ 6.2 ಮಿ.ಮೀ, ಪುತ್ತೂರಿನಲ್ಲಿ 4.1 ಮಿ.ಮೀ, ಮಂಗಳೂರು 1.8 ಮಿ.ಮೀ, ಬೆಳ್ತಂಗಡಿ 7.1 ಮಿ.ಮಿ, ಕಡಬ 1.7 ಮಿ.ಮಿ, ಬಂಟ್ವಾಳ 6.5 ಮಿ.ಮೀ ಮಳೆಯಾಗಿದೆ.

ಮಂಗಳೂರಿನಲ್ಲಿ ನಾರಿ ಹಕ್ಕು ಹೋರಾಟ ಸಮಿತಿ ಪ್ರತಿಭಟನೆ

ಕಾಂಗ್ರೆಸ್ ಮನಸ್ಥಿತಿ ಅನಾವರಣ



ಮಂಗಳೂರು: ನಾರಿ ಹಕ್ಕು ಹೋರಾಟ ಸಮಿತಿ ವತಿಯಿಂದ ಬುಧವಾರ ನಗರದ ಕ್ಲಾಕ್ ಟವರ್ ಬಳಿ ಮಹಿಳೆಯರ ಸಬಲೀಕರಣ, ಸಮಾನತೆ ಹಾಗೂ ನ್ಯಾಯದ ಕುರಿತು ಜಾಗೃತಿ ಮೂಡಿಸಲು ಮತ್ತು ಶೇ.33 ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತರಲು ಅಡ್ಡಿಯಾದ ವಿರೋಧ ಪಕ್ಷಗಳ ವಿರುದ್ಧ ಜನಜಾಗೃತಿ ಸಭೆ ನಡೆಯಿತು.

ಸಭೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಪ್ರಮುಖರು, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕಾರ್ಯಕರ್ತರು ಸೇರಿದಂತೆ ಹಲವು ಮಂದಿ ಪಾಲ್ಗೊಂಡು ಕೇಂದ್ರದಲ್ಲಿ ನಾರಿಶಕ್ತಿ ವಂದನ್ ಮಸೂದೆಗೆ ವಿರೋಧ ಪಕ್ಷಗಳು ಬೆಂಬಲ ನೀಡದಿರುವ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸುಳ್ಯ ವಿಧಾನಸಭಾ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ, ನಾರಿಶಕ್ತಿ ವಂದನ್ ಮಸೂದೆಗೆ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಬೆಂಬಲ ನೀಡದಿರುವುದು ಅವರ ಮನಸ್ಥಿತಿಯನ್ನು ತೋರಿಸುತ್ತದೆ. ಮಹಿಳೆಯರ ಪರ ನಿಲ್ಲದ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಹೋರಾಟ ನಿಲ್ಲುವುದಿಲ್ಲ. ನಾರಿಶಕ್ತಿ ವಂದನ್ ಮಸೂದೆ ಅಂಗೀಕಾರ ಆಗುವವರೆಗೂ ನಾರಿಶಕ್ತಿ ಹೋರಾಟ ಮುಂದುವರೆಯಲಿದೆ ಎಂದು ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ವಕೀಲೆ ಸಹನಾ ಕುಂದರ್ ಮಾತನಾಡಿ, ಮಸೂದೆ ಜಾರಿಯಾಗುವ ನಿರೀಕ್ಷೆಯಿತ್ತು. ಆದರೆ ಮಹಿಳಾ ವಿರೋಧಿಗಳು ಅವಕಾಶ ನೀಡದೆ ಅವಮಾನ ಮಾಡಿದ್ದಾರೆ. ಕಳೆದ ಶುಕ್ರವಾರ ದೇಶಕ್ಕೆ ಕರಾಳ ದಿನ. ಅದೆಷ್ಟೋ ಮಹಿಳೆಯರ ಆಸೆಯನ್ನು ವಿರೋಧ ಪಕ್ಷಗಳು ನಿರಾಸೆಗೊಳಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



“ಸಂಸತ್ ಅಧಿವೇಶನದಲ್ಲಿ ನಾರಿಶಕ್ತಿ ವಂದನ್ ಮಸೂದೆ ಬೆಂಬಲ ದೊರೆತು ಜಾರಿಯಾಗುವ ನಿರೀಕ್ಷೆಯನ್ನು ದೇಶದ ಮಹಿಳೆಯರು ಹೊಂದಿದ್ದರು. ಆದರೆ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಅದಕ್ಕೆ ತಣ್ಣೀರೆರಚಿವೆ. ನಾವೆಲ್ಲರೂ ಮಹಿಳೆಯರ ಪರವಾಗಿದ್ದೇವೆ, ಮಹಿಳೆಯರು ಸಮಾಜದಲ್ಲಿ ಮುಂದೆ ಬರಬೇಕು. ಮಸೂದೆ ಪರವಾಗಿ ವಿಧಾನಸೌಧ, ಸಂಸತ್ತಿನಲ್ಲಿಯೂ ಪ್ರತಿಭಟನೆ ನಡೆಸಲು ನಾರಿಶಕ್ತಿ ಸಿದ್ಧವಿದೆ.

■ ಭಾಗೀರಥಿ ಮುರುಳ್ಯ, ಸುಳ್ಯ ಶಾಸಕಿ

» ಮಹಿಳೆಯರ ಪರ ನಿಲ್ಲದ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಿದೆ

ಕೊಡಗಿನ ಹೋಂಸ್ಟೇಯಲ್ಲಿ ವಿದೇಶಿ ಮಹಿಳೆ ಮೇಲೆ ಅತ್ಯಾಚಾರ: ಇಬ್ಬರ ಬಂಧನ



ಮಡಿಕೇರಿ: ವಿದೇಶಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಕುಟ್ಟ ಗ್ರಾಮದ ದೇವಿ ವಿಲ್ಲಾ ಎಂಬ ಹೋಂಸ್ಟೇಯಲ್ಲಿ ಅಮೇರಿಕಾದ ವಾಷಿಂಗ್ಟನ್ ಮೂಲದ ಮಹಿಳೆಯ ಮೇಲೆ ಹೋಂಸ್ಟೇಯ ಕೇರ್ ಟೇಕರ್, ಜಾರ್ಖಂಡ್ ಮೂಲದ ವೃಜೇಶ್ ಎಂಬಾತ ಅತ್ಯಾಚಾರ ನಡೆಸಿರುವುದಾಗಿ ಹೇಳಲಾಗಿದೆ.

ಸಿಹಿ ಪಾನಕದಲ್ಲಿ ಮತ್ತು ಬರುವ ಔಷಧಿ ಬೆರೆಸಿದ ಬಳಿಕ ಅತ್ಯಾಚಾರ ನಡೆದಿರುವುದಾಗಿ ಸಂತ್ರಸ್ತ ಮಹಿಳೆ ಉಲ್ಲೇಖಿಸಿದ್ದು, ಕೆಲವು ದಿನಗಳ ಹಿಂದೆ (ಏ.12) ನಡೆದಿರುವ ಈ ಘಟನೆಯನ್ನು ಮುಚ್ಚಿ ಹಾಕಲು ಹೋಂಸ್ಟೇ ಮಾಲಕ ವಿಶಾಲ್, ಜನಪ್ರತಿನಿಧಿಯೊಬ್ಬರ ಮೂಲಕ ಭಾರೀ ಯತ್ನ ನಡೆಸಿದ್ದಾಗಿ ತಿಳಿದು ಬಂದಿದೆ.

ಘಟನೆ ನಡೆದ ಬಳಿಕ ಮೂರು ದಿನ ಸಂತ್ರಸ್ತೆ ಯಾರನ್ನೂ ಸಂಪರ್ಕಿಸದಿರಲು ವೈಫೈ ಸೌಲಭ್ಯವನ್ನು ಹೋಂಸ್ಟೇ ಮಾಲಕ ಸ್ಥಗಿತಗೊಳಿಸಿದ್ದರೆಂಬ ಆರೋಪವೂ ಕೇಳಿ ಬಂದಿದ್ದು, ಮೂರು ದಿನದ ಬಳಿಕ ತಾನು ಮೈಸೂರಿಗೆ ತೆರಳುವುದಾಗಿ ಹೇಳಿ ಹೊರಟ ಸಂತ್ರಸ್ತೆ, ಬಳಿಕ ಅಮೇರಿಕಾದಲ್ಲಿರುವ ರಾಯಭಾರಿ ಕಚೇರಿಗೆ ಈ ಕುರಿತು ಮಾಹಿತಿ ನೀಡಿದ್ದಾರೆ.

ಸಮಗ್ರ ತನಿಖೆಗೆ ಸಚಿವ ಎನ್ ಎಸ್ ಭೋಸರಾಜು ಸೂಚನೆ

ಕೊಡಗು ಜಿಲ್ಲೆಯ ಕುಟ್ಟದಲ್ಲಿರುವ ಖಾಸಗಿ ಹೋಂಸ್ಟೇಯಲ್ಲಿ ಅಮೆರಿಕಾ ಮೂಲದ ಮಹಿಳೆಯೊಬ್ಬರ ಮೇಲೆ ನಡೆದಿರುವ ದೌರ್ಜನ್ಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್ ಎಸ್ ಭೋಸರಾಜು ಅವರು, ಈ ಕುರಿತು ಶೀಘ್ರವೇ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ. ಘಟನೆ ಬೆಳಕಿಗೆ ಬರುತ್ತಿದ್ದಂತೆಯೇ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಸಚಿವರು, ಪ್ರಕರಣದ ವಿವರಗಳನ್ನು ಪಡೆದುಕೊಂಡರು. ಕೊಡಗು ಜಿಲ್ಲೆಯು ಪ್ರವಾಸೋದ್ಯಮಕ್ಕೆ ವಿಶ್ವಮಟ್ಟದಲ್ಲಿ ಹೆಸರುವಾಸಿಯಾಗಿದೆ. ಇಂತಹ ಅಹಿತಕರ ಘಟನೆಗಳಿಂದ ಜಿಲ್ಲೆಯ ಘನತೆ ಹಾಗೂ ಪ್ರವಾಸೋದ್ಯಮದ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

» ಹೋಂಸ್ಟೇಯಲ್ಲಿ ಅಮೇರಿಕಾದ ವಾಷಿಂಗ್ಟನ್ ಮೂಲದ ಮಹಿಳೆಯ ಮೇಲೆ ಹೋಂಸ್ಟೇಯ ಕೇರ್ ಟೇಕರ್, ಜಾರ್ಖಂಡ್ ಮೂಲದ ವೃಜೇಶ್ ಎಂಬಾತ ಅತ್ಯಾಚಾರ ನಡೆಸಿರುವುದಾಗಿ ಹೇಳಲಾಗಿದೆ.

» ಸಿಹಿ ಪಾನಕದಲ್ಲಿ ಮತ್ತು ಬರುವ ಔಷಧಿ ಬೆರೆಸಿದ ಬಳಿಕ ಅತ್ಯಾಚಾರ ನಡೆದಿರುವುದಾಗಿ ಸಂತ್ರಸ್ತ ಮಹಿಳೆ ಉಲ್ಲೇಖಿಸಿದ್ದಾರೆ.

» ಪ್ರಕರಣ ದಾಖಲಾಗಿ, ಹೋಂಸ್ಟೇ ಮಾಲಕ ವಿಶಾಲ್ ಹಾಗೂ ಅತ್ಯಾಚಾರದ ಆರೋಪಿ ವೃಜೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಅಮೇರಿಕಾದ ರಾಯಭಾರ ಕಚೇರಿ ಅಧಿಕಾರಿಗಳು ಮೈಸೂರಿನಲ್ಲಿನಲ್ಲಿರುವ ಪೊಲೀಸ್ ಅಧಿಕಾರಿಗಳನ್ನು ಇಮೇಲ್ ಮೂಲಕ ಸಂಪರ್ಕಿಸಿದ ಮೇರೆಗೆ, ಅಲ್ಲಿನ ಹಿರಿಯ ಅಧಿಕಾರಿಗಳ ಸೂಚನೆಯನ್ವಯ ಇದೀಗ ಪ್ರಕರಣ ದಾಖಲಾಗಿ, ಹೋಂಸ್ಟೇ ಮಾಲಕ ವಿಶಾಲ್ ಹಾಗೂ ಅತ್ಯಾಚಾರದ ಆರೋಪಿ ವೃಜೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳನ್ನು ಮೇ 3ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಿಲ್ಲಿ ಹಾಗೂ ಚೆನ್ನೈನ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಈಗಾಗಲೇ ಕೊಡಗಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಪ್ರಕರಣದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ



ದಕ್ಷಿಣ ಕನ್ನಡ 36⁰ 26⁰ | ಉಡುಪಿ 33⁰ 27⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 23, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಭಗವಂತನಲ್ಲಿ ಸ್ವಾರ್ಥ ರಹಿತ ಪ್ರಾರ್ಥನೆ ಇರಲಿ: ಪದ್ಮರಾಜ್



ಪುಟ 7

ಕಾಸರಗೋಡಿನಲ್ಲಿ ಇನ್ನೂ ಪೂರ್ಣಗೊಳ್ಳದ ಮಳೆಗಾಲ ಪೂರ್ವಸಿದ್ಧತೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನಡೆದ ಬಲಿ ಉತ್ಸವ







ಕಾಸರಗೋಡು ಜಿಲ್ಲೆಯ ಬದಿಯಡ್ಕ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ನಡೆಯುತ್ತಿದ್ದು, ಇದರ ಅಂಗವಾಗಿ ಬುಧವಾರ ಶ್ರೀ ದೇವರ ಬಲಿ ಉತ್ಸವವು ಭಕ್ತಿಶ್ರದ್ಧೆಯಿಂದ ಜರಗಿತು. ಧಾರ್ಮಿಕ ವೈದಿಕ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು. ಇಂದು ಶ್ರೀ ದೇವರ ಪ್ರತಿಷ್ಠೆ ನಡೆಯಲಿದೆ.

ಸುತ್ತ ಮುತ್ತ

ಬಂದಾರು ಗ್ರಾಮದಲ್ಲಿ ಹಗಲಿನಲ್ಲೇ ಕಾಡಾನೆ ಪ್ರತ್ಯಕ್ಷ: ಜನತೆಗೆ ಆತಂಕ



ಉಪ್ಪಿನಂಗಡಿ: ಕಳೆದ ಹಲವಾರು ದಿನಗಳಿಂದ ರಾತ್ರಿ ವೇಳೆ ಸಂಚರಿಸುತ್ತಿದ್ದ ಕಾಡಾನೆಯೊಂದು ಬುಧವಾರ ಬಂದಾರು ಗ್ರಾಮದ ಬಟ್ಲಡ್ಕ ಎಂಬಲ್ಲಿ ಸಂಜೆ ವೇಳೆ ನದಿ ಬದಿಯಲ್ಲಿ ಕಾಣಿಸಿಕೊಂಡು ಜನತೆಯಲ್ಲಿ ಭೀತಿ ಮೂಡಿಸಿತ್ತು. ಕಳೆದ ಹಲವು ದಿನಗಳಿಂದ ಬಂದಾರು ಗ್ರಾಮ, ನೀರಕಟ್ಟೆ, ಬಜತ್ತೂರು ಗ್ರಾಮದ ಪ್ರದೇಶಗಳಲ್ಲಿ ರಾತ್ರಿ ವೇಳೆ ಸಂಚರಿಸಿ ಕೃಷಿ ಬೆಳೆಗಳನ್ನು ಹಾನಿಗೊಳಿಸುತ್ತಿತ್ತು. ಈ ಮಧ್ಯೆ ಬುಧವಾರ ಬಂದಾರು ಗ್ರಾಮದ ಬಟ್ಲಡ್ಕ ಎಂಬಲ್ಲಿನ ಹೊಳೆಯಲ್ಲಿ ಕಾಡನೆಯೊಂದು ನದಿಯಲ್ಲಿ ಮಿಂದುಂಡು ಸಂಭ್ರಮಿಸುತ್ತಿದ್ದು ಕಂಡುಬಂದಿದೆ.

ಬೆಲೆ ಏರಿಕೆಯ ನಿರೀಕ್ಷೆಯಲ್ಲಿದ್ದಾರೆ ಬೆಳೆಗಾರರು

ಖುಷಿ ನೀಡೀತೇ ಕೊಕ್ಕೋ?

ಮಾರುಕಟ್ಟೆ 'ಧಾರಣೆ'ಯತ್ತ ಹೆಚ್ಚಿದೆ ಈಗ ಚಿತ್ತ

ಪುತ್ತೂರು: ಕರಾವಳಿಯ ಪ್ರಮುಖ ಉಪ ಬೆಳೆ, ಆಹಾರ ಬೆಳೆ ಕೊಕ್ಕೋಧಾರಣೆ ಕಳೆದ ಎರಡು ವರ್ಷಗಳಲ್ಲಿ ಬಿರುಸಿನ ಏರಿಕೆ ಕಂಡು ಕೆಲವು ಸಮಯದಿಂದ ಇಳಿಕೆಯಾಗಿತ್ತು. ಬದಲಾದ ಸನ್ನಿವೇಶದಲ್ಲಿ ಅತ್ತ ಬೆಲೆ ಏರಿಕೆ ಕಾಣದೆ ಇಳಿಕೆಯೂ ಉಂಟಾಗದೆ ಯಥಾಸ್ಥಿತಿ ಮುಂದುವರೆದಿದ್ದು, ಸೀಸನ್‌ಗೆ ಬೆಲೆ ಏರಿಕೆ ನಿರೀಕ್ಷೆ ಬೆಳೆಗಾರರಲ್ಲಿದೆ.



2024ರ ಫೆಬ್ರವರಿ ಮೊದಲ ವಾರದಲ್ಲಿ ಹಸಿ ಕೊಕ್ಕೋ ರೂ.70ರಿಂದ ರೂ.90ಕ್ಕೆ ಹಾಗೂ ಒಣ ಕೊಕ್ಕೋ ರೂ.250ರಿಂದ ರೂ.350ಕ್ಕೆ ಏರಿಕೆಯಾಗಿತ್ತು. ಅನಂತರದಲ್ಲಿ ಕೊಕ್ಕೋ ಧಾರಣೆ ಅನಿರೀಕ್ಷಿತ ಏರಿಕೆಯತ್ತ ಸಾಗಿ ಕೊನೆಗೆ ಒಣ ಕೊಕ್ಕೋ ಕೆ.ಜಿ.ಗೆ ಸಾವಿರದತ್ತ ಮುನ್ನುಗ್ಗುವ ಮೂಲಕ ಇತಿಹಾಸ ಪುಟಗಳಲ್ಲಿ ದಾಖಲಾಗಿತ್ತು. »ಪುಟ 4

ಶತಕದತ್ತ ಹಸಿ ಕೊಕ್ಕೋ

ಹಾಲಿ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಕ್ಯಾಂಪ್ಕೋದಲ್ಲಿ ಹಸಿ ಕೊಕ್ಕೋ ಕೆ.ಜಿ.ಗೆ ರೂ.70-100, ಒಣ ಕೊಕ್ಕೋ ಧಾರಣೆ ರೂ.270-310 ಖರೀದಿಯಾಗುತ್ತಿದೆ. ಮುಂದೆ ಕೊಕ್ಕೋ ಬೆಳೆಯುವ ಸೀಜನ್ ಇರುವುದರಿಂದ ಬೆಲೆ ಏರಿಕೆ ನಿರೀಕ್ಷೆ ಹೆಚ್ಚಿದೆ.

ಬಿಸಿ ಮುಟ್ಟಿಸುತ್ತಿದೆ ಸ್ಟ್ರಾಂಗ್‌ರೂಂ ಭದ್ರತೆ

ದಿನನಿತ್ಯ ತಪಾಸಣೆಯಿಂದ ಹೈರಾಣಾದ ಸಿಬ್ಬಂದಿಗಳು!

ಗುರುತು ಚೀಟಿ ನೀಡಿಯೇ ಒಳಪ್ರವೇಶ

ಕಾಸರಗೋಡು: ಕೇರಳ ವಿಧಾನಸಭಾ ಏ.9 ರಂದು ನಡೆದಿದ್ದು, ಮತಯಂತ್ರಗಳನ್ನು ಕಾಸರಗೋಡು ಸರಕಾರಿ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿ ಇರಿಸಲಾಗಿದೆ. ಇದಕ್ಕಾಗಿ ಬಿಗಿ ಭದ್ರತೆ ಮಾಡಲಾಗಿದೆ. ಆದರೆ ಇದರಿಂದ ನಿತ್ಯ ಸಮಸ್ಯೆ ಎದುರಿಸುವವರು ಕಾಲೇಜಿನ ಸಿಬ್ಬಂದಿಗಳು.

ಮತಯಂತ್ರಗಳಿರುವುದರಿಂದ ಕಾಲೇಜಿನೊಳಗೆ ತೆರಳಲು ಯಾರಿಗೂ ಅವಕಾಶ ಇಲ್ಲ, ಆದರೆ ಕಾಲೇಜು ಸಿಬ್ಬಂದಿಗಳು ಕಾರ್ಯ ನಿಮಿತ್ತ ಅನಿವಾರ್ಯ ಹೋಗಲೇಬೇಕಿದೆ. ಹೀಗೆ, ನಿತ್ಯ ಕಾಲೇಜಿಗೆ



ಬರುವ ಸಿಬ್ಬಂದಿ, ಭದ್ರತಾ ಸಿಬ್ಬಂದಿಗಳು ತಪಾಸಣೆಗೊಳಪಡಿಸುತ್ತಿದ್ದಾರೆ. ವಿವರ ನೀಡಿ, ಗುರುತು ಚೀಟಿ ನೀಡಿ ಎಂದು ಸಿಬ್ಬಂದಿಗಳ ಸತಾಯಿಸುವುದರಿಂದ ಯಾವಾಗ ಈ ಮತ ಎಣಿಕೆ ಮುಗಿಯುವುದೆಂದು ಕಾಯುವಂತಾಗಿದೆ. »ಪುಟ 4

ಸುತ್ತಮುತ್ತ

ಇಂದು ಮಲೆಂಗಲ್ಲು ದೇವಸ್ಥಾನದಲ್ಲಿ ದೃಢಕಲಶ

ಪುತ್ತೂರು: ಪದ್ಮುಂಜ ಮಲೆಂಗಲ್ಲು ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಏ.23ರಂದು ಗುರುವಾರ ದೇವಸ್ಥಾನದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಶ್ರೀ ಕ್ಷೇತ್ರದಲ್ಲಿ ದೃಢಕಲಶ, ಮಧ್ಯಾಹ್ನ ಮಹಾಪೂಜೆ, ಅನ್ನ ಸಂತರ್ಪಣೆ, ಬ್ರಹ್ಮಕಲಶದ ಯಶಸ್ಸಿಗೆ ಕಾರಣಕರ್ತ ರಾದ ಸ್ವಯಂಸೇವಕರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಬಂಟ್ವಾಳ ಸಮಾಜ ಸೇ.ಸ. ಸಂಘ: ಮೇ 17ಕ್ಕೆ 18ನೇ ಶಾಖೆ ಉದ್ಘಾಟನೆ

ಬಂಟ್ವಾಳ: ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ 18ನೇ ಶಾಖೆಯು ಉಳ್ಳಾಲ ತಾಲೂಕಿನ ಬೋಳಿಯಾರಿನಲ್ಲಿ ಮೇ 17 ರಂದು ಕೇಶವ ಎಸ್ ಭಂಡಾರಿಯವರ ಕಟ್ಟಡದಲ್ಲಿ ಶುಭಾರಂಭಗೊಳ್ಳಲಿದೆ ಎಂದು ಬಂಟ್ವಾಳ ಸಮಾಜ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ಕುಲಾಲ್ ಬಂಟ್ವಾಳ ಅವರು ತಿಳಿಸಿದ್ದಾರೆ.



ಏ.25ಕ್ಕೆ ನೇಮ

ಕೈಕಂಬ: ಕೊಳವೂರು ಬೊಳಿಯ ಒಳಗುಡ್ಡೆ ಶ್ರೀ ವಾರಾಹಿ ಪಂಜುರ್ಲಿ ದೈವಸ್ಥಾನದಲ್ಲಿ ನೇಮ ಏ.25ಕ್ಕೆ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೈಕ್ ಜಾಥಾ

ಸುಬ್ರಹ್ಮಣ್ಯ: ರೋಟರಿ ಕ್ಲಬ್ ಮಡಿಕೇರಿ ವುಡ್ಸ್‌ನ ಪೂರ್ವಾಧ್ಯಕ್ಷರು, ಅಧ್ಯಕ್ಷರು ಹಾಗೂ ಸದಸ್ಯರನ್ನು ಒಳಗೊಂಡ ಏಳು ಜನರ ತಂಡವು ಮಡಿಕೇರಿ, ಸುಳ್ಯ, ಸುಬ್ರಹ್ಮಣ್ಯ, ಬಿಸಿಲೆ, ಸೋಮವಾರಪೇಟೆಗಾಗಿ ಮತ್ತೆ ಮಡಿಕೇರಿ ತಲುಪುವ ಬೇಸಿಗೆ ಸೀಸನ್‌ನ ಬೈಕ್ ಜಾಥಾ ಆಯೋಜಿಸಿದ್ದರು. ಮಡಿಕೇರಿಯಿಂದ ಹೊರಟ ತಂಡವು ಬುಧವಾರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸಿತು.ಸುಬ್ರಹ್ಮಣ್ಯದ ಕುಮಾರಧಾರ ದ್ವಾರದ ಬಳಿ ಸುಬ್ರಹ್ಮಣ್ಯ ರೋಟರಿ ಅಧ್ಯಕ್ಷ ಜಯಪ್ರಕಾಶ್ ಆರ್., ನಿಕಟಪೂರ್ವಾಧ್ಯಕ್ಷ ಚಂದ್ರಶೇಖರ ನಾಯರ್, ಪೂರ್ವ ಕಾರ್ಯದರ್ಶ ರವಿ ಕಕ್ಕೆಪದವು, ನಿಯೋಜಿತ ಅಧ್ಯಕ್ಷ ರೋಹಿತ್ ಬಿ.ಬಿ. ಜಾಥಾವನ್ನು ಬರಮಾಡಿಕೊಂಡರು. ತದನಂತರ ಸುಬ್ರಹ್ಮಣ್ಯದ ಕುಮಾರಧಾರ ದ್ವಾರದ ಬಳಿ ಎರಡು ಕ್ಲಬ್‌ನ ಧ್ವಜಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ತದನಂತರ ಜಾಥಾ ಮುಂದುವರೆಯಿತು.

ಬೇಸಿಗೆ ಶಿಬಿರಕ್ಕೆ ಚಾಲನೆ

ಸುಬ್ರಹ್ಮಣ್ಯ: ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಡ್ಯಾನ್ಸ್ ಬೀಟ್ಸ್ ನೃತ್ಯ ತಂಡ ಆಶ್ರಯದಲ್ಲಿ ನಡೆಯುವ ಮೂರನೇ ವರ್ಷದ ಮಕ್ಕಳ ಹಬ್ಬ ಬೇಸಿಗೆ ಶಿಬಿರ ಅಧ್ವೈತ್ ಮಂಗಳವಾರ ಉದ್ಘಾಟನೆಗೊಂಡಿತು. ಉದ್ಘಾಟನೆಯನ್ನು ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಚಂದ್ರಶೇಖರ ಶಾಸ್ತ್ರಿ ನೆರವೇರಿಸಿದರು. ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್ ಅಧ್ಯಕ್ಷತೆ ವಹಿಸಿದ್ದರು. ಸುಳ್ಯ ತಾಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ಪುಷ್ಪಾ ಡಿ. ಪ್ರಸಾದ್, ಪಂಜ ಉಪ ವಲಯಾರಣ್ಯಾಧಿಕಾರಿ ಪ್ರಕಾಶ್ ಮುಖ್ಯ ಅತಿಥಿಗಳಾಗಿದ್ದರು. ನಿರ್ದೇಶಕ ಜೀವನ್ ಬೆಳ್ಳಾರೆ ಉಪಸ್ಥಿತರಿದ್ದರು. ಅನಘ ಬಳ್ಪ ಪ್ರಾರ್ಥಿಸಿದರು. ಸುಜಿತ್ ರೈ ಪಟ್ಟೆ ವಂದಿಸಿದರು. ತನ್ವಿ ಚಿಕ್ಮುಳಿ ಕಾರ್ಯಕ್ರಮ ನಿರ್ವಹಿಸಿದರು.

ಮುಲ್ಕಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಸಭೆ

ಮುಲ್ಕಿ: ಮುಲ್ಕಿ ಬ್ಲಾಕ್ ಕಾಂಗ್ರೆಸ್ ಸಮಿತಿ ಸಭೆಯು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ಎಂ.ರೈ ನೇತೃತ್ವದಲ್ಲಿ ನಡೆಯತು. ಸಭೆಯನ್ನು ಕೇಂದ್ರ ಸರ್ಕಾರದ ಕೆಲ ನೀತಿ ವಿರುದ್ಧ ಹೋರಾಟ ನಡೆಸುವ ಬಗ್ಗೆ ಚರ್ಚಿಸಿದರು. ಕೆಪಿಸಿಸಿ ಸದಸ್ಯ ವಸಂತ್ ಬೆರ್ನಾಡ್ ಪಕ್ಷ ಸಂಘಟನೆ ಬಗ್ಗೆ ಸಲಹೆ ನೀಡಿದರು. ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್, ಮುಲ್ಕಿ ಬ್ಲಾಕ್ ಕಾಂಗ್ರೆಸ್ ನ ಪ್ರಧಾನ ಕಾರ್ಯದರ್ಶಿ ಮಂಜುನಾಥ ಕಂಬಾರ, ನಾಯಕರುಗಳಾದ ಗೋಪಿನಾಥ ಪಡಂಗ, ಮೋನಪ್ಪ ಶೆಟ್ಟಿ ಎಕ್ಕಾರು, ಹಸನಬ್ಬ ಬಾಳ, ಉಲ್ಲಾಸ್ ಶೆಟ್ಟಿ ಪೆರ್ಮುದೆ, ಸುಬ್ರಹ್ಮಣ್ಯ ಭಟ್ ಶಿಬರೂರು, ಮಹಿಳಾ ಕಾಂಗ್ರೆಸ್ ಅಧ್ಯಕ್ಷ ವಿಲ್ಮಾ ಡಿಕೋಸ್ಟ, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಿತ್ ಪೂಜಾರಿ ಕೊಳಚಿ ಕಂಬಳ ಮತ್ತಿತರರು ಇದ್ದರು. ಕಿನ್ನಿಗೋಳಿ ಪ.ಪಂ. ಸದಸ್ಯ ಪ್ರಕಾಶ್ ಆಚಾರ್ಯ ನಿರೂಪಿಸಿದರು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಭಗವಂತನಲ್ಲಿ ಸ್ವಾರ್ಥ ರಹಿತ ಪ್ರಾರ್ಥನೆ ಇರಲಿ: ಪದ್ಮರಾಜ್

ಬೆಳ್ತಂಗಡಿ: ಮಾನವೀಯತೆ ಮರೆತು ಸ್ವಾರ್ಥದ ಬದುಕನ್ನು ನಡೆಸದೇ ಸಾರ್ಥಕದ ಬದುಕು ನಡೆಸಬೇಕು. ಸ್ವಾರ್ಥ ರಹಿತ ಪರೋಪಕಾರದ ಕಾರ್ಯದ ಮನಃಸ್ಥಿತಿ ನಮ್ಮದಾಗಿರಲಿ. ನಮ್ಮ ಶತ್ರುವಿಗೂ ಒಳಿತಾಗಲಿ ಎಂದು ಪ್ರಾರ್ಥಿಸುವುದರಿಂದ ನಮಗೂ ಒಳಿತಾಗುತ್ತದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಭಗವಂತನ ಮುಂದೆ ಸ್ವಾರ್ಥ ರಹಿತ ಪ್ರಾರ್ಥನೆ ಮಾಡಬೇಕು ಎಂದು ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದ ಆಡಳಿತ ಮಂಡಳಿಯ ಕೋಶಾಧಿಕಾರಿ ಪದ್ಮರಾಜ್ ಆರ್. ಹೇಳಿದರು.

ಕರಾಯ ಶ್ರೀ ಮಹಾಲಿಂಗೇಶ್ವರ ದೇವಳದ ಬ್ರಹ್ಮಕಲಶೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಬಂಟ್ವಾಳ ಸಂಚಯಗಿರಿ ರಾಣಿ ಅಬ್ಬಕ್ಕ ತುಳು ಅಧ್ಯಯನ ಪೀಠ ಮುಖ್ಯಸ್ಥ ಡಾ. ತುಕರಾಮ ಪೂಜಾರಿ ಉಪನ್ಯಾಸ ನೀಡಿ, ರಾಮಾಯಣ ಹಾಗೂ ಮಹಾಭಾರತ ನಮ್ಮ ಕಣ್ಣುಗಳಿದ್ದಂತೆ ಅದನ್ನು ಬಿಟ್ಟು ನಮ್ಮ ಬದುಕಿಲ್ಲ, ನಮ್ಮ ನಡೆ ಶ್ರೀರಾಮನಂತೆ ಹಾಗೂ ನುಡಿ ಕೃಷ್ಣನಂತೆ ಇರಬೇಕು. ಹಾಗಾಗಿ ಮಕ್ಕಳಿಗೆ ಈ ವಿಚಾರಗಳನ್ನು ಪೋಷಕರು ಕರಗತ ಮಾಡಿಸಬೇಕು ಎಂದರು.



ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ನಾಗರ್ಜುನ್ ರಾವ್ ಬೆಂಗಳೂರು ಅಧ್ಯಕ್ಷತೆ ವಹಿಸಿದ್ದರು. ಬೆಳ್ತಂಗಡಿ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಸಂಪತ್ ಸುವರ್ಣ, ಗುರುವಾಯನಕೆರೆ ಎಕ್ಸೆಲ್ ಕಾಲೇಜಿನ ಅಧ್ಯಕ್ಷ ಸುಮಂತ್ ಕುಮಾರ್ ಜೈನ್, ಉಪ್ಪಿನಂಗಡಿಯ ದಂತ ವೈದ್ಯ ಡಾ. ಆಶಿತ್, ತಣ್ಣೀರುಪಂತ ಪ್ಯಾಕ್ಸ್ ಅಧ್ಯಕ್ಷ ಜಯಾನಂದ ಕಲ್ಲಾಪು, ಪುಂಜಾಲಕಟ್ಟೆ ಸ್ವಸ್ತಿಕ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ತುಂಗಪ್ಪ ಬಂಗೇರ, ದ.ಕ. ಜಿಲ್ಲಾ ಕೆಡಿಪಿ ಸದಸ್ಯ ಸಂತೋಷ ಕುಮಾರ್ ಲ್ಯಾಲ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಚಿತ್ತರಂಜನ್ ಬೋಳಾರ್, ತೆಕ್ಕಾರು ಪ್ಯಾಕ್ಸ್ ಸಿಇಒ ರಾಘವೇಂದ್ರ ಅಡವ, ಕೊರಿಂಜ ದೇವಸ್ಥಾನದ ಅಧ್ಯಕ್ಷ ಯೋಗೀಶ್ ಕುಮಾರ್ ಕಡ್ತಿಲ, ಕಲ್ಲೇರಿ ಹಾ.ಉ.ಸ. ಸಂಘ ಅಧ್ಯಕ್ಷ ಜಯರಾಜ ಹೆಗ್ಡೆ, ನೇಜಿಕಾರು ಸ್ವಾಮಿ ಪ್ರಸಾದ್ ಕನ್‌ಸ್ಟ್ರಕ್ಷನ್‌ನ ನಾಗೇಶ್ ಗೌಡ, ಬೆಳ್ತಂಗಡಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಪದ್ಮನಾಭ ಸಾಲಿಯಾನ್, ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ ಶೆಟ್ಟಿ ಬಿ.ಎಸ್.ಎಫ್., ಮರಿಪ್ಪಾದೆ ಕೋಟಿ ಚೆನ್ನಯ ಫ್ರೆಂಡ್ಸ್ ಸೇವಾ ಟ್ರಸ್ಟ್ ಅಧ್ಯಕ್ಷ ದುರ್ಗಾಪ್ರಸಾದ್, ಕರಾಯ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಸದಸ್ಯ ದಯಾನಂದ ಪಂಜಿಕುಡೇಲು, ಕುಪೆಟ್ಟಿ ಶ್ರೀ ಗಣೇಶ ಭಜನಾ ಮಂಡಳಿ ಅಧ್ಯಕ್ಷ ರೋಹಿತ್ ಶೆಟ್ಟಿ ಪಿ., ಬ್ರಹ್ಮಕಲಶ ಸಮಿತಿ ಜೊತೆ ಕಾರ್ಯದರ್ಶಿ ಗುಣಾಕರ ಅಗ್ನಾಡಿ, ನೋಣಯ್ಯ ಮೇಸ್ತ್ರಿ ಪೂಂಜಾಳ, ಸೀತರಾಮ ಎ. ಹಾಗೂ ಬೂದಪ್ಪ ಪೂಜಾರಿ ದೇವರಕಾಡು ಇದ್ದರು. ಪ್ರಜ್ಞಾ ಓಡಿಲ್ನಾಳ ಕಾರ್ಯಕ್ರಮ ನಿರ್ವಹಿಸಿದರು.

> ಹಿಂದೂಗಳು ನಾವೆಲ್ಲ ಒಂದೇ ಎಂದು ಧಾರ್ಮಿಕ ಚಿಂತನೆಗಳಲ್ಲಿ ಪಾಲ್ಗೊಳ್ಳಬೇಕು. ಧರ್ಮ ಶ್ರದ್ಧೆಯ ಮೂಲಕ ಹೃದಯ ಶ್ರೀಮಂತಿಕೆಯಿಂದ ಬದುಕಬೇಕು. ನಮ್ಮ ಪವಿತ್ರ ಗ್ರಂಥಗಳನ್ನು ಮಕ್ಕಳಿಗೆ ಪರಿಚಯಿಸಿ ಬೋಧಿಸಬೇಕು. ಭಜನೆಯ ಮೂಲಕ ನಮ್ಮ ಸಮಾಜವನ್ನು ಜೋಡಿಸುವದರೊಂದಿಗೆ ಧರ್ಮ ಹಾಗೂ ರಾಷ್ಟ್ರದ ರಕ್ಷಣೆ ನಮ್ಮದಾಗಲಿ.
> ● ಅರುಣ್ ಕುಮಾರ್ ಪುತ್ತಿಲ, ಧಾರ್ಮಿಕ ಮುಖಂಡ

ಸುಸಜ್ಜಿತ ಅನ್ನಛತ್ರ

ದೇಗುಲದ ಬಲಭಾಗದಲ್ಲಿ ಪುತ್ತೂರಿನ ದ್ವಾರಕ ಕನ್‌ಸ್ಟ್ರಕ್ಷನ್ ಮಾಲಕ ಗೋಪಾಲಕೃಷ್ಣ ಭಟ್ ಅವರ ಜಾಗದಲ್ಲಿ ವಿಶಾಲ ಸಭಾಂಗಣದ ಮಾದರಿಯ ಹರಿಹರ ಅನ್ನಛತ್ರದಲ್ಲಿ ಒಮ್ಮೆಗೆ 1750 ಮಂದಿ ಭಕ್ತರು ಕುಳಿತುಕೊಂಡು ಭೋಜನ ಸೇವನೆಗೆ ವ್ಯವಸ್ಥೆ ಮಾಡಲಾಗಿದೆ. ಬಾಳೆ ಎಲೆಯಲ್ಲಿ ಭೋಜನ ನೀಡುವ ವ್ಯವಸ್ಥೆ ವಿಶೇಷವಾಗಿತ್ತು. ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಬೆಳಗ್ಗೆ ಉಪಹಾರ, ಮಧ್ಯಾಹ್ನ ಅನ್ನದಾನ, ಸಂಜೆ ಉಪಹಾರ ಹಾಗೂ ರಾತ್ರಿ ಊಟವನ್ನು ವ್ಯವಸ್ಥಿತವಾಗಿ ಒದಗಿಸಲಾಗುತ್ತಿದೆ. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯರು, ಸಂಘ, ಸಂಸ್ಥೆಗಳ ಸದಸ್ಯರು ಈ ಸೇವೆಯಲ್ಲಿ ಭಾಗಿಯಾಗುತ್ತಿದ್ದಾರೆ. ಪ್ರತಿದಿನ ಸುಮಾರು 350ಕ್ಕೂ ಹೆಚ್ಚು ಮಂದಿ ಅನ್ನ ಬಡಿಸುವ ಸೇವೆಯಲ್ಲಿ ತೊಡಗಿದ್ದಾರೆ.

ವಿದ್ಯಾಮಾತಾ ಅಕಾಡೆಮಿಯಲ್ಲಿ 'ಬೇಸಿಗೆ ಕೌಶಲ ಸಂಭ್ರಮ'ಕ್ಕೆ ಚಾಲನೆ



ಪುತ್ತೂರು: ಹೆಸರಾಂತ ತರಬೇತಿ ಸಂಸ್ಥೆಯಾದ ವಿದ್ಯಾಮಾತಾ ಅಕಾಡೆಮಿಯು ವಿದ್ಯಾರ್ಥಿಗಳಿಗೆ ಬಾಲ್ಯದಲ್ಲೇ ಬೇಸಿಗೆಯ ರಜಾ ಅವಧಿಯಲ್ಲಿ ವಿಶೇಷ ಕೌಶಲ ಸಂಭ್ರಮದ ಅಡಿಯಲ್ಲಿ ಹಲವು ಕೌಶಲ್ಯಭರಿತ ತರಬೇತಿಯನ್ನು ವಿವಿಧ ಆಯಾಮದಲ್ಲಿ ನೀಡಿ ಭವಿಷ್ಯದ ಅಧಿಕಾರಿಗಳನ್ನು ಸೃಷ್ಟಿಸುವ ಕಾರ್ಯ ಮಾಡುತ್ತಿರುವುದು ಪ್ರಶಂಸನೀಯ ಎಂದು ರೋಟರಿ ಹಾಗೂ ಇನ್ನರ್ ವ್ಹೀಲ್ ಕ್ಲಬ್ ಪುತ್ತೂರು ಇದರ ನಿಕಟ ಪೂರ್ವ ಅಧ್ಯಕ್ಷೆ ರಾಜೇಶ್ವರಿ ಆಚಾರ್ ಹೇಳಿದರು.

ಪುತ್ತೂರಿನ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ವಿದ್ಯಾಮಾತಾ ಅಕಾಡೆಮಿಯಲ್ಲಿ ಆಯೋಜನೆಗೊಂಡಿರುವ ಬೇಸಿಗೆ ಕೌಶಲ ಸಂಭ್ರಮ-26ಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು.

ರಾಜೇಶ್ವರಿ ಆಚಾರ್ ಅವರನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ವಿದ್ಯಾಮಾತಾ ಅಕಾಡೆಮಿಯ ಆಡಳಿತ ನಿರ್ದೇಶಕ ಭಾಗ್ಯೇಶ್ ರೈ, ಪ್ರಸ್ತುತ ಕಾಲ ಘಟ್ಟದಲ್ಲಿ ಪೋಷಕರು ತಮ್ಮ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಾಗ ಟ್ಯೂಷನ್‌ನ ಮೊರೆ ಹೋಗುತ್ತಾರೆಯೇ ಹೊರತು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ಹಿಂದುಳಿಯುತ್ತಾರೆ. ಇದಕ್ಕೆ ಪೂರಕವಾಗಿ ವಿದ್ಯಾಮಾತಾ ಅಕಾಡೆಮಿ ಮಕ್ಕಳಲ್ಲಿರುವ ನ್ಯೂನತೆಗಳನ್ನು ಅರಿತುಕೊಂಡು ಅದಕ್ಕೆ ಸೂಕ್ತ ಮಾರ್ಗದರ್ಶನ, ತರಬೇತಿಯನ್ನು ನೀಡಿ ಮಕ್ಕಳಲ್ಲಿ ಧನಾತ್ಮಕ ಚಿಂತನೆಯನ್ನು ಮೂಡಿಸಿ ಪ್ರಾಯೋಗಿಕವಾಗಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಬೆನ್ನೆಲುಬಾಗಿ ನಿಂತು ಈ ವಿಶಿಷ್ಟ ಬೇಸಿಗೆ ಕೌಶಲ ಸಂಭ್ರಮವನ್ನು ಆಯೋಜಿಸಿದ್ದೇವೆ ಎಂದು ತಿಳಿಸಿದರು.

ಮಕ್ಕಳ ಭವಿಷ್ಯದ ದೃಷ್ಟಿಯಲ್ಲಿ ತರಬೇತಿ ನೀಡುತ್ತಿರುವ ವಿದ್ಯಾಮಾತಾ ಅಕಾಡೆಮಿಯು ಮುಂಬರುವ ನವೋದಯ, ಸೈನಿಕ, ಮೊರಾರ್ಜಿ ಸೇರಿದಂತೆ ವಿವಿಧ ವಸತಿ ಶಾಲೆಗಳ ಪ್ರವೇಶ ಪರೀಕ್ಷೆಗಳು, ಅಬಾಕಸ್ ಸ್ಪರ್ಧೆ, ಆರ್ಯಭಟ ನ್ಯಾಷನಲ್ ಮಾಥ್ಸ್ ಸ್ಪರ್ಧೆ, ವೇದಿಕ್ ಮಾಥ್ಸ್, ಮಾನಸಿಕ ಸಾಮರ್ಥ್ಯ ಸೇರಿದಂತೆ ವಿವಿಧ ವಿಷಯಗಳಿಗೆ ಅಲ್ಲದೇ ಶೈಕ್ಷಣಿಕ ವ್ಯಾಸಂಗಕ್ಕೆ ಸಂಬಂಧಿಸಿದ ತರಬೇತಿಯನ್ನು ತಳಮಟ್ಟದಲ್ಲಿ ನೀಡಿ ಮುಂದಿನ ಜೂನ್ ತಿಂಗಳಿನಲ್ಲಿ 2ನೇ ಹಂತದಲ್ಲಿ ಪೂರ್ಣ ಪ್ರಮಾಣದ ತರಬೇತಿಯನ್ನು ನೀಡಿ ಮಕ್ಕಳನ್ನು ಸಜ್ಜುಗೊಳಿಸಲಾಗುತ್ತದೆ.

ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ: ಅರಸು ಟೈಟನ್ಸ್ ತಂಡಕ್ಕೆ ಪ್ರಥಮ ಸ್ಥಾನ



ಮಂಗಳೂರು: ನಗರದ ಉರ್ವ ಸ್ಟೋರಿನ ಬ್ಯಾಪ್ಟಿಸ್ಟ್ ಬ್ಯಾಡ್ಮಿಂಟನ್ ಅಕಾಡೆಮಿ ವತಿಯಿಂದ ನಡೆದ ಬ್ಯಾಪ್ಟಿಸ್ಟ್ ಪ್ರೀಮಿಯರ್ ಲೀಗ್ ಸೀಸನ್-8 ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮನು ಅರಸು ಅವರ ಮಾಲಕತ್ವದ ಅರಸು ಟೈಟನ್ಸ್ ತಂಡ ಪ್ರಥಮ ಸ್ಥಾನ ಮತ್ತು ಅಶ್ವಿನ್ ಪೂಜಾರಿಯವರ ಶ್ರೀ ಕಟಿಲೇಶ್ವರಿ ತಂಡ ದ್ವಿತೀಯ ಸ್ಥಾನ ಪಡೆಯಿತು.

ಅರಸು ಟೈಟನ್ಸ್ ತಂಡದಲ್ಲಿದ್ದ ವಿನಯ ಕುಮಾರ್, ಗುರುದತ್ತ್, ಸೌಹಾರ್ದ್ ಶೆಟ್ಟಿ, ಗುರುದತ್ತ ಶೆಟ್ಟಿ, ಕಿಶನ್ ಶೆಟ್ಟಿ, ಚಿರಾಗ್ ಆರ್., ಮಹೇಶ್ ಕುಮಾರ್ ಹೊಳ್ಳ, ಸತೀಶ್ ಎಸ್., ಐ.ಬಿ. ಸಿಂಚನಾ ಜೈನ್, ಚೇತನ್ ಹಾಗೂ ಉದಯ ಆಚಾರ್ಯ ಗೆಲುವಿನ ರೂವಾರಿಗಳಾದರು. ಈ ಶಟಲ್ ಬ್ಯಾಡ್ಮಿಂಟನ್ ಲೀಗ್ ಪಂದ್ಯಾಟದಲ್ಲಿ ಪ್ರತಿಷ್ಠಿತ ಆರು ತಂಡಗಳು ಭಾಗವಹಿಸಿದ್ದವು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿ'ಸೋಜ ಜ್ಯೋತಿ ಬೆಳಗಿಸಿ ಪಂದ್ಯಾವಳಿ ಉದ್ಘಾಟಿಸಿದರು. ಯಥಾರ್ಥ್ ಸೋಶಿಯಲ್ ಗ್ರೂಪ್‌ನ ಸಂಸ್ಥಾಪಕ ಈಶ್ವರ ಶೆಟ್ಟಿ ಅವರು ನಮ್ಮಲ್ಲಿರುವ ಅನುಪಯುಕ್ತವಾದ ಶೂಸ್ ಹಾಗೂ ಸ್ಯಾಂಡಲ್ಸ್‌ಗಳನ್ನು ಸಂಗ್ರಹಿಸಿ ಅದನ್ನು ಸಮರ್ಪಕವಾದ ರೀತಿಯಲ್ಲಿ ವಿಲೇವಾರಿ ಮಾಡುವಂತಹ 'ಹೆಜ್ಜೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬ್ಯಾಪ್ಟಿಸ್ಟ್ ಸ್ಪೋರ್ಟ್ಸ್ ಫೌಂಡೇಶನ್‌ನ ಅಧ್ಯಕ್ಷ ಅರುಣ್ ಬ್ಯಾಪ್ಟಿಸ್ಟ್, ಸಂಸ್ಥೆಯ ಸದಸ್ಯ ಆನಂದ್ ಬ್ಯಾಪ್ಟಿಸ್ಟ್ ಹಾಗೂ ತಂಡದ ಮಾಲೀಕರಾದ ದೀಕ್ಷಿತ್ ಶೆಟ್ಟಿ, ಮನು ಅರಸು, ಅಶ್ವಿನ್ ಪೂಜಾರಿ, ಸುಧೀಂದ್ರ ಪ್ರಭು, ವಿಕ್ಕಿ ಪೈ, ಡಾ. ಟೈಸನ್ ಡಿ'ಕುನ್ನ ಉಪಸ್ಥಿತರಿದ್ದರು. ಸನತ್ ನಿರ್ವಹಿಸಿದರು.

ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರ್ಷಿಕ ಕ್ರೀಡಾಕೂಟ



ಸವಣೂರು: ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ಶೈಕ್ಷಣಿಕ ವರ್ಷದ ಕ್ರೀಡಾಕೂಟ ವಿದ್ಯಾರಶ್ಮಿ ಕ್ರೀಡಾಂಗಣದಲ್ಲಿ ನಡೆಯಿತು.

ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಅಶ್ವಿನ್ ಎಲ್. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕ್ರೀಡಾಪಟು ಕೌಶಿಕ್, ಚತುರ್ಥ್, ಕಲ್ಪನಾ, ರಕ್ಷಿತ್, ಪ್ರತೀಕ್ಷಾ ಅವರ ನೇತೃತ್ವದಲ್ಲಿ ಸವಣೂರಿನ ಪದ್ಮಾವತಿ ಅಮ್ಮನವರ ಬಸದಿಯಲ್ಲಿ ಪೂಜೆಗೊಂಡ ಕ್ರೀಡಾಜ್ಯೋತಿಯು ಆಗಮಿಸಿತು. ಕ್ರೀಡಾ ಜ್ಯೋತಿಯನ್ನು ಮುಖ್ಯ ಅತಿಥಿಯಾಗಿದ್ದ ನಿವೃತ್ತ ಯೋಧ ಬಾಲಕೃಷ್ಣ ಬಸ್ತಿ ಅವರಿಗೆ ಹಸ್ತಾಂತರಿಸಲಾಗಿತು.

ಶಾಂತಿಯ ಸಂಕೇತವಾದ ಪಾರಿವಾಳವನ್ನು ನಿಸರ್ಗಕ್ಕೆ ಹಾರಿಸಿ ಬಿಡುವ ಮೂಲಕ ಕ್ರೀಡಾಕೂಟವನ್ನು ಉದ್ಘಾಟಿಸಿದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ ಮಾತನಾಡಿ, ಇಂದಿನ ದಿನಗಳಲ್ಲಿ ಕ್ರೀಡಾಪಟುಗಳಿಗೆ ಉಜ್ವಲ ಭವಿಷ್ಯವಿದೆ. ಸರಕಾರವೂ ಕೂಡ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿದೆ ಎಂದರು.

ಅತಿಥಿ ಬಾಲಕೃಷ್ಣ ಬಸ್ತಿ ಶುಭಹಾರೈಸಿದರು. ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಟ್ರಸ್ಟಿ ರಶ್ಮಿ ಅಶ್ವಿನ್ ಶೆಟ್ಟಿ, ಸಂಸ್ಥೆಯ ಪ್ರಾಂಶುಪಾಲೆ ರಾಜಲಕ್ಷ್ಮೀ ಎಸ್. ರೈ, ವಿದ್ಯಾರಶ್ಮಿ ವಿದ್ಯಾಲಯದ ಪ್ರಾಂಶುಪಾಲೆ ಶಶಿಕಲಾ ಎಸ್. ಆಳ್ವ, ಕ್ರೀಡಾ ಕಾರ್ಯದರ್ಶಿ ಪವನ್ ಎಚ್. ಎಸ್, ಜೊತೆ ಕಾರ್ಯದರ್ಶಿ ಸರಸ್ವತಿ ಉಪಸ್ಥಿತರಿದ್ದರು. ತೃತೀಯ ಬಿ.ಎ. ವಿದ್ಯಾರ್ಥಿ ದೀಕ್ಷಿತ್ ಸ್ವಾಗತಿಸಿ, ಕಲ್ಪನಾ ವಂದಿಸಿದರು. ತೃತೀಯ ಬಿ.ಕಾಂ. ವಿದ್ಯಾರ್ಥಿನಿ ಅಲಿಮತ್ ಸಝ್ನಾನ ನಿರ್ವಹಿಸಿದರು. ಕ್ರೀಡಾಕೂಟವು ದೈಹಿಕ ಶಿಕ್ಷಣ ನಿರ್ದೇಶಕ ಭರತ್ ಎಂ.ಎಲ್. ಮಾರ್ಗದರ್ಶನದಲ್ಲಿ ನಡೆಯಿತು.

ಕಡಂಬಳಿತ್ತಾಯ ದೈವದ ನೇಮ

ಕಡಬ: ಕಡಬ ಜಾತ್ರೋತ್ಸವದ ಅಂಗವಾಗಿ ಕಡಬ ಮಾಡದಲ್ಲಿ ಶ್ರೀ ಕಡಂಬಳಿತ್ತಾಯ ದೈವದ ನೇಮೋತ್ಸವ ನಡೆಯಿತು.

ಮುಡಿಯಾಗುವ ಮಜಲಿನಲ್ಲಿ ಶ್ರೀ ಕಡಂಬಳಿತ್ತಾಯ ದೈವ ಮುಡಿಯಾಗಿ, ಮಧ್ಯಾಹ್ನ ಮಾಡದಲ್ಲಿ ಶ್ರೀ ಕಡಂಬಳಿತ್ತಾಯ ದೈವದ ನೇಮೋತ್ಸವ ಹಾಗೂ ಪೂರ್ವಪದ್ಧತಿಯಂತೆ ಸರಕಾರಿ ಮೇಲಾಧಿಕಾರಿಗಳನ್ನು ಹಾಗೂ ಕಡಬ ಪೇಟೆಯ ವ್ಯಾಪಾರಸ್ಥರನ್ನು ಗೌರವಪೂರ್ವಕವಾಗಿ ಮಾಡಕ್ಕೆ ಕರೆದುಕೊಂಡು ಬಂದು ದೈವದ ಸಮ್ಮುಖದಲ್ಲಿ ಪ್ರಸಾದ ನೀಡಿ ಗೌರವಿಸಲಾಯಿತು.

ಬಳಿಕ ಶ್ರೀ ಉದ್ರಾಂಡಿ ದೈವ, ಶ್ರೀ ಗ್ರಾಮ ಪಂಜುರ್ಲಿ, ಶ್ರೀ ಪೊಟ್ಟ ದೈವ ಮತ್ತು ಶ್ರೀ ಪುರುಷ ದೈವಗಳ ನೇಮ, ಸಂಜೆ ಶ್ರೀ ಪುರುಷ ದೈವದ ಪೇಟೆ ಸವಾರಿ, ರಾತ್ರಿ ಅನ್ನ ಸಂತರ್ಪಣೆ ನಡೆಯಿತು. ರಾತ್ರಿ ಕೊಡಿ ಇಳಿಸಿ, ಯಥಾಪ್ರಕಾರ ದೈವದ ಭಂಡಾರ ಭಂಡಾರದ ಮನೆಗಳಿಗೆ ತೆರಳಾಯಿತು.

ದೈವಸ್ಥಾನದ ಪ್ರಧಾನ ಆಡಳಿತೆದಾರ ರಾಜೇಂದ್ರ ಹೆಗ್ಡೆ ಕಡಬಗುತ್ತು, ಕಡಬಗುತ್ತು ಮನೆತನದ ಸ್ನೇಹಪ್ರಿಯಾ ರಾಜೇಂದ್ರ ಹೆಗ್ಡೆ, ಸುದತ್ ಕೊಂಬ, ಶಾರ್ವರಿ ಸುದತ್, ಜಾತ್ರಾ ಸಮಿತಿಯ ಅಧ್ಯಕ್ಷ ಪೂವಪ್ಪ ಗೌಡ ಪಿಜಕಳ, ಗೌರವಾಧ್ಯಕ್ಷ ಸತೀಶ್ ನಾಯಕ್ ಶಾರದಾ ಸದನ, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀಶ ಆರಿಗ, ಮನೋಜ್ ಕುಮಾರ್ ಆರಿಗ, ಜನಾರ್ದನ ಗೌಡ ಪಣೆಮಜಲು, ರಮೇಶ್ ರಾವ್ ಹೊಸಮನೆ, ಚಂದ್ರಶೇಖರ ಕರ್ಕೇರ, ದೈವಗಳ ಪಾತ್ರಿ ಮೋನಪ್ಪ ಕುಂಬಾರ ಪಾಲೋಳಿ, ಸುಧೀರ್ ಪಣೆಮಜಲು, ಸತೀಶ್ಚಂದ್ರ ಕೇಪಳ, ರಾಜೇಶ್ ಗೌಡ ಆರಿಗ, ಶಿವಪ್ರಸಾದ್ ಹೊಸಮನೆ, ಕಾರ್ತಿಕ್ ಗೌಡ ಪಿಜಕಳ, ವಿಜಯ ಕುಮಾರ್ ರೈ ಕರ್ಮಾಯಿ, ವೆಂಕಪ್ಪ ಗೌಡ ನಂದಗೋಕುಲ, ತಮ್ಮಯ್ಯ ಕುಂಬಾರ ದೊಡ್ಡಕೊಪ್ಪ, ಬಾಲಕೃಷ್ಣ ಗೌಡ ಆರಿಗ, ಎಲ್ಯಣ್ಣ ಗೌಡ ಕಲ್ಲಡ್ಕ ಕಳಾರ, ಹರೀಶ್ ರೈ ಹಳ್ಳಿಮನೆ, ಶೇಖರ ಜೈನ್ ಮಾಲೇಶ್ವರ, ಚಂದ್ರಶೇಖರ ಗೌಡ ಕೋಡಿಬೈಲು, ಧರಣೇಂದ್ರ ಜೈನ್ ಮತ್ತಿತರರು ಉಪಸ್ಥಿತರಿದ್ದರು.



ಜನಗಣತಿದಾರರಿಗೆ ಸುರಕ್ಷಾ ಕಿಟ್, ವಾಹನ ವ್ಯವಸ್ಥೆ ಒದಗಿಸುವಂತೆ ಮನವಿ

ಪುತ್ತೂರು: ಪುತ್ತೂರು ಹಾಗೂ ಕಡಬ ತಾಲೂಕಿನ ಜನಗಣತಿದಾರರಿಗೆ ರಕ್ಷಣೆಯ ಜತೆಗೆ ಸುರಕ್ಷತಾ ಸೌಲಭ್ಯ, ವಾಹನ ವ್ಯವಸ್ಥೆ ಒದಗಿಸುವ ಜತೆಗೆ ಗಣತಿ ಕಿಟ್‌ಗಳ ಕೊರತೆ ನಿವಾರಿಸುವಂತೆ ಗಣತಿದಾರರ ನಿಯೋಗ ಪುತ್ತೂರು ಸಹಾಯಕ ಕಮಿಷನರ್ ಹಾಗೂ ತಹಶೀಲ್ದಾರ್ ಮೂಲಕ ದ.ಕ.ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದ್ದಾರೆ.



ಹಲವು ಬೇಡಿಕೆ

2 ತಾಲೂಕಿನ ಗ್ರಾಮೀಣ ಹಾಗೂ ಅರಣ್ಯ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗಣತಿದಾರರಿಗೆ ಅಗತ್ಯ ರಕ್ಷಣೆ, ಸುರಕ್ಷತಾ ಸೌಲಭ್ಯ, ವಾಹನ ಸೌಲಭ್ಯ ಇಲ್ಲವಾಗಿದೆ. ಜತೆಗೆ ಗಣತಿ ಕಿಟ್ ಗಳು ಕೂಡ ಸರಿಯಾದ ಸಮಯಕ್ಕೆ ಪೂರೈಕೆಯಾಗುತ್ತಿಲ್ಲ, ದುರ್ಗಮ ಹಾದಿಯಲ್ಲಿ ಸಾಗಬೇಕಿರುವುದರಿಂದ ಗಣತಿದಾರರು ತಮ್ಮ ಸ್ವಂತ ಹಣದಲ್ಲಿ ಬಾಡಿಗೆ ವಾಹನಗಳನ್ನು ಮಾಡಿಕೊಂಡು ಹೋಗಬೇಕಾದ ಸ್ಥಿತಿ ಇದೆ. ಆದರೆ ಕನಿಷ್ಠ ಸಂಚಾರ ಭತ್ಯೆ, ವಾಹನ ಸೌಲಭ್ಯ ಇಲ್ಲವಾಗಿದೆ. ಗಣತಿದಾರರಿಗೆ ಗುರುತಿನ ಚೀಟಿ, ಅಧಿಕೃತ ಬ್ಯಾಡ್ಜ್ ಕ್ಯಾಪ್, ನೀರಿನ ಬಾಟಲ್, ಛತ್ರಿ, ಬಿಸಿಲಿನಿಂದ ರಕ್ಷಣೆಯ ಸಾಧನ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ದಾಖಲೆ ರಕ್ಷಣೆಯ ಫೈಲ್, ಪವರ್ ಬ್ಯಾಂಕ್, ಮಾಸ್ಕ್-ಕೈಗವಚ ಮೊದಲಾದ ಸೌಲಭ್ಯಗಳು ಕೂಡ ಇಲ್ಲವಾಗಿದೆ. ಮಹಿಳಾ ಗಣತಿದಾರರಿಗೆ ಶೌಚಾಲಯ ವ್ಯವಸ್ಥೆ, ಸುರಕ್ಷಿತ ಸಂಚಾರ, ಏಕಾಂಗಿ ಕರ್ತವ್ಯ ನಿರ್ವಹಣೆಯ ಸ್ಥಿತಿ ಇದ್ದು, ಹೀಗಾಗಿ ಅವರಿಗೆ ಭದ್ರತಾ ಮಾರ್ಗಸೂಚಿ, ಗುಂಪು ಆಧಾರಿತ ಕಾರ್ಯಪದ್ಧತಿ, ಸ್ಥಳೀಯ ಸಿಬಂದಿಯ ಸಹಕಾರವನ್ನು ಕಲ್ಪಿಸಬೇಕಿದೆ. ಬಿಸಿಲಿನಿಂದ ರಕ್ಷಣೆ ಪಡೆಯಲು ಮಧ್ಯಾಹ್ನದ ವೇಳೆ ವಿಶ್ರಾಂತಿ, ವೈದ್ಯಕೀಯ ಸಹಾಯವಾಣಿ, ತುರ್ತು ಚಿಕಿತ್ಸಾ ವ್ಯವಸ್ಥೆ ಒದಗಿಸಬೇಕಿದೆ.0 ಮನೆಗಳ ಸಂಖ್ಯೆ-ಕಾರ್ಯಭಾರವನ್ನು ಹಂಚಿಕೆ ಮಾಡಿ ಒತ್ತಡ ಇಳಿಸುವ ಜತೆಗೆ ನೆಟ್ವರ್ಕ್ ಇಲ್ಲದ ಪ್ರದೇಶಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡುವಂತೆ ಗಣತಿದಾರರು ಮನವಿಯ ಮೂಲಕ ಒತ್ತಾಯಿಸಿದ್ದಾರೆ.

ಗೋಪುರ ನಿರ್ಮಾಣಕ್ಕೆ ಮನವಿ



ಮುಲ್ಕಿ: ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಳದ ನೂತನ ಸ್ವಾಗತ ಗೋಪುರ ನಿರ್ಮಾಣದ ಬಗ್ಗೆ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಅವರು ಸೋಮವಾರ ದೇವಸ್ಥಾನದ ಅನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು ಹಾಗೂ ಕಾರ್ಯನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ರವರಿಗೆ ಮನವಿ ಸಲ್ಲಿಸಿದರು.

ಐಕಳ ಗುಣಪಾಲ ಶೆಟ್ಟಿ, ಅಭಿಮಾನಿಗಳಾದ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಇಂದ್ರಾಳಿ ಜಯಕರ ಶೆಟ್ಟಿ, ಸಂಚಾಲಕ ಕೊಲ್ಲಾಡಿ ಬಾಲಕೃಷ್ಣ ರೈ, ಮುಲ್ಕಿ ಬಂಟರ ಸಂಘದ ಗೌರವಾಧ್ಯಕ್ಷ ಸಂತೋಷ್ ಕುಮಾರ್ ಹೆಗ್ಡೆ, ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಕಾರ್ಯದರ್ಶಿ ಸಾಯಿನಾಥ ಶೆಟ್ಟಿ, ಜತೆ ಕಾರ್ಯದರ್ಶಿ ಶರತ್ ಶೆಟ್ಟಿ, ಕೋಶಾಧಿಕಾರಿ ಸ್ವರಾಜ್ ಶೆಟ್ಟಿ, ಮಾಜಿ ಅಧ್ಯಕ್ಷ ಪುರುಷೋತ್ತಮ ಪುರುಷೋತ್ತಮ ಶೆಟ್ಟಿ, ಕಾರ್ಯಕಾರಿ ಸಮಿತಿಯ ಸದಸ್ಯ ಸತೀಶ್ಚಂದ್ರ ಹೆಗ್ಡೆ, ರವಿರಾಜ್ ಶೆಟ್ಟಿ ಜತ್ತಬೆಟ್ಟು, ಶ್ರೀಶ ಸರಾಫ್ ಐಕಳ, ನಿಶಾಂತ್ ಶೆಟ್ಟಿ ಕಿಲೆಂಜೂರು, ಮಹಿಳಾ ವಿಭಾಗದ ಸಂಚಾಲಕಿ ರೋಹಿಣಿ ಶೆಟ್ಟಿ,ಶಮೀನ ಜಿ.ಆಳ್ವ, ಭಾರತಿ ರೈ,ಯುವ ವಿಭಾಗದ ದಾಮೋದರ ಶೆಟ್ಟಿ ,ಪುಷ್ಪರಾಜ ಚೌಟ, ಮತ್ತಿತರರಿದ್ದರು. ಇದಕ್ಕೂ ಮೊದಲು ದೇವಸ್ಥಾನದಲ್ಲಿ ಅರ್ಚಕ ಪ್ರಸಾದ್ ಭಟ್ ನೇತೃತ್ವದಲ್ಲಿ ಐಕಳ ಹರೀಶ್ ಶೆಟ್ಟಿ ಹಾಗೂ ಅಭಿಮಾನಿಗಳ ಬಳಗ ವಿಶೇಷ ಪ್ರಾರ್ಥನೆ ಸಲ್ಲಿಸಿದರು

ಅಕ್ಷಯ ಕಾಲೇಜಿನಲ್ಲಿ ಪ್ರಿನ್ಸ್-ಪ್ರಿನ್ಸೆಸ್ ದಕ್ಷಿಣ ಕನ್ನಡ 2ಕೆ26 ಸೀಸನ್-02 ಫ್ಯಾಷನ್ ಶೋ ಕಾರ್ಯಕ್ರಮದಲ್ಲಿ ಜಯಂತ್ ನಡುಬೈಲು ಬಣ್ಣನೆ

ಅಕ್ಷಯ ಪದವಿ, ಪಿಯುಸಿ ವಿದ್ಯಾರ್ಥಿಗಳ ಸಾಧನೆಯು ಸಾಗರದ ಆಚೆಗೂ ವಿಸ್ತರಿಸಿಕೊಂಡಿದೆ

ಪುತ್ತೂರು: ಅಕ್ಷಯ ಪದವಿ ಕಾಲೇಜಿನಲ್ಲಿ ಪ್ರಿನ್ಸ್ ಮತ್ತು ಪ್ರಿನ್ಸೆಸ್ ದಕ್ಷಿಣ ಕನ್ನಡ 2ಕೆ26 ಸೀಸನ್-02 ಫ್ಯಾಷನ್ ಶೋ ಕಾರ್ಯಕ್ರಮ ನಡೆಯಿತು.

ಫ್ಯಾಷನ್ ಶೋ ಕಾರ್ಯಕ್ರಮವನ್ನು ದೀಪ ಪ್ರಜ್ವಲನೆ ಮೂಲಕ ಉದ್ಘಾಟಿಸಿದ ಎಸ್.ಜಿ. ಸಮೂಹ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕ ಸತ್ಯಶಂಕರ್ ಮಾತನಾಡಿ, ಸತತ ಪ್ರಯತ್ನಗಳ ಮೂಲಕ ಶ್ರಮಿಸಿದರೆ ಗೆಲುವು ಶತಃಸಿದ್ಧ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಅಂತಾರಾಷ್ಟ್ರೀಯ ರೂಪದರ್ಶಿ ತಷ್ಮಾ ಚೇತನ್ ಮಾತನಾಡಿ, ಪದವಿ ಮತ್ತು ಫ್ಯಾಷನ್ ಸಹಸಂಬಂಧ ಹೊಂದಿದ್ದು ಇದು ಖಂಡಿತ ಮುಂದಿನ ದಿನಗಳಲ್ಲಿ ಉತ್ತಮ ಬದುಕು ಕೊಡುತ್ತದೆ. ಅದಕ್ಕೆ ನಾನೇ ನಿದರ್ಶನ. ನಿಮ್ಮೆಲ್ಲರ ಬದುಕು ಹಸನಾಗಲಿ ಎಂದು ಶುಭ ಹಾರೈಸಿದರು. ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ ಜಯಂತ್ ಶುಭಾಶಂಸನೆಗೈದರು.



ಸಮಾರೋಪ ಸಮಾರಂಭ

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು, ಇಂದು ಮಕ್ಕಳ ನಡೆಯು ಕಾಲೇಜಿನಲ್ಲಿ ಧನಾತ್ಮಕ ವಾತಾವರಣವನ್ನು ಸೃಷ್ಟಿಮಾಡಿದೆ. ಅಷ್ಟೇ ಅಲ್ಲ ಅಕ್ಷಯ ಪದವಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಸಾಧನೆಯು ಸಾಗರದ ಆಚೆಗೂ ವಿಸ್ತರಿಸಿಕೊಂಡಿದೆ. ಅದು ಶಿಕ್ಷಣದ ಜೊತೆಗೆ ಇಂತಹ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯ ಎಂದರು.

ಫ್ಯಾಷನ್ ಶೋ ವಿಜೇತರು

ಕೆಟಗರಿ-1 ಹುಡುಗರ ವಿಭಾಗ: ವಿನ್ನರ್- ಅಯಂಶ್ ಎನ್., 1 ರನ್ನರ್ ಅಪ್ ಯಜ್ವಯ್ ಜಿ., 2 ರನ್ನರ್ ಅಪ್ ತನ್ಮಯ್ ಎಸ್. ಪಕ್ಕಳ. ಹುಡುಗಿಯರ ವಿಭಾಗ: ವಿನ್ನರ್-: ಮನಸ್ವಿ, 1 ರನ್ನರ್ ಅಪ್-ಸಮೃದ್ಧಿ ಎಸ್., 2 ರನ್ನರ್ ಅಪ್ ರಿಧೀಷಾ ಎಸ್. ಕೆಟಗರಿ-2 ಹುಡುಗರ ವಿಭಾಗ: ವಿನ್ನರ್- ಧನ್ವಿತ್ ಡಿ.ಪಿ., 1 ರನ್ನರ್ ಅಪ್ ಅಧಿಶ್ ಎಲ್.ಎಸ್., 2 ರನ್ನರ್ ಅಪ್ ಮೌರ್ಯ. ಹುಡುಗಿಯರ ವಿಭಾಗ: ವಿನ್ನರ್- ಪ್ರಶ್ವಿ ಎಸ್., 1 ರನ್ನರ್ ಅಪ್ ಅಮೃತ ಜೆ.ಎನ್., 2 ರನ್ನರ್ ಅಪ್ ಶೈವಿ ಮರಕ್ಕಡ. ಕೆಟಗರಿ-3 ಹುಡುಗರ ವಿಭಾಗ: ವಿನ್ನರ್- ಅಹಿಲ್ ಹುಸೈನ್, 1 ರನ್ನರ್ ಅಪ್ ಹಬೀಬ್ ಜರಾರ್, 2 ರನ್ನರ್ ಅಪ್ ಸ್ವಾಹುದ್ದಿನ್. ಹುಡುಗಿಯರ ವಿಭಾಗ: ವಿನ್ನರ್- ವಿಹಾನಿ ಜಕೆ., 1 ರನ್ನರ್ ಅಪ್ ಮಿಸ್ಚ ಅನ ಡಿ'ಸೋಜ, 2 ರನ್ನರ್ ಅಪ್ ಮೌಲ್ಯ.

ಮುಖ್ಯ ಅತಿಥಿಗಳಾಗಿದ್ದ ಬೆಂಗಳೂರಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹನಿರ್ದೇಶಕ ಆನಂದ ಪಿ. ಮರ್ಸಿ ಬ್ಯೂಟಿ ಅಕಾಡೆಮಿ ಸಂಸ್ಥಾಪಕಿ ಮರ್ಸಿ ವೀಣಾ ಡಿ'ಸೋಜ, ರೆಡ್ ಬುಟಿಕ್ ಎಂಡ್ ಸ್ಟೈಲ್ ಸ್ಟುಡಿಯೋ ಮಾಲಕಿ ಮೋನಿಷ ಕಂಪ, ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ, ಅಕ್ಷಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಗಂಗಾರತ್ನ, ಆಡಳಿತ ಅಧಿಕಾರಿ ಅರ್ಪಿತ್ ಟಿ.ಎ., ಶೈಕ್ಷಣಿಕ ಮಾರ್ಗದರ್ಶಕ ಅಭಿಲಾಷ್ ಕ್ಷತ್ರಿಯ ಶುಭ ಹಾರೈಸಿದರು. ಕಾರ್ಯಕ್ರಮದ ಪ್ರಾಯೋಜಕ ಜಿ.ಎಲ್. ಆಚಾರ್ಯ ಜ್ಯುವೆಲ್ಲರ್ಸ್ ಮಾಲಕ ಬಲರಾಮ ಆಚಾರ್ಯ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವಿದ್ಯಾರ್ಥಿನಿಯರಾದ ರಮ್ಯಾ ಮತ್ತು ಮೋಕ್ಷ ಪ್ರಾರ್ಥಿಸಿದರು. ಉಪನ್ಯಾಸಕಿ ವೀಣಾ ಪ್ರಸ್ತಾವಿಸಿದರು. ಶೈಲಶ್ರೀ, ಅನುಷಾ ಪ್ರವೀಣ್ ಮತ್ತು ರಶ್ಮಿತಾ ಎಸ್. ಅತಿಥಿಗಳ ಪರಿಚಯಗೈದರು. ಪ್ರಭಾವತಿ ಮತ್ತು ರಶ್ಮಿ ಸ್ವಾಗತಿಸಿ, ಧನ್ಯಶ್ರೀ ಮತ್ತು ಜೆನ್ನಿಫರ್ ಡಿ'ಸೋಜ ವಂದಿಸಿದರು. ವಿದ್ಯಾರ್ಥಿನಿ ರಝೀನ ಬಾನು ಕಾರ್ಯಕ್ರಮ ನಿರ್ವಹಿಸಿದರು.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ

ಗುರುವಾರ 23, ಏಪ್ರಿಲ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸುತ್ತ ಮುತ್ತ

ಉಪನ್ಯಾಸ ಮಾಲಿಕೆ

ಕಾರ್ಕಳ: ಮಹಾಭಾರತದ ನೂರಾರು ಕಥೆಗಳು ಕನ್ನಡ ಸಂಘ ಕಾಂತಾವರ, ಅಲ್ಲಮಪ್ರಭು ಪೀಠ ಕಾಂತಾವರ, ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕಾರ್ಕಳ ಜಂಟಿಯಾಗಿ ಆಯೋಜಿಸಿದ ಮಹಾಭಾರತ ಭಾವದೀಪದ ಚತುರ್ಥ ಸೋಪಾನ ನೂರಾರು ಕಥೆಗಳು ಉಪನ್ಯಾಸ ಮಾಲಿಕೆ ಹೋಟೆಲ್ ಪ್ರಕಾಶದಲ್ಲಿ ನಡೆಯಿತು. ಉಪನ್ಯಾಸಕರಾದ ಡಾ ವಿನಾಯಕ ಭಟ್ ಗಾಳಿಮನೆಯವರು ಕುಂತಿಗೆ ದೂರ್ವಾಸ ಮುನಿಗಳಿಂದ ಸಿಕ್ಕಿದ 5 ವರಗಳು, ಕೌರವ ,ಪಾಂಡವರ ಹುಟ್ಟು, ವಿದುರ ನೀತಿಯ ಮಹತ್ವ, ವ್ಯಾಸರ ಕಾವ್ಯದ ಪಾರದರ್ಶಕತೆಗಳನ್ನು ಸೋದಾಹರಣವಾಗಿ ವಿವರಿಸಿದರು. ವೇದಿಕೆಯಲ್ಲಿ ಕನ್ನಡ ಸಂಘದ ಅಧ್ಯಕ್ಷರಾದ ಡಾ.ನಾ. ಮೊಗಸಾಲೆ. ಕಾರ್ಕಳ ಅಭಾಸಾಪದ ಅಧ್ಯಕ್ಷೆ ಮಿತ್ರಪ್ರಭಾ ಹೆಗ್ಡೆ ಉಪಸ್ಥಿತರಿದ್ದರು. ಜಯರಾಮ್ ನಾಯಕ್ ರ ಶಾರದಾ ಸ್ತುತಿಯೊಂದಿಗೆ, ಅಭಾಸಾಪದ ಗೌರವ ಅಧ್ಯಕ್ಷರಾದ ನಿತ್ಯಾನಂದ ಪೈ ಯವರು ಸ್ವಾಗತಿಸಿ ಜಗದೀಶ್ ಗೋಖಲೆ ವಂದಿಸಿ, ಕಾರ್ಯದರ್ಶಿ ಸುಲೋಚನ ಬಿ.ವಿ ಕಾರ್ಯಕ್ರಮ ನಿರೂಪಿಸಿದರು.

ಹಗ್ಗ ಜಗ್ಗಾಟ: ತೆಂಕನಿಡಿಯೂರು, ಅಜ್ಜರಕಾಡು ಪ್ರಥಮ



ಸುಬ್ರಹ್ಮಣ್ಯ: ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜ್ ಮತ್ತು ಮಂಗಳೂರು ವಿ.ವಿ. ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಸುಬ್ರಹ್ಮಣ್ಯದಲ್ಲಿ ಮಂಗಳೂರು ವಿ.ವಿ. ಮಟ್ಟದ ಅಂತರ್ ಕಾಲೇಜ್ ಪುರುಷರು ಮತ್ತು ಮಹಿಳಾ ವಿಭಾಗದ ಹಗ್ಗ ಜಗ್ಗಾಟ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ತೆಂಕನಿಡಿಯೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜ್ ಪ್ರಥಮ, ಮೂಡಬಿದಿರೆಯ ಆಳ್ವಾಸ್ ಕಾಲೇಜ್ ದ್ವಿತೀಯ, ಕೆಎಸ್ಎಸ್ ತೃತೀಯ, ಬೆಳ್ತಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜ್ ಚತುರ್ಥ ಸ್ಥಾನ ಪಡೆಯಿತು. ಮಹಿಳಾ ವಿಭಾಗದಲ್ಲಿ ಅಜ್ಜರಕಾಡು ಸರಕಾರಿ ಪ್ರಥಮ ದರ್ಜೆ ಕಾಲೇಜ್ ಪ್ರಥಮ, ಸುಳ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜ್ ದ್ವಿತೀಯ, ಮೂಡಬಿದಿರೆಯ ಆಳ್ವಾಸ್ ಕಾಲೇಜ್ ತೃತೀಯ, ಬೆಳ್ತಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜ್ ಚತುರ್ಥ ಸ್ಥಾನ ಪಡೆಯಿತು.

ಬಂಟ್ವಾಳ ಪುರವಾಸಿಗಳಿಗೆ ನೀರಿನ ದರ ಏರಿಕೆಯ ಬರೆ | ಆಡಳಿತದ ವಿರುದ್ಧ ನಾಗರಿಕರ ಆಕ್ರೋಶ

90 ರೂ. ಇದ್ದ ನೀರಿನ ಶುಲ್ಕ ಈಗ 140 ರೂ.ಗೆ ಏರಿಕೆ!

ಬಂಟ್ವಾಳ: ಇಲ್ಲಿಯ ಪುರವಾಸಿಗಳಿಗೆ ನೀರಿನ ಶುಲ್ಕದಲ್ಲಿ ದಿಢೀರನೇ ಹೆಚ್ಚಿಸಿ ಶಾಕ್ ನೀಡಿದೆ.ಇದುವರೆಗೆ 90 ರೂ.ಇದ್ದ ನೀರಿನ ಶುಲ್ಕ ಏ.1 ರಿಂದ ಜಾರಿಗೆ ಬರುವಂತೆ ಮಾಸಿಕವಾಗಿ 140ಕ್ಕೆ ಹೆಚ್ಚಿಸಲಾಗಿದ್ದರೆ, ವಾರ್ಷಿಕವಾಗಿ 1680 ರೂ.ವನ್ನು ಏಕಗಂಟಿನಲ್ಲಿ ಪಾವತಿಸಲು ಅವಕಾಶವಿತ್ತಿದೆ. ಈ ವಿಚಾರದಲ್ಲಿ ಪುರಸಭೆ ನಗರವಾಸಿಗಳಿಗೆ ಇದು ವರೆಗೂ ಪ್ರಕಟಣೆ ಅಥವಾ ಯಾವುದೇ ಪೂರ್ವಸೂಚನೆ ನೀಡದೆ ಏಕಾಏಕಿ ನೀರಿನ ಶುಲ್ಕ ಹೆಚ್ಚಿಸಿರುವುದು ಆಡಳಿತಶಾಹಿ ಅಧಿ ಕಾರಿಗಳ ವಿರುದ್ಧ ನಾಗರಿಕರಿಂದ ಆಕ್ರೋಶ ವ್ಯಕ್ತವಾಗಿದೆ.

2017ರ ಬಳಿಕ ನೀರಿನ ಶುಲ್ಕದಲ್ಲಿ ಹೆಚ್ಚಳ ಮಾಡದಿರುವ ಹಿನ್ನಲೆಯಲ್ಲಿ ಇದೀಗ ಏಕಾಏಕಿ 50 ರೂ.ವನ್ನು ಹೆಚ್ಚಿಸಿ ಅಧಿ ಕಾರಿಗಳು ಪುರವಾಸಿಗಳ ಮೇಲೆ ಹೊರೆ ಹಾಕಿದ್ದಾರೆ.



ಸಂಗಮ ವಿಶೇಷ

ಇನ್ನು ಪೂರ್ಣ ಗೊಂಡಿಲ್ಲ

ಬಂಟ್ವಾಳದ ಜಕ್ರಿಬೆಟ್ಟುವಿನಲ್ಲಿ ಅನುಷ್ಠಾನಗೊಂಡಿರುವ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಪುರಸಭಾ ವ್ಯಾಪ್ತಿಯಲ್ಲಿ ಇನ್ನು ಸಮರ್ಪಕವಾಗಿ ಪೂರ್ಣಗೊಂಡಿಲ್ಲ.ಈ ಯೋಜನೆ ಕೆಯುಡಬ್ಲ್ಯುಎಸ್ ನಿಂದ ಪುರಸಭೆಗೂ ಹಸ್ತಾಂತರ ಗೊಂಡಿಲ್ಲ, ಪುರಸಭಾ ವ್ಯಾಪ್ತಿಯ ಪಾಣೆಮಂಗಳೂರು ಸಹಿತ ಕೆಲವೆಡೆ ಇನ್ನು ಈ ಯೋಜನೆಯಲ್ಲಿ ಪೈಪ್‌ಲೈನ್ ಕೆಲಸ ಪೂರ್ಣಗೊಳ್ಳದಿರುವುದರಿಂದ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ, ಅರೆಬೆಂದ ರೀತಿಯಲ್ಲಿ ಈ ಯೋಜನೆಯ ಸ್ಥಿತಿಯಿದ್ದು, ಪುರವಾಸಿಗಳು ಇನ್ನು ಕೂಡ ಇದರ ಪ್ರಯೋಜನ ಪಡೆದಿರುವುದಿಲ್ಲ, ಕೆಲ ಮನೆಗಳಿಗೆ ಮೀಟರ್ ಅಳವಡಿಸಿದ್ದು,ಅದು ಗಾಳಿಗೂ ತಿರುಗುವುದರಿಂದ ಸಾವಿರಾರು ರೂ. ಶುಲ್ಕದ ಬಿಲ್ಲು ಬಂದಿರುವ ಉದಾಹರಣೆಯು ಇದೆ.ಈ ವಿಚಾರ ಜನಪ್ರತಿನಿಧಿಗಳ ಆಡಳಿತವಿದ್ದಾಗ ಜನಪ್ರತಿನಿಧಿಗಳು ಸಾಕಷ್ಟು ಬಾರಿ ಸಾಮಾನ್ಯ ಸಭೆಯಲ್ಲಿ ಗಮನಸೆಳೆದಿದ್ದಲ್ಲದೇ ಕೆಯುಡಬ್ಲ್ಯುಎಸ್ ಇಂಜಿನಿಯರ್ ಅನ್ನು ತರಾಟೆಗೂ ತೆಗೆದುಕೊಂಡಿದ್ದರು.

ಯೋಜನೆಯ ಅಪೂರ್ಣ ಕಾಮಗಾರಿಯ ಬಗ್ಗೆ ಸಾಕಷ್ಟು ಚರ್ಚೆ ನಡೆಸಲಾಗಿದ್ದರೂ ಇದನ್ನು ಸರಿಪಡಿಸುವುದಾಗಲಿ,ಕಾಮಗಾರಿ ಪೂರ್ಣಗೊಳಿಸಿ ಜನರಿಗೆ ನೀರು ಪೂರೈಸಿಲ್ಲ.ಈ ಯೋಜನೆ ಪುರಸಭೆಗೆ ಹಸ್ತಾಂತರವಾಗುವವರೆಗೆ ನೀರಿನ ಶುಲ್ಕ ಹೆಚ್ಚಿಸದೆ ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ಶಾಸಕ ರಾಜೇಶ್ ನಾಯ್ಕ್ ಅವರ ಸೂಚನೆಯ ಮೇರೆಗೆ ಇದುವರೆಗೂ ನೀರಿನ ಶುಲ್ಕ 90 ರೂ.ವಿನಲ್ಲೇ ಮುಂದುವರಿದಿತ್ತು. 2026 ಏ.1 ರಿಂದ ನೀರಿನ ಶುಲ್ಕದಲ್ಲಿ ಏಕಾಏಕಿ 50 ರೂ.ವಿನಷ್ಟು ಹೆಚ್ಚಳಗೊಳಿಸಿ ಪುರವಾಸಿಗಳಿಗೆ ಹೊರೆಯ ಬರೆ ಎಳೆದಿದ್ದಾರೆ.

ಚುನಾವಣೆ ಸದ್ಯಕ್ಕೆ ಅನುಮಾನ

ನಗರ ಮತ್ತು ಸ್ಥಳೀಯಾಡಳಿತ ಸಂಸ್ಥೆಗೆ ಸದ್ಯ ಚುನಾವಣೆಯನ್ನು ನಿರೀಕ್ಷಿಸುವಂತಿಲ್ಲ, ಇದೀಗ ಜಿ.ಪಂ.,ತಾ.ಪಂ.,ಚುನಾವಣೆಯ ವಿಚಾರ ಜನರ ಮನಸ್ಸಿನಿಂದಲೇ ದೂರವಾದಂತಿದೆ. ಇದೀಗ ಗ್ರಾ.ಪಂ. ಸಹಿತ ನಗರಪಾಲಿಕೆ,ಪುರಸಭೆಯಂತ ಸ್ಥಳೀಯಾಡಳಿತ ಸಂಸ್ಥೆಯು ಜನಪ್ರತಿನಿಧಿಗಳ ಆಡಳಿತವಿಲ್ಲದೆ 6 ತಿಂಗಳು ಕಳೆದರೂ ಜನರ ಸಮಸ್ಯೆಯನ್ನು ಕೇಳುವವರಿಲ್ಲದಂತಾಗಿದೆ ಮತ್ತು ಅಭಿವೃದ್ಧಿ ಕಾರ್ಯಗಳು ಕೂಡ ಕುಂಠಿತಗೊಂಡಿದೆ. ಸರಕಾರಕ್ಕು ಸ್ಥಳೀಯಾಡಳಿತ ಸಂಸ್ಥೆಗೆ ಚುನಾವಣೆ ನಡೆಸುವ ಆಸಕ್ತಿ ಇದ್ದಂತಿಲ್ಲ, ಹೈಕೋರ್ಟ್ ಸೂಚಿಸಿದರೂ ಸರಕಾರ ಕುಂಟು ನೆಪವೊಡ್ಡಿ ಮುಂದೂಡುತ್ತಲೇ ಇದೆ.

ಅಧಿಕಾರಿಗಳ ದರ್ಬಾರು

ಸ್ಥಳೀಯಾಡಳಿತ ಮತ್ತು ನಗರಾಡಳಿತ ಸಂಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತವಿಲ್ಲದಿದ್ದು,ಅಧಿಕಾರಿಗಳದ್ದೇ ಕಾರುಬಾರಾಗಿದೆ. ಬಂಟ್ವಾಳ ಪುರಸಭೆಗೆ ಮಂಗಳೂರು ಸಹಾಯಕ ಕಮಿಷನರ್ ಅವರು ಆಡಳಿತಾಧಿಕಾರಿಯಾಗಿದ್ದು, ಅವರು ಪ್ರಭಾರ ವಹಿಸಿ ಐದು ತಿಂಗಳಾದರೂ ಪುರಸಭೆಯಲ್ಲಿ ಒಂದೇ ಒಂದು ಸಾಮಾನ್ಯ ಸಭೆ ನಡೆಸಿ ಸಮಸ್ಯೆಯ ಬಗ್ಗೆ ಚರ್ಚೆಯೇ ನಡೆಸಿಲ್ಲ, ವೇತನ ಪಾವತಿಸದ ಹಿನ್ನಲೆಯಲ್ಲಿ ಗುತ್ತಿಗೆ ಸಿಬ್ಬಂದಿಗಳು ಪ್ರತಿಭಟನೆ ನಡೆಸಿ ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಪುರಸಭೆಗೆ ದೌಡಾಯಿಸಿದ್ದು ಬಿಟ್ಟರೆ ಈವರೆಗೂ ಇಲ್ಲಿಗೆ ಎಂಟ್ರಿಯೇ ಕೊಟ್ಟಿಲ್ಲ ಎಂದು ದೂರಲಾಗಿದೆ. ನೀರಿನ ಶುಲ್ಕ ಏರಿಕೆಯ ಮುನ್ನ ಕನಿಷ್ಠ ಶಾಸಕರ ಗಮನಕ್ಕೆ ತಂದು ಅಥವಾ ಅವರ ಉಪಸ್ಥಿತಿಯಲ್ಲಿ ಸಭೆ ನಡೆಸಿ ಚರ್ಚಿಸಿದ ಬಳಿಕವೇ ತೀರ್ಮಾನ ಕೈಗೊಳ್ಳಬೇಕಾಗಿತ್ತು ಎಂಬ ಅಭಿಪ್ರಾಯ ಸಾರ್ವಜನಿಕರ ಮತ್ತು ನಿಕಟಪೂರ್ವ ಸದಸ್ಯರ ಅಭಿಪ್ರಾಯವಾಗಿದೆ. ಆದರೆ ಮುಖ್ಯಾಧಿಕಾರಿಯವರಾಗಲೀ, ಆಡಳಿತಾಧಿಕಾರಿಯವರಾಗಲಿ ಇಂತಹ ಒಂದೇ ಒಂದು ಸಭೆ ನಡೆಸದೆ ನೀರಿನ ಶುಲ್ಕದಲ್ಲಿ ಏಕಾಏಕಿ 50 ರೂ. ಪುರವಾಸಿಗಳ ಆಕ್ರೋಶಕ್ಕೆ ಕಾರಣವಾಗಿದೆ.ಇದು ಅಧಿ ಕಾರಿಗಳು ನಡೆದದ್ದೇ ದಾರಿ, ಮಾಡಿದ್ದೇ ಕಾನೂನು ಎಂಬುದಕ್ಕೆ ತಾಜಾ ಉದಾಹರಣೆಯಾಗಿದೆ.

ಬಿಲ್ಲು ಕೊಡುವವರೇ ಇಲ್ಲ

ಪುರಸಭಾ ವ್ಯಾಪ್ತಿಯ ಎಲ್ಲಾ ಮನೆಗಳಿಗೂ ಪ್ರತಿತಿಂಗಳು ನೀರಿನ ಶುಲ್ಕದ ಬಿಲ್ಲು ಗುತ್ತಿಗೆ ಏಜೆನ್ಸಿ ಸಂಸ್ಥೆಯೊಂದರ ಸಿಬ್ಬಂದಿಗಳು ನೀಡುತ್ತಿದ್ದರು.ಆದರೆ ಬಂಟ್ವಾಳ ಪುರಸಭೆಯಲ್ಲಿ ಅಂತಹ ವ್ಯವಸ್ಥೆ ಇದೀಗ ಹಲವು ತಿಂಗಳನಿಂದ ಸ್ಥಗಿತಗೊಂಡಿದೆ. ಪ್ರಸ್ತುತ ಇರುವ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಅವರು ಅಧಿ ಕಾರ ವಹಿಸಿದ ಬಳಿಕ ಪುರಸಭೆಯ ವ್ಯವಸ್ಥೆಯನ್ನು ಬದಲಿಸುವ ಭರದಲ್ಲಿ ಗುತ್ತಿಗೆಯಾಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಕಿತ್ತು ಹಾಕಿದ್ದಲ್ಲದೆ ಮನೆ,ಮನೆಗೆ ನೀರಿನ ಶುಲ್ಕದ ಬಿಲ್ಲು ವಿತರಿಸುತ್ತಿದ್ದ ಏಜೆನ್ಸಿಯ ನೌಕರರನ್ನು ಮತ್ತು ಏಜೆನ್ಸಿಯನ್ನು ಕೈ ಬಿಟ್ಟಿರುವುದರಿಂದ ಹಲವು ತಿಂಗಳಿನಿಂದ ಮನೆ,ಮನೆಗೆ ನೀರಿನ ಶುಲ್ಕದ ಬಿಲ್ಲು ಬರುವುದು ನಿಂತಿದೆ. ಹಾಗಾಗಿ ನೀರಿನ ಆದಾಯದಲ್ಲಿ ಪುರಸಭೆಗೆ ಮಾಸಿಕವಾಗಿ ಲಕ್ಷಾಂತರ ರೂ. ಖೋತಾ ಆಗಿದೆ.ಸ್ವಯಂಪ್ರೇರಿತರಾಗಿ ಶುಲ್ಕ ಪಾವತಿಸಿದರಷ್ಟೇ ಪುರಸಭೆಯ ಖಾತೆಗೆ ಜಮಾ ಆಗುತ್ತದೆ.

ಕೇಪರ್ಡ ಮಹಿಷಮರ್ದಿನಿ ದೇವಸ್ಥಾನದಲ್ಲಿ ಧಾರ್ಮಿಕ ಸಂಸ್ಕಾರ ಶಿಕ್ಷಣ ಕೇಂದ್ರದ ವಾರ್ಷಿಕ ಸಂಭ್ರಮ: 'ಮಾತಾಪಿತೃ ವಂದನಾ' ಕಾರ್ಯಕ್ರಮ

ಪುತ್ತೂರು: ದೇವಾಲಯ ಸಂವರ್ಧನಾ ಸಮಿತಿ ಮಂಗಳೂರು ವಿಭಾಗ, ಹಿಂದೂ ಧಾರ್ಮಿಕ ಶಿಕ್ಷಣ ಪ್ರಕಲ್ಪ ಇದರ ಒಂದು ಕೇಂದ್ರವಾದ ಕೇಪರ್ಡ ಶ್ರೀ ಮಹಿಷಮರ್ದಿನಿ ದೇವಸ್ಥಾನದಲ್ಲಿ ಕಾಯರ್ಚರಿಸುತ್ತಿರುವ ಮಹಿಷಮರ್ದಿನಿ ಧಾರ್ಮಿಕ ಸಂಸ್ಕಾರ ಶಿಕ್ಷಣ ಕೇಂದ್ರದ ವಾರ್ಷಿಕ ಸಂಭ್ರಮ ನಡೆಯಿತು.



ಕಲ್ಲಡ್ಕ ಗಣೇಶ್ ಪರೋಹಿತರು ಮಾತಾಪಿತೃ ವಂದನೆ ನಡೆಸಿಕೊಟ್ಟರು. ಅವರನ್ನು ಕಾರ್ಯಕ್ರಮದಲ್ಲಿ ಹೂ, ಹಣ್ಣು ಹಂಪಲು, ಸ್ಮರಣಿಕೆ ನೀಡಿ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಸಭಾ ಕಾರ್ಯಕ್ರಮವನ್ನು ಸುಳ್ಯ ಶಾಸಕಿ ಭಾಗೀರಥಿ ಮುರಳ್ಯ ಅವರು ದೀಪ ಪ್ರಜ್ವಲನೆ ಮಾಡಿ ಶುಭ ಹಾರೈಸಿದರು. ಸಮರ್ಥ ಜನಸೇವಾ ಟ್ರಸ್ಟ್ ಪುಂಚಪ್ಪಾಡಿ ಅಧ್ಯಕ್ಷ ಗಿರಿಶಂಕರ್ ಸುಲಾಯ ಧಾರ್ಮಿಕ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ದೇವಾಲಯ ಸಂವರ್ಧನಾ ಸಮಿತಿಯ ಮಂಗಳೂರು ವಿಭಾಗದ ಪ್ರಮುಖ ಕೇಶವ ಪ್ರಸಾದ್ ಮುಳಿಯ, ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯ ವಾಚಣ್ಣ ಗೌಡ ಹುದೇರಿ, ಉದ್ಯಮಿ ಹಾಗೂ ಕಸ್ತೂರಿ ನರ್ಸರಿ ಮಾಲಕ ಮಧುಸೂದನ್ ಕುಂಭಕ್ಕೋಡು, ರೋಟರಿ ಚಾರಿಟೇಬಲ್ ಟ್ರಸ್ಟ್ ನಿಯೋಜಿತ ಅಧ್ಯಕ್ಷೆ ಲತಾ ಮಧುಸೂದನ್, ಧಾರ್ಮಿಕ ಸಂಸ್ಕಾರ ಶಿಕ್ಷಣ ಪ್ರಧಾನ ಸಂಚಾಲಕ ವಸಂತ ನಡುಬೈಲು, ವೆಂಕಟ್ರಮಣ ಆಚಾರ್ಯ ಕಲ್ಮಡ್ಕ ಉಪಸ್ಥಿತರಿದ್ದರು. ಸಂಸ್ಕಾರ ಕೇಂದ್ರದ ಅಧ್ಯಕ್ಷ, ಧ್ರುವ ಕುಮಾರ್ ಕೇರ್ಪಡ ಸ್ವಾಗತಿಸಿ, ಸುಹಾಸ್ ವಂದಿಸಿದರು. ಮಧು ಯತೀಶ್ ಕಾರ್ಯಕ್ರಮ ನಿರ್ವಹಿಸಿದರು. ನಳಿನಾಕ್ಷಿ ಕಲ್ಮಡ್ಕ ಮಾತಾಪಿತೃ ಕಾರ್ಯಕ್ರದಲ್ಲಿ ಸಹಕರಿಸಿದರು.

ಸಿಎಂರಿಂದ ಸುಲೋಚನಾ ಪಚ್ಚಿನಡ್ಕರ ಕುದ್ಮುಲ್ ರಂಗರಾಯರ ಕೃತಿ ಬಿಡುಗಡೆ

ಕಾರ್ಕಳ: ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಸುಲೋಚನಾ ಪಚ್ಚಿನಡ್ಕ ಬರೆದ ಮಾನವತಾವಾದಿ, ಶಿಕ್ಷಣ ಪ್ರೇಮಿ, ದಲಿತೋದ್ಧಾರಕ ಕುದ್ಮುಲ್ ರಂಗರಾಯರ ಬಗೆಗಿನ ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.



ಸಚಿವ ಶಿವರಾಜ ತಂಗಡಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ, ಕಾರ್ಯದರ್ಶಿ ಸಂತೋಷ ಹಾನಗಲ್, ನಾಡೋಜ ಬರಗೂರು ರಾಮಚಂದ್ರಪ್ಪ, ಶಾಸಕರಾದ ರಿಜ್ವಾನ್ ಅರ್ಷದ್, ಪರಿಷತ್ತಿನ ಸದಸ್ಯ ಎಸ್. ಎಲ್. ಭೋಜೇಗೌಡ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮಂಜುನಾಥ್, ಲೇಖಕಿ ಸುಲೋಚನಾ ಪಚ್ಚಿನಡ್ಕ ಇದ್ದರು. ಇದು ಸುಲೋಚನಾ ಪಚ್ಚಿನಡ್ಕ ಅವರ 8ನೇ ಕೃತಿ ಆಗಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಾಮರಸ್ಯದ ನೆಲೆಗಳು ಯೋಜನೆಯಡಿ ಪ್ರಕಟಗೊಂಡ 41 ಕೃತಿಗಳಲ್ಲಿ ಒಂದಾಗಿದೆ.

ಸುತ್ತ ಮುತ್ತ

ಸ್ಟೆಂಟ್ ಥಾಮಸ್ ವಸತಿ ಶಾಲೆಗೆ ಶೇ. 100 ಫಲಿತಾಂಶ

ಬೈಂದೂರು: ಇಲ್ಲಿನ ಸ್ಟೆಂಟ್ ಥಾಮಸ್ ವಸತಿ ಶಾಲೆಯು 2025-26ನೇ ಸಾಲಿನ ಸಿಬಿಎಸ್‌ಇ 10ನೇ ತರಗತಿ ಪರೀಕ್ಷಾ ಫಲಿತಾಂಶದಲ್ಲಿ ಶತಪ್ರತಿಶತ ಸಾಧನೆ ಮಾಡಿ ಮತ್ತೊಮ್ಮೆ ಶಿಕ್ಷಣ ಕ್ಷೇತ್ರದಲ್ಲಿ ತನ್ನ ವಿಶಿಷ್ಟತೆ ಮತ್ತು ಗುಣಮಟ್ಟವನ್ನು ಸಾಬೀತುಪಡಿಸಿದೆ. ಕಳೆದ 16 ವರ್ಷಗಳಿಂದ ನಿರಂತರ ಶೇ.100 ಫಲಿತಾಂಶ ದಾಖಲಿಸುತ್ತಾ ಬಂದಿರುವ ಈ ಶಿಕ್ಷಣ ಸಂಸ್ಥೆ, ಈ ವರ್ಷವೂ ಅದೇ ಯಶೋಗಾಥೆಯನ್ನು ಮುಂದುವರಿಸಿ ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದೆ. ಈ ಸಾಲಿನ ಫಲಿತಾಂಶದಲ್ಲಿ ಒಟ್ಟು 15 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ. 23 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, 3 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಪ್ರಾಂಶುಪಾಲ ವಂ. ಧರ್ಮಗುರು ಫಿಲಿಪ್ ನೆಲ್ಲಿವಿಳಾ ಹರ್ಷವ್ಯಕ್ತಪಡಿಸಿದ್ದಾರೆ.

ಶ್ರೀ ಅಮೃತೇಶ್ವರಿ ಜೋಗಿ ಮಹಿಳಾ ವೇದಿಕೆ ಉದ್ಘಾಟನೆ

ಕೋಟ: ಶ್ರೀ ಅಮೃತೇಶ್ವರಿ ಜೋಗಿ ಮಹಿಳಾ ವೇದಿಕೆ ಉದ್ಘಾಟನಾ ಕಾರ್ಯಕ್ರಮ ಭಾನುವಾರ ಶ್ರೀ ಅಮೃತೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಿತು. ಗೀತಾನಂದ ಫೌಂಡೇಶನ್ ನಿರ್ದೇಶಕಿ ಗೀತಾ ಎ.ಕುಂದರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಾಥಪಂಥ ಅಲೆಮಾರಿ ಜೋಗಿ ಮಹಿಳಾ ಸಂಘದ ಅಧ್ಯಕ್ಷೆ ಅನುಪಮ ಜೋಗಿ ಶುಭ ಹಾರೈಸಿದರು. ಈವೇಳೆ ಅಮೃತೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ವೇದಿಕೆಯ ಗೌರವಾಧ್ಯಕ್ಷ ಸುಬ್ರಾಯ ಜೋಗಿ , ದೇವಸ್ಥಾನದ ಅರ್ಚಕ ಉದಯ್ ಜೋಗಿ ,ಮಹಿಳಾ ವೇದಿಕೆಯ ಅಧ್ಯಕ್ಷೆ ಭವಾನಿ ಕೆ, ಕಾರ್ಯದರ್ಶಿ ರೇಖಾ ಕೆ., ಕೋಶಾಧಿಕಾರಿ ಗೀತಾ ಜೋಗಿ ಹಾಗೂ ಸರ್ವ ಸದಸ್ಯರು ಉಪಸ್ಥಿತರಿದ್ದರುನಂತರ ಅಮೃತೇಶ್ವರೀ ದೇವಸ್ಥಾನದಲ್ಲಿ ಜೋಗಿ ಮಹಿಳಾ ವೇದಿಕೆಯ ಸದಸ್ಯರಿಂದ ಭಗವದ್ಗೀತೆ ಪಾರಾಯಣಗೈದರು.

ಡಾ.ಅಂಬೇಡ್ಕರ್ ಜಯಂತಿ

ಕುಂದಾಪುರ: ದಲಿತ ಹಕ್ಕುಗಳ ಸಮಿತಿ ಉಡುಪಿ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಕುಂದಾಪುರದ ಹಂಚು ಕಾರ್ಮಿಕರ ಭವನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಕಾರ್ಯಕ್ರಮ ನಡೆಯಿತು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ್ ಕುಲಾಲ್ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ದಲಿತ ಹಕ್ಕುಗಳ ಸಮಿತಿಯ ಅಧ್ಯಕ್ಷ ಸಂಜೀವ ಬಳ್ಕೂರು ವಹಿಸಿದ್ದರು. ಶ್ರೀರಾಮ ದಿವಾಣ ಮೂಡುಬೆಳ್ಳೆ ಅಂಬೇಡ್ಕರ್ ಜಯಂತಿಯ ಉಪನ್ಯಾಸ ಮಾಡಿದರು. ಬಾಲಕೃಷ್ಣ ಶೆಟ್ಟಿ, ರಾಜೀವ ಪಡುಕೋಣೆ, ಎಚ್. ನರಸಿಂಹ, ದಲಿತ ಹಕ್ಕುಗಳ ಸಮಿತಿಯ ಉಪಾಧ್ಯಕ್ಷೆ ನಾಗರತ್ನ ನಾಡ, ಶೀಲಾವತಿ ಉಪಸ್ಥಿತರಿದ್ದರು. ರವಿ ವಿ.ಎಂ ಸ್ವಾಗತಿಸಿದರು. ನಾಗರತ್ನ ಆರ್. ನಾಡ ನಿರೂಪಿಸಿದರು.

ಮಂಜೂರಾತಿ ಪತ್ರ ಹಸ್ತಾಂತರ

ಕೋಟ: ಕೋಡಿ ಗ್ರಾಮದ ಕೋಡಿ ತಲೆ ಹೊಸಬೆಂಗ್ರೆ ರುದ್ರಭೂಮಿ ಅಭಿವೃದ್ದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರೂ.1,51,000.00 ಮೌಲ್ಯದ ಸಿಲಿಕಾನ್ ಚೇಂಬರ್ ಮಂಜೂರಾಗಿದ್ದು, ಇದರ ಮಂಜೂರಾತಿ ಪತ್ರವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬ್ರಹ್ಮಾವರ ತಾಲೂಕಿನ ಯೋಜನಾಧಿಕಾರಿ ರಮೇಶ್ ಪಿ.ಕೆ ಇವರು ರುದ್ರಭೂಮಿ ಅಭಿವೃದ್ಧಿ ಸಮಿತಿಗೆ ಹಸ್ತಾಂತರಿಸಿದರು. ಐರೋಡಿ ನಟರಾಜ್ ಗಾಣಿಗ, ಮಾಲತಿ, ಚಂದ್ರ ಖಾರ್ವಿ,ಉಪಾಧ್ಯಕ್ಷ ನಾಗೇಶ ಖಾರ್ವಿ,ಶರಣರಾಜ,ರಶ್ಮಿ,ಮಾನಸ, ಶಾಂತಿ, ರತ್ನ, ಮೀನಾ,ಮೋಹನ, ಗಣೇಶ, ಸಂತೋಷ, ಸಂಜೀವ,ರಾಮ, ಆನಂದ, ರಾಮದಾಸ,ಬಸವ,ಮಣಿಕಂಠ ಉಪಸ್ಥಿತರಿದ್ದರು.

ಮೊದಲನೇ ಪುಟದಿಂದ

ಕೊಕ್ಕೋ?

ಆ ಮೂಲಕ ಮುಖ್ಯವಾಗಿ ಕರಾವಳಿಯ ಬೆಳೆಗಾರರಿಗೆ ಬಿಳಿ ಚಿನ್ನವಾಗಿ ಮುಖದಲ್ಲಿ ಮಂದಹಾಸಕ್ಕೆ ಕಾರಣವಾಗಿತ್ತು. ಮಾರುಕಟ್ಟೆಗೆ ಆವಕ ಕಡಿಮೆ, ಕೊಕ್ಕೋದ ಪ್ರಮುಖ ಬೆಳೆಗಾರ ಆಫ್ರಿಕಾದ ರಾಷ್ಟ್ರಗಳಲ್ಲಿ ವೈರಸ್ ರೋಗದ ದಾಳಿಗೆ ಒಳಗಾಗಿ ನಾಶ ವಾಗಿ ಕೆಲವು ವರ್ಷಗಳ ಮಟ್ಟಿಗೆ ಬೆಳೆ ತೆಗೆಯಲು ಸಾಧ್ಯವಾಗದೇ ಇರುವುದು ಈ ಹೊಸ ಬೆಳವಣಿಗೆಗೆ ಕಾರಣವಾಗಿತ್ತು. ಕೊಕ್ಕೋ ಬೆಳೆಯ ಸ್ಥಿತಿ ಸಹಸ ಸ್ಥಿತಿಗೆ ಬರುವ ಮೂಲಕ ವ್ಯಾಪಕ ಬೇಡಿಕೆಯಿದ್ದರೂ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆ ಕಂಡಿದೆ. ಧಾರಣೆ ಏರಿಕೆ ಹಾದಿಯಲ್ಲಿದ್ದಾಗ ಹೊಸ ಬೆಳವಣಿಗೆ ಎನ್ನುವಂತೆ ಕರಾವಳಿಯ ಪ್ರಮುಖ ವಾಣಿಜ್ಯ ಬೆಳೆ ಅಡಿಕೆಯ ಅಸ್ಥಿರತೆ ಮಧ್ಯೆ ಕೊಕ್ಕೋ ಒಂದಷ್ಟು ನಿರ್ಲಕ್ಷಿಸಿದ್ದ ಬೆಳೆಗಾರರು ಉಪ ಬೆಳೆಯಾಗಿ ಮತ್ತೆ ಬೆಳೆಯಲು ಆರಂಭಿಸಿದ್ದರು. ಕೆಲವರು ಕೊಕ್ಕೋ ಗಿಡಗಳ ನಿರ್ವಹಣೆ ಮಾಡದೇ ಬಿಟ್ಟವರು ಹಾಗೂ ಕೊಕ್ಕೋ ಗಿಡಗಳನ್ನು ತೋಟದ ಮಧ್ಯೆಯಿಂದ ಸವರಿದವರು ಮತ್ತೆ ಉಪ ಬೆಳೆಯಾಗಿ ಕೊಕ್ಕೋದ ಕಡೆಗೆ ವಾಲಿದ್ದರು.

ಹೈರಾಣಾದ ಸಿಬ್ಬಂದಿಗಳು!

ಇತ್ತೀಚೆಗೆ ನಡೆದ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳಿಗೆ, ಎಕ್ಸ್‌ಟರ್ನಲ್ ಎಕ್ಸಾಮಿನರ್ ಆಗಿ ಆಗಮಿಸಿದ ಅಧ್ಯಾಪಕರಿಗೆ ಕಾಲೇಜಿನೊಳಗೆ ಪ್ರವೇಶಿಸಲಿರುವ ಅನುಮತಿಗಾಗಿ ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ನಂತರ ಸಮಗ್ರ ತಪಾಸಣೆ ಕೈಗೊಂಡ ಬಳಿಕ ಒಳಪ್ರವೇಶಕ್ಕೆ ಅನುಮತಿ ನೀಡಲಾಗಿತ್ತು.

ಗ್ರಾ.ಪಂ. ಚುನಾವಣೆಗೆ ಸಿದ್ಧತೆ | ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗದಿಂದ ಸದಸ್ಯರ ಸಂಖ್ಯೆ ನಿಗದಿ

ಉಡುಪಿ ಜಿಲ್ಲೆಯಲ್ಲಿ 155 ಪಂಚಾಯತ್‌ಗಳಿಗೆ 2413 ಸದಸ್ಯರು

ಉಡುಪಿ: ಜಿಲ್ಲೆಯಲ್ಲಿ ಗ್ರಾಮ ಪಂಚಾಯತ್ ಚುನಾವಣೆಯ ಕಾವು ನಿಧಾನವಾಗಿ ಏರುತ್ತಿದೆ. ಚುನಾವಣಾ ಪ್ರಕ್ರಿಯೆಯ ಮೊದಲ ಮತ್ತು ಪ್ರಮುಖ ಹಂತವಾದ 'ಸದಸ್ಯರ ಸಂಖ್ಯೆ ನಿಗದಿ'ಯನ್ನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಈಗ ಪೂರ್ಣಗೊಳಿಸಿದೆ. ಜಿಲ್ಲೆಯ ಏಳು ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರತಿ ಗ್ರಾಮ ಪಂಚಾಯತ್‌ಗೆ ಎಷ್ಟು ಜನ ಚುನಾಯಿತ ಪ್ರತಿನಿಧಿಗಳು ಇರಬೇಕು ಎಂಬ ಅಧಿಕೃತ ಪಟ್ಟಿಯನ್ನು ಆಯೋಗವು ಬಿಡುಗಡೆ ಮಾಡಿದೆ.

ಹೆಬ್ರಿ ತಾಲೂಕಿನ ಗ್ರಾ.ಪಂ.ಗಳು

ಕುಚ್ಚೂರು -11, ನಾಡ್ಪಾಲು-7, ಹೆಬ್ರಿ-16, ಚಾರಾ ಮತ್ತು ಶಿವಪುರ ತಲಾ - 13, ಮುದ್ರಾಡಿ-15, ವರಂಗ ಹಾಗೂ ಬೆಳ್ವೆ ತಲಾ-18 ಮತ್ತು ಮಡಾಮಕ್ಕಿ-11 ಸೇರಿದಂತೆ ಒಟ್ಟು 122 ಸದಸ್ಯರು.

ಕುಂದಾಪುರ ತಾಲೂಕಿನ ಗ್ರಾ.ಪಂ.ಗಳು

ಆಲೂರು ಮತ್ತು ಕೆರಾಡಿ ತಲಾ -14, ಚಿತ್ತೂರು-8, ವಂಡ್ಸೆ-7, ಹಕ್ಲಾಡಿ-16, ತ್ರಾಸಿ-8, ಗುಜ್ಜಾಡಿ-16, ಹೆಮ್ಮಾಡಿ-11, ತಲ್ಲೂರು-16, ಹಟ್ಟಿಯಂಗಡಿ-14, ಕರ್ಕುಂಜೆ-11, ಆಜ್ರಿ-19, ಹೊಸಂಗಡಿ-13, ಸಿದ್ದಾಪುರ-19, ಶಂಕರನಾರಾಯಣ -18, ಅಂಪಾರು-13, ಕಾವ್ರಾಡಿ-16, ಬಳ್ಕೂರು-8, ಬಸ್ರೂರು-17, ಆನಗಳ್ಳಿ-8, ಹಂಗಳೂರು-12, ಕೋಣಿ-10, ಕೋಟೇಶ್ವರ-26, ಬೀಜಾಡಿ-16, ಕುಂಭಾಶಿ ಹಾಗೂ ತೆಕ್ಕಟ್ಟೆ ತಲಾ-14, ಬೇಳೂರು-9, ಕೆದೂರು-10, ಕಾಳಾವರ ಹಾಗೂ ಹೊಂಬಾಡಿ ಮಂಡಾಡಿ ತಲಾ-17, ಮೊಳಹಳ್ಳಿ-11, ಹಾರ್ದಳ್ಳಿ ಮಂಡಳ್ಳಿ-13, ಹಾಲಾಡಿ-11, ಹೆಂಗವಳ್ಳಿ-9, ಅಮಾಸೆಬೈಲು-19, ಇಡೂರು ಕುಂಜ್ಞಾಡಿ-12, ಹೊಸಾಡು-15, ಕಟ್‌ಬೆಲ್ತೂರು ಹಾಗೂ ಗುಲ್ವಾಡಿ ತಲಾ 13, ಯಡಮೊಗೆ -6, 74 ಉಳ್ಳೂರು, ಕಂದಾವರ, ಗೋಪಾಡಿ ಹಾಗೂ ಕೊರ್ಗಿ ತಲಾ 9 ಮತ್ತು ಗಂಗೊಳ್ಳಿ-33 ಸಹಿತ ಒಟ್ಟು 602 ಸದಸ್ಯರು.

ಬೈಂದೂರು ತಾಲೂಕಿನ ಗ್ರಾ.ಪಂ.ಗಳು

ಬಿಜೂರು-18, ಗೋಳಿಹೊಳೆ-16, ಹಳ್ಳಿಹೊಳೆ-6, ಕೆರ್ಗಾಲು-12, ಹೇರೂರು-13, ಜಡ್ಕಲ್ -18, ಕಾಲ್ತೋಡು -13, ಕಂಬದಕೋಣೆ 14, ಕಿರಿಮಂಜೇಶ್ವರ-19, ಕೊಲ್ಲೂರು-9, ಮರವಂತೆ-14, ನಾಡಾ-19, ನಾವುಂದ -15, ಶಿರೂರು-44 ಮತ್ತು ಉಪ್ಪುಂದ -29 ಸೇರಿದಂತೆ ಒಟ್ಟು 259 ಸದಸ್ಯರು.

ಉಡುಪಿ ತಾಲೂಕಿನ ಗ್ರಾ.ಪಂ.ಗಳು

ಪೆರ್ಡೂರು-28, ಕುಕ್ಕೆಹಳ್ಳಿ-14, ಬೈರಂಪಳ್ಳಿ- 16, ಕಲ್ಯಾಣಪುರ-20, ತೋನ್ಸೆ-21, ತೆಂಕನಿಡಿಯೂರು-26, ಬಡಾನಿಡಿಯೂರು-11, ಅಂಬಲಪಾಡಿ-19, ಕಡೇಕಾರು-21, ಉದ್ಯಾವರ-30, 80 ಬಡಗಬೆಟ್ಟು-24, ಆತ್ರಾಡಿ-14, ಕೊಡಿಬೆಟ್ಟು-19, ಬೊಮ್ಮರಬೆಟ್ಟು-21, ಮಣಿಪುರ-16 ಮತ್ತು ಅಲೆವೂರು-29 ಸೇರಿದಂತೆ ಒಟ್ಟು329 ಸದಸ್ಯರು.

ಬ್ರಹ್ಮಾವರ ತಾಲೂಕಿನ ಗ್ರಾ.ಪಂ.ಗಳು:

ಕೋಟತಟ್ಟು- 13, ಕೋಟ-25, ಪಾಂಡೇಶ್ವರ-13, ಕೋಡಿ-12, ಐರೋಡಿ-16, ಬಾರ್ಕೂರು-12, ವಡ್ಡರ್ಸೆ-17, ಯಡ್ತಾಡಿ-16, ಶಿರಿಯಾರ-13, ಬಿಲ್ಲಾಡಿ-12, ಆವರ್ಸೆ-16, ಹೆಗ್ಗುಂಜೆ-15, ಹನೇಹಳ್ಳಿ-11, ಕಾಡೂರು-12, ನಾಲ್ಕೂರು-17, ಕೊಕ್ಕರ್ಣೆ-21, ಚೇರ್ಕಾಡಿ-16, 38 ಕಳತ್ತೂರು-13, ಕರ್ಜೆ-12, ಆರೂರು-10, ಉಪ್ಪೂರು-20, ವಾರಂಬಳ್ಳಿ-18, ಹಾರಾಡಿ-19, ಚಾಂತಾರು-26, ಹಾವಂಜೆ -10, ಹಂದಾಡಿ-18 ಮತ್ತು ನೀಲಾವರ -9 ಸೇರಿದಂತೆ ಒಟ್ಟು 412 ಸದಸ್ಯರು.

ಕಾಪು ತಾಲೂಕಿನ ಗ್ರಾ.ಪಂ.ಗಳು

ಬೆಳ್ಳೆ-18, ಕುರ್ಕಾಲು-14, ಶಿರ್ವ-34, ಇನ್ನಂಜೆ-13, ಕಟಪಾಡಿ-26, ಕೋಟೆ-15, ಮಜೂರು-13, ಕುತ್ಯಾರು-14, ಮುದರಂಗಡಿ-15, ಬೆಳಪು-11, ಬಡಾ-21, ಎಲ್ಲೂರು-14, ಫಲಿಮಾರು-16, ತೆಂಕ-11, ಪಡುಬಿದ್ರಿ-34 ಹಾಗೂ ಹೆಜಮಾಡಿ -21 ಸೇರಿದಂತೆ ಒಟ್ಟು 290 ಸದಸ್ಯರು.

ಕಾರ್ಕಳ ತಾಲೂಕಿನ ಗ್ರಾ.ಪಂ.ಗಳು

ಕಡ್ತಲ-14, ಮರ್ಣೆ-24, ಹಿರ್ಗಾನ-13, ಶಿರ್ಲಾಲು-8, ಕೆರ್ವಾಶೆ-8, ಮಾಳಾ-15, ಮುಡಾರು-16, ದುರ್ಗಾ-9, ಕುಕ್ಕುಂದೂರು-33, ಎರ್ಲಪಾಡಿ-12, ಬೈಲೂರು-14, ನೀರೆ-15, ಪಳ್ಳಿ-15, ಕಲ್ಯಾ -10, ನಿಟ್ಟೆ31, ಸಾಣೂರು-18, ಮಿಯಾರು-19, ನಲ್ಲೂರು-15, ಈದು-19, ರೆಂಜಾಳ-8, ಇರ್ವತ್ತೂರು-7, ಬೋಳಾ-10, ಕಾಂತಾವರ-9, ಬೆಳ್ಮಣ್-18, ನಂದಳಿಕೆ-12, ಇನ್ನಾ -9 ಹಾಗೂ ಮುಂಡ್ಕೂರು 18 ಸೇರಿದಂತೆ ಒಟ್ಟು 399 ಸದಸ್ಯ ಸ್ಥಾನಗಳು.

ಆಕ್ಷೇಪಣೆ ಸಲ್ಲಿಸಲು ಅವಕಾಶ

ಆಯೋಗವು ಬಿಡುಗಡೆ ಮಾಡಿರುವ ಈ ಸದಸ್ಯರ ಸಂಖ್ಯೆಯ ಬಗ್ಗೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಏ.24ರ ಸಂಜೆ 5 ಗಂಟೆಯೊಳಗೆ ಆಕ್ಷೇಪಣೆಗಳನ್ನು ದಾಖಲಿಸಬಹುದು. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಅಧಿಕೃತ ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದು ಅಥವಾ ಬೆಂಗಳೂರಿನಲ್ಲಿರುವ 'ಸೀಮಾ ನಿರ್ಣಯ ಆಯೋಗ'ದ ಕಚೇರಿಗೆ ಅಂಚೆ ಮೂಲಕ ಕಳುಹಿಸಿಕೊಡಬಹುದು. ಜಿಲ್ಲಾಧಿಕಾರಿಗಳ ಕಚೇರಿಯು ಈ ಬಗ್ಗೆ ಈಗಾಗಲೇ ಪ್ರಕಟಣೆ ಹೊರಡಿಸಿದ್ದು, ಸಮಯದ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ.

ಕಟಪಾಡಿ ಶ್ರೀನಿವಾಸ ಕಲ್ಯಾಣೋತ್ಸವದ 'ಕೃತಜ್ಞತಾ ಸೌಹಾರ್ದ ಸಂಗಮ'

ಅಚ್ಚುಕಟ್ಟು ಜವಾಬ್ದಾರಿ ನಿರ್ವಹಣೆಯಿಂದ ಯಶಸ್ಸು



ಶಿರ್ವ: ತಿರುಪತಿ ತಿರುಮಲ ದೇವಸ್ಥಾನ ಸಮಿತಿಯ ವತಿಯಿಂದ ಕೆ. ಕೃಷ್ಣಮೋಹನ್ ಪೈ ಯುಎಸ್‌ಎ ಅವರ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ ಪುರುಷೋತ್ತಮ ಪೈ ಹಾಗೂ ಕುಟುಂಬಸ್ಥರ ವತಿಯಿಂದ ಕಟಪಾಡಿಯಲ್ಲಿ ಏ. 11ರಂದು ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಕ್ರೀಡಾಂಗಣದಲ್ಲಿ ಜರಗಿದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಯಶಸ್ಸಿಗೆ ಕೈಜೋಡಿಸಿರುವ ಎಲ್ಲರನ್ನು ಗೌರವಿಸುವ ನಿಟ್ಟಿನಲ್ಲಿ 'ಕೃತಜ್ಞತಾ ಸೌಹಾರ್ದ ಸಂಗಮ' ಭಾನುವಾರ ಸಂಜೆ ಕಟಪಾಡಿ ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಜರಗಿತು.

ಕಾರ್ಯಕ್ರಮದ ರೂವಾರಿ ಉದ್ಯಮಿ ಹಾಗೂ ವಿದ್ಯಾವರ್ಧಕ ಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿಗೆ ಕಾರಣೀಭೂತರಾದ ದೇವಸ್ಥಾನ, ದೈವಸ್ಥಾನಗಳು, ಭಜನಾ ಮಂದಿರಗಳು, ಶಿಕ್ಷಣ ಸಂಸ್ಥೆಗಳು, ಧರ್ಮಸ್ಥಳ ಯೋಜನೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸ್ವಯಂಸೇವಕರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಯಶಸ್ಸಿಗೆ ಕಾರಣವಾಗಿದೆ. ಇನ್ನು ಮುಂದೆಯೂ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದಕ್ಕೆ ಸ್ಫೂರ್ತಿ, ಧೈರ್ಯ ಸಿಕ್ಕಿದೆ ಎಂದು ಹಾರೈಸಿದರು.

ಸತ್ಯೇಂದ್ರ ಪೈಗೆ ಸನ್ಮಾನ

ಬೆಹರೆನ್ ಕನ್ನಡ ಸಂಘದ ಅಧ್ಯಕ್ಷ ಅಜಿತ್ ಬಂಗೇರ ಹಾಗೂ ಯಶವಂತ್ ಶಾನುಭಾಗ್ ಸಾರ್ವಜನಿಕರ ಪರವಾಗಿ ಸತ್ಯೇಂದ್ರ ಪೈ ದಂಪತಿಯನ್ನು ಅಭಿನಂದಿಸಿ, ಸನ್ಮಾನಿಸಿದರು. 5 ಮಂದಿ ಅದೃಷ್ಟಶಾಲಿ ವಿಜೇತರಿಗೆ ಶ್ರೀ ವೆಂಕಟರಮಣನ ದೇವರ ಫೋಟೋ ನೀಡಲಾಯಿತು.

ಈ ಸಂದರ್ಭದಲ್ಲಿ ಸಾಧನಾ ಸತ್ಯೇಂದ್ರ ಪೈ, ಕಟಪಾಡಿ ಶ್ರೀವಿಶ್ವನಾಥ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ಮಹೇಶ್ ಎನ್. ಅಂಚನ್, ಕಟಪಾಡಿ ರೋಟರಿ ಅಧ್ಯಕ್ಷೆ ಆಶಾ ಅಂಚನ್, ಮೂಡುಬಿದಿರೆ ಆರ್. ಕೆ. ಎಂಟರ್‌ಪ್ರೈಸೆಸ್ ಮುಖ್ಯಸ್ಥ ಆರ್. ಕೆ. ಭಟ್, ಹೊಸ್ಮಾರು ಶಿವಾನಂದ ಶೆಣೈ, ಕಟಪಾಡಿ ರೋಟರಿ ಕ್ಲಬ್ ಮಾಜಿ ಅಧ್ಯಕ್ಷೆ ತುಳಸಿ ದೇವಾಡಿಗ, ಕೋಟೆ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಯೋಗೀಶ್, ಉದ್ಯಾವರ ಗ್ರಾ.ಪಂ. ಸದಸ್ಯ ರಾಜೇಶ್ ಶ್ರೀಯಾನ್, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿ ಸದಸ್ಯರಾದ ನಿತ್ಯಾನಂದ ಶೆಣೈ, ಬಿ. ಚಂದ್ರಕಾಂತ್ ಪೈ, ಗಣೇಶ್ ಕಿಣಿ, ಕೃಷ್ಣಾನಂದ ಕಾಮತ್, ವೆಂಕಟರಮಣ ಭಟ್, ಶ್ರೀನಿವಾಸ ಕಿಣಿ, ಆಡಳಿತಾಧಿಕಾರಿ ಸುಧಾಕರ್ ಬ್ರಹ್ಮಾವರ್, ಪ್ರಮುಖರಾದ ಕಾರ್ತಿಕ್ ಪಾಲನ್, ಶ್ರೇಯಸ್ ಸತ್ಯೇಂದ್ರ ಪೈ, ಶಂಕರ ಸಲ್ಯಾನ್, ಸಂತೋಷ್ ಶೆಟ್ಟಿಗಾರ್, ಹರಿಶ್ಚಂದ್ರ ಪೈ, ಹಾಗೂ ರೋಟರಿ ಕ್ಲಬ್ ಮತ್ತು ಸ್ಕೂಲ್ ಲೀಡರ್ ಸಿನೆಮಾ ತಂಡದ ಸದಸ್ಯರು, ಎಸ್‌ವಿಎಸ್ ವಿದ್ಯಾಸಂಸ್ಥೆಗಳ ಶಿಕ್ಷಕರು ಮತ್ತು ಸಿಬಂದಿ, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು. ಪತ್ರಕರ್ತ ಪ್ರಕಾಶ್ ಸುವರ್ಣ ಕಾರ್ಯಕ್ರಮ ನಿರ್ವಹಿಸಿದರು.

ನಾರಿ ಶಕ್ತಿ ಮಸೂದೆ ವಿರೋಧಿಸುವ ವಿರೋಧಪಕ್ಷಗಳ ನಡೆ ಖಂಡನೀಯ: ಯೋಗೀಶ್

ಮಹಿಳಾ ಮೀಸಲಾತಿಗೆ ಜೆಡಿಎಸ್ ಪೂರ್ಣ ಬೆಂಬಲ



ಉಡುಪಿ: ಕೇಂದ್ರ ಸರ್ಕಾರ ಮಂಡಿಸಿರುವ 'ನಾರಿ ಶಕ್ತಿ ವಂದನ' ವಿಧೇಯಕವನ್ನು ವಿರೋಧಿಸುತ್ತಿರುವ ಎಡಪಕ್ಷಗಳು ಹಾಗೂ ಕಾಂಗ್ರೆಸ್ ನೇತೃತ್ವದ ಮಿತ್ರಕೂಟದ ಧೋರಣೆ ಅತ್ಯಂತ ಖಂಡನೀಯ. ಜೆಡಿ ಎಸ್ ಪಕ್ಷ ಮಹಿಳಾ ಮೀಸಲಾತಿ ಮಸೂದೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದು ಜೆಡಿಎಸ್ ಉಡುಪಿ ಜಿಲ್ಲಾಧ್ಯಕ್ಷ ಯೋಗೀಶ್ ಶೆಟ್ಟಿ ತಿಳಿಸಿದರು.

ಮಂಗಳವಾರ ಉಡುಪಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು 1996ರಲ್ಲಿ ಪ್ರಧಾನಿಯಾಗಿದ್ದಾಗಲೇ ಸಾಹಸ ಮಾಡಿ ಸಂಸತ್ತಿನಲ್ಲಿ ಮೊದಲ ಬಾರಿಗೆ 33% ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದರು. ಅಂದು ದೇವೇಗೌಡರು ಬಿತ್ತಿದ ಆ ಕನಸು ಇಂದು ಸಾಕಾರಗೊಳ್ಳುವ ಹಂತದಲ್ಲಿದೆ. ಆದರೆ, ಅಂದು ಅವರು ಹಾಕಿದ ಭದ್ರ ಬುನಾದಿಗೆ ಕಾಂಗ್ರೆಸ್ ಹಾಗೂ ಎಡಪಕ್ಷಗಳು ತಣ್ಣೀರು ಎರಚುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಿಳಾ ಪ್ರಗತಿಗೆ ತಡೆ

ದಶಕಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ಪಕ್ಷಕ್ಕೆ ಈ ಮಸೂದೆಯನ್ನು ಜಾರಿಗೆ ತರಲು ಮನಸ್ಸಿರಲಿಲ್ಲ, ಈಗ ಎನ್‌ಡಿಎ ಸರ್ಕಾರವು ಈ ಐತಿಹಾಸಿಕ ಮಸೂದೆಯನ್ನು ಜಾರಿಗೆ ತರುತ್ತಿರುವಾಗ ಕ್ಷುಲ್ಲಕ ಕಾರಣಗಳನ್ನು ನೀಡಿ ವಿರೋಧಿಸುತ್ತಿರುವುದು ಮಹಿಳಾ ಕುಲಕ್ಕೆ ಮಾಡುತ್ತಿರುವ ದ್ರೋಹವಾಗಿದೆ. ಇದು ಕೇವಲ ಒಂದು ಮಸೂದೆಗೆ ನೀಡುತ್ತಿರುವ ವಿರೋಧವಲ್ಲ, ಬದಲಾಗಿ ದೇಶದ ಪ್ರತಿಯೊಬ್ಬ ಮಹಿಳೆಯ ಪ್ರಗತಿಗೆ ಒಡ್ಡುತ್ತಿರುವ ತಡೆಯಾಗಿದೆ ಎಂದು ಯೋಗೀಶ್ ಗೌಡ ಕಿಡಿಕಾರಿದರು.

ಕ್ಷೇತ್ರ ಮರುವಿಂಗಡಣೆ ಬಗ್ಗೆ ಮಾತನಾಡಿದ ಅವರು, ದೇಶದಲ್ಲಿ 1973-74ರ ನಂತರ ಕ್ಷೇತ್ರಗಳ ಮರುವಿಂಗಡಣೆ ನಡೆದಿಲ್ಲ, ಅಂದಿನ ಜನಸಂಖ್ಯೆಗೂ ಇಂದಿನ ಜನಸಂಖ್ಯೆಗೂ ಅಜಗಜಾಂತರ ವ್ಯತ್ಯಾಸವಿದೆ. ಶೇ. 50ರಷ್ಟು ಇರುವ ಮಹಿಳೆಯರಿಗೆ ಸಮಾನ ಸಾಮಾಜಿಕ ನ್ಯಾಯ ನೀಡುವ ನಿಟ್ಟಿನಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಸ್ತಾವ ಸಲ್ಲಿಸಲಾಗಿದೆ. ಇದರಿಂದ ಯಾವುದೇ ರಾಜ್ಯಕ್ಕೂ ಅನ್ಯಾಯವಾಗುವುದಿಲ್ಲ, ಆದರೆ ಇದನ್ನು ನೆಪವಾಗಿಟ್ಟುಕೊಂಡು ಗೋಮುಖ ವ್ಯಾಘ್ರ' ಕಾಂಗ್ರೆಸ್ ಮತ್ತು ಎಡಪಕ್ಷಗಳು ನಾರಿ ಶಕ್ತಿಯನ್ನು ವಿರೋಧಿಸುತ್ತಿವೆ ಎಂದು ಟೀಕಿಸಿದರು.

ಈ ವೇಳೆ ಜೆಡಿಎಸ್ ಮುಖಂಡರಾದ ವಾಸುದೇವ ರಾವ್, ದಕ್ಷತ್ ಶೆಟ್ಟಿ ಜಯರಾಮ್ ಆಚಾರ್, ಶಾಲಿನಿ ಶೆಟ್ಟಿ ಶ್ರೀಕಾಂತ್ ಹೆಬ್ರಿ, ದೇವರಾಜ್ ತೊಟ್ಟಂ ಉಪಸ್ಥಿತರಿದ್ದರು.

ಮಸೂದೆ ಜಾರಿ ಖಚಿತ

ಮಹಿಳಾ ವಿರೋಧಿ ನಿಲುವು ತಳೆದಿರುವ ವಿರೋಧ ಪಕ್ಷಗಳ ನಡವಳಿಕೆಯನ್ನು ಉಡುಪಿ ಜಿಲ್ಲಾ ಜೆಡಿಎಸ್ ತೀವ್ರವಾಗಿ ಖಂಡಿಸುತ್ತದೆ. ವಿಪಕ್ಷಗಳ ಎಷ್ಟೇ ಅಡೆತಡೆಗಳಿದ್ದರೂ ಕೇಂದ್ರದ ಎನ್‌ಡಿಎ ಸರ್ಕಾರವು ಈ ನಾರಿ ಶಕ್ತಿ ಮಸೂದೆಯನ್ನು ಖಂಡಿತವಾಗಿಯೂ ಜಾರಿಗೆ ತರುತ್ತದೆ ಎಂದು ಯೋಗೀಶ್ ಶೆಟ್ಟಿ ವಿಶ್ವಾಸ ವ್ಯಕ್ತಪಡಿಸಿದರು.

ಮುದೂರು ಶ್ರೀ ಮಾತಾ ಚಿಣ್ಣರ ಅಂಗಳ ಬೇಸಿಗೆ ಶಿಬಿರಕ್ಕೆ ಚಾಲನೆ



ಬೈಂದೂರು: ಗ್ರಾಮೀಣ ಭಾಗದ ಶಾಲೆಗಳ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರತರುವ ಉದ್ದೇಶದಿಂದ ಮಕ್ಕಳಿಗೆ ಬೇಸಿಗೆ ಶಿಬಿರಗಳ ಆಯೋಜನೆ ಜ್ಞಾನದ ಜೊತೆಗೆ ಹೊಸ ಕೌಶಲ್ಯಗಳನ್ನು ಕಲಿಯಲು ವೇದಿಕೆಯಾಗಲಿವೆ. ಯೋಗ, ಕಲೆ ಮತ್ತು ತಂತ್ರಜ್ಞಾನದ ಅರಿವು ಮೂಡಿಸುವ ಇಂತಹ ಪ್ರಯತ್ನಗಳು ಶ್ಲಾಘನೀಯ ಎಂದು ಮುದೂರು ಶ್ರೀ ಮಾತಾ ಸರ್ಕಾರಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ಸಂಚಾಲಕ, ಧರ್ಮಗುರು ವಂ. ಜೋಸೆಫ್ ಮಟ್ಟಂ ಹೇಳಿದರು.

ಶಾಲೆಯ ಮೈದಾನದಲ್ಲಿ ಆರು ದಿನಗಳ ಕಾಲ ನಡೆಯಲಿರುವ ಶ್ರೀ ಮಾತಾ ಚಿಣ್ಣರ ಅಂಗಳ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು,

ಭಾರತಮಾತಾಪ್ರೌಢಶಾಲೆಯಶಿಕ್ಷಕಶ್ರೀಧರ ಮಾತನಾಡಿ, ಈ ಶಾಲೆಯು 52 ವರ್ಷಗಳ ಇತಿಹಾಸ ಹೊಂದಿದ್ದು, ಇಂದು ಆಧುನಿಕ ಸೌಲಭ್ಯಗಳೊಂದಿಗೆ ಮುನ್ನಡೆಯುತ್ತಿದೆ. ಈ ಶಿಬಿರದಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ. ಮಕ್ಕಳಿಗೆ ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್, ಯಕ್ಷಗಾನ, ಕರಾಟೆ ಹಾಗೂ ವಿಜ್ಞಾನ ಪ್ರಯೋಗಗಳಂತಹ ಒಟ್ಟು 15ಕ್ಕೂ ಹೆಚ್ಚು ವಿಷಯಗಳಲ್ಲಿ ತರಬೇತಿ ನೀಡಲಾಗುವುದು. ಈ ಬಾರಿ ಶಿಬಿರದಲ್ಲಿ ಬೆಂಕಿ ರಹಿತ ಅಡುಗೆ, ಕಸದಿಂದ ರಸ ಮತ್ತು ಫೋಟೋಗ್ರಾಫಿಯಂತಹ ವಿನೂತನ ವಿಷಯಗಳನ್ನು ಸೇರಿಸಿರುವುದು ಮಕ್ಕಳಲ್ಲಿ ಕುತೂಹಲ ಮೂಡಿಸಿದೆ. ಶಿಬಿರದ ಕೊನೆಯ ದಿನದಂದು ಪೋಷಕರೊಂದಿಗೆ ಮಾತೃವಂದನಾಕಾರ್ಯಕ್ರಮನಡೆಯಲಿದೆ ಎಂದು ತಿಳಿಸಿದರು.

ಉದ್ಘಾಟನಾ ದಿನದಂದೇ ಮಕ್ಕಳಿಗೆ ಯೋಗ ಮತ್ತು ಧ್ಯಾನದ ಪ್ರಾಮುಖ್ಯತೆಯನ್ನು ವಿವರಿಸಲಾಯಿತು.

ಶಾಲೆಯ ರಕ್ಷಕ ಶಿಕ್ಷಕ ಸಂಘದ ಪದಾಧಿಕಾರಿಗಳು, ಪೋಷಕರು ಹಾಗೂ ಶಿಬಿರದ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿ ವೃಂದದವರಿಂದ ಪ್ರಾರ್ಥಿಸಿದರು. ಶಿಕ್ಷಕಿಯರಾದ ಸಿಂಚನ ಸ್ವಾಗತಿಸಿದರು. ಸಂಗೀತ ವಂದಿಸಿದರು. ಶೋಭಾ ಕಾರ್ಯಕ್ರಮ ನಿರೂಪಿಸಿದರು.

ಏ.24: ಕಟಪಾಡಿ ತ್ರಿಶಾ ಪಿಯು ಕಾಲೇಜಿನಲ್ಲಿ ಸಾಧಕರಿಗೆ ಸನ್ಮಾನ



ಶಿರ್ವ: 2025-26ನೇ ಸಾಲಿನ ದ್ವಿತೀಯ ಪಿಯು ವಿದ್ಯಾರ್ಥಿಗಳ ವಿಶೇಷ ಸಾಧನೆಯನ್ನು ಗೌರವಿಸುವ ಸಲುವಾಗಿ ಏ.24ರಂದು ಸಂಜೆ 4ರಿಂದ ಕಟಪಾಡಿ ಎಸ್‌ವಿಎಸ್ ಕನ್ನಡ ಮಾಧ್ಯಮ ಶಾಲಾ ಸಭಾಂಗಣದಲ್ಲಿ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಟಪಾಡಿ ತ್ರಿಶಾ ವಿದ್ಯಾ ಪಿಯು ಕಾಲೇಜು ಪ್ರಾಚಾರ್ಯ ಪ್ರೊ. ಹರಿದಾಸ್ ತಿಳಿಸಿದರು.

ಬುಧವಾರ ಕಾಪು ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಕರ್ನಾಟಕದಲ್ಲಿ ವಾಣಿಜ್ಯ ಶಿಕ್ಷಣಕ್ಕೆ ಹೆಸರುವಾಸಿಯಾಗಿರುವ ತ್ರಿಶಾ ಸಮೂಹ ಸಂಸ್ಥೆಗಳ ಅಂಗ ಸಂಸ್ಥೆ ತ್ರಿಶಾ ವಿದ್ಯಾ ಪದವಿಪೂರ್ವ ಕಾಲೇಜು ಆರಂಭದ ನಾಲ್ಕು ವರ್ಷಗಳಲ್ಲಿ ದ್ವಿತೀಯ ಪಿಯುಸಿಯಲ್ಲಿ ರಾಜ್ಯಕ್ಕೆ 11 ರ್‍ಯಾಂಕ್ ಪಡೆದುಕೊಂಡಿದೆ. ಪ್ರಸಕ್ತ ವರ್ಷ ವಿಜ್ಞಾನ ವಿಭಾಗದಲ್ಲಿ 1 ಮತ್ತು ವಾಣಿಜ್ಯ ವಿಭಾಗದಲ್ಲಿ 8 ರ್‍ಯಾಂಕ್‌ಗಳನ್ನು ಗಳಿಸಿದೆ. ಈ ಸಂದರ್ಭದಲ್ಲಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುತ್ತಿದೆ. ವಿದ್ಯಾರ್ಥಿಗಳು ಕ್ರೀಡೆ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಭಾಗದಲ್ಲೂ ಸಾಧನೆಗಳನ್ನು ಮಾಡುತ್ತಿದ್ದಾರೆ. ಇಲ್ಲಿನ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣದಲ್ಲೂ ತನ್ನ ಛಾಪನ್ನು ಮೂಡಿಸುತ್ತಿದ್ದಾರೆ. ಶುಕ್ರವಾರ ಜರುಗುವ ಕಾರ್ಯಕ್ರಮದಲ್ಲಿ ತ್ರಿಶಾ ಸಮೂಹ ಸಂಸ್ಥೆಗಳ ಸಂಸ್ಥಾಪಕ ಸಿಎ ಗೋಪಾಲಕೃಷ್ಣ ಭಟ್ ಅಧ್ಯಕ್ಷತೆ ವಹಿಸಲಿದ್ದು, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಗೌರವ ಅತಿಥಿಗಳಾಗಿ, ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಕೆ. ಸತ್ಯೇಂದ್ರ ಪೈ, ಸಿದ್ಧಾಂತ್ ಫೌಂಡೇಶನ್ ಟ್ರಸ್ಟಿ ನಮಿತಾ ಜಿ. ಭಟ್ ಭಾಗವಹಿಸುವರು. ಕಟಪಾಡಿ ತ್ರಿಶಾ ವಿದ್ಯಾ ಪಿಯು ಕಾಲೇಜಿನ ಪ್ರಾಚಾರ್ಯ ಹರಿಪ್ರಸಾದ್, ಮಂಗಳೂರು ಕೊಟ್ಟಾರದ ತ್ರಿಶಾ ಪಿಯು ಕಾಲೇಜು ಪ್ರಾಚಾರ್ಯರಾದ ಯಶಸ್ವಿನಿ ಯಶಪಾಲ್ ಉಪಸ್ಥಿತರಿರುವರು ಎಂದರು.

ಸುದ್ದಿಗೋಷ್ಠಿಯಲ್ಲಿ ತ್ರಿಶಾ ವಿದ್ಯಾ ಕಾಲೇಜು ಕಟಪಾಡಿ ಇಲ್ಲಿನ ಪ್ರಾಚಾರ್ಯ ಪ್ರೊ. ವಿಘ್ನೇಶ್ ಶೆಣೈ, ತ್ರಿಶಾ ಸಂಧ್ಯಾ ಕಾಲೇಜು ಕಟಪಾಡಿ ಇಲ್ಲಿನ ಡಾ.ಕುಲದೀಪ್ ವೈ, ಕನ್ನಡ ವಿಭಾಗದ ಪ್ರಾಧ್ಯಾಪಕ ಧೀರಜ್ ಬೆಳ್ಳಾರೆ ಉಪಸ್ಥಿತರಿದ್ದರು.



ಪಡುತಿರುಪತಿ ಖ್ಯಾತಿಯ ಕಾರ್ಕಳ ಶ್ರೀ ವೆಂಕಟರಮಣ ದೇಗುಲದ ರಥೋತ್ಸವ ಬುಧವಾರ ವಿಜೃಂಭಣೆಯಿಂದ ಜರಗಿತು.



ವಿಶ್ವ ಭೂಮಿ ದಿನಾಚರಣೆಯ ಪ್ರಯುಕ್ತ ಕುಂದಾಪುರದ ತ್ರಿವರ್ಣ ಆರ್ಟ್ ಕ್ಲಾಸ್ಸಸ್‌ನ ಕಲಾ ವಿದ್ಯಾರ್ಥಿಗಳು ಕೋಟೇಶ್ವರದ ಕೋಡಿ ಬೀಚ್‌ನಲ್ಲಿ ವಿಶ್ವ ಶಾಂತಿ ಧ್ಯೇಯದಡಿಯಲ್ಲಿ ಮರಳು ಶಿಲ್ಪಾಕೃತಿಯನ್ನು ರಚಿಸಿ ಎಲ್ಲರ ಗಮನ ಸೆಳೆದಿದ್ದಾರೆ.

ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯದ ಫೈನೈಟ್ ಲೂಪ್ ಕ್ಲಬ್‌ನಿಂದ ರಾಷ್ಟ್ರೀಯ ಮಟ್ಟದ ತಂತ್ರಜ್ಞಾನ ಉತ್ಸವ 'ಹ್ಯಾಕ್ ಫೆಸ್ಟ್'

5 ರಾಜ್ಯಗಳ 31 ಕಾಲೇಜು, 189 ವಿದ್ಯಾರ್ಥಿಗಳ 50 ತಂಡ, 36 ಗಂಟೆ ಹ್ಯಾಕಥಾನ್



ಕಾರ್ಕಳ: ನಿಟ್ಟೆಯ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಫೈನೈಟ್ ಲೂಪ್ ಕ್ಲಬ್ (ಎಫ್‌ಎಲ್) ರಾಷ್ಟ್ರೀಯ ಮಟ್ಟದ ತಂತ್ರಜ್ಞಾನ ಉತ್ಸವ 'ಹ್ಯಾಕ್ ಫೆಸ್ಟ್' ಆಯೋಜಿಸಲಾಗಿತ್ತು.

ಈ ಉತ್ಸವದಲ್ಲಿ 36 ಗಂಟೆಗಳ ಪ್ರಮುಖ ಹ್ಯಾಕಥಾನ್ ನಡೆಯಿತು. ಒಟ್ಟು 4,00,000 ರೂ.ಗಿಂತ ಹೆಚ್ಚಿನ ಬಹುಮಾನ ಮೊತ್ತವನ್ನು ಹೊಂದಿದ್ದ ಈ ಸ್ಪರ್ಧೆಗೆ ದೇಶಾದ್ಯಂತದ ಎಂಜಿನಿಯರಿಂಗ್ ಸಂಸ್ಥೆಗಳ 50 ತಂಡಗಳು ಸ್ಪರ್ಧಿಸಿದವು. ಇದರೊಂದಿಗೆ, ಸೈಬರ್ ಸೆಕ್ಯುರಿಟಿ-ಕೇಂದ್ರಿತ 'ಕ್ಯಾಪ್ಚರ್ ದಿ ಫ್ಲ್ಯಾಗ್' (ಸಿಟಿಎಫ್) ಈವೆಂಟ್ ಅನ್ನು ನಡೆಸಲಾಯಿತು. ಇದು ಭದ್ರತೆ ಮತ್ತು ನೈತಿಕ ಹ್ಯಾಕಿಂಗ್ ಡೊಮೇನ್‌ಗಳಲ್ಲಿ ಹೆಚ್ಚುತ್ತಿರುವ ಆಸಕ್ತಿಯನ್ನು ಪ್ರದರ್ಶಿಸಿತು.

ಮುಖ್ಯ ಅತಿಥಿಯಾಗಿದ್ದ ಎನ್‌ಟಿಟಿ ಡೇಟಾದ ಭಾಗವಾದ ನಿವಿಯಸ್ ಸೊಲ್ಯೂಷನ್ಸ್‌ನ ಹಿರಿಯ ವ್ಯವಸ್ಥಾಪಕ ಹರಿಪ್ರಸಾದ್ ಪಾಂಗಲ್ ಮಾತನಾಡಿ, ಯಶಸ್ವಿಯಾಗಿ ಹತ್ತು ವರ್ಷಗಳನ್ನು ಪೂರೈಸಿದ ಎಫ್‌ಎಲ್‌ನ್ನು ಅಭಿನಂದಿಸಿದರು ಮತ್ತು ಹ್ಯಾಕ್‌ಫೆಸ್ಟ್ ಮತ್ತು ಸಿಟಿಎಫ್ ಕಾರ್ಯಕ್ರಮ ಎರಡರಲ್ಲೂ ಸಕ್ರಿಯವಾಗಿ ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ಗೌರವ ಅತಿಥಿಗಳಾಗಿ ತಾಂತ್ರಿಕ ಶಿಕ್ಷಣದ ಉಪಾಧ್ಯಕ್ಷ ಡಾ.ಗೋಪಾಲ್ ಮುಗೇರಾಯ, ನಿಟ್ಟೆ ವಿವಿ ಮತ್ತು ನಿಟ್ಟೆ ತಾಂತ್ರಿಕ ಕಾಲೇಜಿನ ಉಪ ಪ್ರಾಂಶುಪಾಲ ಡಾ. ನಾಗೇಶ್ ಪ್ರಭು ಭಾಗವಹಿಸಿದ್ದರು. ಸಮಾನ ಮನಸ್ಕ ಸಂವಹನ, ಸಹಯೋಗದ ಕಲಿಕೆಯ ಮಹತ್ವವನ್ನು ಅವರು ವಿವರಿಸಿದರು ಮತ್ತು ನಾವೀನ್ಯತೆ ಮತ್ತು ನಿರಂತರ ಕಲಿಕೆಯನ್ನು ಉತ್ತೇಜಿಸುವಲ್ಲಿ ಹ್ಯಾಕಥಾನ್‌ಗಳ ಪಾತ್ರವನ್ನು ತಿಳಿಸಿದರು.

ಪ್ರಾಂಶುಪಾಲ ಡಾ. ನಿರಂಜನ್ ಎನ್. ಚಿಪ್ಳೂಂಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕ್ಲಬ್‌ನ ನಿಯತಕಾಲಿಕದ ಎರಡನೇ ಆವೃತ್ತಿ ಇನ್ಫಿನೈಟ್ ಇನ್‌ಸೈಡರ್ 2.0 ಅನ್ನು 10 ವರ್ಷಗಳ ವಾರ್ಷಿಕೋತ್ಸವದ ಆವೃತ್ತಿಯಾಗಿ ಬಿಡುಗಡೆ ಮಾಡಲಾಯಿತು. 10 ರಾಜ್ಯಗಳ 121 ಕಾಲೇಜುಗಳಿಂದ 547 ನವೀನ ಯೋಜನೆಗಳು ಹ್ಯಾಕ್ ಫೆಸ್ಟ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಜಿ ಸಿದ್ದರು. ಕಠಿಣ ಮೌಲ್ಯಮಾಪನ ಪ್ರಕ್ರಿಯೆಯ ನಂತರ, 5 ರಾಜ್ಯಗಳ 31 ಕಾಲೇಜುಗಳ 189 ವಿದ್ಯಾರ್ಥಿಗಳನ್ನು ಒಳಗೊಂಡ 50 ತಂಡಗಳನ್ನು ಅಂತಿಮ 36 ಗಂಟೆಗಳ ಹ್ಯಾಕಥಾನ್‌ಗೆ ಅಂತಿಮಗೊಳಿಸಿ ಆಹ್ವಾನಿಸಲಾಗಿತ್ತು.

ಡಾ.ಶಶಾಂಕ್ ಶೆಟ್ಟಿ ಸ್ವಾಗತಿಸಿದರು. ನಂದನ್ ಪೈ ಅವಲೋಕನವನ್ನು ಪ್ರಸ್ತುತಪಡಿಸಿದರು. ವಿದ್ಯಾರ್ಥಿನಿ ಚಲನಾ ಎ ಶೆಟ್ಟಿ ವಂದಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಮತ್ತು ಎಫ್‌ಎಲ್ ಅಧ್ಯಾಪಕ ಸಂಯೋಜಕ ಡಾ.ಪುನೀತ್ ಆರ್.ಪಿ. ಮತ್ತು ವಿದ್ಯಾರ್ಥಿ ಸಂಘಟಕ ಸಂಪನ್ನಾ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಆರ್ಯ ಜಿ. ಭಟ್ ಮತ್ತು ಪ್ರಖ್ಯಾತ್ ಯಾದವ್ ಸುವರ್ಣ ನಿರೂಪಿಸಿದರು.

ಸುತ್ತಮುತ್ತ

ಗ್ಯಾಸ್ ಏಜೆನ್ಸಿ ಮಾಲಕರಿಗೆ ಎಚ್ಚರಿಕೆ ನೋಟಿಸ್ ಜಾರಿ

ಬೆಳ್ತಂಗಡಿ: ತಾಲೂಕಿನ ಲಾಯಿಲ ಗ್ರಾಮದ ಲಾಯಿಲ ಜಂಕ್ಷನ್ ಬಳಿಯಿರುವ ಶ್ರೀ ಮಂಜು ಇಂಡೇನ್ ಗ್ಯಾಸ್ ಏಜೆನ್ಸಿ ಕಚೇರಿಯಲ್ಲಿ ಗ್ರಾಹಕರಿಗೆ ಸರಿಯಾದ ಗ್ಯಾಸ್ ಸರಬರಾಜು ಮಾಡದೆ, ಸರಿಯಾಗಿ ವ್ಯವಹಾರ ನಡೆಸದೆ ಕೆಲ ದಿನಗಳಿಂದ ನಡೆಯುತ್ತಿದ್ದ ಗಲಾಟೆ ಬಗ್ಗೆ ಲಿಖಿತ ದೂರುಗಳು ಬಂದ ಹಿನ್ನಲೆಯಲ್ಲಿ ಬೆಳ್ತಂಗಡಿ ಆಹಾರ ಇಲಾಖೆಯಿಂದ ಏ.22 ರಂದು ಶ್ರೀ ಮಂಜು ಇಂಡೇನ್ ಗ್ಯಾಸ್ ಏಜೆನ್ಸಿ ವ್ಯವಸ್ಥಾಪಕರಿಗೆ ಎಚ್ಚರಿಕೆ ನೋಟಿಸ್ ಜಾರಿ ಮಾಡಲಾಗಿದೆ.

ನೋಟಿಸ್‌ನಲ್ಲಿರುವ ಅಂಶ

ಪ್ರತಿದಿನ ಈ ಕಚೇರಿಗೆ ಇದೇ ವಿಚಾರವಾಗಿ ಸಾರ್ವಜನಿಕರಿಂದ ದೂರುಗಳು ಬರುತ್ತಿದೆ ಅಲ್ಲದೆ ನಿಮ್ಮ ಗ್ಯಾಸ್ ಏಜೆನ್ಸಿಯ ಬಗ್ಗೆ ಸರಿಯಾದ ಗ್ಯಾಸ್ ಸರಬರಾಜು ಇಲ್ಲದೆ ಇರುವ ಬಗ್ಗೆ ದೂರುಗಳು ಬರುತ್ತಿದ್ದು ಅನಿಲ ಸಂಪರ್ಕ ಹೆಚ್ಚಾಗಿದ್ದು, ಅದಕ್ಕೆ ಸರಿಯಾಗಿ ಅಗತ್ಯವಿರುವ ಮೂಲಭೂತ ವ್ಯವಸ್ಥೆಯನ್ನು ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಈ ಕಚೇರಿಗೆ ವರದಿ ಸಲ್ಲಿಸುವಂತೆ ತಿಳಿಸಿದೆ. 'ಈ ಹಿಂದೆಯೂ ಸಾಕಷ್ಟು ಬಾರಿ ನಿಮಗೆ ಈ ಬಗ್ಗೆ ತಿಳಿಸಿದ್ದರೂ ಕ್ರಮ ವಹಿಸದೆ ಇರುವುದು ಉದ್ಧಟತನಕ್ಕೆ ಸಾಕ್ಷಿಯಾಗಿದೆ. ಗ್ರಾಹಕರು ಅವರಿಗೆ ಅನುಕೂಲವಾಗುವಂತೆ ಏಜೆನ್ಸಿ ಬದಲಾಯಿಸಲು ಹಕ್ಕು ಅವರಿಗೆ ಇದ್ದು, ನಿಮ್ಮಲ್ಲಿ ಬದಲಾವಣೆಗೆ ಮನವಿ ಮಾಡಿದ್ದಲ್ಲಿ ತಕ್ಷಣವೇ ಬದಲಾವಣೆಗೆ ಅವಕಾಶ ಮಾಡಿಕೊಡುವುದು ಹಾಗೂ ಮಾಡಿದ ಬಗ್ಗೆ ಈ ಕಚೇರಿಗೆ ಮಾಹಿತಿಯನ್ನು ನೀಡುವುದು. ಇದು ನಿಮಗೆ ನೀಡುತ್ತಿರುವ ಕೊನೆಯ ಎಚ್ಚರಿಕೆಯಾಗಿದ್ದು, ಮುಂದೆ ಈ ರೀತಿಯ ತಪ್ಪುಗಳು ಕಂಡಬಂದಲ್ಲಿ ಶಿಸ್ತು ಕ್ರಮ ವಹಿಸಲಾಗುವುದು ಎಂದು ಬೆಳ್ತಂಗಡಿ ಆಹಾರ ಇಲಾಖೆ ಏ. 22ರಂದು ನೀಡಿದ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಕೋಟ ಗಿಳಿಯಾರಿನಲ್ಲಿ ಹಿರಿಯ ನಾಗರಿಕರ ಸಭೆ

ಕೋಟ: ಕೋಟ ಗಿಳಿಯಾರು ಹಿರಿಯ ನಾಗರಿಕರ ಸಭೆ ಮೂಡುಗಿಳಿಯಾರಿನ ಸರಕಾರಿ ಸಂಯುಕ್ತ ಪ್ರೌಢಶಾಲೆ ರೋಟರಿ ಸಭಾಂಗಣದಲ್ಲಿ ವೇದಿಕೆ ಅಧ್ಯಕ್ಷ ಎಚ್. ಸೋಮಶೇಖರ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಿರಿಯ ನಾಗರಿಕರ ಕಾರ್ಯಚಟುವಟಿಕೆಗಳ ಬಗ್ಗೆ ಮಾತನಾಡಿದರು. ಮುಖ್ಯ ಸಂಪನ್ಮೂಲ ವ್ಯಕ್ತಿ ಉಡುಪಿ ಜಿಲ್ಲಾ ವಿಕಲ ಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿವೃತ್ತ ಅಧಿಕಾರಿ ಎನ್. ನಿರಂಜನ ಭಟ್ ಹಿರಿಯನಾಗರಿಕರಿಗೆ ಸರಕಾರದಿಂದ ಸಿಗುವ ಸೌಲಭ್ಯ ಪಡೆದುಕೊಳ್ಳುವ ರೀತಿ, ಹಿರಿಯ ನಾಗರಿಕರ ಸಂರಕ್ಷಣೆ ಮತ್ತು ರಕ್ಷಣೆ ಹಾಗೂ ಆರೋಗ್ಯ ಜೀವನ ಕ್ರಮದ ಕರಿತು ಉಪನ್ಯಾಸ ನೀಡಿದರು. ವೇದಿಕೆ ಸದಸ್ಯತನ ಸ್ವೀಕರಿಸಿದ ಕೋಟದ ಗೋಪಾಲ ಅಮೀನ್ ಮತ್ತು ಹುಟ್ಟುಹಬ್ಬ ಆಚರಿಸಿಕೊಂಡ ಸರ್ವಮಂಗಳ ಐತಾಳ, ಕೃಷ್ಣಮೂರ್ತಿ, ಸುರೇಶ ದೇವಾಡಿಗ, ಗೋಪಾಲ ಅಮೀನ್ ಅವರುಗಳನ್ನು ಸಂಪನ್ಮೂಲ ವ್ಯಕ್ತಿ ನಿರಂಜನ ಭಟ್, ಅಧ್ಯಕ್ಷ ಸೋಮಶೇಖರ ಶೆಟ್ಟಿ ಹಿರಿಯ ಸದಸ್ಯ ಭಾಸ್ಕರ ಶೆಟ್ಟಿ, ಕಾರ್ಯದರ್ಶಿ ಶಂಕರ್ ಆಚಾರ್, ಸುಬ್ರಹಣ್ಯ ಹೇರ್ಳೆ, ಗಂಗಾಧರ ಐತಾಳ, ಕೃಷ್ಣಯ್ಯ ಆಚಾರ್, ಅನಿತಾ ಶೆಟ್ಟಿ ಗೌರವಿಸಿದರು. ಈ ಸಂದರ್ಭದಲ್ಲಿ ಗಿಳಿಯಾರಿನ ಶೇಖರ್ ಪತ್ನಿ ಕ್ಯಾನ್ಸರ್ ಪೀಡಿತ ಗುಲಾಬಿ ಇವರ ಚಿಕಿತ್ಸೆಗಾಗಿ ಧನಸಹಾಯ ನೀಡಲಾಯಿತು. ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿ ನಿವೃತ್ತ ಹಿ.ನಾ. ಸಬಲೀಕರಣ ಅಧಿಕಾರಿ ಎನ್. ನಿರಂಜನ ಭಟ್‌ರವರನ್ನು ಗೌರವಿಸಲಾಯಿತು. ಹಿರಿಯ ಸದಸ್ಯರಾದ ಕೃಷ್ಣಯ್ಯ ಆಚಾರ್, ಗೋಪಾಲಕೃಷ್ಣ ಜೋಗಿ, ಸಲಹೆಗಳನ್ನು ನೀಡಿದರು.ಕಾರ್ಯದರ್ಶಿ ಶಂಕರ ಆಚಾರ್ ಹಿಂದಿನ ತಿಂಗಳ ಸಭಾನಡಾವಳಿ ಓದಿ ಹೇಳಿ, ಲೆಕ್ಕಪತ್ರ ಮಂಡಿಸಿ ಅನುಮೋದನೆ ಪಡೆದರು. ಶರಣಯ್ಯ ಹಿರೇಮಠ ಕಾರ್ಯಕ್ರಮ ನಿರೂಪಿಸಿ, ಸಹ ಕಾರ್ಯದರ್ಶಿ ಸುಬ್ರಹ್ಮಣ್ಯ ಹೇರ್ಳೆ ವಂದಿಸಿದರು.

ಮೇ 12ರಂದು ಬ್ಯಾರಿ ಸಾಹಿತ್ಯ ಸಮ್ಮೇಳನ

ಬಂಟ್ವಾಳ: ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಇದರ ಸಹಯೋಗದೊಂದಿಗೆ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ವತಿಯಿಂದ ಮೇ 12 ರಂದು ಪಾಣೆಮಂಗಳೂರು ಸಮೀಪದ ಎಸ್‌ಎಸ್ ಹಾಲ್‌ನಲ್ಲಿ ನಡೆಯಲಿರುವ ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯು ಬಿ.ಸಿ.ರೋಡಿನ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಿತು. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಉಮರ್ ಯು ಎಚ್., ಸಮ್ಮೇಳನದ ರೂಪುರೇಷೆ ಹಾಗೂ ಸಿದ್ದತೆಗಳ ಬಗ್ಗೆ ಮಾಹಿತಿ ನೀಡಿದರು.


ಸಭೆಯ ಅಧ್ಯಕ್ಷತೆ ವಹಿಸಿದ್ದ ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಅಧ್ಯಕ್ಷ ಬಿ.ಎಂ.ಅಬ್ಬಾಸ್ ಅಲಿ ಮಾತನಾಡಿ, ಬ್ಯಾರಿ ಆಂದೋಲನ, ಅಕಾಡೆಮಿಗಾಗಿ ಶ್ರಮಿಸಿದ ನಾಯಕರು ಹಾಗೂ ಬಂಟ್ವಾಳ ತಾಲೂಕಿನ ನೇರಳಕಟ್ಟೆಯಲ್ಲಿ ನಡೆದ ಬ್ಯಾರಿ ಸಾಹಿತ್ಯ ಸಮ್ಮೇಳನವನ್ನು ನೆನಪಿಸಿಕೊಂಡ ಅವರು ಮುಂದೆ ನಡೆಯುವ ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಸರ್ವರ ಸಹಕಾರ ಕೋರಿದರು. ಬ್ಯಾರಿ ಸಾಹಿತ್ಯ ಪರಿಷತ್ ಬಂಟ್ವಾಳ ಇದರ ಸಂಚಾಲಕ ಪಿ.ಎ. ರಹೀಂ, ಕೋಶಾಧಿಕಾರಿ ಮುಹಮ್ಮದ್ ಸಾಗರ್, ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಪಿ.ಎಂ. ಅಶ್ರಫ್ ಪಾಣೆಮಂಗಳೂರು, ಕೋಶಾಧಿಕಾರಿ ಅನಿಯಾ ದರ್ಬಾರ್ ಹಂಝು ಬಸ್ತಿಕೋಡಿ ಮೊದಲಾದವರು ಭಾಗವಹಿಸಿದ್ದರು. ಬ್ಯಾರಿ ಪ್ರಮುಖರಾದ ಯೂಸುಫ್ ಕರಂದಾಡಿ, ಮೂನಿಷ್ ಅಲಿ ಬಂಟ್ವಾಳ, ಹನೀಫ್ ಬಗ್ಗುಮೂಲೆ, ಅಬ್ದುಲ್ ಮಜೀದ್ ಕಡೆಗೋಳಿ, ಮಹಮ್ಮದ್ ನಂದಾವರ, ಇಬ್ರಾಹಿಂ ಕೈಲಾರ್, ಅಬೂಬಕರ್ ಅಮ್ಮುಂಜೆ, ಚಿಕ್ ಖಲೀಲ್ ಬಂಟ್ವಾಳ, ಪಿ.ಮಹಮ್ಮದ್ ಪಾಣೆಮಂಗಳೂರು, ಅಲ್ತಾಫ್ ಡೈಮಂಡ್, ಉಮರ್ ಮಂಚಿ, ಮುಹಮ್ಮದ್ ಸುರಿಬೈಲು, ಯು.ಮುಸ್ತಫಾ ಆಲಡ್ಕ, ಹನೀಫ್ ನಂದರಬೆಟ್ಟು ಮೊದಲಾದವರು ಸಲಹೆ ನೀಡಿದರು. ಬ್ಯಾರಿ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿ ಲತೀಫ್ ನೇರಳಕಟ್ಟೆ ಸ್ವಾಗತಿಸಿ, ನಿರೂಪಿಸಿದರು. ಬ್ಯಾರಿ ಸಾಹಿತ್ಯ ಅಕಾಡೆಮಿ ಸದಸ್ಯಅಬೂಬಕ್ಕರ್ ಅನಿಲಕಟ್ಟೆ ವಂದಿಸಿದರು.

95 ಪರ್ಸೆಂಟೈಲ್‌ಗಿಂತ ಅಧಿಕ 10 ಮಂದಿ, 90 ಪರ್ಸೆಂಟೈಲ್‌ಗಿಂತ ಅಧಿಕ 25 ಮಂದಿ ಸಾಧನೆ

ಜೆಇಇ: ಅಂಬಿಕಾ ವಿದ್ಯಾಲಯಕ್ಕೆ ತಾಲೂಕು ಟಾಪರ್ ಗರಿ

ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಪದವಿ ಪೂರ್ವ ವಿದ್ಯಾಲಯ ನೆಲ್ಲಿಕಟ್ಟೆಹಾಗೂ ಬಪ್ಪಳಿಗೆಯ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳು ಪ್ರಸ್ತುತ ವರ್ಷದ ಇಂಜಿನಿಯರಿಂಗ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆಗೈದಿದ್ದು 25 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ಪುತ್ತೂರು ಆರ್ಯಾಪಿನ ಮಹಾಲಿಂಗೇಶ್ವರ ಭಟ್ ಎಂ. ಮತ್ತು ಎಸ್.ವಿ. ದುರ್ಗಮಾಲಾ ದಂಪತಿಯ ಪುತ್ರ ಶ್ರೇಯಸ್ ಎಂ.(98.5633) ತಾಲೂಕು ಟಾಪರ್ ಆಗಿ ಹೊರ ಹೊಮ್ಮಿದ್ದಾರೆ.

ಪುತ್ತೂರು ನೈತಾಡಿಯ ಕೃಷ್ಣರಾಜ್ ಎಚ್. ಎಸ್.-ವಿದ್ಯಾ ಕೃಷ್ಣರಾಜ್ ಪುತ್ರ ಪ್ರಜ್ವಲ್ ಎಚ್. (97.7509), ಪುತ್ತೂರು ಸಾಮೆತ್ತಡ್ಕದ ಪ್ರಶಾಂತ್ ಕೆ.ಜಿ.-ಪೂರ್ಣ ಚಂದ್ರಿಕಾ ಪುತ್ರಿ ಚೈತ್ರಾ ಕೆ.ಪಿ.(97.2050), ಬೆಳ್ಳಾರೆ ಇಂದಿರಾನಗರದ ರವೀಂದ್ರನಾಥ್-ಸುಗುಣ ಎ. ಪುತ್ರಿ ಶಾರ್ವರಿ ಆರ್.ಎಸ್. (97.1429), ಗದಗ ಜಿಲ್ಲೆಯ ಬೂದಿಹಾಳದ ಶಿವರುದ್ರಯ್ಯ ಪಟದಯ್ಯ ಹಿರೇಮಠ-ಶೈಲಾ ಶಿವರುದ್ರಯ್ಯ ಹಿರೇಮಠ ಪುತ್ರ ಪ್ರತೀಕ ಶಿವರುದ್ರಯ್ಯ ಹಿರೇಮಠ (97.1402), ಬೆಂಗಳೂರು ಜಿಲ್ಲೆಯ ಆನೇಕಲ್‌ನ ಅನಂತಪದ್ಮನಾಭ ಶರ್ಮ-ರೇಷ್ಮ ಅನಂತ ಶರ್ಮ ಪುತ್ರ ಅಖಿಲೇಶ್ ಅನಂತ ಶರ್ಮ(96.1779), ಕೇರಳ ಉರ್ದೂರಿನ ಸತ್ಯನಾರಾಯಣ ಪಿ.-ರಂಜಿನಿ ಕುಮಾರಿ ಪುತ್ರಿ ಅಸೀಮಾ ಅಗ್ನಿಹೋತ್ರಿ (95.5012), ಪುತ್ತೂರು ದರ್ಬೆಯ ರಾಜ್ ಕುಮಾರ್ ರೈ-ಸುಪ್ರೀತಾ ರೈ ಪುತ್ರ ಪ್ರಖ್ಯಾತ್ ರಾಜ್ ರೈ (95.4528), ಪುತ್ತೂರು ಬನ್ನೂರಿನ ಚಂದ್ರಶೇಖರ-ಹರ್ಷಲತಾ ಕೆ.ಪಿ. ಪುತ್ರ ಶ್ಲೇಷ್ ಅಲೆಕ್ಕಾಡಿ ಚಂದ್ರಶೇಖರ (95.2549), ಪುತ್ತೂರು ಕಬಕದ ಕೇಶವ-ವನಿತಾ ಪುತ್ರ ಜಸ್ವಿತ್ (95.0051), ವಿಟ್ಲ ಮುಡ್ನೂರಿನ ಚಂದಳಿಕೆ ಪುರುಷೋತ್ತಮ ಭಟ್-ನೇತ್ರಾವತಿ ಎಸ್. ಪುತ್ರ ಸ್ಕಂದ ಗಣಪತಿ(94.0422), ಪುತ್ತೂರು ಈಶ್ವರಮಂಗಳದ ಪಿ. ಉದಯ ಶ್ಯಾಮ್-ಪಿ. ಶ್ರೀಲಕ್ಷ್ಮಿ ಪುತ್ರ ಶರಜ್ ಪಿ.(93.9805), ಮೈಸೂರು ಎಚ್.ಡಿ. ಕೋಟೆಯ ಮುರುಗೇಶ್-ಕನಕೇಶ್ವರಿ ವಿ. ಪುತ್ರ ಎಂ. ಶ್ರೀಶೈಲ್ (93.7891), ಪುತ್ತೂರು ಹಾರಾಡಿಯ ದಾಮೋದರ ಎನ್.-ನವೀನ ಕುಮಾರಿ ಕೆ.ಎಸ್. ಪುತ್ರ ತ್ರಿಶೂಲ್ ಎನ್.ಡಿ.(93.5261), ಕಾಸರಗೋಡು ಜಿಲ್ಲೆಯ ನೆಟ್ಟಣಿಗೆಯ ವಿಷ್ಣು ಪ್ರಕಾಶ್ ಎಂ.-ವೀಣಾ ಸರಸ್ವತಿ ಸಿ.ಎಚ್. ಪುತ್ರ ಶ್ರೀಶ ಎಂ.(92.8946), ಕಡಬ ಬಲ್ಯದ ಪದ್ಮಯ ಗೌಡ-ಜಯಲಕ್ಷ್ಮಿ ಪುತ್ರಿ ಯಶಸ್ವಿ ಸುರುಳಿ(92.8946), ಪುತ್ತೂರು ಭಕ್ತಕೋಡಿ ಪಿಲಿಗುಂಡಿಯ ಕೃಷ್ಣಪ್ಪ-ಪುಷ್ಪ ಪುತ್ರ ಪಿ.ಕೆ. ರಕ್ಷಿತ್ (92.7611), ಸುಳ್ಯ ಕೆಳಗಿನ ನಾವೂರಿನ ಕೆ.ಆರ್. ಕೃಷ್ಣ ರಾವ್-ಆಶಾ ಕೃಷ್ಣ ರಾವ್ ಪುತ್ರ ಆಯುಷ್ ರಾವ್ ಕೆ.(92.4775), ಸೋಮವಾರಪೇಟೆಯ ಬೇಕನಹಳ್ಳಿಯ ಶಿವಕುಮಾರ್ ಬಿ.ಎಸ್.-ಭಾರತಿ ಬಿ.ಎಸ್. ಪುತ್ರಿ ಶಿಲ್ಪಿತಾ ಬಿ.ಎಸ್. (92.4654), ಪುತ್ತೂರು ನೆಹರು ನಗರದ ಪ್ರಶಾಂತ್-ಮಾಲತಿ ಪುತ್ರಿ ಶ್ರೀಯಾ(92.3247), ಪುತ್ತೂರು ಸೇಡಿಯಾಪು ಚೈತ್ರನಾರಾಯಣ-ಸ್ವಪ್ನ ಎಸ್.ಸಿ. ಪುತ್ರಿ ಶ್ರೀಲಕ್ಷ್ಮಿ ಎಸ್.ಸಿ.(91.9385), ಪುತ್ತೂರು ಸಾಮೆತ್ತಡ್ಕದ ಪ್ರಶಾಂತ್ ಕೆ.ಜಿ.-ಪೂರ್ಣ ಚಂದ್ರಿಕಾ ಪುತ್ರಿ ಚೈತ್ರಾ ಕೆ.ಪಿ.(91.7186), ಬಂಟ್ವಾಳ ಮಾಣಿಯ ಬಿ. ವಿನೋದ್ ಕುಮಾರ್-ಸರಿತಾ ವಿನೋದ್ ಪುತ್ರ ರಚಿತ್ ವಿ. ಪೂಜಾರಿ (91.5721), ಪುತ್ತೂರು ಹಾರಾಡಿಯ ಅಶೋಕ್ ಭಟ್-ನಯನಾ ಎ. ಭಟ್ ಪುತ್ರ ಅಭಿನವ್ ವಸಿಷ್ಠ (90.3759), ಕೊಡುಗು ಜಿಲ್ಲೆಯ ಮಡಿಕೇರಿಯ ಎ.ಎಲ್. ಶರಣ್-ಸಂಧ್ಯಾ ಎ.ಎಸ್. ಪುತ್ರ ಸಿತಾಂಶು ಎ.ಎಸ್. (90.1181) ಅಂಕಗಳನ್ನು ಗಳಿಸಿದ್ದಾರೆ.



■ ಒಟ್ಟು 25 ವಿದ್ಯಾರ್ಥಿಗಳ ಸಾಧನೆ

ಜೆಇಇ ಪರೀಕ್ಷೆ: ಟಾಪರ್ ಆಗಿ 99.9055199 ಪರ್ಸಂಟೈಲ್‌ನೊಂದಿಗೆ ಕನಿಷ್ಕ್ ಅಮೀನ್ ಸಾಧನೆ

ಜ್ಞಾನಸುಧಾದ ಕಾಲೇಜಿನ 10 ವಿದ್ಯಾರ್ಥಿಗಳಿಗೆ 99ಕ್ಕಿಂತ ಅಧಿಕ ಪರ್ಸಂಟೈಲ್


ಕಾರ್ಕಳ: ರಾಷ್ಟ್ರಮಟ್ಟದಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕಾಗಿ ಎನ್.ಟಿ.ಎ ನಡೆಸಿದ ಜೆಇಇ ಮೈನ್ (ಬಿ.ಟೆಕ್)-2026ರಅಂತಿಮ ಹಂತದ ಫಲಿತಾಂಶದಲ್ಲಿ ಜ್ಞಾನಸುಧಾ ಪಿ.ಯು. ಕಾಲೇಜಿನ 10 ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಜನರಲ್ ಕೆಟಗೆರಿಯಲ್ಲಿ 1608ನೇ ರ್‍ಯಾಂಕ್

ರಾಷ್ಟ್ರಮಟ್ಟದಲ್ಲಿ 15 ಲಕ್ಷದ 38 ಸಾವಿರದ 468 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಜ್ಞಾನಸುಧಾದ ಕನಿಷ್ಕ್ ಅಮೀನ್ 99.9055199 ಪರ್ಸಂಟೈಲ್ ಪಡೆದು ಜನರಲ್ ಕೆಟಗೆರಿಯಲ್ಲಿ 1608ನೇ ರ್‍ಯಾಂಕ್ ಪಡೆದಿರುತ್ತಾರೆ. ಸಂಸ್ಥೆಯ 30 ವಿದ್ಯಾರ್ಥಿಗಳು 98 ಪರ್ಸಂಟೈಲ್‌ಗಿಂತಅಧಿಕ, 59 ವಿದ್ಯಾರ್ಥಿಗಳು 97 ಪರ್ಸಂಟೈಲ್‌ಗಿಂತ ಅಧಿಕ, 93 ವಿದ್ಯಾರ್ಥಿಗಳು 96 ಪರ್ಸಂಟೈಲ್‌ಗಿಂತ ಅಧಿಕ, 116 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತಅಧಿಕ ಹಾಗೂ 244 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ ಫಲಿತಾಂಶ ತಮ್ಮದಾಗಿಸಿಕೊಂಡಿದ್ದಾರೆ. ವಿಷಯವಾರು ವಿಭಾಗದಲ್ಲಿ ಸಂಸ್ಥೆಯು, ಭೌತಶಾಸ್ತ್ರದಲ್ಲಿ 19 ಮಂದಿ, ರಸಾಯನ ಶಾಸ್ತ್ರದಲ್ಲಿ 26 ಮಂದಿ ಹಾಗೂ ಗಣಿತಶಾಸ್ತ್ರದಲ್ಲಿ 12 ಮಂದಿ ವಿದ್ಯಾರ್ಥಿಗಳು 99ಕ್ಕಿಂತ ಅಧಿಕ ಪರ್ಸಂಟೈಲ್ ದಾಖಲಿಸಿಕೊಂಡಿದ್ದಾರೆ.

ಹಲವು ರ್‍ಯಾಂಕ್ ಸಾಧನೆ

ಜೆ.ಇ.ಇ ಮೈನ್ ಅಂತಿಮ ಫಲಿತಾಂಶದಲ್ಲಿ ಜ್ಞಾನಸುಧಾದ ಕನಿಷ್ಕ್ ಅಮೀನ್ 99.9055199 ಪರ್ಸಂಟೈಲ್ (ಜನರಲ್‌ಕೆಟಗರಿಯಲ್ಲಿ 1608ನೇ ರ್‍ಯಾಂಕ್), ಸೋಹನ್ ಗಿರಿರಡ್ಡಿ 99.8254499 ಪರ್ಸಂಟೈಲ್, (ಜನರಲ್ ಕೆಟಗರಿಯಲ್ಲಿ 2884ನೇ ರ್‍ಯಾಂಕ್), ನಿಶಾನ್ ಎನ್. ಸಾಲ್ಯಾನ್ 99.7084244 ಪರ್ಸಂಟೈಲ್,(ಜನರಲ್ ಕೆಟಗರಿಯಲ್ಲಿ 4767ನೇ ರ್‍ಯಾಂಕ್, ಮೇಧಾನ್ಶ್ ಎನ್.ಬಿ 99.6766462 ಪರ್ಸಂಟೈಲ್,(ಜನರಲ್ ಕೆಟಗರಿಯಲ್ಲಿ 5259ನೇ ರ್‍ಯಾಂಕ್), ಅನಿರುದ್ಧ್ ಆರ್. ಉಡುಪ 99.6130095 ಪರ್ಸಂಟೈಲ್, (ಜನರಲ್ ಕೆಟಗರಿಯಲ್ಲಿ 6307ನೇ ರ್‍ಯಾಂಕ್), ತುಷಾರ್ ಎ. ಶೆಟ್ಟಿ 99.5087645 ಪರ್ಸಂಟೈಲ್ (ಜನರಲ್ ಕೆಟಗರಿಯಲ್ಲಿ 7958ನೇ ರ್‍ಯಾಂಕ್), ಎನ್.ಎಸ್.ವಿವೇಕ್ 99.3942563 ಪರ್ಸಂಟೈಲ್ (ಜನರಲ್‌ಕೆಟಗರಿಯಲ್ಲಿ 9712ನೇ ರ್‍ಯಾಂಕ್), ತೇಜಸ್ ನಾಯಕ್ 99.2313099 ಪರ್ಸಂಟೈಲ್, ಮನೋಜ್ ಎಂ. 99.0897721 ಪರ್ಸಂಟೈಲ್, ಅನಿಕೇತ್ ಆರ್. ಉಡುಪ 99.0090928 ಪರ್ಸಂಟೈಲ್, ಅನಿರುದ್ಧ್ ಕಾಮತ್ 98.9289083 ಪರ್ಸಂಟೈಲ್, ಸೌಖ್ಯತಾ ಸಿ.ಎಂ 98.9091539 ಪರ್ಸಂಟೈಲ್, ವೈಷ್ಣವಿ ಕುಲಕರ್ಣಿ 98.8384918 ಪರ್ಸಂಟೈಲ್, ಸಾಯಿ ರಾಘವೇಂದ್ರ ಬಿ. 98.8231216 ಪರ್ಸಂಟೈಲ್, ಸಂಜನಾ ಬಿ.ಎ. 98.7722886 ಪರ್ಸಂಟೈಲ್, ಸೃಜನ್ ಎನ್ 98.6688621 ಪರ್ಸಂಟೈಲ್, ಮಯೂರ್ ವಿ. ಗೌಡ 98.5943336 ಪರ್ಸಂಟೈಲ್, ವರುಣ್ ಜೆ. 98.5707051 ಪರ್ಸಂಟೈಲ್, ಜೀವನ್ ಎನ್.ಬಿ 98.5421490 ಪರ್ಸಂಟೈಲ್, ಸಿದ್ಧಾಂತ್ ಎನ್ .ಜಿ 98.4961474 ಪರ್ಸಂಟೈಲ್. ಅನಾಮಯ ಯೋಗೇಶ್ ದಿವಾಕರ್ 98.4810184 ಪರ್ಸಂಟೈಲ್, ವಿದ್ವತ್ ವಿ. ಕಾಮತ್ 98.4287569 ಪರ್ಸಂಟೈಲ್, ಪ್ರಭಂಜನ್ ಭಟ್ 98.4281519 ಪರ್ಸಂಟೈಲ್, ಆಸ್ತಿಕಾ ಆರ್. ಭಾಗವತ್ 98.413806 ಪರ್ಸಂಟೈಲ್, ಭರತ್‌ರೆಡ್ಡಿ ವಿ. 98.2402634 ಪರ್ಸಂಟೈಲ್ , ದಿಗಂತ್ ಎಸ್. 98.2292253 ಪರ್ಸಂಟೈಲ್, ಬಿ.ಅಮಿತ್ ಕಾಮತ್ 98.1433839 ಪರ್ಸಂಟೈಲ್, ವಿಶಾಖ್ ಕೃಷ್ಣರಾಜ್ 98.132748 ಪರ್ಸಂಟೈಲ್, ಅಶ್ವಿನ್ ವಿ ಶೆಟ್ಟಿ 98.0842123 ಪರ್ಸಂಟೈಲ್, 30. ವ'ಾ ಧ' ವ' ಕಾಮತ್ 98.0542025 ಪರ್ಸಂಟೈಲ್ ಗಳಿಸಿದ್ದಾರೆ. ಜ್ಞಾನಸುಧಾವು 99 ಪರ್ಸಂಟೈಲ್‌ಗಿಂತ ಅಧಿಕ10 ವಿದ್ಯಾರ್ಥಿಗಳು, 98 ಪರ್ಸಂಟೈಲ್‌ಗಿಂತ ಅಧಿಕ 30 ವಿದ್ಯಾರ್ಥಿಗಳು, 97 ಪರ್ಸಂಟೈಲ್‌ಗಿಂತ ಅಧಿಕ 59 ವಿದ್ಯಾರ್ಥಿಗಳು 96 ಪರ್ಸಂಟೈಲ್‌ಗಿಂತ ಅಧಿಕ 93 ವಿದ್ಯಾರ್ಥಿಗಳು 95 ಪರ್ಸಂಟೈಲ್‌ಗಿಂತ ಅಧಿಕ116 ವಿದ್ಯಾರ್ಥಿಗಳು 90 ಪರ್ಸಂಟೈಲ್‌ಗಿಂತ ಅಧಿಕ 244 ವಿದ್ಯಾರ್ಥಿಗಳು ಉತ್ತಮ ಪರ್ಸಂಟೈಲ್ ಗಳಿಸಿದ್ದಾರೆ. ಕಾರ್ಕಳ ಜ್ಞಾನಸುಧಾ, ಉಡುಪಿ ಜ್ಞಾನಸುಧಾ ಹಾಗೂ ಮಣಿಪಾಲ ಜ್ಞಾನಸುಧಾದ ಒಟ್ಟು 851 ವಿದ್ಯಾರ್ಥಿಗಳು ಜೆಇಇ ಮೈನ್ ಪರೀಕ್ಷೆಯನ್ನು ಬರೆದಿದ್ದರು. ಈ ಎಲ್ಲಾ ಸಾಧಕ ವಿದ್ಯಾರ್ಥಿಗಳನ್ನು ಹಾಗೂ ಸಾಧನೆಗೆ ಬೆನ್ನೆಲುಬಾದಜ್ಞಾನಸುಧಾ ಎಂಟ್ರೆನ್ಸ್ ಅಕಾಡೆಮಿಯಾ ಪರಿಶ್ರಮವನ್ನು ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟಿನ ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಜ್ಞಾನಸುಧಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದೆ.



ಮಂಜುನಾಥ್ ಭಂಡಾರಿ ಭೇಟಿ




ಬಂಟ್ವಾಳ: ಈಚೆಗೆ ನಿಧನರಾದ ಬಂಟ್ವಾಳ ಪುರಸಭೆಯ ನಿಕಟಪೂರ್ವ ಸದಸ್ಯರು ಹಾಗೂ ಮಾಜಿ ಉಪಾಧ್ಯಕ್ಷರು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಮಹಮ್ಮದ್ ನಂದರಬೆಟ್ಟು ಅವರ ನಿವಾಸಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ ಅವರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಅವರು ಮಹಮ್ಮದ್ ಅವರೊಂದಿಗಿನ ಬಾಲ್ಯದ ನೆನಪುಗಳನ್ನು ಕುಟುಂಬ ಸದಸ್ಯರೊಂದಿಗೆ ಹಂಚಿಕೊಂಡರು. ಈ ಸಂದರ್ಭ ಪುರಸಭೆಯ ನಿಕಟಪೂರ್ವ ಸದಸ್ಯ ಲುಕ್ಮಾನ್ ಬಂಟ್ವಾಳ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾದ ಬೊಂಡಾಲ ಚಿತ್ತರಂಜನ್ ಶೆಟ್ಟಿ ಹಸನ್ ಪಲ್ಲಿರ್, ಮುನವರ್, ಸಗೀರ್ ನಂದರಬೆಟ್ಟು ಫಹಾದ್ ದರ್ಬೆ ಸೇರಿದಂತೆ ಸ್ಥಳೀಯ ಮುಖಂಡರು ಇದ್ದರು. ಎರಡು ದಿನಗಳ ಹಿಂದೆ ಕರ್ನಾಟಕ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ್ದರು.

ಜೆಇಇ ಮೈನ್ಸ್ ಫಲಿತಾಂಶ ಪ್ರಕಟ | 3 ಮಂದಿ ವಿದ್ಯಾರ್ಥಿಗಳು 99 ಪರ್ಸೆಂಟೈಲ್‌ಗಿಂತ ಅಧಿಕ ಅಂಕ

ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿಗಳ ಅಮೋಘ ಸಾಧನೆ

ಕಾರ್ಕಳ: ದೇಶದ ಪ್ರತಿಷ್ಠಿತ ತಾಂತ್ರಿಕ ವಿಶ್ವವಿದ್ಯಾನಿಲಯಗಳಿಗೆ ಸೇರ ಬಯಸುವ ವಿದ್ಯಾರ್ಥಿಗಳಿಗೆ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿಯವರು ನಡೆಸುವ ಅತಿ ಕ್ಲಿಷ್ಟಕರವೆನಿಸಿದ ಪರೀಕ್ಷೆಗಳಲ್ಲೊಂದಾದ ಜೆಇಇ ಮೈನ್ಸ್ (ಸೆಷನ್-2) 2026ನೇ ಸಾಲಿನ ಅರ್ಹತಾ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ಕಾರ್ಕಳದ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ 3 ಮಂದಿ ವಿದ್ಯಾರ್ಥಿಗಳು 99 ಪರ್ಸಂಟೈಲ್‌ಗಿಂತ ಅಧಿಕ ಅಂಕವನ್ನು ಪಡೆದು ವಿಶಿಷ್ಟ ಸಾಧನೆಗೈದು ಮುಂದಿನ ಹಂತದ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ತೇರ್ಗಡೆಯನ್ನು ಹೊಂದಿದ್ದಾರೆ.

ವಿದ್ಯಾರ್ಥಿಗಳಾದ ನಮಿತ್ ಕೃಷ್ಣಮೂರ್ತಿ ಹೆಗಡೆ 99.4981217 ಪರ್ಸಂಟೈಲ್, ನಾಗದೇವ್ ಎಂ.ಜಿ. -99.5970242 ಪರ್ಸ ಂಟೈಲ್, ಪ್ರಥಮ್ ತಮ್ಮಣ್ಣ ಗೌಡರ್ - 99.1416986 ಪರ್ಸಂಟೈಲ್ ಪಡೆದುಕೊಳ್ಳುವ ಮೂಲಕ ವಿಶಿಷ್ಟ ಶ್ರೇಣಿಗಳಿಸಿದ್ದಾರೆ. ಬಸವರೆಡ್ಡಿ ವಿಷ್ಣುರೆಡ್ಡಿ - 98.9823753, ತೇಜಸ್ ಆರ್. ಬಿ.- 98.9615457, ನಿನಾದ್ ರಾಜೇಶ್ ನಾಯ್ಕ್- 98.946358, ಧನುಷ್ ಹೆಚ್. ಎ.- 98.8634496, ಸಂವಿತ್ ಅಮಿತ್ ಗೋಕರ್ಣ- 98.5729919, ದೃಶ್ಯ- 98.4130581, ಸುಕ್ಷಿತ್ ಗಿರೀಶ್ ಗೌಡ- 98.3503888, ತೇಜಸ್ ಎನ್. ಇ. - 98.3454350, ತೇಜಸ್ ಹೆಗಡೆ ಎಚ್. ಡಿ.-98.1925416, ಅಕ್ಷತಾ ಮೋಹನ್ ಹೆಗಡೆ -98.168271, ಪ್ರಜ್ವಲ್ ಭಟ್- 98.0498968, ವಿಶ್ವೇಶ್ ಎನ್. ಎಚ್.98.0348799, ಪರ್ಸಂಟೈಲ್‌ಗಳನ್ನು ಪಡೆದುಕೊಂಡಿದ್ದಾರೆ. 99 ಪರ್ಸಂಟೈಲ್‌ಗಿಂತ ಅಧಿಕ 03 ಮಂದಿ ವಿದ್ಯಾರ್ಥಿಗಳು, 98 ಪರ್ಸಂಟೈಲ್ ಗಿಂತ ಅಧಿಕ 15ವಿದ್ಯಾರ್ಥಿಗಳು, 95 ಪರ್ಸಂಟೈಲ್ ಗಿಂತ ಅಧಿಕ 51 ವಿದ್ಯಾರ್ಥಿಗಳು, 90 ಪರ್ಸಂಟೈಲ್ ಗಿಂತ ಅಧಿಕ 114 ವಿದ್ಯಾರ್ಥಿಗಳು ಅಂಕಗಳನ್ನು ಪಡೆದುಕೊಂಡು ಮುಂದಿನ ಹಂತದ ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆಯನ್ನು ಗಳಿಸಿಕೊಂಡಿದ್ದಾರೆ.



ವಿದ್ಯಾರ್ಥಿಗಳಿಗೆ ಅಭಿನಂದನೆ

ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರು,ಆಡಳಿತ ಮಂಡಳಿ, ಉಪನ್ಯಾಸಕ ವರ್ಗ, ಸಂಸ್ಥೆಯ ಜೆಇಇ ಪರೀಕ್ಷೆಯ ಸಂಯೋಜಕರಾದ ಶ್ರೀ ನಂದೀಶ್ ಅಭಿನಂದಿಸಿ ಮುಂದಿನ ಹಂತದ ಪರೀಕ್ಷೆಗೆ ಶುಭ ಹಾರೈಸಿದ್ದಾರೆ.

ಹಿರಿಯ ಶಿಕ್ಷಕರಿಗೆ ಗುರುವಂದನೆ



ಶಿರ್ವ: ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ಜರುಗಿದ ಎರಡು ದಿನಗಳ ಶತಮಾನೋತ್ಸವಸಮಾರೋಪಸಮಾರಂಭದಲ್ಲಿಶತಮಾನೋತ್ಸವ ಸಮಿತಿಯ ಅಧ್ಯಕ್ಷ ಹಾಗೂ ಶಾಲಾ ಹಳೆವಿದ್ಯಾರ್ಥಿ ಮಾಧವ ಕಾಮತ್ ಅವರು ಮೂರು ತಲೆಮಾರಿನ ಹಿರಿಯ ಗುರುಗಳಾದ ಲೀಲಾವತಿ ಟೀಚರ್, ಪುಂಡಲೀಕ ಮರಾಠೆ ಹಾಗೂ ಶಾಲಿನಿ ಟೀಚರ್, ವಿನುತಾ ಟೀಚರ್ ಅವರನ್ನು ವಿಶೇಷವಾಗಿ ಅಭಿನಂದಿಸಿ ಗುರುವಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಎನ್.ಆರ್.ದಾಮೋದರ ಶರ್ಮಾ, ಬಂಟಕಲ್ಲು ಶ್ರೀದೇವಳದ ಆಡಳಿತ ಮೊಕ್ತೇಸರ ಜಯರಾಮ ಪ್ರಭು ಗಂಪದಬೈಲು, ಹಳೆವಿದ್ಯಾರ್ಥಿ ಶಂಕರ ಶೆಟ್ಟಿ ಮಾನಿಪಾಡಿ, ಶಾಲಾ ಶತಮಾನೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕೆ.ಆರ್.ಪಾಟ್ಕರ್, ಶಾಲಾ ಸಂಚಾಲಕ ರಾಮದಾಸ್ ಪ್ರಭು, ಶಾಲಾ ಮುಖ್ಯ ಶಿಕ್ಷಕಿ ಸಂಗೀತಾ ಆರ್ ಪಾಟ್ಕರ್, ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಶಶಿಧರ ವಾಗ್ಲೆ ವೇದಿಕೆಯಲ್ಲಿದ್ದರು.

ಹೈದರಬಾದ್ ಮೂಲದ ಉದ್ಯಮಿ ರಾಸನ್ ಗ್ರೂಪ್‌ನ ಚೇರ್‌ಮೆನ್ ಕಣ್ಣಕರ್ ರವೀಂದ್ರ ರೆಡ್ಡಿ ಅವರಿಂದ ಉದಾರದಾನ

ಕುಕ್ಕೆ ಸನ್ನಿಧಾನಕ್ಕೆ 12.44 ಲ. ರೂ. ಮೌಲ್ಯದ ವಜ್ರಖಚಿತ ಚಿನ್ನದ ಸರ ಸಮರ್ಪಣೆ

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರಿಗೆ ಹೈದರಬಾದ್‌ನ ಉದ್ಯಮಿ ರಾಸನ್ ಗ್ರೂಪ್‌ನ ಚೇರ್‌ಮೆನ್ ಕಣ್ಣಕರ್ ರವೀಂದ್ರ ರೆಡ್ಡಿ ಅವರು ವಜ್ರಖಚಿತ ಚಿನ್ನದ ಸರವನ್ನು ಬುಧವಾರ ಸಮರ್ಪಿಸಿದರು. ಸುಮಾರು ರೂ.12.44 ಲಕ್ಷ ಮೌಲ್ಯದ ಸರವನ್ನು ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ ಅವರಿಗೆ ಆಡಳಿತ ಕಚೇರಿಯಲ್ಲಿ ಹಸ್ತಾಂತರಿಸಿದರು.

ಗೌರವಾರ್ಪಣೆ

ಈ ಸಂದರ್ಭ ಹರೀಶ್ ಎಸ್. ಇಂಜಾಡಿ ಅವರು ಸೇವಾರ್ಥಿ ಕಣ್ಣಕರ್ ರವೀಂದ್ರ ರೆಡ್ಡಿ ಅವರನ್ನು ಗೌರವಿಸಿದರು. ರವೀಂದ್ರ ರೆಡ್ಡಿ ಅವರ ಪುತ್ರ ಕಣ್ಣಕರ್ ಸಂದೀಪ್ ರೆಡ್ಡಿ, ಸಂಬಂಧಿಕ ಉತ್ತಮ್ ಕುಮಾರ್ ರೆಡ್ಡಿ, ರಜಿನಿ, ಹೈಮಾ, ಹೈದರಬಾದ್‌ನ ಉದ್ಯಮಿ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜ , ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ, ಎಇಒ ಎಸ್. ಜೆ.ವೈ. ರಾಜ್, ಶಿಷ್ಟಾಚಾರ ವಿಭಾಗದ ಪ್ರಮೋದ್ ಕುಮಾರ್ ಎಸ್., ಸೇವಾರ್ಥಿಗಳ ಆತ್ಮೀಯರಾದ ಶ್ರೀ ದೇವಳದ ಕೃಷ್ಣಪ್ರಸಾದ್ ಕೆ.ಜಿ. ಭಟ್, ದೇವಳದ ಸಿಬ್ಬಂದಿ ಸದಾನಂದ ಕಾರ್ಜ ಉಪಸ್ಥಿತರಿದ್ದರು.



ದೇವರಿಗೆ ಅರ್ಪಣೆ

ಬಳಿಕ ಶ್ರೀ ದೇವಳದಲ್ಲಿ ಅರ್ಚಕರಾದ ರಾಜೇಶ್ ನಡ್ಯಂತಿಲ್ಲಾಯ ಮತ್ತು ಸತ್ಯನಾರಾಯಣ ನೂರಿತ್ತಾಯರು ವಿವಿಧ ವೈದಿಕ ವಿಧಾನಗಳನ್ನು ನೆರವೇರಿಸಿ ಚಿನ್ನದ ಸರವನ್ನು ಶ್ರೀ ದೇವರಿಗೆ ಸಮರ್ಪಿಸಿದರು.

ಸಂತಸ ತಂದಿದೆ

ಶ್ರೀ ದೇವಳದಲ್ಲಿ ಸುತ್ತು ಪೌಳಿ ನಿಮಾಣ ಸೇರಿದಂತೆ ಇತರ ಅಭಿವೃದ್ಧಿ ಕಾಯ ನಡೆಯಲಿದೆ. ಈ ಸಂದರ್ಭ ಭಕ್ತರು ಸೇವಾರೂಪದಲ್ಲಿ ನೀಡುವ ಕೊಡುಗೆ ಕೃತಜ್ಞತಾಪೂವಕವಾಗಿ ಸ್ವೀಕರಿಸಲಾಗುವುದು. ಉದ್ಯಮಿ ರವೀಂದ್ರ ರೆಡ್ಡಿ ಅವರ ಕೊಡುಗೆ ಹಾಗೂ ಮುಂದೆ ಅಭಿವೃದ್ಧಿ ಕಾಯಕ್ಕೆ ಸಹಾಯಹಸ್ತ ಚಾಚುತ್ತೇನೆ ಅಂದಿರುವುದು ಸಂತಸ ತಂದಿದೆ.

● ಹರೀಶ್ ಎಸ್. ಇಂಜಾಡಿ, ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ

ಸಹಾಯಹಸ್ತ

ನಾನು ಕುಕ್ಕೆ ಕ್ಷೇತ್ರದ ಭಕ್ತ. ಈ ಹಿಂದೆ ಬಂದು ಇಲ್ಲಿ ಸರ್ಪ ಸಂಸ್ಕಾರ ಮತ್ತು ಆಶ್ಲೇಷ ಬಲಿ ಸೇವೆ ಮಾಡಿದ ಬಳಿಕ ನನ್ನ ಇಷ್ಟಾರ್ಥ ಸಿದ್ಧಿಯಾಗಿದೆ. ಆದುದರಿಂದ ಶ್ರೀ ದೇವಳದ ಆಡಳಿತ ತಿಳಿಸಿದ ಅಭಿವೃದ್ಧಿ ಕಾರ್ಯಕ್ಕೆ ಕೈ ಜೋಡಿಸುತ್ತೇನೆ. ಇಲ್ಲಿ ಸುತ್ತು ಪೌಳಿ ನಿರ್ಮಾಣ ಸಂದರ್ಭ ನಿರ್ಮಿಸಬೇಕಿರುವ ಗಣಪತಿ ಗುಡಿಯನ್ನು ನಿರ್ಮಿಸಿ ಕೊಡಲು ಸಿದ್ಧ.

● ಕಣ್ಣಕರ್ ರವೀಂದ್ರ ರೆಡ್ಡಿ, ಸೇವಾರ್ಥಿ

ಸುತ್ತಮುತ್ತ

ಏ. 24-26: ಕಾರ್ಕಳದಲ್ಲಿ ಬೃಹತ್ ಹಲಸು ಮೇಳ

ಕಾರ್ಕಳ: ಇಲ್ಲಿನ ಬಿಲ್ಲವ ಸಭಾಭವನದಲ್ಲಿ ಏಪ್ರಿಲ್ 24ರಿಂದ 26ರವರೆಗೆ ಬೃಹತ್ ಹಲಸು ಮೇಳ ಆಯೋಜಿಸಲಾಗಿದೆ ಎಂದು ವಂಶಿ ಇವೆಂಟ್ಸ್‌ನ ರಮಿತಾ ಸೂರ್ಯವಂಶಿ ತಿಳಿಸಿದರು.

ಅವರು ಕಾರ್ಕಳ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೇಳವು ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿದ್ದು, ವಿವಿಧ ಕಾರ್ಯಕ್ರಮಗಳು ಜನರನ್ನು ಆಕರ್ಷಿಸಲಿವೆ.

ರೋಟರಿ ಕ್ಲಬ್‌ನ ನವೀನ್ ಮಾತನಾಡಿ, ಹಲಸಿನ ಹಣ್ಣಿನಲ್ಲಿರುವ ಪೌಷ್ಟಿಕ ಹಾಗೂ ಔಷಧೀಯ ಗುಣಗಳ ಬಗ್ಗೆ ವಿವರಿಸಿ, ಗ್ರಾಮೀಣ ಸೊಗಡನ್ನು ಇಂದಿನ ಯುವಜನತೆಗೆ ಪರಿಚಯಿಸುವ ಉದ್ದೇಶದಿಂದ ಈ ಮೇಳವನ್ನು ಆಯೋಜಿಸಲಾಗಿದೆ ಎಂದರು. ಗಣೇಶ್ ಶೆಟ್ಟಿ ಮಾತನಾಡಿ, ಹಲಸಿಗೆ ಮೌಲ್ಯವರ್ಧನೆ ನೀಡುವುದು ಮೇಳದ ಮುಖ್ಯ ಉದ್ದೇಶವಾಗಿದ್ದು, ವಿವಿಧ ರಾಜ್ಯಗಳ ಹಲಸಿನ ಜಾತಿಗಳನ್ನು ಪರಿಚಯಿಸಲಾಗುವುದು ಎಂದು ಹೇಳಿದರು. ರೈತರು ನೇರವಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶವೂ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಮೇಳದಲ್ಲಿ ಇಳಕಲ್ ಖಾದಿ ಸೀರೆಗಳು, ಗೃಹಬಳಕೆಯ ವಸ್ತುಗಳು, ಬಿದಿರು ಉತ್ಪನ್ನಗಳು, ದೀಪಾಲಂಕೃತ ಮಣ್ಣಿನ ಮಡಕೆಗಳು ಸೇರಿದಂತೆ 70ಕ್ಕೂ ಹೆಚ್ಚು ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಜೊತೆಗೆ ಭಜನಾ ಸಪ್ತಸ್ವರ, ಸಂಗೀತ ಸ್ಪರ್ಧೆಗಳು ಹಾಗೂ ಹಲಸಿನ ವಿವಿಧ ಖಾದ್ಯಗಳ ಪ್ರದರ್ಶನವೂ ನಡೆಯಲಿದೆ ಎಂದು ಉದ್ಯಮಿ ವಾಸುದೇವ ಭಟ್ ಹೇಳಿದರು.

ಈ ಸಂದರ್ಭದಲ್ಲಿ ವಂಶಿ ಇವೆಂಟ್ಸ್ ಹಾಗೂ ಬೆನಕ ಇವೆಂಟ್ಸ್‌ನ ಪ್ರತಿನಿಧಿಗಳು, ಯುವವಾಹಿನಿಯ ಅಧ್ಯಕ್ಷ ಪ್ರಕಾಶ್ ಪೂಜಾರಿ ಕೆರುವಾಶೆ, ಭಾಸ್ಕರ ಪೂಜಾರಿ ಉಪಸ್ಥಿತರಿದ್ದರು.

ಯಕ್ಷಗಾನ ತರಬೇತಿಗೆ ಅರ್ಜಿ ಆಹ್ವಾನ

ಉಡುಪಿ: ನಗರದ ಇಂದ್ರಾಳಿಯಲ್ಲಿರುವ ಯಕ್ಷಗಾನ ಕೇಂದ್ರದಲ್ಲಿ ಯಕ್ಷಗಾನ ತರಬೇತಿಗಾಗಿ ಸೇರಲು ಬಯಸುವ 7ನೇ ತರಗತಿಯಿಂದ 10ನೇ ತರಗತಿವರೆಗಿನ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತ ಯಕ್ಷಗಾನ ತರಬೇತಿ, ಶಾಲಾ ವಿದ್ಯಾಭ್ಯಾಸ, ಉಚಿತ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆ ಇರುತ್ತದೆ. ವಿದ್ಯಾರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು ಎಂದು ಯಕ್ಷಗಾನ ಕೇಂದ್ರದ ಪ್ರಕಟಣೆ ತಿಳಿಸಿದೆ. ಅರ್ಜಿ ಸಲ್ಲಿಸಲು ಮೇ 10 ಕೊನೆಯ ದಿನವಾಗಿರುತ್ತದೆ. ಆಸಕ್ತರು ದೂರವಾಣಿ ಸಂಖ್ಯೆ:9900907702/9901190392/99452451442 ಯಕ್ಷಗಾನ ಕೇಂದ್ರದ ಆಡಳಿತಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

ನಾಳೆ ವರನಟ ಡಾ. ರಾಜ್ ಕುಮಾರ್ ಜಯಂತಿ

ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಡುಪಿ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಉಡುಪಿ ಜಿಲ್ಲಾ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ವರನಟ ಡಾ.ರಾಜ್‌ಕುಮಾರ್ ರವರ ಜಯಂತಿ ಕಾರ್ಯಕ್ರಮವು ಏ. 24 ರಂದು ಬೆಳಗ್ಗೆ 10.30 ಕ್ಕೆ ನಗರದ ಬ್ರಹ್ಮಗಿರಿಯ ರೆಡ್‌ಕ್ರಾಸ್ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಎ. ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಬಿ.ವೈ. ರಾಘವೇಂದ್ರ, ಮಂಗಳೂರು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್, ಶಾಸಕರಾದ ವಿ. ಸುನೀಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ವಿಧಾನಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರೋಹಿಣಿ ಸಿಂಧೂರಿ ದಾಸರಿ, ಭಾರತೀಯ ರೆಡ್‌ಕ್ರಾಸ್ ರಾಜ್ಯ ಸಭಾಪತಿ ಬಸರೂರು ರಾಜೀವ್ ಶೆಟ್ಟಿ, ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್ ಹಾಗೂ ಮತ್ತಿತರರು ಭಾಗವಹಿಸಲಿದ್ದು, ಖ್ಯಾತ ಚಲನಚಿತ್ರ ನಟಿ ಪ್ರತಿಮಾ ನಾಯಕ್ ಉಪನ್ಯಾಸ ನೀಡಲಿದ್ದಾರೆ.

ಯುವವಾಹಿನಿ ಅಂತರ್‌ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ-ಡೆನ್ನನ 2026' ಸಮಾರೋಪ

ಕೂಳೂರು ಚಾಂಪಿಯನ್, ಪಣಂಬೂರು-ಕುಳಾಯಿ ದ್ವಿತೀಯ



ಬಂಟ್ವಾಳ: ಯುವವಾಹಿನಿ ಕೇಂದ್ರ ಸಮಿತಿಯ ಆಶ್ರಯದಲ್ಲಿ, ಬಂಟ್ವಾಳ ಘಟಕದ ಸಹಕಾರದಲ್ಲಿ ಬಿ.ಸಿ.ರೋಡ್‌ನಲ್ಲಿ ನಡೆದ ಯುವವಾಹಿನಿ ಅಂತರ್ ಘಟಕ ಸಾಂಸ್ಕೃತಿಕ ಸ್ಪರ್ಧೆ 'ಡೆನ್ನಾನ-ಡೆನ್ನನ 2026'ರಲ್ಲಿ ಯುವವಾಹಿನಿ ಕೂಳೂರು ಘಟಕ ನಗದು 50 ಸಾವಿರ ರೂ. ಹಾಗೂ ಟ್ರೋಫಿಯೊಂದಿಗೆ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿತು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಮಾರೋಪ ಸಮಾರಂಭ

ರಾಜ್ಯ ಸರ್ಕಾರದ ಹೆಚ್ಚುವರಿ ಅಡ್ವಕೇಟ್ ಜನರಲ್ ತಾರನಾಥ ಪೂಜಾರಿ, ಅಖಿಲ ಭಾರತ ಬಿಲ್ಲವರ ಮಹಾಮಂಡಲ ಮುಲ್ಕಿ ಇದರ ಅಧ್ಯಕ್ಷ ಸೂರ್ಯಕಾಂತ್ ಜೆ. ಸುವರ್ಣ, ಹಿಂದುಳಿದ ವರ್ಗಗಳ ಆಯೋಗದ ಸದಸ್ಯೆ ಪ್ರತಿಭಾ ಕುಳಾಯಿ, ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ, ನಾರಾಯಣಗುರು ವಿಚಾರ ವೇದಿಕೆಯ ಅಧ್ಯಕ್ಷ ಸತ್ಯಜಿತ್ ಸುರತ್ಕಲ್, ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವರಾಮ್, ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಉದ್ಯಮಿಗಳಾದ ಪ್ರಕಾಶ್ ಕುಂಪಲ ಮತ್ತು ಸುದರ್ಶನ್ ಬಜ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ. ತುಕರಾಮ ಪೂಜಾರಿ, ರಂಗಭೂಮಿ ನಿರ್ದೇಶಕ ವಿದ್ದು ಉಚ್ಚಿಲ್, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದ ಶೋಭರಾಜ್ ಪಾವೂರು ಮತ್ತು ವಿದುಷಿ ನಿಶ್ಮಿತಾ ಕಾರಂದೂರು ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಅವರನ್ನು ಗೌರವಿಸಲಾಯಿತು.

ಬಹುಮಾನಗಳ ವಿವರ

ಚಾಂಪಿಯನ್ ಆಗಿ ಕೂಳೂರು ಘಟಕ ಮೂಡಿಬಂತು. ದ್ವಿತೀಯ ಸ್ಥಾನ ಪಣಂಬೂರು-ಕುಳಾಯಿ ಘಟಕ, ತೃತೀಯ ಸ್ಥಾನವನ್ನು ಉಡುಪಿ ಘಟಕ, ಚತುರ್ಥ: ಬೆಳ್ತಂಗಡಿ ಘಟಕ, ಪಂಚಮ: ಬೆಂಗಳೂರು ಘಟಕ ಪಡೆಯಿತು. ತೀರ್ಪುಗಾರರ ಮೆಚ್ಚುಗೆ ಪುರಸ್ಕಾರಕ್ಕೆ ಕೊಲ್ಯ, ಮಾಣಿ ಹಾಗೂ ಸುರತ್ಕಲ್ ಘಟಕಗಳು ಪಾತ್ರವಾದವು.

ಅತ್ಯುತ್ತಮ ನಟ: ಹರೀಶ್ ಕೋಟ್ಯಾನ್ (ಪಡುಬಿದ್ರಿ ಘಟಕ), ಲೇಖನ್ ಪೂಜಾರಿ (ಕೊಲ್ಯ ಘಟಕ), ಅತ್ಯುತ್ತಮ ನಟಿ: ನಯನಾ ಕೋಟ್ಯಾನ್ (ಕೂಳೂರು ಘಟಕ), ಮಂಜುಳಾ (ಪಣಂಬೂರು-ಕುಳಾಯಿ ಘಟಕ), ತೀರ್ಪುಗಾರರ ವಿಶೇಷ ಪುರಸ್ಕಾರ: ಚಾರ್ವಿ (ಬೆಂಗಳೂರು ಘಟಕ), ಆದ್ಯಾ (ಬೆಳ್ತಂಗಡಿ ಘಟಕ) ಅತ್ಯುತ್ತಮ ಕವನ: ಪ್ರಥಮ ಲತೀಶ್ ಸಂಕೊಳಿಗೆ (ಕೊಲ್ಯ ಘಟಕ), ದ್ವಿತೀಯ ಪುರಸ್ಕಾರವನ್ನು ಗೀತಾ ವಸಂತ್ (ಕೂಳೂರು ಘಟಕ) ಅವರು ಪಡೆದರು.

ಅತ್ಯುತ್ತಮ ಪ್ರಚಾರ ವಿಡಿಯೋ: ಪ್ರಥಮ-ಕೂಳೂರು ಘಟಕ, ದ್ವಿತೀಯ-ಪಣಂಬೂರು-ಕುಳಾಯಿ ಘಟಕ, ಅತ್ಯುತ್ತಮ ನೃತ್ಯ: ಬೆಂಗಳೂರು ಘಟಕ, ಅತ್ಯುತ್ತಮ ಸಂದೇಶ ಪುರಸ್ಕಾರವನ್ನು ಉಡುಪಿ ಘಟಕ ಪಡೆಯಿತು.

ಯುವವಾಹಿನಿ ಕೇಂದ್ರ ಸಮಿತಿಯ ಸಾಂಸ್ಕೃತಿಕ ನಿರ್ದೇಶಕ ದಿನೇಶ್ ಸುವರ್ಣ ರಾಯಿ ವಿಜೇತರ ಪಟ್ಟಿ ವಾಚಿಸಿದರು. ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು, ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ರೇಖಾ ಗೋಪಾಲ್, ಬಂಟ್ವಾಳ ಘಟಕದ ಕಾರ್ಯದರ್ಶಿ ಮಧುಸೂದನ್ ಮದ್ವ, ಕಾರ್ಯಕ್ರಮದ ಸಂಚಾಲಕರಾದ ಗೀತಾ ಜಗದೀಶ್ ಹಾಗೂ ಉದಯ ಪೂಜಾರಿ ಮೇನಾಡು ಉಪಸ್ಥಿತರಿದ್ದರು.

ಡೆನ್ನಾನ-ಡೆನ್ನನ ಪ್ರಧಾನ ಸಂಚಾಲಕರಾದ ಶ್ರೀನಿವಾಸ ಪೂಜಾರಿ ಮೆಲ್ಕಾರ್ ಸ್ವಾಗತಿಸಿದರು. ಬಂಟ್ವಾಳ ಘಟಕದ ಸಾಂಸ್ಕೃತಿಕ ನಿರ್ದೇಶಕ ಶೈಲೇಶ್ ಪೂಜಾರಿ ಕುಚ್ಚಿಗುಡ್ಡೆ ವಂದಿಸಿದರು. ಚಂದ್ರಹಾಸ ಬಳಂಜ ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಸೇನೇಶ್ವರ ದೇವರ ವಾರ್ಷಿಕ ಮನ್ಮಹಾರಥೋತ್ಸವದ ಸಂಭ್ರಮ



ಬೈಂದೂರು: ಚಾರಿತ್ರಿಕ ಹಿನ್ನೆಲೆವುಳ್ಳ ಮತ್ತು ಕಲಾವೈಭವಗಳಿಂದ ಕಂಗೊಳಿಸುವ ಬೈಂದೂರು ಗ್ರಾಮದೇವತೆ ಶ್ರೀ ಸೇನೇಶ್ವರ ದೇವರ ವಾರ್ಷಿಕ ಮನ್ಮಹಾರಥೋತ್ಸವ ಬುಧವಾರ ಸಡಗರ ಸಂಭ್ರಮದಿಂದ ಜರುಗಿತು.

ಕ್ಷೇತ್ರದ ತಂತ್ರಿ ಕೃಷ್ಣ ಸೋಮಯಾಜಿ ಪ್ರಧಾನ ಆಚಾರ್ಯತ್ವದಲ್ಲಿ ದೇವರಿಗೆ ನಿತ್ಯ ಬಲಿ, ಶತರುದ್ರಾಭಿಷೇಕ, ರಥ ಬಲಿ, ಕ್ಷೇತ್ರಪಾಲ ಬಲಿ, ಪಂಚಾಮೃತ ಅಭಿಷೇಕ, ವಿಶೇಷ ಭೂತ ಬಲಿ, ರಥಾರೋಹಣ ಸೇರಿದಂತೆ ಹಲವು ಧಾರ್ಮಿಕ ವಿಧಿವಿಧಾನ ನಡೆಯಿತು. ಮಧ್ಯಾಹ್ನ ವಿವಿಧ ಭಾಗಗಳಿಂದ ಕ್ಷೇತ್ರಕ್ಕೆ ಆಗಮಿಸಿದ ಸಹಸ್ರಾರು ಭಕ್ತರು ಅನ್ನಪ್ರಸಾದ ಸ್ವೀಕರಿಸಿದರು. ಸಂಜೆ ನಡೆದ ನಗರೋತ್ಸವದಲ್ಲಿ ಸಾವಿರಾರು ಭಕ್ತರು ಜಾತಿ, ಮತ ಭೇದವಿಲ್ಲದೇ ರಥ ಎಳೆದು ಸಂಭ್ರಮಿಸಿದರು. ಸಂಪ್ರದಾಯದಂತೆ ರಥೋತ್ಸವದ ಪೂರ್ವದಲ್ಲಿ ಮುಖ್ಯರಸ್ತೆಯಲ್ಲಿರುವ ಜಾಮೀಯಾ ಮಸೀದಿಗೆ ತೆರಳಿ ಮುಸ್ಲಿಂ ಬಾಂಧವರನ್ನು ಆಹ್ವಾನಿಸುವ ಹಾಗೂ ನಗರೋತ್ಸವದ ಸಮಯದಲ್ಲಿ ಸ್ಥಳೀಯ ಠಾಣಾಧಿಕಾರಿಗಳನ್ನು ಕರೆತಂದು ಉತ್ಸವಕ್ಕೆ ಚಾಲನೆ ನೀಡುವ ಪದ್ಧತಿಯನ್ನು ಇಂದಿಗೂ ಪಾಲಿನೆಯಾಗುತ್ತಿರುವುದು ಈ ದೇವಳದ ವಿಶೇಷತೆಗಳಲ್ಲಿ ಒಂದಾಗಿದೆ.

ಶಾಸಕ ಗುರುರಾಜ ಗಂಟಿಹೊಳೆ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಿರೀಶ್ ಬೈಂದೂರು, ಸದಸ್ಯರಾದ ರಾಜೇಶ ಐತಾಳ್, ವಸಂತಕುಮಾರ್ ಶೆಟ್ಟಿ ಎಸ್. ಜಯರಾಮ ಯಡ್ತರೆ, ಬಿ. ದೊಟ್ಟಯ್ಯ ಪೂಜಾರಿ, ಇಂದಿರಾ ಕೊಠಾರಿ, ಶಾಂತಾ ಆಚಾರ್ಯ, ಪರಮೇಶ್ವರ ಪಟ್ವಾಲ್, ಪ್ರಶಾಂತಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

ಏ. 24-26: ಮಲ್ಪೆ ಪರ್ಸೀನ್ ಮೀನುಗಾರರ ಸಂಘದ ರಜತ ಸಂಭ್ರಮ

ಉಡುಪಿ: ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಸಂಭ್ರಮ ಏ. 24ರಿಂದ ಏ.26ರವರೆಗೆ ನಡೆಯಲಿದೆ.

ಏ. 24ರ ಬೆಳಗ್ಗೆ 7ರಿಂದ ಸಂಘದ ಕಾರ್ಯಾಲಯದಲ್ಲಿ ಗಣ ಹೋಮ, 9ರಿಂದ ಮಲ್ಪೆ ಬೀಚ್ ನಲ್ಲಿ ನಡೆಯಲಿರುವ ಕ್ರೀಡೋತ್ಸವವನ್ನು ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ನಾಗರಾಜ್ ಸುವರ್ಣ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಜತ ಸಂಭ್ರಮ ಸಮಿತಿಯ ಗೌರವಾಧ್ಯಕ್ಷ ನಾಡೋಜ ಡಾ. ಜಿ.ಶಂಕರ್, ಅಧ್ಯಕ್ಷ ಯಶ್ ಪಾಲ್ ಸುವರ್ಣ, ಪ್ರಮೋದ್ ಮಧ್ವರಾಜ್, ಆನಂದ ಸಿ. ಕುಂದರ್ ಮತ್ತಿತರರು ಪಾಲ್ಗೊಳ್ಳಲಿರುವರು.

ಸಂಜೆ 6.30ರಿಂದ ಮಲ್ಪೆ ಬೀಚ್ ನಲ್ಲಿ ನಡೆಯುವ ಸಂಘದ ರಜತ ಮಹೋತ್ಸವವನ್ನು ನಾಡೋಜ ಡಾ. ಜಿ. ಶಂಕರ್ ಉದ್ಘಾಟಿಸುವರು.

ಶಾಸಕ ಯಶ್ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೀನುಗಾರಿಕೆ ಸಚಿವ ಮಾಂಕಾಳ ವೈದ್ಯ, ಸಂಸದ ಕೋಟ ಶ್ರೀನಿವಾಸ ಪೂಜಾರಿ ಮತ್ತಿತರರು ಪಾಲ್ಗೊಳ್ಳಲಿರುವರು. ಪ್ರಮುಖ ಗಣ್ಯರಿಗೆ ಗೌರವಾರ್ಪಣೆ, ರಾತ್ರಿ 7.30ರಿಂದ ಸಂಗೀತ ಸಾಗರ ಕಾರ್ಯಕ್ರಮ ನಡೆಯಲಿದೆ.

ಏ.25ರಂದು ಬೆಳಗ್ಗೆ 9ರಿಂದ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಸಂಜೆ 6.30 ರಿಂದ ನೃತ್ಯ ಕಾರ್ಯಕ್ರಮ, ಸಂಘದ ಮೀನುಗಾರ ವೃತ್ತಿಯ ನಿವೃತ್ತ ಪರ್ಸಿನ್ ತಂಡೇಲ ರನ್ನು ಗೌರವಿಸಲಾಗುವುದು.

ಸಮಾರೋಪ ಸಮಾರಂಭ

ಎ. 26ರಂದು ಸಂಜೆ 6ರಿಂದ ನಡೆ ಯುವ ಸಮಾರೋಪದಲ್ಲಿ ನಾಡೋಜ ಡಾ. ಜಿ. ಶಂಕರ್, ಶಾಸಕ ಯಶ್ ಪಾಲ್ ಸುವರ್ಣ, ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಮತ್ತು ಪ್ರಸಾದರಾಜ್ ಕಾಂಚನ್ ಮತ್ತಿತರರು ಪಾಲ್ಗೊಳ್ಳುವರು. ವಿವಿಧ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಸಹಾಯಧನ, ಬಹುಮಾನ ವಿತರಣೆ ನಡೆಯಲಿದೆ.

ಬೋಟ್‌ಗೆ ತ್ಯಾಜ್ಯ ಸಂಗ್ರಹ ಕಿಟ್

ಎಲ್ಲ ಪರ್ಸಿನ್ ಮೀನುಗಾರಿಕೆ ಬೋಟುಗಳಿಗೆ ತ್ಯಾಜ್ಯ ಸಂಗ್ರಹ ಕಿಟ್ ವಿತರಣೆ, ಕೊಳಲಗಿರಿಯ ಸ್ಪಂದನಾ ಮತ್ತು ಮಲ್ಪೆ ಪಡುಕರೆಯ ಕಾರುಣ್ಯ ವಿಶೇಷಚೇತನರ ಶಾಲೆಗೆ ಸಮವಸ್ತ್ರ ವಿತರಣೆ, ರಾತ್ರಿ 7.30ರಿಂದ ರಾಜ್ಯಮಟ್ಟದ ಗುಂಪು ನೃತ್ಯ ಸ್ಪರ್ಧೆ ಕರಾವಳಿ ನೃತ್ಯೋತ್ಸವ -2026 ನಡೆಯಲಿದೆ ಎಂದು ಪರ್ಸಿನ್ ಮೀನುಗಾರರ ಸಂಘದ ಅಧ್ಯಕ್ಷ ನಾಗರಾಜ್ ಸುವರ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣ ಎಸ್. ಸುವರ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರ್‌ಎಸ್‌ಬಿ ವಧು- ವರರ ಸಮಾವೇಶ - 2026 ಸಂಪನ್ನ



ಉಡುಪಿ: ರಾಜಾಪುರ ಸಾರಸ್ವತ ಬ್ರಾಹ್ಮಣ ಸಂಘ, ಮಣಿಪಾಲ, ರಾಜಾಪುರ ಸಾರಸ್ವತ ಬ್ರಾಹ್ಮಣ ಮಹಿಳಾ ವೇದಿಕೆ, ಮಣಿಪಾಲ ಮತ್ತು ರಾಜಾಪುರ ಸಾರಸ್ವತ ಸಮಾಜ ಬೆಂಗಳೂರು ಇದರ ಅಂಗಸಂಸ್ಥೆಯಾಗಿರುವ ಆರ್ ಎಸ್ ಬಿ. ಅನುಬಂಧ ವಿವಾಹ ವೇದಿಕೆ, ಬೆಂಗಳೂರು ಆಶ್ರಯದಲ್ಲಿ ಆರ್ ಎಸ್‌ಬಿ ಸಮಾಜದ ವಿವಾಹಾಪೇಕ್ಷಿತ ವಧು- ವರರ ಸಮಾವೇಶ ಮಣಿಪಾಲದ ಆರ್‌ಎಸ್‌ಬಿ ಭವನದಲ್ಲಿ ಜರಗಿತು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಮಣಿಪಾಲ ಆರ್ ಎಸ್‌ಬಿ ಸಂಘದ ಅಧ್ಯಕ್ಷ ಉಪೇಂದ್ರ ನಾಯಕ್ ವಹಿಸಿದ್ದರು.

ಜ್ಯೋತಿ ಕಾಮತ್ ಮತ್ತು ಗೀತಾ ನಾಯಕ್ ಪ್ರಾರ್ಥಿಸಿದರು. ಮಣಿಪಾಲ ಮಹಿಳಾ ವೇದಿಕೆಯ ಅಧ್ಯಕ್ಷೆ ರೂಪಾ ನಾಯಕ್ ಸ್ವಾಗತಿಸಿದರು. ಅನುಬಂಧ ವಿವಾಹ ವೇದಿಕೆಯ ಸಂಯೋಜಕಿ ಮಹಾಲಕ್ಷ್ಮೀ ಧೋಂಡ್ಯೆ ಪ್ರಸ್ತಾವನೆಗೈದರು. ರಮೇಶ್ ನಾಯಕ್ ಮುನ್ನೋಟ ನೀಡಿದರು. ರಾಜಾಪುರ ಸಾರಸ್ವತ ಸಮಾಜ ಬೆಂಗಳೂರು ಅಧ್ಯಕ್ಷ ಡಾ. ಕೇಶವ ಪಾಟ್ಕರ್ ಮತ್ತು ಪರ್ಕಳ ಶ್ರೀ ದುರ್ಗಾ ಪರಮೇಶ್ವರಿ ಕ್ರೆಡಿಟ್ ಕೋ ಓಪರೇಟಿವ್ ಸೊಸೈಟಿ ಅಧ್ಯಕ್ಷ ನರಸಿಂಹ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಮಿತ್ರಾ ನಾಯಕ್ ನಿರೂಪಿಸಿ, ಜ್ಯೋತಿ ನಾಯಕ್ ವಂದಿಸಿದರು.

ಶಿರ್ವ ಎಮ್‌ಎಸ್‌ಆರ್‌ಎಸ್ ಕಾಲೇಜು ಎನ್ನೆಸ್ಸೆಸ್ ವಾರ್ಷಿಕ ಶಿಬಿರ ಸಮಾರೋಪ



ಶಿರ್ವ: ಮೂಲ್ಕಿ ಸುಂದರ ರಾಮ್ ಶೆಟ್ಟಿ ಕಾಲೇಜು, ಶಿರ್ವ ಇದರ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಕಲ್ಯಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ ಸಂಪನ್ನಗೊಂಡಿತು.

ಸಮಾರೋಪ ಭಾಷಣ ಮಾಡಿದ ಬೆಂಗಳೂರು ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲ ಪ್ರೊ. ಮಹಾದೇವ ಸ್ವಾಮಿ ಮಾತನಾಡಿ, ಯುವಕರಿಗೆ ಸಮಾಜ ಸೇವೆಯ ಮಹತ್ವವನ್ನು ವಿವರಿಸಿ, ಶಿಸ್ತು ಮತ್ತು ಸೇವಾಭಾವನೆ ಜೀವನದ ಯಶಸ್ಸಿಗೆ ಮುಖ್ಯ. ಎನ್ನೆಸ್ಸೆಸ್ ಮೂಲಕ ಸಮಾಜದ ಸಮಸ್ಯೆಗಳನ್ನು ಅರಿತು, ಪರಿಹಾರ ಕಂಡುಕೊಳ್ಳುವ ದಿಕ್ಕಿನಲ್ಲಿ ನಡೆಯಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಮಿಥುನ್ ಚಕ್ರವರ್ತಿ ಮಾತನಾಡಿ, ಎನ್ನೆಸ್ಸೆಸ್ ಶಿಬಿರವು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಮಹತ್ತರ ಪಾತ್ರ ವಹಿಸುತ್ತದೆ ಎಂದರು.

ಅತಿಥಿಯಾಗಿ ಕಲ್ಯಾ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರೇವತಿ ಮಾತನಾಡಿದರು. ಚೈತನ್ಯ ಮಿತ್ರ ಮಂಡಳಿ ಕಲ್ಯಾ ಇದರ ಸಂಚಾಲಕ ಯತೀಶ್ ಎನ್. ಮಾತನಾಡಿ, ಎನ್ನೆಸ್ಸೆಸ್ ಹಾಗೂ ಸ್ವಚ್ಛತಾ ಅಭಿಯಾನಗಳ ಮಹತ್ವ ವಿವರಿಸಿ, ಗ್ರಾಮಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಪಾತ್ರವನ್ನು ವಿದ್ಯಾರ್ಥಿಗಳು ನಿರ್ವಹಿಸಬೇಕು ಎಂದರು.

ಉದ್ಯಮಿ ಸಂಜೀವ ಶೆಟ್ಟಿ ಮಹಮ್ಮದ್, ಹಳೆ ವಿದ್ಯಾರ್ಥಿ ಸಂಘದ ಪ್ರವೀಣ್ ಕುಮಾರ್, ಕಲ್ಯಾ ಯುವಕ ಮಂಡಳಿ ಅಧ್ಯಕ್ಷ ಸಂತೋಷ್ ಶೆಟ್ಟಿ ಉಪಸ್ಥಿತರಿದ್ದರು. ಕಾಲೇಜಿನ ಬೋಧಕ ವೃಂದ, ಎನ್ನೆಸ್ಸೆಸ್ ಘಟಕದ ನಾಯಕರಾದ ಕೌಶಿಕ್, ಶ್ರೇಯಸ್, ತನಿಷ್ಕಾ ಉಪಸ್ಥಿತರಿದ್ದರು. ಅಪೇಕ್ಷ ಆಚಾರ್ಯ ನಿರೂಪಿಸಿದರು. ಎನ್ನೆಸ್ಸೆಸ್ ಯೋಜನಾಧಿಕಾರಿ ಡಾ. ಸೋನಾ ಎಚ್.ಸಿ. ವಂದಿಸಿದರು.

ಬಾಳೆಪುಣಿ ಸಂಜೀವಿನಿ ಒಕ್ಕೂಟ ಸದಸ್ಯರಿಗೆ ಎಂಬ್ರಾಯಿಡರಿ ತರಬೇತಿ



ಕೊಣಾಜೆ: ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಕೌಶಲ್ಯ ಅಭಿವೃದ್ದಿ ಇಲಾಖಾ ಯೋಜನೆಯ ಅಂಗವಾಗಿ ವಿಜಯ ಗ್ರಾಮೀಣ ಪ್ರತಿಷ್ಠಾನ ಹಾಗೂ ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಇದರ ವತಿಯಿಂದ ಬಾಳೆಪುಣಿ ಮಂದಾರ ಸಂಜೀವಿನಿ ಒಕ್ಕೂಟದ ಮಹಿಳೆಯರಿಗೆ ಉಚಿತ 15 ದಿನಗಳ ಕಾಲ ನಡೆದ ಎಂಬ್ರಾಯಿಡರಿ ವರ್ಕ್‌ನ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭ ಬಾಳೆಪುಣಿ ಗ್ರಾಮ ಪಂಚಾಯತ್ ರಾಜೀವ ಗಾಂಧಿ ಸಭಾಂಗಣದಲ್ಲಿ ನಡೆಯಿತು.

ಅಧ್ಯಕ್ಷತೆಯನ್ನು ಮಂದಾರ ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ ಸೌಮ್ಯ ವಹಿಸಿದ್ದರು. ವಿಜಯ ಗ್ರಾಮೀಣ ಪ್ರತಿಷ್ಠಾನ ಮಂಗಳೂರು ಇದರ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜ್ಯೋತಿರಾಜ್, ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಕಾರ್ಯಕ್ರಮ ವ್ಯವಸ್ಥಾಪಕ ಜೀವನ್ ಮಾತಾಡಿದರು. ಮುಖ್ಯ ಅಥಿತಿಯಾಗಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪಿ. ವೆಂಕಟೇಶ್ ತರಬೇತಿ ನೀಡಿದ ಸಂಸ್ಥೆಗಳಿಗೆ ಅಭಿನಂದನೆ ಸಲ್ಲಿಸಿದರು. ಮುಂದೆಯೂ ಗ್ರಾ.ಪಂ.ನಿಂದ ಎಲ್ಲಾ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿ, ಶಿಬಿರಾರ್ಥಿಗಳು ಅವಕಾಶ ಸದುಪಯೋಗಪಡಿಸಿಕೊಂಡು ಸ್ವಾವಲಂಬಿ ಬದುಕು ಸಾಗಿಸಬೇಕೆಂದು ಕೋರಿದರು. ತಾಲೂಕು ವ್ಯವಸ್ಥಾಪಕರಾದ ವಿಧೀಶ್ ರಾಜ್ ಇದ್ದರು.

25 ಮಂದಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ನೀಡಲಾಯಿತು. ಸುರೇಖ, ತರಬೇತಿದಾರರಾದ ಶಿಕ್ಷಕಿ ಕಾಂಚನ ಇದ್ದರು. ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಗೀತಾ ಗೋಪಾಲ್ ನಿರೂಪಿಸಿದರು. ರಮ್ಯ ಸ್ವಾಗತಿಸಿ, ಕೌಸಲ್ಯ ವಂದಿಸಿದರು.

ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಚ್ಯ ವಸ್ತುಗಳ ಪ್ರದರ್ಶನ



ಕುಂದಾಪುರ: ಶ್ರಮ ಸಂಸ್ಕೃತಿಯ ಪ್ರತೀಕವಾದ ಪ್ರಾಚ್ಯ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳ ಅರಿವು ಮಹತ್ವವಾದದ್ದು. ಅವುಗಳ ಬಳಕೆಯ ಹಿಂದಿನ ವೈಜ್ಞಾನಿಕ ಕಾರಣಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು ಎಂದು ಪತ್ರಕರ್ತ ಪ್ರಶಾಂತ ಪಾದೆ ಹೇಳಿದರು.

ಕುಂದಾಪುರದ ಡಾ.ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಆಶ್ರಯದಲ್ಲಿ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ ಪ್ರಾಚ್ಯ ವಸ್ತುಗಳ ಪ್ರದರ್ಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಇನ್ನೋರ್ವ ಮುಖ್ಯ ಅತಿಥಿ ಕುಂದಾಪುರಡಾಟ್.ಕಾಮ್ ಸಂಪಾದಕ ಸುನಿಲ್ ಎಚ್.ಜಿ. ಮಾತನಾಡಿ, ಪ್ರತಿ ಪ್ರಾಚ್ಯ ವಸ್ತುಗಳ ಹಿಂದೆ ಬೆವರಿನ ಮೂಲದ, ಶ್ರಮ ಸಂಸ್ಕೃತಿಯ ಕಥೆ ಇದೆ. ದೀರ್ಘಕಾಲ ಬಾಳಿಕೆ ಬರುವ ಮತ್ತು ಮರು ಬಳಕೆಯ ವಸ್ತುಗಳನ್ನು ಹಿರಿಯರು ಯಥೇಚ್ಛವಾಗಿ ಬಳಸುತ್ತಿದ್ದರು. ಇದು ಅವರ ಪರಿಸರ ಕಾಳಜಿಯನ್ನು ಧ್ವನಿಸುತ್ತದೆ. ಇಂದು ಮರುಬಳಕೆಯಾಗದ ಪ್ಲಾಸ್ಟಿಕ್‌ನಂತಹ ವಸ್ತುಗಳಿಂದ ಪ್ರಕೃತಿ ನಾಶವಾಗುತ್ತಿದೆ. ಈ ಕುರಿತು ವಿದ್ಯಾರ್ಥಿಗಳು ಚಿಂತಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಶ್ರೀರಕ್ಷಿತ್ ರಾವ್ ಗುಜ್ಜಾಡಿ ಹಾಗೂ ರೇಷ್ಮಾ ಶೆಟ್ಟಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಮನೀಶಾ ಪ್ರಾರ್ಥಿಸಿ, ಆದೇಶ್ ಗಾಣಿಗ ಸ್ವಾಗತಿಸಿದರು. ಆಕಾಶ್ ಬಿ. ಶೆಟ್ಟಿ ಮತ್ತು ಕಾವ್ಯ ಅತಿಥಿಗಳನ್ನು ಪರಿಚಯಿಸಿ, ರಚನಾ ವಂದಿಸಿದರು. ನಿರೀಕ್ಷಾ ಕಾರ್ಯಕ್ರಮ ನಿರೂಪಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ ಜನಗಣತಿಗೆ ಜಿಲ್ಲಾಡಳಿತದಿಂದ ಸಿದ್ಧತೆ

ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತರಬೇತಿ ಪೂರ್ಣ

ಕಾಸರಗೋಡು: 2027ರ ದೇಶದ ಜನಗಣತಿ ಕಾರ್ಯಯೋಜನೆಯ ಸಿದ್ಧತೆಗಳ ಭಾಗವಾಗಿ ಕಾಸರಗೋಡು ಜಿಲ್ಲಾ ಮಟ್ಟದ ಅಽಕಾರಿಗಳಿಗೆ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮವು ಮುಕ್ತಾಯಗೊಂಡಿದೆ. ಕಲೆಕ್ಟರೇಟ್ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆದ ತರಬೇತಿಯನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿದ್ದರು. ಜನಗಣತಿ ಚಟುವಟಿಕೆಗಳ ನಿಖರ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಮೂರು ದಿನಗಳ ಕಾಲ (ಏ.20ರಿಂದ 22ರ ವರೆಗೆ) ತರಬೇತಿಯನ್ನು ಆಯೋಜಿಸಲಾಗಿತ್ತು.

ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯದ ಜಿಲ್ಲಾ ಅಽಕಾರಿಗಳಾದ ಟಿ.ರಾಜ್‌ಕುಮಾರ್ ಮತ್ತು ಕೆ.ಸಜಿತ್ ರಾಜ್ ಅವರು ತರಗತಿಗಳನ್ನು ನಡೆಸಿಕೊಟ್ಟರು.

ಜಿಲ್ಲಾ ಮಟ್ಟದ ಜನಗಣತಿ ಅಽಕಾರಿಗಳು, ಚಾರ್ಜ್ ಮಟ್ಟದ ಜನಗಣತಿ ಅಽಕಾರಿಗಳು, ಹೆಚ್ಚುವರಿ ಜನಗಣತಿ ಅಽಕಾರಿಗಳು ಮತ್ತು ತಾಂತ್ರಿಕ ಸಹಾಯಕರು ತರಬೇತಿಯಲ್ಲಿ ಭಾಗವಹಿಸಿದ್ದರು.

2011ರ ನಂತರದಲ್ಲಿ ಇದೀಗ ದೇಶದ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಈ ಪ್ರಕ್ರಿಯೆಯ ಮೊದಲ ಹಂತವಾದ ದೇಶದ ಮೊದಲ ಡಿಜಿಟಲ್ ಜನಗಣತಿಯು ಜುಲೈ 1 ರಿಂದ 30ರ ತನಕ ನಡೆಯಲಿದೆ. ಗಣತಿದಾರರು ಪ್ರತಿ ಮನೆಗೆ ಭೇಟಿ ನೀಡಿ 34 ಪ್ರಶ್ನೆಗಳನ್ನು ಕೇಳುವ ಮೂಲಕ ಸ್ಮಾರ್ಟ್‌ಫೋನ್ ಅಪ್ಲಿಕೇಶನ್ ಮುಖೇನ ಮಾಹಿತಿಯನ್ನು ಸಂಗ್ರಹಿಸುತ್ತಾರೆ.

ಇದಕ್ಕೂ ಮುನ್ನ ಜನರು ಜೂನ್ 16 ರಿಂದ 30ರ ವರೆಗೆ ಪೋರ್ಟಲ್ ಮೂಲಕ ಸ್ವಯಂ ಗಣತಿಯನ್ನು ನಡೆಸಬಹುದು. ಸ್ವೀಕರಿಸಿದ ಪ್ರಕ್ರಿಯೆಗಳನ್ನು ಮನೆ ಭೇಟಿಗೆ ಆಗಮಿಸುವ ಗಣತಿದಾರರಿಗೆ ಹಸ್ತಾಂತರಿಸಲಾಗುತ್ತದೆ.

ಜನಗಣತಿಯ ಮೊದಲ ಹಂತದಲ್ಲಿ ಮನೆಗಳ ಪಟ್ಟಿ ಮತ್ತು ಮನೆ ಗಣತಿ ನಡೆಯಲಿದೆ. ಪ್ರಶ್ನೆಗಳಲ್ಲಿ ಮನೆಯ ಸ್ಥಿತಿ, ಛಾವಣಿ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳ ಲಭ್ಯತೆ, ಗೃಹೋಪಯೋಗಿ ಉಪಕರಣಗಳು, ವಾಹನಗಳು, ಮೊಬೈಲ್ ಫೋನ್ ಸಂಖ್ಯೆ ಇತ್ಯಾದಿಗಳು ಸೇರಿವೆ. ಮುಂದಿನ ವರ್ಷ ಫೆಬ್ರವರಿಯಲ್ಲಿ ನಡೆಯಲಿರುವ ಎರಡನೇ ಹಂತದಲ್ಲಿ ಜನಗಣತಿಯನ್ನು ನಿಗದಿಪಡಿಸಲಾಗಿದೆ.

ಜನಗಣತಿಯ ಮೂಲಕ ಸರಕಾರವು ಸಂಗ್ರಹಿಸಿದ ದತ್ತಾಂಶವು ಅತ್ಯಂತ ಗೌಪ್ಯವಾಗಿದ್ದು, ಮಾಹಿತಿ ಹಕ್ಕು ಕಾಯ್ದೆ ಅಥವಾ ಭಾರತೀಯ ಸಾಕ್ಷ್ಯ ಕಾಯ್ದೆಯಡಿ ಅದನ್ನು ಬಹಿರಂಗಪಡಿಸುವಂತಿಲ್ಲ. ಕ್ಷೇತ್ರ ತರಬೇತುದಾರರಿಗೆ ತರಬೇತಿಯು ಮೇ ತಿಂಗಳಲ್ಲಿ ಪ್ರಾರಂಭವಾಗಲಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ

ಶುಚಿತ್ವಕ್ಕೆ ಸಂಬಂಧಿಸಿ ಆರೋಗ್ಯ ಇಲಾಖೆ ನಿಗಾ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂದರ್ಭ ಆರೋಗ್ಯ ಇಲಾಖೆಯು ವಿಶೇಷ ಮುತುವರ್ಜಿಯನ್ನು ವಹಿಸುತ್ತಿದೆ. ಭಗವದ್ಭಕ್ತರ ಆರೋಗ್ಯದ ಕುರಿತಾಗಿ ವಿಶೇಷ ಕಾಳಜಿಯ ದೃಷ್ಟಿಯಲ್ಲಿ ಪಾಕಶಾಲೆಯ ಶುಚಿತ್ವದ ಬಗ್ಗೆ ಮಾಹಿತಿ ಪಡೆಯಲಾಯಿತು.

ಆರೋಗ್ಯ ಇಲಾಖೆಯ ಅಧಿಕಾರಿ ಡಾ.ಸರಿತಾ ಪುರುಷೋತ್ತಮನ್ ಮತ್ತು ತಂಡ ಪರಿಶೀಲನೆ ನಡೆಸಿ ಸೂಚನೆ ನೀಡಿದರು. ಪ್ರಥಮ ಚಿಕಿತ್ಸಾ ವಿಭಾಗದಲ್ಲಿ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು, ಬದಿಯಡ್ಕ ಸಮುದಾಯ ಆರೋಗ್ಯ ಕೇಂದ್ರ, ಕುಂಬಳೆ ಸಹಕಾರಿ ಆಸ್ಪತ್ರೆ, ಕಿಮ್ಸ್ ಕಾಸರಗೋಡು,



ಡಯಾಲೈಫ್ ಬದಿಯಡ್ಕ, ಕರಿಂಬಿಲ್ ಮೆಡಿಕಲ್ ಸೆಂಟರ್ ಬದಿಯಡ್ಕ, ಮಂಗಳಾ ನರ್ಸಿಂಗ್ ಹೋಮ್ ಮಂಗಳೂರು ಮೊದಲಾದ ಆರೋಗ್ಯ ಸಂಸ್ಥೆಗಳ ವೈದ್ಯರು ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆಯ ವಿವಿಧ ವೈದ್ಯರು, ಆಶಾ ಕಾರ್ಯಕರ್ತೆಯರು, ಪಾರಾ ಮೆಡಿಕಲ್ ಸಿಬ್ಬಂದಿಗಳು ಕೂಡಾ ಸಹಕರಿಸುತ್ತಿದ್ದಾರೆ. ಆಂಬ್ಯುಲೆನ್ಸ್ ಸೇವೆಯೂ ಲಭ್ಯವಿದೆ. ಬ್ರಹ್ಮಕಲಶ ಆರೋಗ್ಯ ಸಮಿತಿಯ ಡಾ.ಶ್ರೀನಿಧಿ ಸರಳಾಯ ಬದಿಯಡ್ಕ ಹಾಗೂ ಡಾ.ನಾರಾಯಣ ಪ್ರದೀಪ ಪೆರ್ಮುಖ ನೇತೃತ್ವ ವಹಿಸಿದ್ದಾರೆ.

ಸುತ್ತಮುತ್ತ

ಇಂದು ಕಾನ ಮಠದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ

ಕುಂಬಳೆ: ಕಾನ ಶ್ರೀ ಶಂಕರನಾರಾಯಣ ಮಠದ ವಾರ್ಷಿಕ ಪ್ರತಿಷ್ಠಾ ಉತ್ಸವವು ಏ.23ರಂದು ಕ್ಷೇತ್ರಾಚಾರ್ಯ ಗುಣಾಜೆ ಈಶ್ವರ ಭಟ್ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ 8ಕ್ಕೆ ಕಲಶ ಪ್ರತಿಷ್ಠೆ, 9ಕ್ಕೆ ಪೂಜಾ ಸಂಕಲ್ಪ, 9.30ಕ್ಕೆ ಶತರುದ್ರಾಭಿಷೇಕ, ಮಧ್ಯಾಹ್ನ 12ಕ್ಕೆ ಶ್ರೀ ಶಂಕರನಾರಾಯಣ ದೇವರಿಗೆ ಮಹಾಮಂಗಳಾರತಿ, 1ರಿಂದ ದೇವಕಾರ್ಯ ಸಂತರ್ಪಣೆ, 1.30ಕ್ಕೆ ಮಂತ್ರಾಕ್ಷತೆ ಹಾಗೂ ಸಂಜೆ 5ಕ್ಕೆ ಶ್ರೀ ಧೂಮಾವತಿಗೆ ತಂಬಿಲ ಸೇವೆ ಜರಗಲಿದೆ. ರುದ್ರಪಾರಾಯಣ ನಡೆಸುವ ಆಸಕ್ತರು ಬೆಳಗ್ಗೆ 9.30ಕ್ಕೆ ಶ್ರೀ ಕ್ಷೇತ್ರಕ್ಕೆ ಉಪಸ್ಥಿತರಿರಬೇಕು ಎಂದು ಚಾಲ್ತಿ ವರ್ಷದ ಆಡಳಿತದಾರ ಡಾ.ಶಾಮಪ್ರಸಾದ ಬೋನಂತಾಯ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಏ.27: ಯಕ್ಷಗಾನ ತಾಳಮದ್ದಳೆ

ಕಾಸರಗೋಡು: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಹಾಗೂ ವಾರ್ಷಿಕ ಉತ್ಸವದ ಪ್ರಯುಕ್ತ ಮೂಡಂಬೈಲಿನ ವಾಗ್ದೇವೀ ಯಕ್ಷಗಾನ ಕಲಾಸಂಘದವರಿಂದ ಏ.27ರಂದು ಮಧ್ಯಾಹ್ನ 12.30ರಿಂದ 'ಕೊಲ್ಲೂರು ಕ್ಷೇತ್ರ ಮಹಾತ್ಮೆ' ಎಂಬ ಕಥಾಭಾಗದ ತಾಳಮದ್ದಳೆ ಜರಗಲಿದೆ. ಹಿಮ್ಮೇಳದಲ್ಲಿ ಭಾಗವತರಾಗಿ ರವಿಶಂಕರ ಮಧೂರು, ಚೆಂಡೆಯಲ್ಲಿ ಗೋಪಾಲಕೃಷ್ಣ ನಾವಡ ಮಧೂರು ಮತ್ತು ಮೃದಂಗದಲ್ಲಿ ಮುರಳೀ ಮಾಧವ ಮಧೂರು ಭಾಗವಹಿಸಲಿದ್ದಾರೆ.

ಏ.28: ಪ್ರಶಸ್ತಿ ಪ್ರದಾನ ಸಮಾರಂಭ, ವಿಚಾರಗೋಷ್ಠಿ

ಮಂಜೇಶ್ವರ: ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನಲ್ಲಿ ಧಾರವಾಡದ ಸಾಹಿತ್ಯ ಗಂಗಾ ಸಂಸ್ಥೆಯಿಂದ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ವಿಚಾರಗೋಷ್ಠಿ ಕಾರ್ಯಕ್ರಮ ಏ.28ರಂದು ಅಪರಾಹ್ನ 2 ಗಂಟೆಗೆ ನಡೆಯಲಿದೆ. 2025ನೇ ಸಾಲಿನ ಸುನಂದಾ ಬೆಳಗಾಂವಕರ ಕಾದಂಬರಿ ಪ್ರಶಸ್ತಿ ಡಾ.ಟಿ. ಗೋವಿಂದರಾಜು ಅವರ ಕೃಷ್ಣಯ್ಯನ ಕೊಳಲು ಕಾದಂಬರಿಗೆ, ಮಹಾಶ್ವೇತಾದೇವಿ ಜನ್ಮಶತ ಮಾನೋತ್ಸವ ಕಥಾ ಪ್ರಶಸ್ತಿಯು ಲಿಂಗರಾಜ ಸೊಟ್ಟಪ್ಪನವರ ಅವರ ಕೆಂಪು ನದಿ ಕಥಾಸಂಕಲನಕ್ಕೆ ದೊರಕಿದೆ. ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆಯವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಹಿರಿಯ ಲೇಖಕಿ ಡಾ.ಮಹೇಶ್ವರಿ ಯು. ಅವರ ಅಧ್ಯಕ್ಷತೆ ಯಲ್ಲಿ ಸುನಂದಾ ಬೆಳಗಾಂವಕರ, ಮಹಾಶ್ವೇತಾದೇವಿ ಯವರ ಸಾಹಿತ್ಯವನ್ನು ಕುರಿತು ವಿಚಾರಗೋಷ್ಠಿ ಜರಗಲಿದೆ. ಪ್ರೊ.ಶಿವಶಂಕರ ಪಿ., ಡಾ.ಸುಭಾಷ್ ಪಟ್ಟಾಜೆ, ಡಾ.ರತ್ನಾಕರ ಕುನಗೋಡು, ರೇಷ್ಮಾ ಭಟ್, ಸೌಮ್ಯಾ ಪ್ರವೀಣ್, ಕಲ್ಲಚ್ಚು ಮಹೇಶ ನಾಯಕ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ.

'ಮಕ್ಕಳಲ್ಲಿ ಮಾನಸಿಕ ಆರೋಗ್ಯ' ತರಗತಿ

ಕಾಞಂಗಾಡು: ಕುಂಡಂಗುಳಿ ಹೃದಯ ಗ್ರಂಥಾಲಯ ಮತ್ತು ಬಾಲ ವೇದಿಕೆಯ ನೇತೃತ್ವದಲ್ಲಿ ರಜಾ ದಿನಗಳ ಓದುವ ಗ್ಯಾಲರಿಯಲ್ಲಿ ಮಕ್ಕಳಲ್ಲಿ ಮಾನಸಿಕ ಆರೋಗ್ಯ ಎಂಬ ವಿಷಯದ ಕುರಿತು ಕಾಞಂಗಾಡಿನ ಜಿಲ್ಲಾಸ್ಪತ್ರೆಯ ಹದಿಹರೆಯದ ಆರೋಗ್ಯ ಸಲಹೆಗಾರ ಪ್ರದೀಪ್ ಮೋನ್ ತರಗತಿಗಳನ್ನು ನಡೆಸಿಕೊಟ್ಟರು. ಕಾಸರಗೋಡು ತಾಲೂಕು ಗ್ರಂಥಾಲಯ ಮಂಡಳಿ ಕಾರ್ಯನಿರ್ವಾಹಕ ಸದಸ್ಯ ಇ.ಪ್ರಭಾಕರನ್ ಅತಿಥಿಯಾಗಿದ್ದರು. ಎಂ.ವಿ.ವೈಶಾಖ್ ಅಧ್ಯಕ್ಷತೆ ವಹಿಸಿದ್ದರು. ಗ್ರಂಥಾಲಯದ ಪೋಷಕರಾದ ಪಿ.ಕೆ. ಗೋಪಾಲನ್, ಕೆ.ಮುರಳೀಧರನ್, ಕೆ.ವಿನೋದ್, ಎಂ.ಮುಹಮ್ಮದ್, ರಿಗ್ವೇದ್ ಪಾಲ್ಗೊಂಡಿದ್ದರು. ಬಾಲ ವೇದಿಕೆ ಕಾರ್ಯದರ್ಶಿ ಉಲ್ಲಾಸ್ ಎಂ. ಸ್ವಾಗತಿಸಿ, ಅನಾಮಿಕಾ ವಿ. ವಂದಿಸಿದರು.

ಮಹಿಳಾ ಸಂಘದಿಂದ ಪಾಯಸಕೂಟ ಸ್ಪರ್ಧೆ

ಕಾಞಂಗಾಡು: ಬೀಂಬುಂಗಾಲ್ ಧ್ವನಿ ಮಹಿಳಾ ಸಂಘದ ನೇತೃತ್ವದಲ್ಲಿ ವಿಷು ಹಬ್ಬದ ಆಚರಣೆಯ ಅಂಗವಾಗಿ ಪಾಯಸಕೂಟ ಸ್ಪರ್ಧೆಯನ್ನು ಕುಂಡಂಗುಳಿಯಲ್ಲಿ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷ ಮೇಘ ಯದುರಾಜ್ ಅಧ್ಯಕ್ಷತೆ ವಹಿಸಿದ್ದರು. ಕ್ಲಬ್‌ನ ಪೋಷಕ ಪುರುಷೋತ್ತಮನ್ ಉದ್ಘಾಟಿಸಿ ಮಾತನಾಡಿದರು. ಉಮಾ ತಾರಾನಾಥ್ ಸ್ವಾಗತಿಸಿ, ಸೌಮ್ಯಾ ವಂದಿಸಿದರು. ಸುಮಾರು 10 ತಂಡಗಳು ಪಾಲ್ಗೊಂಡಿದ್ದ ಸ್ಪರ್ಧೆಯ ವಿಜೇತರನ್ನು ಪಾಕತಜ್ಞ ರಾಗೇಶ್ ಕೊಳತ್ತೂರು ಘೋಷಿಸಿದರು. ಸ್ಪರ್ಧೆಯಲ್ಲಿ ದಿವ್ಯಾಮೃತ ತಂಡ ಪ್ರಥಮ ಬಹುಮಾನ ಮತ್ತು ಮಧುರಾಮೃತ ತಂಡ ದ್ವಿತೀಯ ಬಹುಮಾನ ಗೆದ್ದುಕೊಂಡಿತು. ಕ್ಲಬ್‌ನ ಕಾರ್ಯಕಾರಿ ಸದಸ್ಯರು ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು.

ಅಡೂರು ಮೊಗೇರ ಸಮುದಾಯ ಸೇವಾ ಸಂಘ: ಉನ್ನತಿ ಸಂದರ್ಶನ

ಮುಳ್ಳೇರಿಯ: ಮೊಗೇರ ಸಮುದಾಯ ಸೇವಾ ಸಂಘ ಅಡೂರು ಇದರ ನೇತೃತ್ವದಲ್ಲಿ ಸಂಘಟನೆ ಉನ್ನತಿ ಸಂದರ್ಶನ ಅಭಿಯಾನ ಮಂಗಳವಾರ ಜರಗಿತು. ದೇಲಂಪಾಡಿ ಗ್ರಾ.ಪಂ.ವ್ಯಾಪ್ತಿಯ ಪೊಕ್ಲಮೂಲೆ ಉನ್ನತಿ ಸಂದರ್ಶನ ನಡೆಸಲಾಯಿತು. ಈ ಸಂದರ್ಭ ಕಾಸರಗೋಡು ಜಿಲ್ಲಾ ಮೊಗೇರ ಸರ್ವೀಸ್ ಸೊಸೈಟಿ ಅಧ್ಯಕ್ಷ, ಮೊಗೇರ ಸಮುದಾಯ ಸೇವಾ ಸಂಘದ ಕಾರ್ಯದರ್ಶಿ ಚಂದ್ರ ಸಿ.ಬಿ. ಅಡೂರು ಮಾತನಾಡಿ, ಉನ್ನತಿಯ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಹವಾಲುಗಳನ್ನು ಆಲಿಸಿದರು. ಸಂಘಟನೆಯ ಕೋಶಾಧಿಕಾರಿ, ಕೇರಳ ರಾಜ್ಯ ಮೊಗೇರ ಸೊಸೈಟಿಯ ಸದಸ್ಯ ಕೃಷ್ಣ ಸಿ.ಬಿ. ಅಡೂರು ಉನ್ನತಿಯ ಮೂಲ ಭೂತ ಸೌಕರ್ಯ, ಅಭಿವೃದ್ಧಿ ವಿಚಾರವನ್ನು ವಿವರಿಸಿದರು. ಮೊಗೇರ ಸಮುದಾಯ ಸಂಘ ಅಡೂರು ಇದರ ಉಪಾಧ್ಯಕ್ಷ ಐತ್ತಪ್ಪ ಪೊಕ್ಲಮೂಲೆ, ಸಂಘಟನೆ ಸದಸ್ಯ ನಾರಾಯಣ ಪಿ. ಅಡೂರು ಉಪಸ್ಥಿತರಿದ್ದರು.

ಒಂದೇ ಮಳೆಗೆ ರಸ್ತೆಯಲ್ಲೇ ಹರಿಯುತ್ತಿರುವ ನೀರು | ರಾಶಿ ಬಿದ್ದಿರುವ ತ್ಯಾಜ್ಯಗಳಿಂದ ರೋಗ ಹರಡುವ ಭೀತಿ

ಜಿಲ್ಲೆಯಲ್ಲಿ ಇನ್ನೂ ಪೂರ್ಣಗೊಳ್ಳದ ಮಳೆಗಾಲ ಪೂರ್ವಸಿದ್ಧತೆ

ಕಾಸರಗೋಡು: ಜಿಲ್ಲೆಯಲ್ಲಿ ಮಳೆಗಾಲದ ಪೂರ್ವಸಿದ್ಧತೆಗಳು ಇನ್ನೂ ಸಮರ್ಪಕವಾಗಿ ಆರಂಭಗೊಂಡಿಲ್ಲ. ಮಳೆಗಾಲಕ್ಕೆ ಸಂಬಂಧಿಸಿ ಕೆಲವೊಂದು ಪೂರ್ವ ತಯಾರಿ ನಡೆಸಲಾಗಿದ್ದರೂ ಅವುಗಳಲ್ಲಿ ಲೋಪದೋಷಗಳು ಕಂಡುಬರುತ್ತಿದ್ದು, ಕಟ್ಟುನಿಟ್ಟಿನ ಕ್ರಮಗಳಿಗೆ ಜಿಲ್ಲಾಡಳಿತವು ಇನ್ನೂ ಸಜ್ಜಾಗದಿರುವುದು ಗೋಚರಿಸುತ್ತಿದೆ. ಒಂದೆಡೆ ವಿಧಾನಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವುದು ಇನ್ನೊಂದೆಡೆ ಬೇಸಿಗೆ ಮಳೆ ಇದುವರೆಗೆ ಬಿರುಸಿನಿಂದ ಸುರಿಯದಿರುವುದು ಮಳೆಗಾಲ ಪೂರ್ವತಯಾರಿ ವಿಚಾರದಲ್ಲಿ ವಿಳಂಬ ಧೋರಣೆಗೆ ಕಾರಣವಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆ.





ಜಿಲ್ಲಾಡಳಿತದಿಂದ ತಯಾರಿ ನಡೆದಿಲ್ಲ

ಈ ಮಧ್ಯೆ ಮುಂಗಾರು ಆಗಮನಕ್ಕೂ ಮುನ್ನ ಕೈಗೊಳ್ಳಬೇಕಾದ ಸಿದ್ಧತೆ, ಮಳೆಯಿಂದ ಸೃಷ್ಟಿಯಾಗಬಹುದಾದ ಸಂಭಾವ್ಯ ಅನಾಹುತಗಳ ವೇಳೆ ಸಾರ್ವಜನಿಕರ ಜೀವ ಮತ್ತು ಆಸ್ತಿಪಾಸ್ತಿ ರಕ್ಷಣೆ, ಟ್ರಾಫಿಕ್ ಜಾಮ್, ರಸ್ತೆಗಳಿಗೆ ಗುಡ್ಡ ಜರಿದು ಬೀಳುವುದು ಮೊದಲಾದವುಗಳ ಬಗ್ಗೆ ಅಗತ್ಯದ ಕ್ರಮ ಕೈಗೊಳ್ಳಲು ಜಿಲ್ಲಾಡಳಿತ ಇನ್ನೂ ಯಾವುದೇ ಶಾಶ್ವತ ತಯಾರಿ ನಡೆಸದಿರುವುದು ಸಮಸ್ಯೆಗೆ ಕಾರಣವಾಗಬಹುದೆದು ವಿಶ್ಲೇಷಣೆಗಳೂ ನಡೆಯುತ್ತಿವೆ.

ಯಾವುದೇ ಕಾರ್ಯ ನಡೆದಿಲ್ಲ

ಮುಂಗಾರು ಮಳೆಯ ಮೊದಲೇ ಮುಂಜಾಗ್ರತಾ ಸಭೆ ನಡೆಸಿ ಅತಿವೃಷ್ಟಿ ಅನಾವೃಷ್ಟಿ ಪ್ರಾಕೃತಿಕ ವಿಕೋಪ, ನೆರೆ ಇತ್ಯಾದಿಗಳನ್ನು ಎದುರಿಸಲು ಸೂಕ್ತ ಮಾರ್ಗೋಪಾಯ ಕಂಡುಕೊಳ್ಳಬೇಕಾಗಿದೆ. ಅಲ್ಲದೆ ಲೋಕೋಪಯೋಗಿ, ಕೆಎಸ್‌ಇಬಿ, ಆರೋಗ್ಯ, ಮೀನುಗಾರಿಕಾ ಇಲಾಖೆ, ಕರಾವಳಿ ವಿಭಾಗ, ನಗರಸಭಾ ಆಡಳಿತ, ಸ್ಥಳೀಯಾಡಳಿತ ಇಲಾಖೆಗಳ ನೇತೃತ್ವ ಪೂರ್ವಭಾವಿಯಾಗಿ ಕೈಗೊಳ್ಳಬೇಕಾದ ಯೋಜನೆಗಳಿಗೆ ರೂಪು ನೀಡಬೇಕಾಗಿತ್ತು. ಆದರೆ ಯಾವುದೇ ಕಾರ್ಯ ನಡೆಯದಿರುವುದು ವಿಪರ್ಯಾಸವಾಗಿದೆ. ಜಿಲ್ಲೆಯಾದ್ಯಂತ ಪ್ರಕೃತಿ ವಿಕೋಪ, ತ್ಯಾಜ್ಯ ವಿಲೇವಾರಿ, ಚರಂಡಿ ವ್ಯವಸ್ಥೆ, ರಸ್ತೆ ದುರವಸ್ಥೆ, ಅಪಾಯಕಾರಿ ಮರಗಳು, ವಿದ್ಯುತ್ ಕಂಬಗಳು, ಬೃಹದಾಕಾರದ ಹೊಂಡ ಗುಂಡಿಗಳು, ಶಾಲಾ ಕಟ್ಟಡಗಳು ಮುಂತಾದವುಗಳ ಬಗ್ಗೆ ಮುಂಜಾಗ್ರತೆ ವಹಿಸಲು ಜಿಲ್ಲಾಡಳಿತದಿಂದ ಕಾರ್ಯಯೋಜನೆ ಸಿದ್ಧಗೊಂಡಿಲ್ಲ. ಇನ್ನೊಂದೆಡೆ ಆರೋಗ್ಯ ಇಲಾಖೆಯಿಂದಲೂ ಅಗತ್ಯದ ಯೋಜನೆಗಳು ಕಾರ್ಯಗತಗೊಂಡಿಲ್ಲ.

ಸಮಸ್ಯೆಗಳನ್ನು ಶೀಘ್ರ ಸರಿಪಡಿಸಲು ಆಗ್ರಹ

ಜಿಲ್ಲೆಯಲ್ಲಿ ಮಳೆಗಾಲ ಪೂರ್ವಭಾವಿಯಾಗಿ ಶುಚೀಕರಣ ಮತ್ತು ಮಾಲಿನ್ಯಗಳನ್ನು ಅತೀ ಶೀಘ್ರದಲ್ಲಿ ತೆರವುಗೊಳಿಸಿದರೆ ಮಾತ್ರ ಅನಾರೋಗ್ಯ ಸಹಿತ ಸಾಕಷ್ಟು ಸಮಸ್ಯೆ ಪರಿಹರಿಸಬಹುದು. ರಬ್ಬರ್, ಅಡಿಕೆ, ತೆಂಗು, ಬಾಳೆ, ತರಕಾರಿ ಸೇರಿದಂತೆ ವಿವಿಧ ಕೃಷಿ ತೋಟಗಳಲ್ಲಿ ಕೂಡಾ ನೀರು ಕಟ್ಟಿ ನಿಲ್ಲದಂತೆ ಎಚ್ಚರ ವಹಿಸಬೇಕು. ಇಲ್ಲದಿದ್ದಲ್ಲಿ ಮಲೇರಿಯ, ಡೆಂಗ್ಯೂ, ಇಲಿ ಜ್ವರ, ಹಳದಿ ಕಾಮಾಲೆ ಮೊದಲಾದ ಸಾಂಕ್ರಾಮಿಕ ರೋಗಗಳು ಹರಡಬಹುದು.

ಸಾಂಕ್ರಾಮಿಕ ರೋಗ ಹರಡುವ ಭೀತಿ

ಕಾಸರಗೋಡು ಜಿಲ್ಲೆಯ ಎಲ್ಲಾ ತಾಲೂಕುಗಳ ವ್ಯಾಪ್ತಿಯಲ್ಲೂ ರಾಶಿ ಬಿದ್ದಿರುವ ತ್ಯಾಜ್ಯ ಕೂಡಲೇ ತೆರವುಗೊಳಿಸಲು ಆರೋಗ್ಯ ಇಲಾಖೆಯ ಅಧಿಕಾರಿಗಳು ನಿರ್ದೇಶನ ನೀಡಿದ್ದರೂ, ಸಮರ್ಪಕ ಅನುಷ್ಠಾನಕ್ಕೆ ಬಂದಿಲ್ಲ. ಕಳೆದೆರಡು ದಿನಗಳಲ್ಲಿ ಸುರಿದ ಅಲ್ಪಸ್ವಲ್ಪ ಮಳೆಯಿಂದ ನಗರದಾದ್ಯಂತ ಕಸಕಡ್ಡಿಗಳು ರಾಶಿಯಾಗಿ ಬಿದ್ದುಕೊಂಡಿವೆ. ಅದರ ಮೂಲಕವೇ ಮಲಿನ ಜಲ ಹರಿದು ಸಾಂಕ್ರಾಮಿಕ ರೋಗ ಹರಡುವ ಆತಂಕವೂ ಎದುರಾಗಿದೆ.

ಜಲಮೂಲಗಳಿಗೆ ಮಲಿನ ನೀರು ಹರಿಯುವ ಭೀತಿ

ಸಾರ್ವಜನಿಕ ಪ್ರದೇಶಗಳಲ್ಲಿ ಮತ್ತು ರಸ್ತೆ ಬದಿಗಳಲ್ಲಿ ವ್ಯಾಪಿಸಿರುವ ತ್ಯಾಜ್ಯ ತೆರವುಗೊಳಿಸದಿದ್ದಲ್ಲಿ ಮಳೆಗಾಲ ಆರಂಭದ ವೇಳೆ ಮಲಿನ ನೀರು ಹರಡಿ ಕೆರೆ, ಬಾವಿ, ಕೊಳ, ಇನ್ನಿತರ ಜಲಮೂಲಗಳಿಗೆ ಸೇರುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ಗರಿಷ್ಠ ಎಚ್ಚರಿಕೆ ವಹಿಸಬೇಕಾಗಿದೆ. ಇನ್ನಾದರೂ ಜಿಲ್ಲಾಡಳಿತ ಮಳೆಗಾಲದ ಪೂರ್ವಭಾವಿಯಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂಬುದು ಆಶಯವಾಗಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಳದಲ್ಲಿ ಬ್ರಹ್ಮಕಲಶ: ಇಂದು ಶ್ರೀ ದೇವರ ಪ್ರತಿಷ್ಠೆ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವವು ವಿಜೃಂಭಣೆಯಿಂದ ಜರಗುತ್ತಿದ್ದು, ಏ.23ರಂದು ಶ್ರೀ ದೇವರ ಪ್ರತಿಷ್ಠೆ ನಡೆಯಲಿದೆ. ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಗಳ ನೇತೃತ್ವದಲ್ಲಿ ಬುಧವಾರ ಬೆಳಗ್ಗೆ ಗಣಪತಿ ಹೋಮ, ತ್ರಿಕಾಲ ಪೂಜೆ, ಸಂಹಾರತತ್ವ ಹೋಮ, ತತ್ವಕಲಶಪೂಜೆ, ಕುಂಭೇಶ ಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವಕಲಶ ಪೂಜೆ, ಜೀವೋದ್ವಾಸನೆ, ಜೀವಕಲಶ ಶಯ್ಯೋನ್ನಯನ, ಅಂಕುರ ಪೂಜೆ, ಮಹಾಪೂಜೆ ಮುಂತಾದ ವಿಧಿವಿಧಾನ ನೆರವೇರಿತು.

ಸಂಜೆ ಬಿಂಬಶುದ್ಧಿ ಕಲಶಾಭಿಷೇಕ, ಪೀಠಾಧಿವಾಸ, ಧ್ಯಾನಾಧಿವಾಸ, ಅಧಿವಾಸ ಹೋಮ, ಅಧಿವಾಸ ಬಲಿ, ತ್ರಿಕಾಲಪೂಜೆ, ಶಿರಸ್ತತ್ವ ಹೋಮ, ಪ್ರತಿಷ್ಠಾ ಹೋಮ, ಪುಣ್ಯಾಹ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹಾಂತ, ಮಹಾಪೂಜೆ ನಡೆಯಿತು.



ಇಂದು ಪ್ರತಿಷ್ಠೆ

ಶ್ರೀ ಕ್ಷೇತ್ರದಲ್ಲಿ ಏ.23ರಂದು ಪ್ರಾತಃಕಾಲ 4 ಗಂಟೆಗೆ 108 ತೆಂಗಿನಕಾಯಿ ಗಣಪತಿ ಹೋಮ, ಪ್ರತಿಷ್ಠಾವಾಣಿ, ಬೆಳಗ್ಗೆ 7.40ರಿಂದ 9.30ರ ಮಧ್ಯೆ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಉದನೇಶ್ವರ ದೇವರ ಪ್ರತಿಷ್ಠೆ, ಪ್ರತಿಷ್ಠಾ ಬಲಿ, ಅಂಕುರ ಪೂಜೆ, ಮಹಾಪೂಜೆ ಜರಗಲಿದೆ.

ಕವಾಟಬಂಧನ, ಅಂಕುರ ಪೂಜೆ

ಸಂಜೆ ನಿತ್ಯ ನೈಮಿತ್ತಿಕಾದಿಗಳ ನಿರ್ಣಯ, ಭದ್ರದೀಪವಿಟ್ಟು ಕವಾಟಬಂಧನ, ಅಂಕುರ ಪೂಜೆ, ಸೋಪಾನ ಪೂಜೆ ನಡೆಯಲಿದೆ. ಅಲ್ಲದೆ ಸಂಜೆ 4 ಗಂಟೆಗೆ ಜರಗುವ ಧಾರ್ಮಿಕ ಸಭೆಯಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಮತ್ತು ಆದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಹಾಗೂ ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ. ಬಿ.ವಸಂತ ಪೈ ಬದಿಯಡ್ಕ ಅಧ್ಯಕ್ಷತೆಯಲ್ಲಿ ದೈವಜ್ಞ ಪಂಜ ಭಾಸ್ಕರ ಭಟ್ ಧಾರ್ಮಿಕ ಭಾಷಣ ಮಾಡಲಿದ್ದಾರೆ. ಅನೇಕ ಮಂದಿ ಗಣ್ಯರು ವೇದಿಯನ್ನು ಅಲಂಕರಿಸಲಿದ್ದಾರೆ.

ಶೋಚನೀಯ ಸ್ಥಿತಿಯಲ್ಲಿ ನೀರ್ಚಾಲು-ಮುಗು ರಸ್ತೆ: ದುರಸ್ತಿಗೆ ನಾಗರಿಕರ ಆಗ್ರಹ

ಕಾಸರಗೋಡು: ನೀರ್ಚಾಲು ಕಿಳಿಂಗಾರು ಶ್ರೀ ಸಾಯಿ ಮಂದಿರ ಮುಗು ರಸ್ತೆ ಹಾಗೂ ಉರ್ಲಿತ್ತಡ್ಕ ಬೇಳ ರಸ್ತೆಯು ಸಂಪೂರ್ಣವಾಗಿ ಶೋಚನೀಯ ಸ್ಥಿತಿಯಲ್ಲಿದ್ದು ಕೂಡಲೇ ದುರಸ್ತಿಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

20 ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆ ಈ ರಸ್ತೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತ್ತು. ಆದರೆ ಯಾವುದೇ ಅಭಿವೃದ್ಧಿ ಕಾರ್ಯ ನಡೆಸದಿರುವುದರಿಂದ ರಸ್ತೆ ವಾಹನ ಸಂಚಾರಕ್ಕೆ ಅಯೋಗ್ಯವಾಗಿದೆ. ಇತ್ತೀಚೆಗೆ ಕೇರಳ ಜಲ ಪ್ರಾಧಿಕಾರವು ರಸ್ತೆ ಎರಡೂ ಬದಿಗಳಲ್ಲಿ ಪೈಪ್ ಲೈನ್ ಅಳವಡಿಸಲು ಹೊಂಡಗಳ ತೋಡಿ ಅದನ್ನು ಸಮರ್ಪಕವಾದ ರೀತಿಯಲ್ಲಿ ಮುಚ್ಚದಿರುವುದು ವಾಹನ ಸಂಚಾರಕ್ಕೆ ತೀರಾ ಸಮಸ್ಯೆಯಾಗಿ ಪರಿಣಮಿಸಿದೆ. ಈ ರೂಟ್‌ನಲ್ಲಿ ವಾಹನ ಚಾಲಕರು ಸ್ವಲ್ಪವೇ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ ಎಂಬಂತಾಗಿದೆ.

ಮುಂದಿನ ದಿನಗಳಲ್ಲಿ ಮಳೆಗಾಲ ಆರಂಭವಾದಲ್ಲಿ ಈ ರಸ್ತೆ ಸಂಚಾರ ಇನ್ನಷ್ಟು ದುಸ್ತರವಾಗಲಿದೆ. ಕಳೆದ 20 ವರ್ಷಗಳಿಂದ ಈ ರಸ್ತೆಯ ಯಾವುದೇ ಗುಂಡಿಗಳನ್ನು ಮುಚ್ಚುವ ಕೆಲಸ ಅಥವಾ ದುರಸ್ತಿ ಕಾರ್ಯ ನಡೆಸಲು ಸಾಧ್ಯವಾಗದಿರುವುದು ದುರಂತವಾಗಿದೆ. ಈಗಾಗಲೇ ಈ ಅವ್ಯವಸ್ಥೆ ಕುರಿತು ವಿವಿಧ ಮಾಧ್ಯಮಗಳಲ್ಲಿ ವರದಿಗಳು ಪ್ರಕಟಗೊಂಡಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ನಿರ್ಲಕ್ಷ್ಯ ವಹಿಸುತ್ತಿರುವುದು ವಿಪರ್ಯಾಸವಾಗಿದೆ.



ಪ್ರತಿಭಟನೆಯ ಎಚ್ಚರಿಕೆ

ಲೋಕೋಪಯೋಗಿ ಇಲಾಖೆ 2 ತಿಂಗಳ ಹಿಂದೆಯೇ ರಸ್ತೆ ದುರಸ್ತಿಗೆ ಹಣ ಮಂಜೂರಾಗಿದೆ, ಟೆಂಡರ್ ಪ್ರಕ್ರಿಯೆ ಮುಗಿದಿದೆ ಎಂದು ಮಾಹಿತಿ ನೀಡಿತ್ತು. ಆದರೆ ಇದುವರೆಗೆ ಯಾವುದೇ ಪ್ರಕ್ರಿಯೆ ಆರಂಭಗೊಂಡಿಲ್ಲ. ಪ್ರಸ್ತುತ ರಸ್ತೆ ದುರಸ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಗ್ರಾಮಸ್ಥರು, ವಾಹನ ಮಾಲಕರು, ಚಾಲಕರು ಲೋಕೋಪಯೋಗಿ ಇಲಾಖೆ ಕಚೇರಿ ಮುಂದೆ ಅಧಿಕಾರಿಗಳ ಬೇಜವಾಬ್ದಾರಿ ಕಾರ್ಯವೈಖರಿ ವಿರುದ್ಧ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಮಾತೆ ಕೇವಲ ಜನ್ಮದಾತೆಯಷ್ಟೇ ಅಲ್ಲ, ಗುರು ಸ್ಥಾನದ ಆಚಾರ್ಯೆ: ಕೋಡೋತ್



ಕಾಸರಗೋಡು: ಮಾತೆ ಎಂದರೆ ಕೇವಲ ಜನ್ಮದಾತೆಯಷ್ಟೇ ಅಲ್ಲ, ಆಕೆ ಗುರು ಸ್ಥಾನದ ಆಚಾರ್ಯೆ ಹಾಗೂ ಮಾತೃ ಭಾವದಿಂದ ಮಗುವನ್ನು ಪೋಷಿಸುವ ಗುಣದವಳು. ಮಾತ್ರವಲ್ಲದೆ ಭಾರತೀಯ ಪರಿಕಲ್ಪನೆ ಯಲ್ಲಿ ವೇದ, ಗೋವು, ಅರಿವು ಅಥವಾ ಬ್ರಹ್ಮತ್ವ ಮತ್ತು ಭೂಮಿ ಸ್ತ್ರೀತ್ವದ ಸಂಕೇತವಾಗಿ ಆರಾಧಿಸುತ್ತೇವೆ. ಆದರೆ ಇವೆಲ್ಲವಕ್ಕೂ ಬಂದಿರುವ ಚ್ಯುತಿ ಮನುಕುಲದ ವಿನಾಶಕ್ಕೆ ಕಾರಣವಾ ಗುವುದು ಎಂದು ವಿಶ್ವಹಿಂದು ಪರಿಷತ್ ಮಾತೃ ಸಮಿತಿಯ ಮುಂದಾಳು ಸತಿ ಕೋಡೋತ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪ ಸ್ವಾಮಿ ಕ್ಷೇತ್ರದಲ್ಲಿ ನಡೆಯುತ್ತಿರುವ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಮಂಗಳವಾರ ಸಂಜೆ ಜರಗಿದ ಮಾತೃ ಸಂಗಮದಲ್ಲಿ ಪಾಲ್ಗೊಂಡು ಅವರು ಧಾರ್ಮಿಕ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಅರವಿಂದ ನಾಯ್ಕ್ ವಹಿಸಿದ್ದರು.

ಮನೆಯಿಂದಲೇ ಸಂಸ್ಕಾರ ಸಿಗಲಿ

ಸಮಾರಂಭದಲ್ಲಿ ಹಿರಿಯ ವೈದ್ಯೆ ಡಾ.ವೀಣಾಮಂಜುನಾಥ್ ಮಾತನಾಡಿ, ಸ್ತ್ರೀ ಪುರುಷ ಎಂದು ಭೇದವಿಲ್ಲದೆ ಎಲ್ಲವನ್ನೂ ಅನುಗ್ರಹಿಸುವವನು ಸ್ವಾಮಿ ಅಯ್ಯಪ್ಪ ಎಂಬ ಶಕ್ತಿ. ಈ ಹಿನ್ನೆಲೆಯಲ್ಲಿ ಶಬರಿಮಲೆಗೆ ಎಲ್ಲಾ ವಯೋಮಾನದ ಮಹಿಳೆಯರಿಗೂ ಮುಕ್ತ ಪ್ರವೇಶ ಅವಕಾಶಬೇಕು. ಸಂಸ್ಕಾರ, ದೈವಿಕ ಪರವಾದ ಚಟುವಟಿಕೆಗಳು ಮನೆಯಿಂದ ಆರಂಭವಾಗಬೇಕು ಎಂದರು.

ಮಾನವ ಜೀವನದ ಪವಿತ್ರ ಋಣ

ಭರತಭೂಮಿಯಲ್ಲಿ ಜನಿಸುವುದೇ ಮಾನವ ಜೀವನದ ಪವಿತ್ರ ಋಣ. ಇಲ್ಲಿಯ ಮಣ್ಣಿಗೆ ಎಲ್ಲವನ್ನೂ ಸ್ವೀಕರಿಸಿ ವೈವಿಧ್ಯತೆ ಗಳೊಂದಿಗೆ ಬೇಕುಗಳನ್ನು ಒದಗಿಸುವ ಶಕ್ತಿ ಅಡಗಿದೆ. ತಾಯಂದಿರು ಸತ್ಪಥದಲ್ಲಿ ನಡೆಯು ತ್ತಿದ್ದರೆ ಆ ಸಮಾಜ ಸುಭಿಕ್ಷವಾಗಿ ಬೆಳೆಯಬಲ್ಲದು.

● ಸತಿ ಕೋಡೋತ್

ಕಾಸರಗೋಡು ನಗರಸಭಾ ಕೌನ್ಸಿಲರ್‌ಗಳಾದ ಶಾರದಾ, ಕೆ.ಎಸ್.ಶ್ರುತಿ, ಎಂ.ಕೆ.ದಿವ್ಯಾ, ಸುಧಾರಾಣಿ, ಮಹಿಳಾ ಸಮಿತಿ ಕಾರ್ಯಾಧ್ಯಕ್ಷೆ ಜಯಶ್ರೀ ದಿವಾಕರ, ಉದ್ಯಮಿ ಬಿಂದುದಾಸ್ ಶುಭಹಾರೈಸಿದರು. ಮಹಿಳಾ ಸಮಿತಿ ಕಾರ್ಯದರ್ಶಿ ಶಿಲ್ಪಾ ವರಪ್ರಸಾದ್ ಕೋಟೆಕಣಿ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ನಯನಾ ಲೋಕೇಶ್ ವಂದಿಸಿ, ಜೊತೆ ಕಾರ್ಯದರ್ಶಿ ಆಶಾ ಶ್ರೀಧರ ಕೆ. ಚೆನ್ನಿಕೆರೆ ನಿರೂಪಿಸಿದರು.

ಕಾಸರಗೋಡಿನಲ್ಲಿ ಭೂ ದಿನಾಚರಣೆ: ವಿಶೇಷ ಕಾರ್ಯಕ್ರಮ ಆಯೋಜನೆ



ಕಾಸರಗೋಡು: ಭೂ ದಿನಾಚರಣೆ ಅಂಗವಾಗಿ ಕಾಸರಗೋಡಿನಲ್ಲಿ ಬುಧವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ನಿಟ್ಟಿನಲ್ಲಿ ಸ್ಥಳೀಯಾಡಳಿತ ಇಲಾಖೆ ಜಂಟಿ ನಿರ್ದೇಶಕರ ಕಚೇರಿಯ ನೌಕರರಿಗೆ ಜಾಗೃತಿ ಮೂಡಿಸಲು, ಅವರ ವೈಯಕ್ತಿಕ ಜೀವನದಲ್ಲಿ ಜಾಗೃತಿ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಬದಲಾವಣೆ ಕೊಂಡಿಯಾಗಲು ವಿಶೇಷ ಕಾರ್ಯಕ್ರಮ ಜರಗಿತು.

ಸ್ಥಳೀಯಾಡಳಿತ ಇಲಾಖೆ ಉಪ ನಿರ್ದೇಶಕ ಕೆ.ವಿ.ಹರಿದಾಸ್ ಕಾರ್ಯಕ್ರಮ ಉದ್ಘಾಟಿಸಿ, ಭೂ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಜಿಲ್ಲಾ ಜಾರಿದಳ ತಂಡದ ನಾಯಕ ಕೆ.ವಿ.ಮುಹಮ್ಮದ್ ಮದನಿ ಅಧ್ಯಕ್ಷತೆ ವಹಿಸಿ, ಪ್ರತಿಯೊಬ್ಬ ಉದ್ಯೋಗಿಯೂ ಭೂ ದಿನಾಚರಣೆ ಯಂದು ತಮ್ಮ ಮನೆ ಮತ್ತು ಕಚೇರಿಗಳಲ್ಲಿ ಭೂಮಿಯನ್ನು ರಕ್ಷಿಸಲು ಮಾಡಿದ ಕೆಲಸ ದಾಖಲಿಸಬೇಕು ಎಂದರು.

ಎಲ್‌ಎಸ್‌ಜಿಡಿ ಕಚೇರಿಯ ಕಿರಿಯ ಸೂಪರಿಂಟೆಂಡೆಂಟ್ ಸುರೇಶ್ ಅರಿಯಿಲ್ ಅವರು ತ್ಯಾಜ್ಯ ಮುಕ್ತ ನವಕೇರಳ ವಿಷಯದ ಕುರಿತು ತಾವು ರಚಿಸಿದ ಕವಿತೆಯನ್ನು ವಾಚಿಸಿದರು. ನವಕೇರಳ ಮಿಷನ್‌ನ ಜಿಲ್ಲಾ ಸಂಯೋಜಕ ಕೆ.ಬಾಲಕೃಷ್ಣನ್ ವಿವಿಧ ವಿಚಾರಗಳಲ್ಲಿ ಜಾಗೃತಿ ತರಗತಿ ನಡೆಸಿದರು. ಸಹಾಯಕ ನಿರ್ದೇಶಕರು ಮತ್ತು ಆಂತರಿಕ ಜಾಗೃತಿ ಅಧಿಕಾರಿಗಳು ಸೇರಿದಂತೆ ಎಲ್‌ಎಸ್‌ಜಿಡಿ ಕಚೇರಿ ನೌಕರರು ಭಾಗವಹಿಸಿದ್ದರು.

ಪ್ರತಿ ವರ್ಷ ಆಚರಣೆ

ಋತುಮಾನಕ್ಕೆ ಅನುಗುಣವಾಗಿ ಪ್ರಕೃತಿಯಲ್ಲಿ ಸಂಭವಿಸುವ ಹಣ್ಣುಗಳ ಪ್ರದರ್ಶನ ಜಾಗೃತಿ ಕಾರ್ಯಕ್ರಮದ ಒಂದು ವಿಶಿಷ್ಟ ಅನುಭವವಾಗಿತ್ತು. ಏ.22ರಂದು ಭೂ ದಿನವನ್ನು ಕಾಸರಗೋಡು ಜಿಲ್ಲೆಯಲ್ಲಿ ಪ್ರತೀ ವರ್ಷ ಆಚರಿಸಲಾಗುತ್ತಿದೆ.

ಬಹುಮುಖ ಪ್ರತಿಭೆ ನವ್ಯಶ್ರೀ ಕುಲಾಲ್‌ಗೆ 'ಕಲಾ ಸೌರಭ -2026' ಗೌರವ ಪುರಸ್ಕಾರ



ಮಂಜೇಶ್ವರ: ಉಪ್ಪಳ ಐಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಸಂದರ್ಭ ಹಮ್ಮಿಕೊಳ್ಳಲಾದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಾಸರಗೋಡು ಗಡಿನಾಡ ಸಾಂಸ್ಕೃತಿಕ ಕಲಾವೇದಿಕೆ ವತಿಯಿಂದ ನಾಡಿನ ಗಣ್ಯರ ಉಪಸ್ಥಿತಿಯಲ್ಲಿ ಈ ಬಾರಿಯ ಪ್ರತಿಷ್ಠಿತ ಕಲಾ ಸೌರಭ – 2026 ಪ್ರಶಸ್ತಿಯನ್ನು ನವ್ಯಶ್ರೀ ಕುಲಾಲ್ ಅವರಿಗೆ ನೀಡಿ ಗೌರವಿಸಲಾಯಿತು.

ಈ ಸಂದರ್ಭ ವೇದಿಕೆಯಲ್ಲಿ ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ನಾರಾಯಣ ಹೆಗ್ಡೆ ಕೋಡಿಬೈಲು, ಸೇವಾ ಸಮಿತಿ ಅಧ್ಯಕ್ಷ ಸುಧೀಶ್ಚಂದ್ರ ಶೆಟ್ಟಿ ಇಚ್ಲಂಗೋಡು, ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ವಿಜಯಕುಮಾರ್ ರೈ, ಮೊಕ್ತೇಸರ ಮಂಡಳಿ ಸದಸ್ಯ ಕೃಷ್ಣ ಕುಮಾರ್ ಐಲ, ಪುರುಷೋತ್ತಮ, ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ಗೌರವಾಧ್ಯಕ್ಷ ಗಣೇಶ್‌ಪ್ರಸಾದ್ ಆಳ್ವ, ಕಲಾ ವೇದಿಕೆ ಪ್ರಧಾನ ಕಾರ್ಯದರ್ಶಿ ಗುರುರಾಜ್ ಕಾಸರಗೋಡು ಉಪಸ್ಥಿತರಿದ್ದರು.

ಕಾಸರಗೋಡು ಜಿಲ್ಲೆಯ ಕುಂಬಳೆ ಸಮೀಪದ ಕಿದೂರು ಕಮಾರ್ತೆ ನಿವಾಸಿ ಕೃಷ್ಣ ಕುಲಾಲ್ – ಚಂದ್ರಕಲಾ ದಂಪತಿಯ ಪುತ್ರಿಯಾದ ನವ್ಯಶ್ರೀ ಬಾಲ್ಯದಿಂದಲೇ ಕಲೆ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು. ಅವರ ಪೋಷಕರ ಪ್ರೋತ್ಸಾಹದಿಂದ ಶಾಸ್ತ್ರೀಯ ನೃತ್ಯ ಅಭ್ಯಾಸ ಮಾಡಿ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

ಯಕ್ಷಗಾನ, ಸಂಗೀತ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ನವ್ಯಶ್ರೀ, ಕೇವಲ ಕಲಾವಿದೆಯಾಗಿ ಸೀಮಿತವಾಗದೆ ತಾನು ಕಲಿತ ಕಲೆಯನ್ನು ಇತರ ಆಸಕ್ತರಿಗೂ ಉಚಿತವಾಗಿ ಕಲಿಸಿಕೊಡುವ ಮೂಲಕ ಕಲಾ ಸೇವೆಯಲ್ಲಿ ತೊಡಗಿದ್ದಾರೆ. ಓದಿನಲ್ಲೂ ಮುಂದಿರುವ ಅವರು ಪ್ರಸ್ತುತ ಫಾರ್ಮಸಿ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ. ಇವರ ಕಲಾ ಪ್ರತಿಭೆ ಮತ್ತು ಸಮಾಜ ಸೇವೆ ಗುರುತಿಸಿ ಈಗಾಗಲೇ ಭರವಸೆಯ ಬೆಳಕು ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾಗಳು ಲಭಿಸಿವೆ.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶದ ಪ್ರಯುಕ್ತ ಮಂಗಳವಾರ ನಡೆದ ಧಾರ್ಮಿಕ ಸಭೆಯಲ್ಲಿ ಉಪ್ಪಳ ಕೊಂಡೆವೂರು ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚ ನೀಡಿದರು. ವಿವಿಧ ವಲಯಗಳ ಗಣ್ಯರು ಉಪಸ್ಥಿತರಿದ್ದರು.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ಬ್ರಹ್ಮಕಲಶದ ಅಂಗವಾಗಿ ಬ್ರಹ್ಮಶ್ರೀ ಬಡಾಜೆಬೂಡು ಗೋಪಾಲಕೃಷ್ಣ ತಂತ್ರಿಗಳ ನೇತೃತ್ವದಲ್ಲಿ ವಿವಿಧ ತಾಂತ್ರಿಕ, ವೈದಿಕ, ಧಾರ್ಮಿಕ ವಿಧಿ ವಿಧಾನಗಳು ಜರಗಿದವು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ ಧಾರ್ಮಿಕ ಸಭೆ | ವಾಸುದೇವ ತಂತ್ರಿ ಕುಂಟಾರು ಆಶಯ

ಧರ್ಮದೊಳಗಿರುವ ಸತ್ವವನ್ನು ಮುಂದಿನ ಜನಾಂಗಕ್ಕೆ ತಲುಪಿಸುವ ಕೆಲಸವಾಗಲಿ

ಬದಿಯಡ್ಕ: ನಿಷ್ಠೆ ಅನುಷ್ಠಾನ, ವಿಶ್ವಾಸಗಳು ನಮ್ಮನ್ನು ರಕ್ಷಿಸುತ್ತವೆ. ಸಕಾರಾತ್ಮಕ ದಾರಿಯಲ್ಲಿ ನಾವು ಸಾಗಿದಾಗ ನಮ್ಮನ್ನು ದೇವರು ಕಾಯುತ್ತಾರೆ. ಕ್ಷೇತ್ರದ ಉದ್ಧಾರಕ್ಕಾಗಿ ಸ್ವಯಂಸೇವಕರು ನಿಷ್ಠೆಯಿಂದ ತಮ್ಮ ಕರ್ತವ್ಯ ಮೆರೆದಿದ್ದಾರೆ. ಎಳವೆಯಲ್ಲಿಯೇ ಮಕ್ಕಳಿಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೋಧನೆ ನೀಡಬೇಕು. ಧರ್ಮದೊಳಗಿರುವ ಸತ್ವ ಮುಂದಿನ ಜನಾಂಗಕ್ಕೆ ತಲುಪಿಸಬೇಕೆಂದು ಧಾರ್ಮಿಕ ಪ್ರಮುಖ ರಾದ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಹೇಳಿದ್ದಾರೆ.

ಪೆರಡಾಲ ಶ್ರೀ ಉದನೇಶ್ವರ ದೇವಳದಲ್ಲಿ ಬ್ರಹ್ಮಕಲಶದ 6ನೇ ದಿನವಾದ ಬುಧವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹಿರಿಯ ವಕೀಲ, ಬ್ರಹ್ಮಕಲಶ ಸಮಿತಿಯ ಗೌರವಾಧ್ಯಕ್ಷ ಐ.ವಿ.ಭಟ್ ಕಾಸರಗೋಡು ಅಧ್ಯಕ್ಷತೆ ವಹಿಸಿದ್ದರು.



ನಿವೃತ್ತ ಎಸ್‌ಪಿ ಹರಿಶ್ಚಂದ್ರ ನಾಯ್ಕ ಮಾತನಾಡಿದರು. ಶ್ರೀಮದ್ ಎಡನೀರು ಮಠದ ಆಡಳಿತಾಧಿಕಾರಿ ರಾಜೇಂದ್ರ ಕಲ್ಲೂರಾಯ ಮಾತನಾಡಿ, ಸ್ವಯಂಸೇವಕರ ಬೆವರಿನ ಫಲ, ದಾನಿಗಳ ಸಹಕಾರ ದಿಂದ ಧಾರ್ಮಿಕ ಕೇಂದ್ರ ಗಳು ಅಭಿವೃದ್ಧಿ ಕಾಣುತ್ತಿವೆ. ಆಧುನಿಕತೆ ಭರಾಟೆಯಲ್ಲಿ ನಮ್ಮ ಯುವ ಜನಾಂಗ ಸಂಸ್ಕೃತಿ ಸತ್ವ ತಿಳಿಯದೆ ಜೀವಿಸುತ್ತಿರುವುದು ಆತಂಕಕಾರಿಯಾಗಿದೆ. ಧರ್ಮದ ಶಕ್ತಿ ಕಡಿಮೆಯಾಗ ದಂತೆ ನೋಡಿಕೊಳ್ಳಬೇಕಿದೆ ಎಂದರು.

ವಿವಿಧ ವಲಯಗಳ ಮುಖಂಡರಾದ ನವನೀತಕೃಷ್ಣ ನವಕಾನ, ಉದ್ಯಮಿ ಶ್ರೀಧರ ಶೆಟ್ಟಿ ಮುಟ್ಟಂ, ಡಾ.ಸುಬ್ರಹ್ಮಣ್ಯ ಭಟ್ ಖಂಡಿಗೆ, ಕಾರ್ಮಾರು ಶ್ರೀ ಮಹಾವಿಷ್ಣು ದೇವಸ್ಥಾನದ ಮಾಜಿ ಆಡಳಿತ ಮೊಕ್ತೇಸರ ಗೋಪಾಲ ಭಟ್ ಪಟ್ಟಾಜೆ, ನಿವೃತ್ತ ಬ್ಯಾಂಕ್ ಪ್ರಬಂಧಕ ದುರ್ಗಾಪ್ರಸಾದ್ ರೈ ಕಲ್ಲಕಳಯ, ಬ್ರಹ್ಮಕಲಶ ಸಮಿತಿ ಉಪಾಧ್ಯಕ್ಷ ಶಂಕರನಾರಾಯಣ ಮಯ್ಯ ಬದಿಯಡ್ಕ, ಗುತ್ತಿಗೆದಾರ ವಾಸುದೇವ ಹೊಳ್ಳ ಮಧೂರು, ವಿಶ್ರಾಂತ ಸಹಾಯಕ ಅರ್ಚಕ ಬಾಲಸುಬ್ರಹ್ಮಣ್ಯ ಭಟ್ ಮಾತೃಪ್ಪಾಡಿ, ಸಾಮಾಜಿಕ ಕಾರ್ಯಕರ್ತ ಶ್ಯಾಮಪ್ರಸಾದ ಮಾನ್ಯ, ಪ್ರಗತಿಪರ ಕೃಷಿಕ ರಾಮದಾಸ ಶ್ಯಾನುಭೋಗ್ ಪಳ್ಳತ್ತಡ್ಕ, ಹಿರಿಯ ಧಾರ್ಮಿಕ ಮುಂದಾಳು ರಮಾನಾಥ ರೈ ಮೇಗಿನಕಡಾರು, ಕಾರ್ಮಾರು ಶ್ರೀ ಮಹಾವಿಷ್ಣು ಕ್ಷೇತ್ರದ ಆಡಳಿತ ಮೊಕ್ತೇಸರ ರಾಧಾಕೃಷ್ಣ ರೈ ಕಾರ್ಮಾರು, ಪೆರಡಾಲ ದೇವಸ್ಥಾನದ ಮಾಜಿ ಮೊಕ್ತೇಸರ ಗಂಗಾಧರ ಗೋಳಿಯಡ್ಕ, ಕಾರ್ಮಾರು ಶ್ರೀ ಮಹಾವಿಷ್ಣು ಕ್ಷೇತ್ರದ ಮೊಕ್ತೇಸರ ಶ್ರೀಕೃಷ್ಣ ಭಟ್ ಪುದುಕೋಳಿ ವೇದಿಕೆಯಲ್ಲಿದ್ದರು. ಶಿವಪ್ರಸಾದ ರೈ ಪೆರಡಾಲ ಸ್ವಾಗತಿಸಿ, ಜಲಜಾಕ್ಷಿ ವಂದಿಸಿದರು. ಪ್ರದೀಪ್ ಕುಮಾರ್ ಶೆಟ್ಟಿ ಬೇಳ ನಿರೂಪಿಸಿದರು. ನಂದನ ಶರ್ಮ ಪಂಜಿತ್ತಡ್ಕ ಪ್ರಾರ್ಥಿಸಿದರು.

ಸಂಸ್ಕೃತಿಯ ಪ್ರತೀಕ

ಹಿಂದು ಧರ್ಮವು ಶ್ರೇಷ್ಠವಾಗಿದ್ದು, ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ. ದೇವಸ್ಥಾನಗಳು ಹಾಗೂ ದೇವರ ಶಕ್ತಿಯಿಂದ ಮಾತ್ರ ಓರ್ವ ಮಾನವ ಏನನ್ನಾದರೂ ಸಾಧಿಸಲು ಸಾಧ್ಯ.;

● ಹರಿಶ್ಚಂದ್ರ ನಾಯ್ಕ

ಕನಿಲ ಶ್ರೀ ಭಗವತೀ ಕ್ಷೇತ್ರ

ಮಂಜೇಶ್ವರ – 671323,
ಕಾಸರಗೋಡು ಜಿಲ್ಲೆ, ಕೇರಳ

ಕೇರಳದ ಉತ್ತರ ಭಾಗದಲ್ಲಿರುವ ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಕನಿಲ ಎಂಬ ಪ್ರದೇಶದಲ್ಲಿರುವ ಪ್ರಕೃತಿ ರಮಣೀಯವಾದ ತಾಣವೇ ಕನಿಲಗಿರಿ. ಸುಮಾರು 1100 ವರ್ಷಗಳಷ್ಟು ಪುರಾತನವಾಗಿರುವ ಭಕ್ತ ಜನಕೋಟಿಯ ಆರಾಧನಾ ಮಾತೆ ಶ್ರೀ ಭಗವತೀ ನೆಲೆನಿಂತಿರುವ ಪುಣ್ಯ ಕ್ಷೇತ್ರವೇ ಕನಿಲ ಗಿರಿಯಲ್ಲಿರುವ ಕನಿಲ ಶ್ರೀ ಭಗವತೀ ಕ್ಷೇತ್ರ. ಶ್ರೀ ಕ್ಷೇತ್ರವು ತೀಯಾ ಸಮುದಾಯದವರು ಆರಾಧಿಸುವ 18 ಶ್ರೀ ಭಗವತೀ ಕ್ಷೇತ್ರಗಳಲ್ಲಿ ಪ್ರಾಮುಖ್ಯವಾದ ಕಾರಣಿಕ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಶ್ರೀ ಚೀರುಂಭ, ನಾಲ್ವರು, ಮೂಲದಲ್ಲಿ ಕೇರಳದ ಕೊಡಂಗಲ್ಲೂರಿನಿಂದ ಹೊರಟು ಕಾಸರಗೋಡಿನ ತಳಂಗರೆಯಲ್ಲಿ ಉದಯಿಸಿ ಮುಂದಕ್ಕೆ ಮಂಗಳೂರಿನ ಸಮೀಪದ ಹೆಜಮಾಡಿಯ ಹತ್ತಿರವಿರುವ ಸಸಿಹಿತ್ಲು ಎಂಬಲ್ಲಿ ನೆಲೆಸಿ ತದನಂತರ ದಕ್ಷಿಣಕ್ಕೆ ಪ್ರಯಾಣಿಸಿ ಮಂಗಳೂರಿನ ಕುದ್ರೋಳಿಯಲ್ಲಿ ನೆಲೆಸಿ ಕೂಟಕ್ಕಳಂ ಎಂದು ಪರಿಗಣಿಸಿ ಮುಂದಕ್ಕೆ ಪಡಿವಿಡಾರಂ ಎಂದು ಪರಿಗಣಿಸಿ ಉಳ್ಳಾಲದಲ್ಲಿ ನೆಲೆನಿಂತು ನಂತರ ಮಂಜೇಶ್ವರದ ಬಡಾಜೆ ಶ್ರೀ ಮಹಾಲಿಂಗೇಶ್ವರ ದೇವರ ಬಲಭಾಗದಲ್ಲಿ ಹನ್ನೆರಡು ವರ್ಷಗಳ ಕಾಲ ಪೂಜೆ ಪುರಸ್ಕಾರಗಳನ್ನು ಸ್ವೀಕರಿಸಿ, ವಿಶ್ರಮಕ್ಕಾಗಿ (ಶಾಶ್ವತವಾಗಿ ನೆಲೆಗೊಳ್ಳಲು) ತನ್ನ ಪರಿವಾರ ಶಕ್ತಿಗಳೊಂದಿಗೆ ಕನಿಲ ಗಿರಿಯಲ್ಲಿ ಬಂದು ನೆಲೆಸಿದರು ಎಂಬುದು ಐತಿಹ್ಯ.

ಶ್ರೀ ಕ್ಷೇತ್ರವು ವಾಮಂಜೂರು, ಮಚ್ಚಂಪಾಡಿ, ಪೊಸೋಟು ಮತ್ತು ಪೊಯ್ಯಕಂಡಗಳೆಂಬ ನಾಲ್ಕು ಗ್ರಾಮ (ಊರ್ರೈ) ವ್ಯಾಪ್ತಿಗೊಳಪಟ್ಟಿದ್ದು ತೀಯಾ ಸಮುದಾಯದವರು ಆರಾಧಿಸುವ ಕುಲದೇವಿ ಕನಿಲ ಶ್ರೀ ಭಗವತೀ ಮಾತೆಯಾಗಿರುತ್ತಾಳೆ. ಶ್ರೀ ಕ್ಷೇತ್ರದ ತಂತ್ರಿಸ್ಥಾನವು ಪಾರಂಪರಿಕವಾಗಿ ಬಡಾಜೆ ಬೂಡಿಗೆ ಒಳಪಟ್ಟಿದ್ದು ಪ್ರಸ್ತುತ ಬ್ರಹ್ಮಶ್ರೀ ಗೋಪಾಲಕೃಷ್ಣ ತಂತ್ರಿಯವರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಶ್ರೀ ಕ್ಷೇತ್ರದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಊರಿನ ಚತುರ್ವಣ್ರಸ್ಥರಾದ ಕನಿಲ ಗುತ್ತು, ಮುದುಕುಂಜ ಗುತ್ತು, ಮೂನುವರ್ಗಂ, ಪಂದ್ರಂಡ್‌ಕೊಟ್ಟು ಹಾಗೂ ನೂರೊಕ್ಕಲು ವರ್ಣಸ್ಥರಿಗೆ ವಿಶೇಷ ಸ್ಥಾನ ಮಾನಗಳಿದ್ದು ಇದು ನಮ್ಮ ಕ್ಷೇತ್ರದ ವಿಶಿಷ್ಟ ಸಂಪ್ರದಾಯವಾಗಿದೆ. ಶ್ರೀ ಭಗವತೀ ಮಾತೆಯರ ನಿರ್ದಿಷ್ಟ ಸೇವೆಗಳನ್ನು ನಡೆಸುವ ಜವಾಬ್ದಾರಿಗಳನ್ನು ಇವರು ನಿರ್ವಹಿಸುತ್ತಾರೆ. ಶ್ರೀ ಕ್ಷೇತ್ರದ ಭಂಡಾರ ನಿಲಯದಲ್ಲಿ ವರ್ಷಂಪ್ರತಿ ನಡೆಯುವ ನವರಾತ್ರಿ ಉತ್ಸವದ ಪ್ರಾರಂಭದ ನಾಲ್ಕು ದಿನದ ಪೂಜೆಯು ಚತುರ್ವಣ್ರಸ್ಥರ ವತಿಯಿಂದ ನಡೆಯುತ್ತಿದೆ. ಶ್ರೀ ಕ್ಷೇತ್ರದಲ್ಲಿ ನಡೆಯುವ ಭರಣಿ ಮಹೋತ್ಸವದ ಸಂದರ್ಭದಲ್ಲಿ ಧ್ವಜಾರೋಹಣ ಮತ್ತು ಭಗವತೀ ಮಾತೆಗಾಗಿ ಪಲ್ಲಕ್ಕಿ ಸೇವೆಯನ್ನು ನೂರೊಕ್ಕಲು ಸಮುದಾಯದ ಬಾಂಧವರು ನಡೆಸಿಕೊಡುತ್ತಿದ್ದಾರೆ.

ಪಂದ್ರಂಡ್‌ಕೊಟ್ಟು ಸಮುದಾಯದವರು ಅನೇಕೊಂಬು ಸೇವೆಯನ್ನು ಸಲ್ಲಿಸಿ ವರ್ಷವಿಡೀ ನಿತ್ಯ ದೀಪಾರಾಧನೆ, ಪರ್ವ ಉತ್ಸವಾದಿಗಳಲ್ಲಿ ಬಾಗವಹಿಸುವುದು ಗಮನಾರ್ಹವಾಗಿದೆ. ಜೈನ ಸಮುದಾಯದವರಿಗೂ ಕ್ಷೇತ್ರದಲ್ಲಿ ವಿಶೇಷ ಪ್ರಾತಿನಿಧ್ಯವಿರುವುದು. ಮಹಾನ್ ದಾರ್ಶನಿಕ ಹಾಗೂ ಸಮಾಜಸುಧಾರಕ ಬ್ರಹ್ಮಶ್ರೀ ನಾರಾಯಣ ಗುರುಗಳು ಬೋಧಿಸಿದ "ವಿದ್ಯೆಯಿಂದ ಪ್ರಭುದ್ಧರಾಗಿರಿ, ಸಂಘಟನೆಯಿಂದ ಬಲಯುತರಾಗಿ" ಎಂಬ ತತ್ವದಲ್ಲಿ ಅಚಲವಾದ ನಂಬಿಕೆ ಇಟ್ಟಿರುವ ಶ್ರೀ ಕ್ಷೇತ್ರ ಬರಣ ಸಮಿತಿಯು ಶ್ರೀ ಕ್ಷೇತ್ರದಲ್ಲಿ ಹಲವಾರು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರದ್ಧಾ ಭಕ್ತಿಯಿಂದ ನಡೆಸಿಕೊಂಡು ಬರುತ್ತಿದೆ. ಶ್ರೀ ಕ್ಷೇತ್ರದ ಪರಿಸರದಲ್ಲಿ ಶ್ರೀ ಭಗವತೀ ಆಂಗ್ಲ ಮಾಧ್ಯಮ ಶಾಲೆಯನ್ನು ಪ್ರಾರಂಭಿಸಿ ಇಲ್ಲಿ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದ್ದು ಪ್ರಸ್ತುತ ಕೇಂದ್ರ ಸರಕಾರದ ಸಿ.ಬಿ.ಎಸ್.ಇ ಅಂಗೀಕಾರದೊಂದಿಗೆ ತರಗತಿಗಳು ನಡೆಯುತ್ತಿದ್ದು ಮಂಜೇಶ್ವರದಲ್ಲಿಯೇ ಮಾದರಿ ವಿದ್ಯಾಸಂಸ್ಥೆಯಾಗಿ ಬೆಳೆದು ಬರುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯ. ಕಡಿಮೆ ವೆಚ್ಚದಲ್ಲಿ ಎಲ್ಲಾ ಮಕ್ಕಳಿಗೂ ಲಭಿಸುವ ರೀತಿಯಲ್ಲಿ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸವನ್ನು ನೀಡುವುದೇ ನಮ್ಮ ವಿದ್ಯಾಸಂಸ್ಥೆಯ ಧ್ಯೇಯವಾಗಿದೆ. ಶ್ರೀ ಕ್ಷೇತ್ರದ ಉತ್ತರ ದಿಕ್ಕಿನಲ್ಲಿ ಸುಸಜ್ಜಿತವಾದ ಸಭಾಂಗಣ "ಕನಿಲ ಶ್ರೀ ಭಗವತೀ ಕಲಾಭವನ" ನಿರ್ಮಿಸಲಾಗಿದ್ದು ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

ಶ್ರೀ ಕ್ಷೇತ್ರವು ಶಿಥಿಲಾವಸ್ಥೆಯಲ್ಲಿದ್ದು ಇದರ ಜೀರ್ಣೋದ್ಧಾರದ ಪ್ರಯುಕ್ತ ಕಳೆದ ವರ್ಷ ಶ್ರೀ ಕ್ಷೇತ್ರದಲ್ಲಿ ಖ್ಯಾತ ಜ್ಯೋತಿಷ್ಯರಾದ ಶ್ರೀ ತಂಬಾನ್ ಪಣಿಕ್ಕರ್ ಅವರ ನೇತೃತ್ವದಲ್ಲಿ ಅಷ್ಟಮಂಗಲ ಜ್ಯೋತಿಷ್ಯ ಪ್ರಶ್ನೆಯನ್ನು ನಡೆಸಲಾಗಿದೆ. ಸಾನಿಧ್ಯ ಶಕ್ತಿಯ ಚೈತನ್ಯ ವೃದ್ಧಿಗಾಗಿ ಕ್ಷೇತ್ರದ ಭಗವತೀ ಮಾತೆಯ ಗರ್ಭಗುಡಿಯನ್ನು ಸಂಪೂರ್ಣ ಶಿಲಾಮಯ ಮತ್ತು ವಾಸ್ತು ವಿಧಿ ವಿಧಾನಗಳೊಂದಿಗೆ ಪುನರ್ ನಿರ್ಮಾಣ ಮಾಡಲು ನಿಶ್ಚಯಿಸಲಾಗಿದೆ. ಇದರೊಂದಿಗೆ ಪರಿವಾರ ದೈವಗಳ ಗುಡಿಗಳು, ಧ್ವಜಸ್ಥಂಭ ಮತ್ತು ಸುತ್ತು ಗೋಪುರ, ರಾಜಗೋಪುರ, ಮೂಡುನಡೆಯನ್ನು ನವೀಕರಿಸಲು ತೀರ್ಮಾನಿಸಲಾಗಿದೆ. ಶ್ರೀ ಕ್ಷೇತ್ರದಲ್ಲಿ ಶ್ರೀ ವಿಷ್ಣುಮೂರ್ತಿ ದೈವದ ಗುಡಿಗಳನ್ನು ಮತ್ತು ಗುರುಪೀಠವನ್ನು ಪ್ರತ್ಯೇಕವಾಗಿ ನೂತನವಾಗಿ ನಿರ್ಮಿಸುವರೇ ಪ್ರಶ್ನೆ ಚಿಂತನೆಯಲ್ಲಿ ಕಂಡುಬಂದಿರುತ್ತದೆ.

ಶ್ರೀ ಕ್ಷೇತ್ರಗಳ ಪುನರ್ ನಿರ್ಮಾಣ ಹಾಗೂ ಕ್ಷೇತ್ರದ ಪರಿವಾರ ದೈವಗಳ ಗುಡಿಗಳನ್ನು ನಿರ್ಮಾಣ ಕಾರ್ಯಗಳ ಸಮಗ್ರ ಯೋಜನೆಯ ನೀಲಿ ನಕಾಶೆಯನ್ನು ಜಗತ್ಪಸಿದ್ಧರಾದ ವಾಸ್ತು ಶಿಲ್ಪಿ ಹಾಗೂ ಸ್ಥಪತಿ ಶ್ರೀ ಕೆ.ದಕ್ಷಿಣಾಮೂರ್ತಿಯವರು ತಯಾರಿಸಿದ್ದಾರೆ. ಕ್ಷೇತ್ರಗಳ ಮತ್ತು ಪರಿವಾರ ದೈವಗಳ ಗುಡಿಗಳ ಆಯ ಸಂಬಂಧ ಲೆಕ್ಕವಿರುವ ವಿಷಯಗಳ ನಕ್ಷೆಯನ್ನು ಶ್ರೀ ಕ್ಷೇತ್ರದ ಆರೂಢ ಶಿಲ್ಪಿ ಬಿ.ಯಂ. ಉದಯ ಆಚಾರಿಯವರ ಉಪಸ್ಥಿತಿಯಲ್ಲಿ ಖ್ಯಾತ ಶಿಲ್ಪಿ ಶ್ರೀ ಕುಂಞಿರಾಮನ್ ಆದಿರ್ ಕುಯ್ಯಿಯವರು ರಚಿಸಿದ್ದಾರೆ. ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಹಾಗೂ ಶ್ರೀ ಕ್ಷೇತ್ರ ಭರಣ ಸಮಿತಿಯು ಜಂಟಿಯಾಗಿ ವಿಶೇಷ ಕಾಳಜಿಯಿಂದ ಶ್ರೀ ಕ್ಷೇತ್ರದ ಸಮಗ್ರ ಯೋಜನೆಯು ಅತ್ಯುತ್ತಮವಾದ ರೀತಿಯಲ್ಲಿ ಮೂಡಿಬಂದಿದೆ. ಈ ಹಿಂದೆ ಶ್ರೀ ಕ್ಷೇತ್ರದ ನೂತನ ಭಂಡಾರ ನಿಲಯ ನಿರ್ಮಾಣ, ಸ್ಥಳ ಖರೀದಿ ಹಾಗೂ ಭಗವತೀ ಆಂಗ್ಲ ಮಾಧ್ಯಮ ಶಾಲೆಯ ಕಟ್ಟಡಗಳ ನಿರ್ಮಾಣ ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ನಡೆದಿದೆ. ಪ್ರಸ್ತುತ ಶ್ರೀ ಭಗವತೀ ಮಾತೆಯರ ಮತ್ತು ಪರಿವಾರ ನೂತನ ಶಿಲಾಮಯ ಗರ್ಭಗುಡಿ ನಿರ್ಮಾಣಗೊಂಡು ಇದೀಗ ಬ್ರಹ್ಮಕಲಶೋತ್ಸವ ಸಂಪನ್ನಗೊಳ್ಳುತಿದೆ. ಈ ಮಹತ್ಕಾರ್ಯಕ್ಕೆ ಸುಮಾರು ರೂ. 8 ಕೋಟಿಗಳಿಗೂ ಅಧಿಕ ಖರ್ಚು ವೆಚ್ಚದಲ್ಲಿ ಶ್ರೀಕ್ಷೇತ್ರ ಮೂಡಿಬಂದಿದೆ. ಊರ ಪರವೂರ ಭಕ್ತಾದಿಗಳು, ಸಂಘ ಸಂಸ್ಥೆಗಳು ತಮ್ಮ ತುಂಬು ಹೃದಯದ ಸಹಾಯ ಸಹಕಾರವನ್ನು ನೀಡಿ ಶ್ರೀ ಭಗವತೀ ಮಾತೆಯ ಪ್ರೀತಿಗೆ ಪಾತ್ರರಾಗುತ್ತಿದ್ದಾರೆ. ಇಂದು ನಡೆಯುವ ಶ್ರೀ ಭಗವತೀ ಮಾತೆಯರ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಮಹೋತ್ಸವದಲ್ಲಿ ತಾವೆಲ್ಲರೂ ಭಾಗಿಗಳಾಗಿ ಶ್ರೀ ದೇವರ ಪೂರ್ಣಾನುಗ್ರಹ ಪಾತ್ರರಾಗಬೇಕಾಗಿ ವಿನಮ್ರ ವಿನಂತಿ.



ಚಿತ್ರ : ಪ್ರಭ ಮಂಜೇಶ್ವರ

ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ
ನೂತನ ಶಿಲಾಮಯ ಗರ್ಭಗುಡಿಯಲ್ಲಿ
ಶ್ರೀ ಭಗವತೀ ಮಾತೆಯರ ಮತ್ತು ಪರಿವಾರ ದೈವಗಳ



ತಾ. 18.04.2026ರಿಂದ 23.04.2026ರವರೆಗೆ



ಭರಣಿ ಮಹೋತ್ಸವ

ತಾ. 26.04.2026ರಿಂದ ತಾ. 03.05.2026ರವರೆಗೆ

ಕಾರ್ಯಕ್ರಮಗಳು

ತಾ. 23-4-2026ನೇ ಗುರುವಾರ : ಬೆಳಗ್ಗೆ ಗಂಟೆ 6.00 : ಗಣಪತಿ ಹೋಮ, ಗಂಟೆ 7.35 ರಿಂದ 9.35ರ ತನಕ ವೃಷಭ ಲಗ್ನದಲ್ಲಿ ಶ್ರೀ ಭಗವತೀ ಮಾತೆಯರ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕೋತ್ಸವ ಹಾಗೂ ಮಹಾಪೂಜೆ ಪ್ರಸಾದ ವಿತರಣೆ, ಬೆಳಗ್ಗೆ ಗಂಟೆ 10.30 : ಧಾರ್ಮಿಕ ಸಭಾ ಕಾರ್ಯಕ್ರಮ- ದಿವ್ಯ ಉಪಸ್ಥಿತಿ ಮತ್ತು ಆಶೀರ್ವಚನ : ಪರಮ ಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ, ಶ್ರೀ ಗುರುದೇವದತ್ತ ಸಂಸ್ಥಾನಮ್, ಒಡಿಯೂರು. ಅಧ್ಯಕ್ಷತೆ : ಶ್ರೀ ಪದ್ಮನಾಭ ಕಡಪ್ಪರ ಅಧ್ಯಕ್ಷರು, ಕನಿಲ ಶ್ರೀ ಭಗವತೀ ಕ್ಷೇತ್ರ ಜೀರ್ಣೋದ್ಧಾರ ಸಮಿತಿ ಮತ್ತಿತ್ತರ ಗಣ್ಯರು ಭಾಗವಹಿಸಲಿದ್ದಾರೆ. ಮಧ್ಯಾಹ್ನ ಗಂಟೆ 1.00 : ಮಹಾ ಅನ್ನಸಂತರ್ಪಣೆ. ಮಧ್ಯಾಹ್ನ 2.00 : ಶ್ರೀ ವಿಷ್ಣು ಯಕ್ಷ ಬಳಗ ಮಜಿಬೈಲು ಮಂಜೇಶ್ವರ ಇವರಿಂದ ಯಕ್ಷಗಾನ ತಾಳಮದ್ದಳೆ

ತಾ. 24-04-2026 ಶುಕ್ರವಾರದಿಂದ ತಾ. 03-05-2026ನೇ ಭಾನುವಾರದ ವರೆಗೆ ಭರಣಿ ಮಹೋತ್ಸವದ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಲಿವೆ.





ಶ್ರೀ ಭಗವತೀ ಮಾತೆಯರ ಮತ್ತು ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕೋತ್ಸವ ಹಾಗೂ ಭರಣಿ ಮಹೋತ್ಸವಕ್ಕೆ ಶುಭಕೋರುವ



ಶ್ರೀ ಪದ್ಮನಾಭ ಕಡಪ್ಪರ
ಶ್ರೀಮತಿ ಪಂಚಾಲಾಕ್ಷಿ
ಅಧ್ಯಕ್ಷರು ಜೀರ್ಣೋದ್ಧಾರ ಸಮಿತಿ
ಕೋಶಾಧಿಕಾರಿ ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ, ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ನವೀನ್‌ರಾಜ್ ಕೆ.ಜೆ.
ನ್ಯಾಯವಾದಿ
ಪ್ರಧಾನ ಕಾರ್ಯದರ್ಶಿ ಜೀರ್ಣೋದ್ಧಾರ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ಲಕ್ಷ್ಮಣ ಟಿ. ಸಾಲ್ಯಾನ್
ಕೋಶಾಧಿಕಾರಿ ಜೀರ್ಣೋದ್ಧಾರ ಸಮಿತಿ ಶ್ರೀ ಭಗವತೀ ಕ್ಷೇತ್ರ ಕನಿಲ.



ಶ್ರೀ ವಿಶ್ವನಾಥ ಕುದುರು
ಅಧ್ಯಕ್ಷರು ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ದೇವದಾಸ್ ವರ್ಕಾಡಿ
ಪ್ರಧಾನ ಕಾರ್ಯದರ್ಶಿ ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ಸೋಮಶೇಖರ ಯಂ.ಎನ್.
ಹೊಸಬೆಟ್ಟು ಮಂಜೇಶ್ವರ
ಉಪಾಧ್ಯಕ್ಷರು ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀಮತಿ ಮೋತಿ ಕಿರಣ್ ಉಪೇಂದ್ರ
ಅಧ್ಯಕ್ಷೆ ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಕೆ. ನಾರಾಯಣ ಕನಿಲೇಶ್ವರಿ
ಮಿತ್ರಕನಿಲ ಮಂಜೇಶ್ವರ
ಜೀರ್ಣೋದ್ಧಾರ ಸಮಿತಿ ಗೌರವ ಸಲಹೆಗಾರರು
ಮಾಜಿ ಭರಣ ಸಮಿತಿ ಅಧ್ಯಕ್ಷರು
ಶ್ರೀ ಭಗವತೀ ಕ್ಷೇತ್ರ ಕನಿಲ



VARADARAJ SUVARNA ENGINEER
CREATION THE THIRD DIMENSION
PROFESSIONAL IN: ARCHITECTURAL MODEL MAKER, INTERIOR DECORATOR, 3D DESIGN
EMAIL VARADA0911@GMAIL.COM
MOB:9035091606 9844484408
24-6-751 MANJU SHETTY COMPOUND
ATTAVAR MANGALORE



ಶ್ರೀ ವಿಜಯ ಕನಿಲ
ಕೋಶಾಧಿಕಾರಿ ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ದಿವಾಕರ ಪಾವೂರು
ಸದಸ್ಯರು, ಜೀರ್ಣೋದ್ಧಾರ ಸಮಿತಿ ಹಾಗೂ ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಮನೋಜ್ ಪಾವೂರು
ಸದಸ್ಯರು, ಜೀರ್ಣೋದ್ಧಾರ ಸಮಿತಿ ಹಾಗೂ ಭರಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಆದರ್ಶ್ ಬಿ.ಎಮ್
ಮಂಜೇಶ್ವರ



ಗಣೇಶ್ ಪಾವೂರು
ಉಪಾಧ್ಯಕ್ಷರು ಜೀರ್ಣೋದ್ಧಾರ ಸಮಿತಿ
ಅಧ್ಯಕ್ಷರು ಉಗ್ರಾಣ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀ ರಾಜೇಶ ಮುದ್ದುಕುಂಜ
ಜೀರ್ಣೋದ್ಧಾರ ಸಮಿತಿ ಹಾಗೂ ಭರಣ ಸಮಿತಿ ಸದಸ್ಯರು
ಶ್ರೀ ಭಗವತೀ ಕ್ಷೇತ್ರ ಕನಿಲ



ಅಕ್ಷಯ್ ಕೊಡ್ವೆ
ಜೀರ್ಣೋದ್ಧಾರ ಸಮಿತಿ ಸದಸ್ಯರು
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀಮತಿ ದಿವ್ಯಶ್ರೀ
ಶ್ರೀ ಕಿರಣ್‌ರಾಜ್
ಹೊಸಂಗಡಿ ಮಜಲು

HINDU YUVA SENA
ಅಧ್ಯಕ್ಷರು ಮತ್ತು ಸರ್ವಸದಸ್ಯರು
ಹಿಂದೂ ಯುವ ಸೇನೆ

ಅಧ್ಯಕ್ಷರು ಮತ್ತು ಸರ್ವಸದಸ್ಯರು
Easted : 1980
ಚಕ್ರವರ್ತಿ(ರಿ)
ಹೊಸಂಗಡಿ



ಶ್ರೀಮತಿ ಶ್ಯಾಮಲಾ ಉಮೇಶ್
ಕಾರ್ಯದರ್ಶಿ
ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ
ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀಮತಿ ಲಲಿತಾ ವರ್ಕಾಡಿ
ಉಪಾಧ್ಯಕ್ಷೆ, ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ, ಶ್ರೀ ಭಗವತೀ ಕ್ಷೇತ್ರ ಕನಿಲ



ಶ್ರೀಮತಿ ಶಶಿಕಲಾ ಲಕ್ಷ್ಮಣ ಸಾಲ್ಯಾನ್
ಜೊತೆ ಕಾರ್ಯದರ್ಶಿ, ಶ್ರೀ ಭಗವತೀ ಸೇವಾ ಮಹಿಳಾ ಸಮಿತಿ ಶ್ರೀ ಭಗವತೀ ಕ್ಷೇತ್ರ ಕನಿಲ



ಸುರೇಶ್ ದುರ್ಗಿಪಲ್ಲ
ಜೀರ್ಣೋದ್ಧಾರ ಸಮಿತಿ ಸದಸ್ಯರು
ಶ್ರೀ ಭಗವತೀ ಕ್ಷೇತ್ರ ಕನಿಲ



BABY MANOHARA AND FAMILY
Maruthi caterers Hosangadi
Mob : 9746367319



ಶ್ರೀ ಅನಿಲ ಕುಮಾರ್ ಬಿ.ಎಮ್.
ಶ್ರೀಮತಿ ಉಷಾ ಎಮ್.
ಎ.ಎಸ್. ಎಂಟರ್‌ಪ್ರೈಸಸ್ ಅಂಗಡಿಪದವು ಚೇತನನಗರ

KF KOPPALA FRIENDS
PRESIDENTS AND MEMBERS
KOPPALA FRIEND'S

ಅಶೋಕ್ ಪಾವೂರು



ಚಂದ್ರಹಾಸ ಪೆಲಪ್ಪಾಡಿ
ಭರಣ ಸಮಿತಿ ಸದಸ್ಯರು
ಶ್ರೀ ಭಗವತೀ ಕ್ಷೇತ್ರ ಕನಿಲ



ಸೇವಾ ಭಾರ್ಗವ, ಸೇವಾ ಚಕ್ರವರ್ತಿ
ಹರೀಶ್ ಶೆಟ್ಟಿ ಮಾಡ
ಜೀರ್ಣೋದ್ಧಾರ ಸಮಿತಿ, ಕನಿಲ



ಸುನೀಲ್ ಕುಮಾರ್ ಹೊಸಂಗಡಿ